HIMALAI

MAKING INDIAN ADMINISTRATORS

SINCE 1998

*No.1 Results Since 1998*
*IAS, IPS, IFS, IRS, KAS Coaching Institute*

# ಭಾರತ ಮತ್ತು
# ಕರ್ನಾಟಕ ಇತಿಹಾಸ

**HIMALAI IAS #458/A 27/1,1 st Floor, 7th Main, 4th Block, ESI Hospital Road,**
**Rajajinagar, Bangalore - 560 010, Land Mark: Near Old, Police Station Bus Stop,**
**E-mail: info@himalaiiasclasses.com**
**Ph: +91 9742692750 | +91 9740346715**



# ಭಾರತದ ಇತಿಹಾಸ

## ಪ್ರಾಚೀನ ಶಿಲಾಯುಗ

**(ಕ್ರಿ.ಪೂ. 5 ಲಕ್ಷ ವರ್ಷದಿಂದ 8,000 ವರ್ಷಗಳವರೆಗೆ)**

ಛೋಟಾ ನಾಗ್ಪುರ್ ಪ್ರಸ್ಥ ಭೂಮಿಯಲ್ಲಿ ಕ್ರಿ.ಪೂ.10,000ದಷ್ಟು ಹಿಂದಿನ ಶಿಲಾಯುಧಗಳು ದೊರೆತಿವೆ. ಆಂಧ್ರಪ್ರದೇಶದ ಕರ್ನೂಲಿನಲ್ಲಿ ಕ್ರಿ.ಪೂ. 20,000 ದಿಂದ 10,000 ವರ್ಷಗಳ ಅವಧಿಯ ಅದೇ ಮಾದರಿಯ ಆಯುಧಗಳು ದೂರೆತಿವೆ. ಉತ್ತರ ಪ್ರದೇಶದ ಮಿರ್ಜಾಪುರದ ಬೇಲಂ ಕಣಿವೆಯಲ್ಲಿ ಮೇಕೆ, ಕುರಿ ಮುಂತಾದ ಪ್ರಾಣಿಗಳ ಪಳೆಯುಳಿಕೆಗಳು ದೊರೆತಿವೆ.

**ಪ್ರಾಚೀನಶಿಲಾಯುಗದಲ್ಲಿ ಮೂರು ಹಂತಗಳು ಇವೆ:**

**1. ಕೆಳ ಹಂತ: (ಕ್ರಿ.ಪೂ. 2.5 ಲಕ್ಷ–1 ಲಕ್ಷ ವರ್ಷ)**

**ನಿವೇಶನಗಳು:**

ಥಾರ್ ಮರುಭೂಮಿ ಪ್ರದೇಶ, ಕಾಶ್ಮೀರಮತ್ತು ಬೇಲಂ ಕಣಿವೆಗಳು, ರಾಜಸ್ಥಾನದ ದಿದ್ವಾನ, ನರ್ಮದಾ ನದಿ ಕಣಿವೆ, ಮಧ್ಯ ಪ್ರದೇಶದ ಭೂಪಾಲ್

2. **ಮಧ್ಯ ಹಂತಃ (ಕ್ರಿ.ಪೂ. 1ಲಕ್ಷ– 40,000 ವರ್ಷ)**

**ನಿವೇಶನಗಳು:**

ಕೆಳ ಶಿಲಾಯುಗದ ಸ್ಥಳಗಳ ಹತ್ತಿರದಲ್ಲಿಯೇ ಇದೆ. ಈ ಹಂತದ ಮುಖ್ಯ ಶಿಲೆಗಳೆಂದರೆ ಚಕ್ಕೆಗಳಿಂದ ಮಾಡಿದ ಅಲಗುಗಳು.

**3. ಮೇಲು ಹಂತಃ (ಕ್ರಿ.ಪೂ. 40,000–10,000 ವರ್ಷ)**

**ನಿವೇಶನಗಳು:**

ಹೇಮೊಸೇಪಿಯನ್ – ಆಧುನಿಕ ಮಾನವ ತಲೆ ಎತ್ತಿದ ಕಾಲ.

ನಿವೇಶನಗಳು: ಭೂಪಾಲ್ ಹತ್ತಿರದ ಭೇಮ್ ಬೇಟ್ಕಾ ಎಂಬಲ್ಲಿ ಗುಹಾ ನಿವಾಸಗಳು

## ಸೂಕ್ಷ್ಮ ಶಿಲಾಯುಗ

**(ಕ್ರಿ.ಪೂ. 10,000 ದಿಂದ 4,000 ದ ವರೆಗೆ)**

ಮನುಷ್ಯ ಸಸ್ಯಗಳನ್ನು ಬೆಳೆಯಲು ಕಲಿತ. ಈ ಯುಗದ ವೈಶಿಷ್ಟವೆಂದರೆ ಸಣ್ಣ ಹಾಗೂ ಹಗುರ ಶಿಲಾಯುಧಗಳು (ಮೈಕ್ರೋಲಿತ್ಸ್), ಬೇಟೆ, ಮೀನುಗಾರಿಕೆ, ಆಹಾರ ಸಂಗ್ರಹಣೆ. ಈ ಯುಗ ಪ್ರಾಚೀನ ಶಿಲಾಯುಗಕ್ಕೂ ಹಾಗೂ ನವ ಶಿಲಾಯುಗಕ್ಕೂ ಕೊಂಡಿಯಂತಿದೆ. **ನಿವೇಶನಗಳು:** ಮಧ್ಯಪ್ರದೇಶದ ಆಲಂಗರ್, ರಾಜಸ್ಥಾನದ ಬಗೋರ್, ಈ ಯುಗದ ಇನ್ನೊಂದು ವೈಶಿಷ್ಟ್ಯವೆಂದರೆ ಗುಹೆಗಳು, ಹಕ್ಕಿ, ಪ್ರಾಣಿ ಹಾಗೂ ಮನುಷ್ಯರ ಚಿತ್ರಗಳು ಈ ಗುಹೆಗಳಲ್ಲಿ ಕಂಡು ಬರುತ್ತವೆ.

## ನವ ಶಿಲಾಯುಗ

**(ಕ್ರಿ.ಪೂ.4,000 ದಿಂದ 1,000 ದ ವರೆಗೆ)**

ಈ ಯುಗದ ಆಯುಧಗಳು ಉಜ್ಜಿ ನಯಗೊಳಿಸಿದ ಕಲ್ಲಿನ ಕೊಡಲಿಗಳಗಿದ್ದವು. ವಾಯುವ್ಯ ಭಾಗದ ಕೊಡಲಿ ಆಯತಾಕಾರ ಹಾಗೂ ಬಾಗಿದ ಅಲಗನ್ನು, ಈಶಾನ್ಯ ಭಾಗದ ಕೊಡಲಿಗಳು ಆಯತಾಕಾಉ ಹಾಗೂ ಹಲವು ಕೊಂಡಿಯುಳ್ಳ ಭುಜ ಹೊಂದಿದ್ದರೆ ದಕ್ಷಿಣ ಭಾಗದ ಕೊಡಲಿಗಳೂ ಮೊಟ್ಟೆಯಾಕಾರದ ಪಾರ್ಶ್ವ ಹಾಗೂ ಚೂಪಾದ ಅಲಗು ಹೊಂದಿದ್ದವು.

**ನಿವೇಶನಗಳು:**

ಕಾಶ್ಮೀರ ಕಣಿವೆಯ ಬುಜಹೋಮ್ ನಲ್ಲಿ ಜನ ಗುಳಿಗಳಲ್ಲಿ ವಾಸಿಸುತ್ತಿದ್ದರು. ಶ್ರೀನಗರದ ಹತ್ತಿರ ಗುಕ್ರಲ್‌ನಲ್ಲಿ ಕೃಷಿ ಪಶುಪಾಲನೆಯ ಕುರುಹಗಳು ದೊರೆತಿವೆ. ಕಾಶ್ಮೀರದ ಈ ಜನರ ವೈಶಿಷ್ಟ್ಯವೆಂದರೆ ಇವರು ಮೂಳೆಗಳಿಂದ ಮಾಡಿದ ವಿವಿಧ ಉಪಕರಣಗನ್ನು ಬಳಸುತ್ತಿದ್ದರು. ಪಾಟ್ನಾದ ಹತ್ತಿರ ಚಿರಾಂಡ್ ನಲ್ಲಿ ಕೂಡಾ ಮೂಳೆ ಆಯುಧಗಳು ದೊರೆತಿವೆ.

ಬುರ್ಜ್‌ಹೋಮ್ (ಹುಟ್ಟಿದ ಸ್ಥಳ ಎಂದರ್ಥ)ನಲ್ಲಿ ಒರಟಾದ ಬೂದು ಬಣ್ಣದ ಮಡಕೆಗಳು ದೊರೆತಿವೆ. ಇಲ್ಲಿ ಒಡೆಯನ ಜೊತೆ ಅವನ ಸಾಕು ನಾಯಿಯನ್ನೂ ಹೂಳುತ್ತಿದ್ದರು. ಇಂತಹ ಸಂಸ್ಕೃತಿ ಭಾರತದ ಬೇರೆ ಯಾವ ನಿವೇಶನಗಳಲ್ಲೂ ಕಂಡು ಬಂದಿಲ್ಲ. ಇದರ ಕಾಲ ಕ್ರಿ.ಪೂ. 24000.

ಕರ್ನಾಟಕದ ಮಸ್ಕಿ, ಬ್ರಹ್ಮಗಿರಿ, ಹಳ್ಳೂರು, ಕೋಡೆಕಲ್ಲು, ಸಂಗನಕಲ್ಲು, ತಿರುಮಕೂಡಲು ನರಸೀಪುರ ಹಾಗೂ ತೆಕ್ಕಲಕೋಟೆಗಳು ನವ ಶಿಲಾಯುಗದ ನಿವೇಶನಗಳು. ಇವುಗಳು ಕಾಲ ಕ್ರಿ.ಪೂ. 2000 ದಿಂದ 1000.

ಮೆಹರ್ ಘರ್ ನಲ್ಲಿ ಗೋದಿ ಮತ್ತು ಹತ್ತಿ ಬೆಳೆಯುತ್ತಿದ್ದರು. ಮಣ್ಣಿನ ಇಟ್ಟಿಗೆಗಳ ಮನೆಗಳು ಇದ್ದವು. ಈ ನವ ಶಿಲಾಯುಗದ ಜನರನ್ನು ಮೊಟ್ಟ ಮೊದಲ ಕೃಷಿಕರೆಂದು ಕರೆಯಲಾಗಿದೆ. ಕ್ರಿ.ಪೂ. 9000 ದಿಂದ 3000 ಅವಧಿಯಲ್ಲಿ ಪಶ್ಚಿಮ ಏಷ್ಯಾದಲ್ಲಿ ಜನ ಕೃಷಿ, ನೇಯ್ಗೆ, ಕುಂಬಾರಿಕೆ, ಮನೆ ನಿರ್ಮಾಣ, ಪಶು ಪಾಲನೆಗಳನ್ನು ಬೆಳೆಸಿಕೊಂಡಿದ್ದರು. ಭಾರತದಲ್ಲಿ ಈ ಯುಗ ಆರಂಭವಾದದ್ದು ಕ್ರಿ.ಪೂ. 6000ರ ಸುತ್ತಿನಲ್ಲಿ.

**ನೆನಪಿಡಿ:**

ಬೇಲನ್ ಕಣಿವೆಯಲ್ಲಿ ಮೇಲನ ಮೂರೂ ಯುಗಗಳ ಕುರುಹುಗಳು ಕ್ರಮವಾಗಿ ದೊರೆತಿವೆ.

**ತಾಮ್ರ – ಶಿಲಾಯುಗ (Chalcolithic)**

**(ಕ್ರಿ.ಪೂ. 1800 ದಿಂದ 1000 ದ ವರೆಗೆ)**

ಮನುಷ್ಯ ಬಳಸಿದ ಮೊಟ್ಟ ಮೊದಲ ಲೋಹ ತಾಮ್ರ ಶಿಲೆ ಹಾಗೂ ತಾಮ್ರಗಳನು ಬಳಸುತ್ತಿದ್ದ ಸಂಸ್ಕೃತಿ ಇದು.

**ಭಾರತದಲ್ಲಿ ತಾಮ್ರ ಶಿಲಾಯುಗದ ನೆಲೆಗಳು:**

ರಾಜಸ್ಥಾನದ ಆಹಾರ್ ಮತ್ತು ಗಿಲುಂಡ್, ಆಹಾರ್‌ಗೆ ತಾಂಬಾವತಿ (ತಾಮ್ರ ತಯಾರಿಕೆಯ ಸ್ಥಳ) ಎನ್ನುವ ಹೆಸರಿತ್ತು. ಮಧ್ಯ ಪ್ರದೇಶದ ಮಾಳ್ವಾ, ಕಯಾತ್ ಮತ್ತು ಎರಾನ್ ಇತರ ಪ್ರಮುಖ ನಿವೇಶನಗಳು..

ಮಾಳ್ವಾದಲ್ಲಿನ ಸಂಸ್ಕೃತಿ ಕುಂಭ ಕಲೆಗೆ ಪ್ರಸಿದ್ದಿಯಾಗಿದೆ, ಮಹಾರಾಷ್ಟ್ರದ ಜೋರ್ವೆ ಸಂಸ್ಕೃತಿ ವ ಾಳ್ವಾದ ಸಂಸ್ಕೃತಿಗೆ ಹೋಲುತ್ತ. ಜೊರ್ವೆ ಸಂಸ್ಕೃತಿ ಕ್ರಿ.ಪೂ. 700 ರವರೆಗೆ ಮುಂದುವರೆಯಿತು. ತಾಮ್ರ ಶಿಲಾಯುಗದ ಜನರು ಪಶುಪಾಲನೆ, ಕೃಷಿಗಳನ್ನು ಅರಿತಿದ್ದರು. ಕೆಲವು ಕಡೆ ಒಂಟೆ, ಕುದುರೆ ಅಥವಾ ಕತ್ತೆಯ ಅವಶೇಷಗಳು ದೊರೆತಿವೆ. ಮಹಾರಾಷ್ಟ್ರದ ನವದಾತೋಲಿಯಲ್ಲಿ ಭಾರೀ ಸಂಖ್ಯೆಯಲ್ಲಿ ಧಾನ್ಯಗಳು ದೊರೆತಿವೆ. ಇಮಾಮ್ ಗಾಂವೆನಲ್ಲಿ ಗುಳಿ ಮನೆಗಳು, ಆಯತಾಕಾರದ ವೃತ್ತಾಕಾರದ ಮನೆಗಳು ಕಂಡು ಬಂದಿವೆ.

ತಾಮ್ರ– ಶಿಲಾಯುಗದ ಜನರು ಕಪ್ಪು– ಕೆಂಪು ಮಾದರಿಯ ಮಡಕೆಗಳನ್ನು ಬಳಸುತ್ತಿದ್ದರು. ರಾಜಸ್ತಾನ, ಮಧ್ಯಪ್ರದೇಶ, ಬಿಹಾರ ಹಾಗೂ ಪಶ್ಚಿಮ ಬಂಗಾಳಗಳಲ್ಲಿ ಇವು ಹೆಚ್ಚಾಗಿ ಕಂಡು ಬಂದಿವೆ.

ಈ ಸಂಸ್ಕೃತಿಯನ್ನು ಕಪ್ಪು– ಕೆಂಪು ಮಡಕೆ (Ochre-Coloured Pot) ಬಳಕೆಯ ಓಸಿಪಿ ಸಂಸ್ಕೃತಿ ಎಂದು ಕರೆಯಲಾಗಿದೆ. ಇದರ ಕಾಲ ಸುಮಾರು ಕ್ರಿ.ಪೂ. 2000–1800 ಹರಪ್ಪಾ ಜನರ ಕಿರಿಯ ಸಮಕಾಲೀನರೆಂದು ಈ ಸಂಸ್ಕೃತಿಯ ಜನರನ್ನು ಗುರುತಿಸಲಾಗಿದೆ.

## ಸಿಂಧೂ ಬಯಲಿನ ಸಂಸ್ಕೃತಿ (ಹರಪ್ಪಾ ನಾಗರೀಕತೆ)

**(ಕ್ರಿ.ಪೂ. 2350 ದಿಂದ 1750 ವರೆಗೆ)**

ಈ ಸಂಸ್ಕೃತಿ ತಾಮ್ರ ಶಿಲಾಯುಗದ ಸಂಸ್ಕೃತಿಗಿಂತ ಪ್ರಾಚೀನವಾದದ್ದು ಹಾಗೂ ಮುಂದುವರೆದದ್ದು ಆಗಿ ಭಾರತದ ಉಪಖಂಡದ ವಾಯುವ್ಯ ಭಾಗದಲ್ಲಿ ರೂಪಗೊಂಡಿತು.

ಕ್ರಿ.ಶ. 1921ರಲ್ಲಿ ಪಶ್ಚಿಮ ಪಂಜಾಬಿನ ಹರಪ್ಪ ಎಂಬ ಸ್ಥಳದಲ್ಲಿ ಈ ಸಂಸ್ಕೃತಿಯ ಸುಮಾರು 1000 ನಿವೇಶನಗಳು ಕಂಡುಬಂದಿವೆ. ಇವುಗಳಲ್ಲಿ ಆರು ನಗರಗಳು. ಇವುಗಳಲ್ಲಿ ಹರಪ್ಪ ಹಾಗೂ ಸಿಂಧ್‌ನಲ್ಲಿರುವ ಮೊಹೆಂಜೋದಾರೊ (ಸತ್ತವರ ದಿಬ್ಬ) ಎರಡು ಮುಖ್ಯ ನಗರಗಳು. ಇವು ಈಗ ಪಾಕಿಸ್ತಾನದಲ್ಲಿವೆ.

ಭಾರತದಲ್ಲಿ ಈ ಸಂಸ್ಕೃತಿಯ ಮುಖ್ಯ ನಿವೇಶನಗಳೆಂದರೆ ಗುಜರಾತ್‌ನ ಲೋಥಾಲ್, ರಂಗ್‌ಪುರ್, ಸುರ್ಕೋತಾದಾ, ಮಧ್ಯಪ್ರದೇಶದ ಅಲಂಗರ್‌ಪುರ್,

ಹರಪ್ಪ ಸಂಸ್ಕೃತಿಯ ಮುಖ್ಯ ಲಕ್ಷಣ ನಗರ ವಿನ್ಯಾಸ.

ಕುಂಬಾರನ ಚಕ್ರ, ಸ್ತ್ರೀ ವಿಗ್ರಹಗಳು, 16ರ ಗಣಕದ ತೂಕ ಮತ್ತು ಅಳತೆಗಳು ತಲೆ ಬಾಚಿಕೊಂಡ, ಹಾರವೊಂದನ್ನೇ ತೊಟ್ಟ ಮಣ್ಣು ಗೊಂಬೆಗಳು– ಇವು ಹರಪ್ಪ ಸಂಸ್ಕೃತಿಯ ಕುತೂಹಲಕಾರಿ ಅಂಶಗಳು.

**ನೆನಪಿಡಿ:** ಹರಪ್ಪ ಸಂಸ್ಕೃತಿಗೆ ಕಂಚಿನ ಯುಗ ಎಂದು ಕರೆಯುತ್ತಾರೆ.

**ಹರಪ್ಪದ ವಿಶೇಷಗಳು:**

ದೊಡ್ಡ ಧಾನ್ಯದ ಕಣಜ, ಅತ್ಯುತ್ತಮ ಒಳ ಚರಂಡಿ ವ್ಯವಸ್ಥೆ, ಆಯತಾಕಾರದ ನಗರ ರಚನೆ, ಸಮರ್ಥ ನೀರು ಸೌಕರ್ಯ, ಬೀದಿ ದೀಪಗಳ ವ್ಯವಸ್ಥೆ ಮತ್ತು ಸುಟ್ಟ ಇಟ್ಟಿಗೆಗಳ ಎರಡು ಅಂತಸ್ತಿನ ಮನೆಗಳು.

**ಮೊಹೆಂಜೊದಾರೊದ ವಿಶೇಷಗಳು:**

ಧಾನ್ಯದ ಕಣಜ, ದೊಡ್ಡ ಸ್ನಾನಗೃಹ, ಸಮಾರಂಭ ಗೃಹ.

**ಕಾಲಿಬಂಗನ್ ನಿವೇಶನದ ವಿಶೇಷ :** ಬಾವಿಗಳ ಉತ್ತಮ, ಸಾಲುಗಳು, ಮುದ್ರೆಗಳು.

**ಲೊಥಾಲ್ ನಿವೇಶನದ ವಿಶೇಷ :** ಕುದುರೆಯ ಅವಶೇಷ

**ಬನ್‌ವಾಲಿ ನಿವೇಶನದ ವಿಶೇಷ:** ರಸ್ತೆ ಮತ್ತು ಚರಂಡಿ ವ್ಯವಸ್ಥೆ

**ಕೆಲವು ಪ್ರಮುಖ ಉತ್ಖನನಗಳು:**

| **ನಿವೇಶನಗಳು** | | **ಉತ್ಖನನಕಾರರು** |
|---|---|---|
| ಹರಪ್ಪಾ | : | 1921ರಲ್ಲಿ ದಯಾರಾಮ್ ಸಾಹ್ನಿ |
| ಮೊಹೆಂಜೊದಾರೊ | : | 1922ರಲ್ಲಿ ಆರ್.ಡಿ. ಬ್ಯಾನರ್ಜಿ, ಜಾನ್, ಮಾರ್ಷಲ್. ಇವರ ನಂತರ ಎಂ.ಎಸ್. ವತ್ಸ ಹಾಗೂ ಕೆ.ಎನ್. ದೀಕ್ಷಿತ್ |
| ಚಾನುದಾರೊ | : | ನಾರ್ಮನ್ ಬ್ರೌನ್ |
| ಗುಂಡೆಯ್, ಕುಳ್ಳಿ | : | ಸರ್ ಅರೆಲ್ ಸ್ಟೇನ್ |
| ಕೋಟ್ ದಿಜಿ | : | ಗುರೆ |
| ರೂಪಾರ್ | : | ವೈ.ಡಿ. ಶರ್ಮ |
| ಲೋಥಾಲ್ | : | ಎಸ್.ಆರ್.ರಾವ್ |
| ರಾಣ್‌ಪುರ್ | : | ಎಂ.ಎಸ್.ವತ್ಸ |
| ಆಮ್ರಿ | : | ಎನ್.ಜಿ. ಮುಜುಂದಾರ್ ನಂತರ ಜೀನ್ ಕ್ಯಾಸಲ್ |
| ಕಾಲಿಬಂಗನ್ | : | 1961ರಲ್ಲಿ ಬಿ.ಬಿ. ಲಾಲ್ ಹಾಗೂ ಬಿ.ಕೆ. ಥಾಮರ್ |

**ಧೋಲಾವಿರಾ – ಹರಪ್ಪಾ**

ಧೋಲಾವಿರಾ ಗುಜರಾತ್‌ನ ರಣ್ ಆಫ್ ಕಚ್‌ನಲ್ಲಿದೆ. ಇಲ್ಲಿ 'ಆರ್ಕಿಯಾಲಾಜಿಕಲ್ ಸರ್ವೆ ಆಫ್ ಇಂಡಿಯಾ' ಹರಪ್ಪಾ ಸಂಸ್ಕೃತಿಯ ವ್ಯವಸ್ಥಿತ ಉತ್ಖನನ ನಡೆಸಿದ. ಈವರೆಗೆ ಉತ್ಖನನ ಗೊಂಡಿರುವ ಅಂಶಗಳಿಂದ ಇಲ್ಲಿ ಕಲ್ಲಿನ ಕಮಾನು ದ್ವಾರಗಳು ಮತ್ತು ದುಂಡಾಕಾರದ ಕಂಬಗಳು ಪತ್ತೆಯಾಗಿವೆ. ಇಲ್ಲಿ ಪತ್ತೆಯಾಗಿರುವ ಲಿಪಿಯ ಬಲದಿಂದ ಎಡಕ್ಕೆ ಬರೆದದ್ದಾಗಿದೆ.

**ನೆನಪಿಡಿ :**ಹರಪ್ಪಾ ಸಂಸ್ಕೃತಿಯ ಸುಮಾರು 1400 ನಿವೇಶನಗಳು ಈವರೆಗೆ ದೊರೆತಿವೆ. ಇವುಗಳಲ್ಲಿ 917 ಭಾರತದಲ್ಲಿವೆ.

## ವೇದಕಾಲದ ಸಂಸ್ಕೃತಿ

**(ಕ್ರಿ.ಪೂ. 1500 ದಿಂದ1600 ದ ವರೆಗೆ)**

**ಪೂರ್ವ ವೇದಕಾಲ:**

ಕ್ರಿ.ಪೂ. 1500ರ ಸುತ್ತಿಗೆ ಭಾರತದ ವಾಯುವ್ಯ ಭಾಗದಲ್ಲಿ ಈ ಸಂಸ್ಕೃತಿಯ ಕುರುಹುಗಳು ಕಂಡು ಬಂದಿವೆ. ಹಲವು ಹಂತಗಳಲ್ಲಿ ಬಂದ ಆರ್ಯರು ಋಗ್ವೇದ ಕಾಲದ ಜನರು. ಅವರು ದಾಸ, ದಶ್ಯೂ ಮುಂತಾದ ಹೆಸರುಗಳು ಸ್ಥಳೀಯ ಜನರೊಂದಿಗೆ ಘರ್ಷಣೆಗಿಳಿದು ಅವರನ್ನು ದಕ್ಷಿಣದತ್ತ ವಲಸೆ ಹೋಗುವಂತೆ ಮಾಡಿದರು ಎನ್ನಲಾಗಿದೆ.

ಋಗ್ವೇದ ಕಾಲದಲ್ಲಿ ಅದಿತಿ ಮತ್ತು ಉಷಾ ಈ ಹೆಣ್ಣು ದೇವತೆಗಳು ಕಂಡು ಬರುತ್ತಾರೆ. ಇಂದ್ರ ಈ ಜನರ ಆರಾಧ್ಯ ದೈವನಾಗಿದ್ದ. ಆತನನ್ನು ಪುರಂದರ ಎಂದು ಕರೆಯಲಾಗಿದೆ. ಋಗ್ವೇದ ಕಾಲದಲ್ಲಿ ಅಗ್ನಿ ದೇವತೆಗೆ ಎರಡನೇ ಸ್ಥಾನ, ವರುಣನಿಗೆ ಮೂರನೆ ಸ್ಥಾನ ಇದ್ದವು ಸೋಮ ಸಸ್ಯ ದೇವತೆ. ಸೋಮರಸ ಮಾದಕ ಪೇಯವಾಗಿತ್ತು.

**ಉತ್ತರ ವೇದಕಾಲ : (ಕ್ರಿ.ಪೂ. 1000 ದಿಂದ 600ರ ವರೆಗೆ)**

ಈ ಕಾಲದಲ್ಲಿ ಯಜುರ್ವೇದ, ಸಾಮವೇದ, ಅಥರ್ವ ವೇದಗಳು ಬೆಳೆದವು. ಕ್ರಿ.ಪೂ. 800ರ ಸುತ್ತಿಗೆ **ಕಬ್ಬಿಣದ ಬಳಕೆ ಪ್ರಾರಂಭವಾಯಿತು**. ಕಬ್ಬಿಣಕ್ಕೆ ಶ್ಯಾಮ ಅಥವಾ ಕೃಷ್ಣ ಆಯಾಸ್ ಎನ್ನುತ್ತಿದ್ದರು. ಬಣ್ಣದ ಮಡಕೆಗಳು ಕಂಡು ಬಂದವು. ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಹಾಗೂ ಶೂದ್ರ **ವರ್ಣ ವ್ಯವಸ್ಥೆ** ಆರಂಭವಾಯಿತು. ಕ್ರಿ.ಪೂ. 950ರ ಸುತ್ತಿಗೆ 'ಮಹಾಭಾರತ' ಯುದ್ಧ ನಡೆಯಿತು. ಕುಟುಂಬದಲ್ಲಿ ತಂದೆಯ ಅಧಿಕಾರ, ಗೋತ್ರ (ಆಕಳು ದೊಡ್ಡಿ) ಪದ್ಧತಿ, ಆಶ್ರಮ ಪದ್ಧತಿಗಳ ಪ್ರಾರಂಭ, ಋಗ್ವೇದ ಕಾಲದ ಇಂದ್ರ ಹಾಗೂ ಅಗ್ನಿ ದೇವತೆಗಳಿಗೆ ಈ ಕಾಲದಲ್ಲಿ ಹಿನ್ನಡೆ. ಪಶುಪತಿ, ರುದ್ರ ಹಾಗೂ ವಿಷ್ಣು ದೇವತೆಗಳು ಮಹತ್ವ. ಋಗ್ವೇದದಲ್ಲಿದ್ದಂತೆ ಅಲೆಮಾರಿ ಇಲ್ಲಿರಲಿಲ್ಲ. ನೆಲೆಗೊಂಡ ಜೀವನ ರೂಢಿಯಲ್ಲಿತ್ತು.

**ವೇದಕಾಲದ ಮದುವೆ ಪದ್ಧತಿಗಳು :**

1. **ಬ್ರಹ್ಮ** : ಸಮಾನ ವರ್ಗಗಳಲ್ಲಿ, ಶಾಸ್ತ್ರೋಕ್ತವಾಗಿನಡೆಯುತ್ತಿದ್ದ ಪದ್ಧತಿ
2. **ದೈವ** : ಯಜ್ಞಮಾಡುತ್ತಿದ್ದ ಪುರೋಹಿತರಿಗೆ 'ಶುಲ್ಕ'ವಾಗಿ ತಂದೆ ತನ್ನ ಮಗಳನ್ನು ಕೊಡುತ್ತಿದ್ದ ಪದ್ಧತಿ
3. **ಆರ್ಷ** : ಆಕಳು ಹಾಗೂ ವೇಷಭೂಷಣಗಳನ್ನು ವರದಕ್ಷಿಣೆ ರೂಪದಲ್ಲಿ ಕೊಡುತ್ತಿದ್ದ ಪದ್ಧತಿ
4. **ಪ್ರಜಾಪತೇಯ** : ವರದಕ್ಷಿಣೆ ಇಲ್ಲದೆ ನಡೆಯುತ್ತಿದ್ದ ಮದುವೆಗಳು
5. **ಗಂಧರ್ವ** : ಎರಡೂ ಪಕ್ಷದವರ ಒಪ್ಪಿಗೆಯಿಂದ ನಡೆಯುತ್ತಿದ್ದ ಪ್ರೇಮ ವಿವಾಹ
6. **ಸ್ವಯಂವರ** : ವರ ಇಲ್ಲಿ ತನ್ನ ಆಯ್ಕೆಯ ಕನ್ಯೆಗಾಗಿ ಇತರ ಅರ್ಹರೊಂದಿಗೆ ಸ್ಪರ್ಧಿಸುತ್ತಿದ್ದ
7. **ಅಸುರ** : ಕನ್ಯಾ ಪಿತೃವಿಗೆ 'ಶುಲ್ಕ' ನೀಡಿ ನಡೆಯುತ್ತಿದ್ದ ಮದುವೆಗಳು
8. **ರಾಕ್ಷಸ** : ಬಲವಂತದಿಂದ ನಡೆಯುತ್ತಿದ್ದ ಮದುವೆಗಳು
9. **ಪೈಶಾಚಿಕ** : ಮಾನಭಂಗದ ಮೂಲಕ ಮದುವೆ.

* ಮೇಲಿನವುಗಳಲ್ಲಿ ಮೊದಲಿನ ನಾಲ್ಕು ಮಾತ್ರ ಸಮಾಜದಲ್ಲಿ ಒಪ್ಪಿವಾಗಿದ್ದವು.

**ವೈದಿಕ ಸಾಹಿತ್ಯ**

1. **ಸಂಹಿತೆಗಳು :**

ಋಗ್ವೇದ (10 ಮಂಡಲಗಳನ್ನು ಒಳಗೊಂಡಿದೆ. 10ನೇ ಮಂಡಲದಲ್ಲಿ ಪುರುಷ ಸೂಕ್ತದ ನಾಲ್ಕು ವರ್ಣಗಳ ವ್ಯವಸ್ಥೆ ವಿವರ ಇದೆ. ಋಗ್ವೇದದಲ್ಲಿ ಮುಖ್ಯವಾಗಿ ಇಂದ್ರನನ್ನು ಕುರಿತ ಪ್ರಾರ್ಥನಾ ಮಂತ್ರಗಳ ಪಠಣ ಇದೆ)

ಯಜುರ್ವೇದ (ಮಂತ್ರಗಳ ಜೊತೆಗೆ ಅವುಗಳನ್ನು ಪಠಿಸುವಾಗ ಆಚರಿಸಬೇಕಾದ ಸಂಸ್ಕಾರ ಕ್ರಿಯೆಗಳ ವಿವರ)

ಸಾಮವೇದ (ಋಗ್ವೇದದ ಮಂತ್ರಗಳನ್ನು ರಾಗಗಳಿಗೆ ಹೊಂದಿಸಿ ಹಾಡಲು ಅನುಕೂಲ ಮಾಡಿಕೊಂಡ ಸಂಹಿತೆ)

ಅಥರ್ವಣವೇದ (ತಂತ್ರ ವಿದ್ಯೆ)

2. **ವೇದಾಂಗಗಳು:**

ಕಲ್ಪ (ಸಂಸ್ಕಾರ), ಶಿಕ್ಷಾ (ಉಚ್ಛಾರಣೆ) ವ್ಯಾಕರಣ (ಭಾಷಾ ಶಾಸ್ತ್ರ), ನಿರುಕ್ತ (ಪದ ರಚನೆ), ಛಂದಸ್ಸು ಮತ್ತು ಜೋತಿಷ್ಯ

3. **ಉಪವೇವಗಳು** – ಆಯುರ್ವೇದ, ಧನುರ್ವೇದ, ಗಂದರ್ಧವೇದ, ಶಿಲ್ಪ ವೇದ

4. **ಧರ್ಮ ಶಾಸ್ತ್ರಗಳು** – ಮನುಸ್ಮೃತಿ, ವಿಷ್ಣು ಸ್ಮೃತಿ, ಯಜ್ಞವಲ್ಕ ಸ್ಮೃತಿ, ನಾರದ ಸ್ಮೃತಿ.

5. **ಸೂತ್ರಗಳು** – ಗೃಹ ಸೂತ್ರ, ಧರ್ಮಸೂತ್ರ

6. **ಶಾಸ್ತ್ರಗಳು** – ಕಪಿಲನ ಸಾಂಖ್ಯಶಾಸ್ತ್ರ, ಪಾತಂಜಲಿಯ ಯೋಗಶಾಸ್ತ್ರ, ಗೌತಮನ ನ್ಯಾಯಶಾಸ್ತ್ರ, ಕಾನಡನ ವೈಶೇಷಿಕ ಶಾಸ್ತ್ರ, ಜಾಮಿನಿಯ ಪೂರ್ವಮೀಮಾಂಸಾ ಹಾಗೂ ವ್ಯಾಸನ ಉತ್ತರ ಮೀಮಾಂಸಾ

7. **ಬ್ರಾಹ್ಮಣಗಳು** – ವೇದಗಳ ಅಧ್ಯಯನಕ್ಕೆ ರಚಿತವಾದ ಗದ್ಯಗಳು

8. **ಅರಣ್ಯಕಗಳು** – ಬ್ರಾಹ್ಮಣಗಳಿಗೆ ಉತ್ತರ – ಸಂಹಿತೆಗಳು. ಗದ್ಯರೂಪದಲ್ಲಿವೆ. ಉನ್ನತ ಆಧ್ಯಾತ್ಮಿಕ ಹಾಗೂ ತಾತ್ವಿಕ ವಿಷಯಗಳನ್ನು ಒಳಗೊಂಡಿರುವ ಇವುಗಳನ್ನು ಅರಣ್ಯಗಳಲ್ಲಿ ಮಾತ್ರ ಪಠಿಸಲಾಗುತ್ತಿತ್ತು.

9. **ಉಪನಿಷತ್ತುಗಳು** – ಸುಮಾರು 300 ಉಪನಿಷತ್ತುಗಳಿವೆ. ಇವು ಭಾರತೀಯ ತತ್ವಶಾಸ್ತ್ರದ ಮೂಲ ಆಕರಗಳು. ಗುರು ತನ್ನ ಶಿಷ್ಯನಿಗೆ ರಹಸ್ಯವಾಗಿ ಇವುಗಳನ್ನು ಬೋಧಿಸುತ್ತಿದ್ದ.

**10. ನಾರಸಾಂಶಿಗಳು** – ಇವು ವೇದಸಾಹಿತ್ಯದಲ್ಲಿ ಕಂಡುಬರುವ ಸಾಹಸ ವೀರರನ್ನು ಪ್ರಶಂಸಿಸುವ ಕಥನಗೀತೆಗಳಾಗಿವೆ. ಈ ನಾರಸಾಂಶಿಗಳು ಮತ್ತು ಆಖ್ಯಾನ (ವಿವರಣಾತ್ಮಕ ಕಥೆ)ಗಳು ರಾಜಸೂಯ ಮತ್ತು ಅಶ್ವಮೇಧಗಳಂತಹ ಯಜ್ಞಗ ವಿಶೇಷ ಲಕ್ಷಣಗಳಾಗಿದ್ದವು.

## ಹೊಸ ಮತ ಧರ್ಮಗಳ ಆರಂಭ

**(ಕ್ರಿ.ಪೂ. 600ನೇ ಸುತ್ತಿಗೆ)**

ಈ ಅವಧಿಯಲ್ಲಿ ಗಂಗಾ ಬಯಲಿನ ಮಧ್ಯ ಬಯಲಿನಲ್ಲಿ ಸುಮಾರು 60 ಮತ ಪಂಥಗಳ ತಲೆ ತ್ತಿದ್ದವು. ಇವುಗಳಲ್ಲಿ ಜೈನ ಮತ್ತು ಬೌದ್ಧ ಪಂಥಗಳು ಪ್ರಾಬಲ್ಯ ಪ್ರಾಬಲ್ಯ ಪಡೆದವು.

**ವರ್ಧಮಾನ ಮಹಾವೀರ (ಕ್ರಿ.ಪೂ. 540–468)**

ಬಿಹಾರ ವೈಶಾಲಿ ಜಿಲ್ಲೆಯ ಬಸಾರ್‌ನಲ್ಲಿ ಜನನ. ತಂದೆ ಸಿದ್ಧಾರ್ಥ, ತಾಯಿ ತ್ರಿಶಾಲ. ಈಕೆ ಲಿಚ್ಛವಿ ಕುಲದ ನಾಯಕ ಚೇತಕನ ಸಹೋರಿ. ಚೇತಕನ ಮಗಳು ಮಗಧ ರಾಜ ಬಿಂಬಸಾರನ ಪತ್ನಿ, ತನ್ನ 30ನೇ ವಯಸ್ಸಿನವರೆಗೆ ಗೃಹಸ್ಥನಾಗಿದ್ದ ಮಹಾವೀರ ನಂತರ ಸನ್ಯಾಸಿಯಾಗಿ 12 ವರ್ಷಗಳ ಕಾಲ ಪ್ರವಾಸ ಮಾಡಿ. ಕೈವಲ್ಯ ಪಡೆದ ನಂತರ ಬಟ್ಟೆಗಳನ್ನು ತ್ಯಜಿಸಿದ.

72ನೇ ವಯಸ್ಸಿನಲ್ಲಿ ರಾಜ್‌ಗೀರ್ ಬಳಿಯ ಪಾವಪುರಿಯಲಿ ಆತ ನಿರ್ವಾಣ ಹೊಂದಿದ. ಮಹಾವೀರ 24ನೇ ಜೈನ ತೀರ್ಥಂಕರ. ಜೈನ ಮತದ ಮೊದಲ ತೀರ್ಥಂಕರ ವೃಷಭನಾಥ.

ಅಹಿಂಸೆ, ಸತ್ಯ, ಕಳ್ಳತನ ಮಾಡದಿರುವುದು ಹಾಗೂ ಆಸ್ತಿ ಸಂಗ್ರಹಿಸದಿರುವುದು ಜೈನ ತೀರ್ಥಂಕರ ನಾಲ್ಕು ನೀತಿಗಳು. ಮಹಾವೀರ ಬ್ರಹ್ಮಚರ್ಯದ ಐದನೇ ನೀತಿಯನ್ನು ಆ ಪಟ್ಟಿಗೆ ಸೇರಿಸಿದ.

ಮಹಾವೀರ ಬಟ್ಟೆಗಳನ್ನು ತ್ಯಜಿಸಿದ್ದರಿಮದ ಜೈನರಲ್ಲಿ ದಿಗಂಬರ ಹಾಗೂ ಶ್ವೇತಾಂಬರ (ಬಟ್ಟೆ ಧರಿಸಿದವರು) ಎನ್ನುವ ಶಾಖಗಳು ಹುಟ್ಟಿಕೊಂಡವು.

ಜೈನ ಮತ ಪ್ರಾಕೃತ ಹಾಗೂ ಅರ್ಧ ಮಾಗಧಿ ಭಾಷೆಗಳನ್ನು ಪ್ರಚಾರ ಪಡಿಸಿತು. ಪ್ರಾಕೃತ ಭಾಷೆಯಿಂದ ಹಲವಾರು ಪ್ರಾದೇಶಿಕ ಭಾಷೆಗಳು ಬೆಳೆದವು. ಶೌರಸೇನಿಯಿಂದ ಮರಾಠಿಬೆಳೆಯಿತು.

ಮೊದಲು ಜೈನರು ಬೌದ್ಧರಂತೆ ವಿಗ್ರಹ ಆರಾಧನೆ ಮಾಡುತ್ತಿರಲಿಲ್ಲ. ಆದರೆ ನಂತರ ಮಹಾವೀರ ಹಾಗೂ ಇತರ ತೀರ್ಥಂಕರ ಪೂಜೆ ಆರಂಭವಾಯಿತು. ಜೈನ ಮತ ವರ್ಣ ವ್ಯವಸ್ಥೆ ಹಾಗೂ ಸಂಸ್ಕಾರ ಪ್ರಧಾನ ವೈದಿಕ ಮತ ಧರ್ಮಗಳ ಕೇಡುಗಳನ್ನು ತೊಡೆಯಲು ಪ್ರಯತ್ನಿಸಿತು.

**ಜೈನ ಸಭೆಗಳು :**

ಪ್ರಥಮ – ಪಾಟಲಿಪುತ್ರ, ಸ್ಥೂಲಭದ್ರನ ಕಾಲ, ಜೈನ ಶ್ವೇತಾಂಬರ ಹಾಗೂ ದಿಗಂಬರ ಪಂಗಡಗಳಾಗಿ ವಿಭಜನೆ, ಹನ್ನೆರಡು ಅಂಗಗಳ ತಿದ್ದುಪಡಿಗೆ ತಿರಸ್ಕಾರ.

ದ್ವಿತೀಯ – ವಲ್ಲಭಿ, ಕ್ರಿ.ಶ. 512, ಗ್ರಂಥಳ ಪುನರ್ ರಚನೆ

**ಇಪ್ಪತ್ನಾಲ್ಕು ಜೈನ ತೀರ್ಥಂಕರರು**

| | | | |
|---|---|---|---|
| ಹೆಸರು | ಸಂಕೇತ | ಶ್ರೀಗಣನಾಥ | ಘೇಂಡಾ ಮೃಗ |
| ರಿಶಭ | ಹೋರಿ | ವಸುಪೂಜ್ಯ | ಎಮ್ಮೆ |
| ಅಜಿತನಾಥ | ಆನೆ | ವಿಮಲನಾಥ | ಕರಡಿ |
| ಸಲಭರನಾಥ | ಕುದುರೆ | ಅನಂತನಾಥ | ಬಾತುಕೋಳಿ |
| ಅಭಿಯಾಂದಮ್‌ಸ್ವಾಮಿ | ವಾನರ | ಧರ್ಮನಾಥ | ವಜ್ರ |
| ಸುಮತಿನಾಥ | ಅಳಿಲು | ಶಾಂತಿನಾಥ | ಜಿಂಕೆ |
| ಪದಮ ಪ್ರಭು | ಕೆಂಪು ಕಮಲ | ಕುಂತುನಾಥ | ಟಗರು |
| ಸುಪಾರ್ಶ್ವನಾಥ | ಸ್ವಸ್ತಿಕ್ | ಅರ್ಣಥ | ಮೀನು |
| ಚಂದ್ರಾಜಿ ಪ್ರಭು | ಚಂದ್ರ | ಮಲ್ಲಿನಾಥ | ಮಡಕೆ |
| ಸುವಿಧಿನಾಥ | ಮೊಸಳೆ | ಮನಿಸ್ವಸ್ಥ | ಆಮೆ |
| ಶೀತಲನಾಥ | ಶ್ರೀವತ್ಸ | ನಾಮಿನಾಥ | ನೀಲಿ ಕಮಲ |

| | | | |
|---|---|---|---|
| ನೇಮಿನಾಥ | ಶಂಖ | ಮಹಾವೀರ | ಸಿಂಹ |
| ಪಾರ್ಶ್ವನಾಥ | ಸರ್ಪ | | |

**ಗೌತಮ ಬುದ್ಧ : (ಕ್ರಿ.ಪೂ. 563 – 483)** ನೇಪಾಳದ ಕಪಿಲವಸ್ತುವಿನಲ್ಲ ಜನನ. ಈತ ಮಹಾವೀರನ ಸಮಕಾಲೀನ. ಇಪ್ಪತ್ತೊಂಬತ್ತನೇ ವಯಸ್ಸಿನಲ್ಲಿ ರಾಜಗೃಹವನ್ನು ತ್ಯಜಿಸಿ ಏಳು ವರ್ಷಗಳ ಕಾಲ ಪ್ರವಾಸಮಾಡಿ ಮೂವತ್ತೈದನೆ ವಯಸ್ಸಿನಲ್ಲಿ ಬೋದಗಯ ಒಂದು ಬೋಧಿ ಮರದ ಕೆಳಗೆ ಜ್ಞಾನವನ್ನು ಪಡೆದ. ಅಂದಿನಿಂದ ಆತ ಬುದ್ಧನಾದ. ಆತನ ಮೊದಲ ಹೆಸರು ಸಿದ್ಧಾರ್ಥ. ಗೌತಮ ಬುದ್ಧ ವಾರಣಾಸಿ ಬಳಿಯ ಸಾರನಾಥದಲ್ಲಿ ತನ್ನ ಮೊದಲ ಪ್ರವಚನ ನೀಡಿದ. 80ನೇ ವಯಸ್ಸಿನಲ್ಲಿ ಪೂರ್ವ ಉತ್ತರ ಪ್ರದೇಶದ ದೊಯೋರಿಯಾ ಜಿಲ್ಲೆಯ ಕುಷಿ ನಗರದಲ್ಲಿ ಆತ ನಿರ್ವಾಣ ಹೊಂದಿದ. ದೇವರು ಮತ್ತು ಆತ್ಮಗಳ ಅಸ್ತಿತ್ವವನ್ನು ಬೌದ್ಧ ಮತ ಒಪ್ಪಿಕೊಳ್ಳಲಿಲ್ಲ. ಮಾನವ ದುಃಖದ ಪರಿಹಾರಕ್ಕಾಗಿ ಬುದ್ಧ ಯುಕ್ತ ವೀಕ್ಷಣೆ, ಯುಕ್ತ ಸಾಧನೆ, ಯುಕ್ತ ಜ್ಞಾಪಕ ಹಾಗೂ ಯುಕ್ತ ಧ್ಯಾನಗಳ ಅಷ್ಟಾಂಗ ಮಾರ್ಗ ಸೂಚಿಸಿದ. ಜೈನಗುರುಗಳಂತೆ ಬುದ್ಧನೂ ಕೂಡ ತನ್ನ ಅನುಯಾಯಿಗಳಿಗೆ ಪರರ ಆಸ್ತಿಯ ಮೇಲೆ ಕಣ್ಣಿಡಬೇಡ, ಹಿಂಸೆ ಮಾಡಬೇಡ, ಮಧ್ಯಪಾನ ಮಾಡಬೇಡ, ಸುಳ್ಳು ಹೇಳಬೇಡ ಮತ್ತು ಭ್ರಷ್ಟಾಚಾರಕ್ಕೆ ಇಳಿಯಬೇಡ – ಈ ಆಚಾರ ಸಂಹಿತೆಗಳನ್ನು ರೂಪಿಸಿದ.

**ಬೌದ್ಧ ಸಭೆಗಳು :**

**ಸ್ಥಳ ಕಾಲ ಅಧ್ಯಕ್ಷ**

ಪ್ರಥಮ ರಾಜಗೃಹ ಕ್ರಿ.ಪೂ 483ಮಹಾಕಶ್ಯಪ ಉಪಾಲಿ

ದ್ವಿತೀಯ ವೈಶಾಲಿ, ಕ್ರಿ.ಪೂ 383ಸಬಕಾಮಿ

ತೃತೀಯಪಾಟಲಿಪುತ್ರಕ್ರಿ.ಪೂ 250ಮಗ್ಗಲಿಪುಟ್ಟ ತಿಸ್ಸಾ

ಚತುರ್ಥಕುಂದಲವನ ಕ್ರಿ.ಶ. 150ವಸುಮಿತ್ರ

**ಬುದ್ಧನ ಜೀವನ ಸಂಕೇತಗಳು**

ಘಟನೆಸಂಕೇತ ಸ್ಥಳಕಾಲ

ಜನನಕಮಲ–ವೃಷಭಲುಂಬಿಣಿಕ್ರಿ.ಪೂ. 563

ಸನ್ಯಾಸ ಅಶ್ವಲುಂಬಿಣಿಕ್ರಿ.ಪೂ. 554

ನಿರ್ವಾಣಬೋದಿವೃಕ್ಷಬೋಧಗಯಕ್ರಿ.ಪೂ. 548

ಮೊದಲ ಪ್ರವಚನ ಧರ್ಮಚಕ್ರಸಾರನಾಥಕ್ರಿ.ಪೂ. 547

ಪರಿ ನಿರ್ವಾಣ ಸ್ತೂಪಕುಶಿನಗರ ಕ್ರಿ.ಪೂ. 483

**ಬುದ್ಧ ಸಾಹಿತ್ಯ**

**1. ತ್ರಿಪೀಠಕಗಳು–**

ಸುತ್ತಪೀಠಕ – ಬುದ್ಧನ ಪ್ರವಚನಗಳಿವೆ), ವಿನಯ ಪೀಠಕ – ಅನುಯಾಯಿಗಳಿಗೆ ಅಚಾರಸಂಹಿತೆ) ಹಾಗೂ ಅಭಿದಮ್ಮ ಪೀಠಕ – ಇದರಲ್ಲಿ ದಿಗ್ಗನಿಕಾಯ, ಮಜ್ಜಿನಿಕಾಯ, ಸಂಯುಕ್ತ, ನಿಕಾಯ, ಅಂಗುತ್ತರ ನಿಕಾಯ ಹಾಗೂ ಕುದ್ಧಕ ನಿಕಾಯ ಎನ್ನುವ ಐದು ಭಾಗಗಳಿವೆ. ಇವು ಬುದ್ಧನ ಪ್ರವಚನಗಳ ಕುರಿತು ತಾತ್ವಿಕ ಬೆಳವಣಿಗೆಯನ್ನು ತಿಳಿಸುತ್ತವೆ.

**2. ಜಾತಕಗಳು** – ಬುದ್ಧನ ಕಥೆಗಳು. ಇದರಲ್ಲಿ 550ಕ್ಕಿಂತ ಹೆಚ್ಚು ಕಥೆಗಳಿವೆ.

**ಜೈನ ಸಾಹಿತ್ಯ**

**1. ಅಂಗಗಳು – 12.** ಇವು ತೀರ್ಥಂಕರ ಪ್ರವಚನಗಳನ್ನು ಒಳಗೊಂಡಿವೆ.

**2. ಅಗಮ ಸಿದ್ಧಾಂತಗಳು** – ಮಹಾವೀರನ ಮೂಲ ಪ್ರವಚನಗಳು (ಅರ್ಧಮಾಗಧಿ ಭಾಷೆ)

**3. ನಿರ್ಯುಕ್ತಿಗಳು** – ಪವಿತ್ರ ಯುಕ್ತಿಗಳು.

## ಮಹಾ ಜನಪದಗಳು

**(ಕ್ರಿ.ಪೂ. 650–325)**

ಬುದ್ಧನ ಕಾಲದಲ್ಲಿ ಉತ್ತರ ಭಾರತದಲ್ಲಿ ಪ್ರಾಬಲ್ಯ ಪಡೆದ ರಾಜ ಪ್ರಭುತ್ವ ಯಾವುದೂ ಇರಲಿಲ್ಲ. ಹೀಗಾಗಿ ಆ ಭಾಗ ಹದಿನಾರು ದೊಡ್ಡ ಹಾಗೂ ಚಿಕ್ಕ ರಾಜ್ಯಗಳಾಗಿ ವಿಭಜಿತವಾಗಿತ್ತು. ಈ ಹದಿನಾರು ಪ್ರಾದೇಶಿಕ ರಾಜ್ಯಗಳನ್ನು ಮಹಾಜನಪದಗಳೆಂದು ಕರೆಯುತ್ತಾರೆ.

ಇವು : ಅಂಗ, ಮಗಧ, ಕಾಸಿ, ಕೋಸಲ, ವಜ್ಜಿ, ಮಲ್ಲ, ಚೇದಿ, ವಂಸ, ಕುರು, ಪಾಂಚಾಲ, ಮತ್ಸ್ಯ, ಶೂರಸೇನ, ಆಶ್ಮಕ, ಅವಂತಿ, ಗಾಂಧಾರ ಹಾಗೂ ಕಂಬೂಜ,

ಇವುಗಳಲ್ಲಿ ದಕ್ಷಿಣ ಬಿಹಾರದ ಮಗಧದಲ್ಲಿದ್ದ ಹರ್ಯಾಂಕ ವಂಶ, ಕೋಸಲದ ಇಕ್ಷುವಾಕು ವಂಶ, ವತ್ಸದ ಪೌರವ ವಂಶ ಹಾಗೂ ಅವಂತಿಯ ಪ್ರದ್ಯೋತ ವಂಶ ಪ್ರಾಬಲ್ಯ ಹೊಂದಿದ್ದವು.

**ಮಗಧ ವಂಶ : (ಕ್ರಿ.ಪೂ. 544 – 444)**

**ರಾಜಧಾನಿ : ರಾಜಗೃಹ (ರಾಜಗಿರ್)**

**ಬಿಂಬಸಾರ : (ಕ್ರಿ.ಪೂ. 544 – 492)**

ಹರ್ಯಂಕ ವಂಶದ ಸ್ಥಾಪಕ. ರಾಜಗಿರ್ ರಾಜಧಾನಿ. ಸಮರ್ಥ ಆಡಳಿತದ ಮೊಟ್ಟ ಮೊದಲ ಪ್ರತಿಪಾದಕ.

ಅವಂತಿಯ ರಾಜ ಚಂಡಪ್ರದ್ಯೋತ ಮಹಾಸೇನ ಬಿಂಬಸಾರನ ವಿರೋಧಿಯಾಗಿದ್ದ.

**ಅಜಾತಶತ್ರು : (ಕ್ರಿ.ಪೂ. 492 – 460)**

ತಂದೆ ಬಿಂಬಸಾರವನ್ನು ಹತ್ಯೆ ಮಾಡಿ ಈತ ಕಿರೀಟ ಧರಿಸಿದ. ಕಾಶಿ ಹಾಗೂ ವೈಶಾಲಿಗಳನ್ನು ಜಯಿಸಿದ. ರಾಜಧಾನಿ ರಾಜಗಿರ್ ರಕ್ಷಣೆಗಾಗಿ ಕೋಟೆ ಕಟ್ಟಿದ, ಅಜಾತಶತ್ರು ತನ್ನ ಆಳ್ವಿಕೆಯಲ್ಲಿ ಅಕ್ರಮಣಶೀಲ ರಾಜ್ಯ ವಿಸ್ತರಣೆ ಮಾಡಿದ.

**ಉದಯನ್ : (ಕ್ರಿ.ಪೂ. 460 – 444)**

ಈತನ ಸಾಧನೆ ಎಂದರೆ ಪಾಟಲಿಪುತ್ರದ ನಿರ್ಮಾಣ. ಇದು ಗಂಗಾ ಮತ್ತು ಸೋನಾ ನದಿಗಳ ಸಂಗಮದಲ್ಲಿ ತಲೆಯೆತ್ತಿತು.

**ಶಿಶುನಾಗ ಸಂತತಿ : (ಕ್ರಿ.ಪೂ. 413 – 344)**

ಅಜಾತಶತ್ರುವಿನ ನಂತರ ಪ್ರಾಬಲ್ಯ ಸಾಧಿಸಿದ ಐದು ರಾಜರ ಸಂತತಿ ಇದು. ರಾಜಧಾನಿಯನ್ನು ತಾತ್ಕಾಲಿಕವಾಗಿ ವೈಶಾಲಿಗೆ ಇವರು ವರ್ಗಾಯಿಸಿದರು. ಉಜ್ಜಯನಿಯ ರಾಜಧಾನಿ ಅವಂತಿಯನ್ನು ವಿನಾಶ ಪಡಿಸಿದರು.

ಇದ್ದರಿಂದ ಮಗಧ ಹಾಗೂ ಅವಂತಿಗಳು ಮಧ್ಯೆ ನೂರು ವರ್ಷಗಳವರೆಗೆ ನಡೆದಿದ್ದ ಸೆಣಸಾಟ ಕೊನೆಗೊಂಡಿತು . ಮುಂದೆ ಮೌರ್ಯರ ಅಳ್ವಿಕೆಯ ಕೊನೆಯವರೆಗೂ ಆವಂತಿ ಮಗಧ ಸಾಮ್ರಾಜ್ಯದ ಒಂದು ಭಾಗವಾಯಿತು.

**ನಂದ ಸಂತತಿ : (ಕ್ರಿ.ಪೂ. 344 – 322)**

ಮಹಾ ಪದ್ಮನಂದನಿಂದ ನಂದ ಸ್ಥಾಪನೆಯಾಯಿತು. ಈತ ಕಳಿಂಗವನ್ನು ಜಯಿಸಿದ. ಎಲ್ಲಾ ರಾಜರನ್ನು ಸೋಲಿಸಿ ಪರಮ ಅಧಿಕಾರ ಹೊಂದಿದ ಈತ, 'ಏಕರಥ' ಎನ್ನುವ ಬಿರುದನ್ನೂ ಪಡೆದ. ನೀರಾವರಿ ಸೌಲಭ್ಯಗಳಿಗಾಗಿ ಹಲವಾರು ಕಾಲುವೆಗಳನ್ನು ಈತ ನಿರ್ಮಿಸಿದ . ನಂತರ ಅಧಿಕಾರಕ್ಕೆ ಬಂದ ನಂದರಾಜರು ಅಶಕ್ತರಾಗಿದ್ದರು.

ಈ ಸಂತತಿಯ ಕೊನೆಯ ರಾಜ **ಧನನಂದ.**

**ಅಲೆಕ್ಸಾಂಡರ್‌ನ ದಂಡಯಾತ್ರೆ**

**ಕ್ರಿ.ಪೂ. 4ನೇ** ಶತಮಾನದಲ್ಲಿ ಜಗತ್ತಿನ ಒಡೆಯಾರಾಗಲು ಗ್ರೀಕ್‌ರು ಮತ್ತು ಪರ್ಷಿಯನ್‌ರು ಪೈಪೋಟಿ ನಡೆಸಿದರು. ಮ್ಯಾಸಿಡೋನಿಯಾದ ಅಲೆಕ್ಸಾಂಡರ್‌ನ ಮುಂದಾಳತ್ವದಲ್ಲಿ ಗ್ರೀಕರು ಪರ್ಷಿಯನ್‌ರನ್ನು ಸೋಲಿಸಿ ಭಾರತದತ್ತ ಮುನ್ನುಗ್ಗಿದರು.

**ಕ್ರಿ.ಪೂ. 326ರಲ್ಲಿ** ಖೈಬರ್ ಕಣಿವೆ ಮೂಲಕ ಅಲೆಕ್ಯಾಂಡರ್ ಭಾರತ ಪ್ರವೇಶಿಸಿ ತಕ್ಷಶಿಲೆಯ ಅಂಬಿಯನ್ನು ಸೋಲಿಸಿ, ಝೇಲಮ್ ನದಿಯ ದಂಡೆಯ ಮೇಲೇ ಪುರೂರವನಿಂದ ಪ್ರಬಲ ಪ್ರತಿರೋಧ ಎದುರಿಸಿದ.

ಪುರೂರವನ ಪರಾಕ್ರಮ ಮೆಚ್ಚಿ ಅಲೆಕ್ಸಾಂಡರ್ ಆತನ ಸ್ನೇಹ ಸಂಪಾದಿಸಿದ. ಅಲ್ಲಿಂದ ಅಲೆಕ್ಸಾಂಡರ್ ಬಿಯಾಸ್ ನದಿಯವರೆಗೂ ಬಂದ. ಆದರೆ ಮುಂದೆ ಆತ ತನ್ನ ಸೈನಿಕರ ನಿರಾಸಕ್ತತೆಯಿಂದ ಹಿಂದಿರುಗಬೇಕಾಯಿತು.

ಅಲೆಕ್ಸಾಂಡರ್ **ಕ್ರಿ.ಪೂ. 326 ರಿಂದ 325ರ** ಅವಧಿಯಲ್ಲಿ 19 ತಿಂಗಳು ಭಾರತದಲ್ಲಿದ್ದ. ತಾನು ವಶಪಡಿಸಿಕೊಂಡು ಉಳಿಸಿಕೊಂಡ ಭಾಗಗಳನ್ನು ಆತ ಮೂರು ಭಾಗಗಳನ್ನಾಗಿ ವಿಂಗಡಿಸಿ, ಮೂವರು ರಾಜ್ಯಪಾಲರುಗಳನ್ನು ನೇಮಿಸಿ ಹೋದ.

## ಮೌರ್ಯ ಸಂತತಿ

**(ಕ್ರಿ.ಪೂ. 321 – 183 ) ಚಂದ್ರಗುಪ್ತ ಮೌರ್ಯ (ಕ್ರಿ.ಪೂ.321 – 297)**

ಚಾಣಕ್ಯನ ಸಹಾಯ ಪಡೆದು ಚಂದ್ರಗುಪ್ತ 'ಮೌರ್ಯ' ಸಂತತಿಯನ್ನು ಸ್ಥಾಪಿಸಿದ. ಕ್ರಿ.ಶ. 9ನೇ ಶತಮಾನದಲ್ಲಿ ವಿಶಾಖದತ್ತ ಬರೆದಿರುವ 'ಮುದ್ರಾರಾಕ್ಷಸ' ನಾಟಕದಲ್ಲಿ ಚಾಣಕ್ಯ ಹಾಗೂ ಚಂದ್ರಗುಪ್ತನ ತಂತ್ರಗಳ ಬಗ್ಗೆ ವಿವರ ಇದೆ.

ಗ್ರೀಕ್ ದಾಖಲೆಗಳಲ್ಲಿ ಈತ 'ಸ್ಯಾಂಡ್ರೊ ಕಾಟಸ್ ' ಎಂದು ಹೆಸರಾಗಿದ್ದಾನೆ. ಮೆಗಸ್ಥನೀಸ್ ಈತನ ಆಸ್ಥಾನದಲ್ಲಿದ್ದ. ಜಸ್ಟಿನ್ ಎಂಬ ಗ್ರೀಕ್ ಲೇಖಕ ಚಂದ್ರಗುಪ್ತ ತನ್ನ ಆರು ಲಕ್ಷ ಸೈನ್ಯ ಬಲದಿಂದ ಇಡೀ ಭಾರತಕ್ಕೆ ಸಾಮ್ರಾಟನಾಗಿದ್ದನೆಂದು ಹೇಳಿದ್ದಾನೆ. ಕೇರಳ, ತಮಿಳುನಾಡು ಮತ್ತು ಈಶಾನ್ಯ ಭಾರತದ ಕೆಲವು ಭಾಗಗಳನ್ನು ಬಿಟ್ಟು ಉಳಿದ ಭಾರತೀಯ ಉಪಖಂಡ ಚಂದ್ರಗುಪ್ತ ಮೌರ್ಯನ ಅಧಿಪತ್ಯದಲ್ಲಿತ್ತು.

ಗ್ರೀಕ್ ರಾಜ್ಯಪಾಲ ಸೆಲೂಕಸ್ ಆಳುತ್ತಿದ್ದ ಸಿಂಧೂ ನದಿಯ ಪಶ್ಚಿಮ ಭಾಗವನ್ನು ಚಂದ್ರಗುಪ್ತ ಯುದ್ಧದಲ್ಲಿ ಗೆದ್ದು ತನ್ನ ವಶಕ್ಕೆ ಸೇರಿಸಿಕೊಂಡಿದ್ದ. ಒಪ್ಪಂದದಂತೆ ಪೂರ್ವ ಅಫ್ಘಾನಿಸ್ತಾನ, ಬಲೂಚಿಸ್ತಾನ ಹಾಗೂ ಸಿಂಧೂನದಿಯ ಪಶ್ಚಿಮ ಪ್ರಾಂತ್ಯಗಳನ್ನು ಸೆಲೂಕಸ್ ಚಂದ್ರಗುಪ್ತನ ವಶಕ್ಕೆ ಕೊಟ್ಟು ತನ್ನ ರಾಯಭಾರಿ ಮೆಗಸ್ಥನೀಸ್‌ನನ್ನು ಆತನ ಆಸ್ಥಾನಕ್ಕೆ ಕಳುಹಿಸಿದ.

ಚಂದ್ರುಗುಪ್ತ ತನ್ನ ಅಂತ್ಯ ಕಾಲದಲ್ಲಿ ಜೈನ ಮತಕ್ಕೆ ಪರಿವರ್ತಿತನಾಗಿ ಶ್ರವಣ ಬೆಳಗೊಳಕ್ಕೆ ಹೋಗಿ ಕೈವಲ್ಯ ಕಂಡ.

**ಬಿಂದುಸಾರ: (ಕ್ರಿ.ಪೂ. 297–272)**

**ಗ್ರೀಕ್ ದಾಖಲೆಗಳಲ್ಲಿ ಈತನ ಹೆಸರು 'ಅಮಿತ್ರೊ ಕ್ಯಾಟಸ್'**

**ಚಂದ್ರಗುಪ್ತನ ನಂತರ ಸಿಂಹಾಸನವೇರಿದ ಈತನ ಅವಧಿಯಲ್ಲಿ ತಕ್ಷ ಶಿಲಾ ಹಾಗೂ ದಕ್ಷಣದ ಕೆಲವು ಭಾಗಗಳಲ್ಲಿ ಗಲಭೆಗಳು ಉಂಟಾದವು. ಚಂದ್ರಗುಪ್ತನಷ್ಟು ಈತ ಪ್ರಬಲನಾಗಿರಲಿಲ್ಲ.**

**ಅಶೋಕ : (ಕ್ರಿ.ಪೂ. 273–232 )**

ತಂದೆ ಬಿಂದುಸಾರನ ನಿಧನದ ನಂತರ ಅಶೋಕ ಪಟ್ಟಕ್ಕೆ ಬಂದ. ಬೌದ್ಧ ಐತಿಹ್ಯಗಳ ಪ್ರಕಾರ ಅಶೋಕ ಮಹಾಕ್ರೂರಿಯಾಗಿದ್ದ. ಪಟ್ಟಕ್ಕೆ ಬರಲು ಆತ ತನ್ನ 99 ಸಹೋದರರನ್ನು ಕೊಂದನೆಂದು ಹೇಳಲಾಗಿದೆ. 'ಅಶೋಕ' ಈ ಹೆಸರು ಮಸ್ಕಿ ಶಾಸನದಲ್ಲಿದೆ.

ಅಶೋಕನ ಶಾಸನಗಳು ಮುಖ್ಯವಾಗಿ ಪ್ರಾಕೃತ ಭಾಷೆಯ ಬ್ರಾಹ್ಮಿ ಲಿಪಿಯಲ್ಲಿವೆ. ವಾಯುವ್ಯ ಭಾಗದಲ್ಲಿನ ಬಲದಿಂದ ಎಡಕ್ಕೆ ಬರೆಯುತ್ತಿದ್ದರು. ಅಶೋಕ ಬೌದ್ಧ ಧರ್ಮದ ಅನುಯಾಯಿಯಾಗಿದ್ದ. **ಕ್ರಿ.ಪೂ.250ರಲ್ಲಿ** ಪಾಟಲಿಪುತ್ರದಲ್ಲಿ ನಡೆದ ಮೂರನೆ ಬೌದ್ಧ ಸಭೆಯನ್ನು ಅಶೋಕ ಆಯೋಜಿಸಿದ್ದ. ಅಶೋಕ **'ದೇವನಂಪ್ರಿಯ' ಹಾಗೂ 'ಪಿಯದರ್ಶಿ'** ಎನ್ನುವ ಬಿರುದುಗಳಿಂದ ಖ್ಯಾತನಾಗಿದ್ದ.

ಅಶೋಕನ ನಂತರ ಸಿಂಹಾಸನವೇರಿದ ರಾಜರು ದುರ್ಬಲರಾಗಿದ್ದರಿಂದ ಮೌರ್ಯ ಸಂತತಿ ಕ್ರಮೇಣ ತನ್ನ ಪ್ರಾಬಲ್ಯ ಕಳೆದುಕೊಂಡಿತು. ಈ ಸಂತತಿಯ ಕೊನೆಯ ರಾಜ ಬೃಹದ್ರಥ. ಈತ 183ರಲ್ಲಿ ಸೇನಾಧಿಪತಿ ಪುಶ್ಯಮಿತ್ರ ಶುಂಗನಿಂದ ಹತನಾದ.

**ಶುಂಗ ಸಂತತಿ : (ಕ್ರಿ.ಪೂ. 183 – 73)**

ಪುಶ್ಯಮಿತ್ರ ಶುಂಗ ಈ ಸಂತತಿಯ ಸ್ಥಾಪಕ, ಬ್ರಾಹ್ಮಣನಾಗಿದ್ದ ಈತ ಮೌರ್ಯರ ಕಾಲದಲ್ಲಿ ಉಚ್ಛ್ರಾಯಕ್ಕೇರಿದ್ದ ಬೌದ್ಧ ಧರ್ಮವನ್ನು ದುರ್ಬಲಗೊಳಿಸಲು ಮುಂದಾದ. ಈತನ ಕಾಲದಲ್ಲಿ ಹಿಂದೂ ಧರ್ಮಕ್ಕೆ ಮತ್ತೆ ಪ್ರಾಬಲ್ಯ ಬಂದಿತು. ಪುಶ್ಯಮಿತ್ರನ ನಂತರ ಅಗ್ನಿಮಿತ್ರ, ಜ್ಯೇಷ್ಠ ಮಿತ್ರ, ಭದ್ರಕ, ಭಾಗವತ, ದೇವಭೂತಿ ಆಳ್ವಿಕೆ ನಡೆಸಿದರು.

ಇವರ ನಂತರ ಕಣ್ವ ವಂಶ ಅಧಿಕಾರಕ್ಕೆ ಬಂದಿತು. ಶುಂಗರ ಕೊನೆಯ ಅರಸನನ್ನು ಆತನ ಮಂತ್ರಿ ವಸುದೇವ ಕೊಲೆ ಮಾಡಿ 'ಕಣ್ವ ವಂಶ' ಸ್ಥಾಪಿಸಿದ. ಕಣ್ವ ವಂಶದಕೊನೆಯ ಅರಸ ಸುಸೇರಮನ್ . ಈತನನ್ನು ಶಾತವಾಹನರ ಒಂದನೆ ಪುಲಮಾಯಿ ಕೊಲೆ ಮಾಡಿದ.

## ಶಾತವಾಹನರು

**(ಕ್ರಿ.ಪೂ. 50 – ಕ್ರಿ.ಶ. 250)**

ಶ್ರೀಮುಖ ಶಾತವಾಹನ ಸಂತತಿಯ ಸ್ಥಪಕ ಈ ವಂಶ ನೇಗಿಲಿನ ಬಳಕೆಯಿಂದ ದಕ್ಷಿಣದಲ್ಲಿ ಖ್ಯಾತವಾಯಿತು. ಇವರು ಆಂಧ್ರುರು ಎಂದು ಹೇಳಲಾಗಿದೆ. ಆದರೆ ಶಾತವಾಹನರ ಬಹಳಷ್ಟು ಆರಂಭಿಕ ಶಾಸನಗಳು ಮಹಾರಾಷ್ಟ್ರದಲ್ಲಿ ದೊರೆತಿವೆ. ಪ್ರತಿಷ್ಠಾನ ಇವರ ರಾಜಧಾನಿ.

ಗೌತಮಪುತ್ರ ಸಾತಕರ್ಣಿ ಶಾತವಾಹನರ ಪ್ರಸಿದ್ಧ ದೊರೆ. ಈತನ ಕಾಲ **ಕ್ರಿ.ಶ. 106 – 130.** ತಾನೊಬ್ಬ ಬ್ರಾಹ್ಮಣ ಎಂದು ಹೇಳಿಕೊಂಡ ಈತ ತನ್ನ ವಿರೋಧಿ ನಹಪಾಣದ ಕ್ಷತ್ರಿಯ ರಾಜರನ್ನು ಸೋಲಿಸಿದ. ನಾಸಿಕದ ಬಳಿ ದೊರೆತಿರುವ ನಹಪಾಣನ ಎಂಟು ಸಾವಿರ ಬೆಳ್ಳಿ ನಾಣ್ಯಗಳ ಮೇಲೆ ಶಾತವಾಹನರ ಮರು ಮುದ್ರೆಯನ್ನು ಕಾಣಬಹುದು. ಗೌತಮಿಪುತ್ರ ಸಾತಕರ್ಣಿಯ ಸಂತತಿಯವರು ಕ್ರಿ.ಶ 220ರ ವರೆಗೆ ಆಳ್ವಿಕೆ ನಡೆಸಿದರು. ಸಾತಕರ್ಣಿಯ ನಂತರ ವಶಿಷ್ಠ ಪುತ್ರ ಪುಲಮಾಯಿ **(ಕ್ರಿ.ಶ. 130ಪ–154)** ಅಧಿಕಾರಕ್ಕೆ ಬಂದ.

ಶಾತವಾಹನರು ಬ್ರಾಹ್ಮಣ ಮತವನ್ನು ಪ್ರಚಾರ ಪಡಿಸಿದರು. ಬೌದ್ಧ ಸನ್ಯಾಸಿಗಳನ್ನು ಪ್ರೋತ್ಸಾಹಿಸಿದರು. ಇವರ ಕಾಲದಲ್ಲಿ ಆಂಧ್ರಪ್ರದೇಶದ ನಾಗಾರ್ಜುನಕೊಂಡ ಹಾಗೂ ಅಮರಾವತಿಗಳು ಬೌದ್ಧ ಸಂಸ್ಕೃತಿಯ ಪ್ರಮುಖ ಕೇಂದ್ರಗಳಾಗಿದ್ದವು.

ದಖನ್ನಿನ ಪಶ್ಚಿಮ ಬೆಟ್ಟದ ಬಂಡೆಗಳಲ್ಲಿ ಬೌದ್ಧ ಪವಿತ್ರ ಮಂದಿರಗಳಾ ಚೈತ್ಯಗಳನ್ನು ಹಾಗೂ ಮಠಗಳಾದ ವಿಹಾರಗಳನ್ನು ಶಾತವಾಹನರು ಕೆತ್ತೆನೆ ಮಾಡಿಸಿದರು. ಕಾರ್ಲೆಯಲ್ಲಿರುವ ಚೈತ್ಯ ಅತ್ಯಂತ ಪ್ರಸಿದ್ಧವಾಗಿದೆ. ಶಾತವಾಹನರ ಅಧಿಕೃತ ಭಾಷೆ ಪ್ರಾಕೃತ. ಹಲ ಎಂಬ ಶಾತವಾಹನ ಅರಸ 'ಗಾಥಾನಪ್ತಶತಿ' ಬರೆದ. ಬೃಹತ್ ಶಿಲಾ ಸಮಾಧಿ, ತಾಯಿಕುಲೀನ ಸಮಾಜ ವ್ಯವಸ್ಥೆ ಶಾತವಾಹನರ ವಿಶೇಷ ಅಂಶಗಳು.

## ದಾಳಿಗಳ ಸರಣಿ

**ಕ್ರಿ.ಪೂ. 200ರ** ನಂತರ ಪೂರ್ವ ಭಾರತ, ಮಧ್ಯ ಭಾರತ ಹಾಗೂ ದಕ್ಷಿಣ ಭಾರತಗಳಲ್ಲಿ ಕ್ರಮವಾಗಿ ಶುಂಗರು, ಕಣ್ವರು ಮತ್ತು ಶಾತತವಾಹನರು ತಲೆ ಎತ್ತಿದ್ದರು. ಆದರೆ ವಾಯುವ್ಯ ಭಾಗದಲ್ಲಿ ಮೌರ್ಯರ ಪತನದ ನಂತರ ಮಧ್ಯ ಏಷ್ಯಾದಿಂದ ಬಂದ ಹಲವಾರು ರಾಜ ಸಂತತಿಗಳು ಪ್ರಭುತ್ವ ಸ್ಥಾಪಿಸಿದವು.

**ಇಂಡೋ – ಗ್ರೀಕರು:** ಬ್ಯಾಕ್ಟ್ರಿಯಾ ದೇಶವನ್ನಾಳುತ್ತಿದ್ದ ಗ್ರೀಕರು **ಕ್ರಿ.ಪೂ. 200ರಲ್ಲಿ** ಹಿಂದೂಕಶ್ ಪರ್ವತಗಳನ್ನು ದಾಟಿ ಬಂದರು. ಉತ್ತರ ಅಫ್ಘಾನಿಸ್ತಾನದ ಆಕ್ಸಿಸ್ ನದಿಯ ದಕ್ಷಿಣ ಪ್ರದೇಶವೇ ಬ್ಯಾಕ್ಟ್ರಿಯಾ.ಬ್ಯಾಕ್ಟ್ರಿಯಾದ ಗ್ರೀಕರು ಭಾರತದ ಮೇಲೆ ದಾಳಿ ಆರಂಭಿಸಿದಾಗ ಅಶೋಕನ ಉತ್ತರಾಧಿಕಾರಿಗಳು ದುರ್ಬಲರಾಗಿದ್ದರು.

ಇಂಡೋ – ಗ್ರೀಕರ ಪ್ರಮುಖ ದೊರೆ ಮಿಲಿಂದಾ ಎಂದು ಖ್ಯಾತನಾದ ಮೆನಾಂಡರ್. ಈತನ ಕಾಲ **ಕ್ರಿ.ಪೂ. 465 –145.** ಮಿಲಿಂದಾಪಂಜಾಬಿನ ಸಕಾಲ (ಈಗಿನ ಸಿಯಾಲ್‌ಕೋಟ್)ವನ್ನು ರಾಜಧಾನಿಯನ್ನಾಗಿ ಮಾಡಿಕೊಂಡಿದ್ದ. ಮಿಲಿಂದಾ ಕೇಳದ ಪ್ರಶ್ನೆಗಳು ಮತ್ತು ಬೌದ್ಧ ಸನ್ಯಾಸಿ ನಾಗಾರ್ಜುನ ಅವುಗಳಿಗೆ ಕೊಟ್ಟ ಉತ್ತರಗಳು 'ಮಿಲಿಂದಾ ಪನ್ಹೊ' (ಮಿಲಿಂದಾ ಪ್ರಶ್ನೆ) ಎನ್ನುವ ಪುಸ್ತಕದಲ್ಲಿ ದಾಖಲಾಗಿವೆ. ಭಾರತದಲ್ಲಿ ಮೊಟ್ಟ ಮೊದಲ ಬಾರಿಗೆ ಚಿನ್ನದ ನಾಣ್ಯಗಳನ್ನು ಇವರು ಹೊರತಂದರು.

### ಶಕರು

ಗ್ರೀಕರು ನಂತರ ಕ್ರಿ.ಪೂ 90ರಲ್ಲಿ ಭಾರತದ ಮೇಲೆ ದಂಡೆತ್ತಿ ಬಂದ ಇವರು ಅಪ್ಘಾನಿಸ್ತಾನ್, ತಕ್ಷ ಶಿಲೆ, ಮಥುರಾಗಳಲ್ಲಿ ವಿವಿಧ ಶಾಖೆಗಳ ಮೂಲಕ ಆಳ್ವಿಕೆ ನಡೆಸಿದರು. ಪಶ್ಚಿಮ ಭಾರತದಲ್ಲಿ ನೆಲೆಗೊಂಡ ಶಕರ ನಾಲ್ಕನೆ ಶಾಖೆ **ಕ್ರಿ.ಶ. 4ನೇ** ಶತಮಾನದವರೆಗೆ ಅಧಿಕಾರದಲ್ಲಿತ್ತು. ದಖನ್ನಿನ ಉತ್ತರ ಭಾಗದಲ್ಲಿ ಇವರ ಐದನೇ ಶಾಖೆ ಆಳ್ವಿಕೆ ನಡೆಸಿತು.

**ಕ್ರಿ.ಪೂ 58**ರಲ್ಲಿ ಉಜ್ಜಯನಿಯ ರಾಜ ವಿಕ್ರಮಾದಿತ್ಯ ಶಕರನ್ನು ಸೋಲಿಸಿ ಹೊರದೂಡಿದ. ವಿಕ್ರಮ ಶಕೆ ಆರಂಭವಾದದ್ದು ಇಲ್ಲಿಂದಲೇ. ಒಂದನೆ ರುದ್ರದಮನ **ಕ್ರಿ.ಶ. 130 ರಿಂದ 150ರ** ವರೆಗೆ ಸಿಂಧೂ ಪ್ರದೇಶ ಗುಜರಾತ್ , ಕೊಂಕಣ, ನರ್ಮದಾ ಕಣಿವೆ, ಮಾಳ್ವ ಹಾಗೂ ಕಾಟೇವಾಡಗಳಲ್ಲಿ ಅಳ್ವಿಕೆ ನಡೆಸಿದ. ಅತ್ಯಂತ ಪ್ರಸಿದ್ಧ ರಾಜನಾಗಿದ್ದ ಈತ ಸಂಸ್ಕೃತದ ಅಭಿಮಾನಿ. **ಈತ ಮೊಟ್ಟ ಮೊದಲ ಸಂಸ್ಕೃತ ಶಾಸನ ಬರೆಸಿದ.** ಕಾಟೇವಾಡದ ಒಣ ಪ್ರದೇಶದಲ್ಲಿ ಸುದರ್ಶನ ಸರೋವರವನ್ನು ಈತ ಉತ್ತಮಗೊಳಿಸಿದ.

### ಪಾರ್ಥಿಯನ್ನರು : (ಕ್ರಿ.ಶ. 19–46)

ಶಕರ ನಂತರ ವಾಯುವ್ಯ ಪಾರ್ಥಿಯನ್ನರ ಆಡಳಿತಕ್ಕೆ ಒಳಗಾಯಿತು.

ಈ ಇಬ್ಬರನ್ನೂ ಸೇರಿಸಿ ಶಕ – ಪಹ್ಲವರೆಂದು ಹೇಳಲಾಗಿದೆ. ಪಾರ್ಥಿಯನ್ನರು ಇರಾನಿನವರು. ಗೊಂಡೊ ಫರ್ನಿಸ್ ಇವರ ಪ್ರಮುಖ ಅರಸ. ಈತನ ಕಾಲದಲ್ಲಿ ಸೈಂಟ್ ಥಾಮಸ್ ಕ್ರೈಸ್ತ ಮತದ ಧರ್ಮ ಪ್ರಚಾರಕ್ಕಾಗಿ ಭಾರತಕ್ಕೆ ಬಂದಿದ್ದ.

### ಕುಶಾನರು : (ಕ್ರಿ.ಶ. 45–230)

ಇವರನ್ನು ಯುವೇಚಿ ಅಥವಾ ಟೊಚಾರಿಯನ್ ಎಂದೂ ಕರೆಯಾಲಾಗುತ್ತಿತ್ತು. ಚೈನಾದ ಪಕ್ಕ ಮಧ್ಯ ಏಷ್ಯಾದ ಹುಲ್ಲುಗಾವಲಿನಲ್ಲಿ ನೆಲೆಸಿದ್ದ ಕುಶಾನರು ಶಕರಿಂದ ಬ್ಯಾಕ್ಟ್ರಿಯಾವನ್ನು ವಶಪಡಿಸಿಕೊಂಡ ಅಲ್ಲಿಂದ ಕಾಬೂಲ್ ಮೂಲಕ ಹಿಂದುಕುಶ್ ಪರ್ವತ ಶ್ರೇಣಿಯನ್ನು ದಾಟಿ ಗಾಂಧಾರ ಪ್ರದೇಶವನ್ನು ಗ್ರೀಕರಿಂದ ಹಾಗೂ ಪಾರ್ಥಿಯನ್‌ರಿಂದ ವಶಪಡಿಸಿಕೊಂಡು ಸಿಂಧೂ ಗಂಗಾ ಜಲಾಶಯನ ಪ್ರದೇಶದವರೆಗೆ ಬೆಳೆದರು.

ಹೀಗೆ ಕುಶಾನರ ಸಾಮ್ರಾಜ್ಯ ಆಫ್ಘಾನಿಸ್ತಾನದ ಆಕ್ಸಿಸ್ ನದಿಯಿಂದ ಭಾರತದ ಗಂಗಾನದಿಯವರೆಗೆ ಹಾಗೂ ಮಧ್ಯ ಏಷ್ಯಾದ ಕೊರಸಾನ್‌ನಿಂದ ವಾರಣಾಸಿಯವರೆಗೆ ಹರಡಿತ್ತು.

ಕುಶಾನರ ಎರಡು ವಂಶಗಳು ಒಂದರ ನಂತರ ಒಂದು ಆಧಿಕಾರ ನಡೆಸಿದವು. ಮೊದಲನೆಯ ವಂಶವನ್ನು ಕ್ಯಾಡಿಫಿಸಸ್ ಕ್ರಿ.ಶ. 50ರಲ್ಲಿ ಸ್ಥಾಪಿಸಿದ. ಒಂದನೆಕ್ಯಾಡಿಫಿಸಸ್ ತಾಮ್ರದ ನಾಣ್ಯಗಳನ್ನು ಚಲಾವಣೆಗೆ ತಂದ. ನಂತರ ಎರಡನೆ ಕ್ಯಾಡಿಫಿಸಸ್ ಚಿನ್ನದ ನಾಣ್ಯಗಳನ್ನು ಚಲಾವಣೆಗೆ ತಂದ.

ಕ್ಯಾಡಿಫಿಸಸ್ ನಂತರ ಕಾನಿಷ್ಠ ಸಂತತಿ ಪಟ್ಟಕ್ಕೇರಿತು. ಕುಶಾನ ಅರಸರು ಪರಿಶುದ್ಧ ಚಿನ್ನದ ನಾಣ್ಯಗಳನ್ನು ಚಲಾವಣೆಗೆ ತಂದರು. ಕುಶಾನರಲ್ಲಿ ಕಾನಿಷ್ಕ ಅತ್ಯಂ ಪ್ರಸಿದ್ಧ ಅರಸ.

**ಭಾರತದ ಸರ್ಕಾರ ಅನುಸರಿಸುತ್ತಿರುವ ಶಕ ಕಾಲಗಣನೆಯನ್ನು ಕಾನಿಷ್ಕ ಕ್ರಿ.ಶ. 78ರಲ್ಲಿ ಪ್ರಾರಂಭ ಮಾಡಿದ . ಇದು ಆತನ ಮುಖ್ಯ ಸಾಧನೆ.**

ಆತನ ಇನ್ನೊಂದು ಸಾಧನೆ – ಬೌದ್ಧ ಮತಕ್ಕೆ ನೀಡಿದ ಬೆಂಬಲ. ಕಾಶ್ಮೀರದಲ್ಲಿ ಈತ ಬೌದ್ಧ ಸಮಾವೇಶವೊಂದನ್ನು ನಡೆಸಿದ. ಅಲ್ಲಿ ಮಹಾಯಾನ ಶಾಖೆ ಸ್ಥಾಪಿತವಾಯಿತು.

ಕಾನಿಷ್ಕ ಸಂಸ್ಕೃತ ಸಾಹಿತ್ಯಕ್ಕೆ ಪ್ರೋತ್ಸಾಹ ನೀಡಿದ. ಕಾನಿಷ್ಕನ ಅವಧಿಯ ಬಗ್ಗೆ ಹಲವಾರು ಗೊಂದಲಗಳಿದ್ದರೂ ಆತ ಕ್ರಿ.ಶ. 78 ರಿಂದ 144 ರವರೆಗೆ ಆಡಳಿತ ನಡೆಸಿದನೆಂದು ದೃಢಪಟ್ಟಿದೆ.

ಕ್ರಿ.ಶ. 3ನೇ ಶತಮಾನದ ಮಧ್ಯಭಾಗದಲ್ಲಿ ಇರಾನಿನಲ್ಲಿ ಸ್ಥಾಪಿತವಾದ ಸಸ್ಸಾನಿ ಸಾಮ್ರಾಜ್ಯ ಅಫ್ಘಾನಿಸ್ತಾನ್ ಹಾಗೂ ಸಿಂಧೂ ನದಿಯ ಪಶ್ಚಿಮ ಪ್ರದೇಶಗಳಲ್ಲಿ ಕುಶಾನರ ಅಧಿಕಾರವನ್ನು ನಾಶಪಡಿಸಿತು. ಆದರೆ ಭಾರತದಲ್ಲಿ ಕುಶಾನರ ಆಳ್ವಿಕೆ ಮುಂದಿನ ಒಂದು ಶತಮಾನದವರೆಗೆ ಮುಂದುವರೆಯಿತು.

## ಗುಪ್ತರ ಸಂತತಿ (ಕ್ರಿ.ಶ. 275–550)

ಮೌರ್ಯರ ನಂತರ ಉತ್ತರದಲ್ಲಿ ಕುಶಾನರು ಹಾಗೂ ದಕ್ಷಿಣ ಮಧ್ಯದಲ್ಲಿ ಶಾತವಾಹನರು ಪ್ರಬಲರಾಗಿ ಕ್ರಿ.ಶ. ಮೂರನೆ ಶತಮಾನದವರೆಗೆ ಬೆಳೆದು ಅಂತ್ಯ ಕಂಡರು.

ಕುಶಾನ ಸಾಮ್ರಾಜ್ಯದ ಅವಶೇಷಗಳ ಮೇಲೆ ಗುಪ್ತ ಸಾಮ್ಯಾಜ್ಯ ತಲೆಯೆತ್ತಿ ಮೌರ್ಯ ಸಾಮ್ರಾಜ್ಯದ ನೆನಪು ಮಾಡಿಕೊಟ್ಟಿತು. ಮೌರ್ಯ ಸಾಮ್ರಾಜ್ಯದಷ್ಟು ವಿಶಾಲವಾಗಿರದಿದ್ದರೂ ಗುಪ್ತ ಸಾಮ್ರಾಜ್ಯ ಕ್ರಿ.ಶ. 335–455ರ ವರೆಗೆ ಉತ್ತರ ಭಾರತವನ್ನು ಗುಪ್ತರು ಕುಶಾನರ ಸಾಮಂತರಾಗಿದ್ದರು. ಗುಪ್ತರ ಸಂತತಿಯನ್ನು ಶ್ರೀ ಗುಪ್ತ ಆರಂಭಿಸಿದ.

**ಒಂದನೆ ಚಂದ್ರಗುಪ್ತ : (ಕ್ರಿ.ಶ. 319– 335)**

ಗುಪ್ತ ವಂಶದ ಪ್ರಮುಖ ರಾಜರಲ್ಲಿ ಒಂದನೆ ಚಂದ್ರಗುಪ್ತ ಮೊದಲನೆಯವನು ಈತ ಕ್ರಿ.ಶ. 319–335ರ ವರೆಗೆ ಆಳ್ವಿಕೆ ನಡೆಸಿದ. ಈತ 'ಮಹಾರಾಜಾಧಿರಾಜ' ಎನ್ನುವ ಬಿರುದನ್ನು ಹೊಂದಿದ್ದ.

**ಸಮುದ್ರ ಗುಪ್ತ : (ಕ್ರಿ.ಶ. 335 –380)**

ಒಂದನೆ ಚಂದ್ರಗುಪ್ತನ ಮಗನಾದ ಈತ ಯುದ್ಧ ಹಾಗೂ ರಾಜ್ಯಾಕ್ರಮಣಗಳಲ್ಲಿ ನಂಬಿಕೆ ಇಟ್ಟವನಾಗಿದ್ದ. ಈತನ ಆಸ್ಥಾನ ಕವಿ ಹರಿಸೇನ ಸಮುದ್ರಗುಪ್ತನ ವಿಜಯಯಾತ್ರೆಗಳನ್ನು ವರ್ಣಿಸಿದ್ದಾನೆ. ಸಮುದ್ರಗುಪ್ತ **'ಭಾರತದ ನೆಪೋಲಿಯನ್'** ಎಂಬ ಬಿರುದನ್ನು ಪಡೆದಿದ್ದ.

**ಎರಡನೆ ಚಂದಗ್ರುಪ್ತ : (ಕ್ರಿ.ಶ. 280–412)**

ಈತ ವಾಯುವ್ಯ ಭಾರತ ಹಾಗೂ ಬಂಗಾಳದ ಭಾಗಗಳನ್ನು ವಶಪಡಿಸಿಕೊಂಡ. ಗುಪ್ತ ಸಾಮ್ರಾಜ್ಯ ಈತನ ಕಾಲದಲ್ಲಿ ಮತ್ತಷ್ಟು ವಿಸ್ತಾರಗೊಂಡಿತು. ತನ್ನ ಮಗಳು ಪ್ರಭಾವತಿಯನ್ನು ಮಧ್ಯಭಾರತದ ಬ್ರಾಹ್ಮಣ ಅರಸ ವಾಕಟಕನಿಗೆ ಕೊಟ್ಟು ಮದುವೆ ಮಾಡಿದ.

ವಾಕಟಕನ ನಿಧನದ ನಂತರ ಪ್ರಭಾವತಿ ರಾಜ್ಯವಾಳತೊಡಗಿದಳು. ಇದರಿಂದ ಚಂದ್ರಗುಪ್ತ ನಾಲ್ಕು ಶತಮಾನಗಳಿಂದ ಶಕ ಕ್ಷಾತ್ರಪದ ವಶದಲ್ಲಿದ್ದ ಮಾಳ್ವಹಾಗೂ ಗುಜುರಾತ್‌ಗಳನ್ನು ಪ್ರಭಾವತಿಯ ಮೂಲಕ ವಶಪಡಿಸಿಕೊಂಡ. ಈ ಮೂಲಕ ಉಜ್ಜಯನಿ ಚಂದ್ರಗುಪ್ತನ ಎರಡನೆ ರಾಜಧಾನಿಯಾಯಿತು. ದೆಹಲಿಯ ಕುತುಬ್ ಮಿನಾರ್‌ಅವರಣದೊಳಗಿರುವಇರುವ ಕಬ್ಬಿಣಕಂಬದಮೇಲೆ ಇರುವ ಪ್ರಶಂಸೆಶಾಸನ ಎರಡನೆ ಚಂದ್ರಗುಪ್ತನದೆನ್ನುವ ಸೂಚನೆಗಳಿವೆ. ಚಂದ್ರಗುಪ್ತ 'ವಿಕ್ರಮಾದಿತ್ಯ' ಎನ್ನುವ ಬಿರುದನ್ನು ಪಡೆದಿದ್ದ. ಚಂದ್ರಗುಪ್ತನ ಉಜ್ಜಯನಿ ಆಸ್ಥಾನದಲ್ಲಿ ಕಾಳಿದಾಸ ಮತ್ತು ಅಮರಸಿಂಹ ಮುಂತಾದ ವಿದ್ವಾಂಸರಿದ್ದರು. ಚೈನಾದ ಬೌದ್ಧ ಯಾತ್ರಿಕ ಫಾಹಿಯಾನ **(ಕ್ರಿ.ಶ. 399–414)** ಭಾರತಕ್ಕೆ ಈತನ ಕಾಲದಲ್ಲಿ ಬಂದಿದ್ದ.

**ಗುಪ್ತರ ಅಂತ್ಯ**

ಚಂದ್ರಗುಪ್ತನ ನಂತರ ಪಟ್ಟಕ್ಕೆ ಬಂದ ದುರ್ಬಲ ಗುಪ್ತ ರಾಜರು ಮಧ್ಯ ಏಷ್ಯಾದಿಂದ ಬಂದ ಹೂಣರ ದಾಳಿಗೆ ತತ್ತರಿಸಿದರು. ಸ್ಕಂದಗುಪ್ತ **(ಕ್ರಿ.ಶ. 455 – 467)**ನು ಹೂಣರನ್ನು ತಡೆಗಟ್ಟುವಲ್ಲಿ ಯಶಸ್ವಿಯಾಗಿದ್ದ. ಆದರೆ ನಂತರ ಬಂದ ಅರಸರು ಹೂಣರಿಂದ ಹಿನ್ನಡೆ ಹೊಂದಿದರು.

ಹೂಣರು ಲೋಹದಿಂದ ತಯಾರಿಸಿದ ರಿಕಾಪುಬಳಸುತ್ತಿದ್ದರು. ನಿಪುಣ ಬಿಲ್ಲುಗಾರರಗಿದ್ದ ಅವರು ಕುದುರೆ ವೇಗದಲ್ಲಿ ಓಡುತ್ತಿದ್ದರು. ಕ್ರಿ.ಶ 485 ವೇಳೆಗೆ ಹೂಣರು ಪೂರ್ವ ಮಾಳ್ವ ಹಾಗೂ ಮಧ್ಯ ಭಾರತದ ಭಾಗಗಳನ್ನು ಆಕ್ರಮಿಸಿಕೊಂಡಿದ್ದರು. ತೋರಮಲ್ಲ ಹಾಗೂ ಮಿಹಿರಕುಲ ಹೂಣರ ಅತ್ಯಂತ ಅಕ್ರಮಣಕಾರಿ ದೊರೆಗಳಾಗಿದ್ದರು.

**ಯಶೋಧರ್ಮನ್**

ಹೂಣರ ದೊರೆ ಮಿಹಿರಕುಲನನ್ನು ಯಶೋಧರ್ಮನ್ ಸೋಲಿಸಿದ. ಈ ಮೂಲಕ ಹೂಣರ ಪ್ರಭುತ್ವವನ್ನು ಮಧ್ಯ ಭಾರತದಲ್ಲಿ ಯಶೋಧರ್ಮನ್ ಕೊನೆಗಾಣಿಸಿದ. ಯಶೋಧರ್ಮನ ಕಾಲದ ಬಗ್ಗೆ ಹಾಗೂ ಆತ ಹೂಣರ ವಿರುದ್ಧ ಸಾಧಿಸಿದ ಯಶಸ್ಸಿನ ಬಗ್ಗೆ ಗೊಂದಲಗಳಿವೆ.

**ಗುಪ್ತರ ಕೊನೆಯ ಅರಸ ಬುದ್ಧ ಗುಪ್ತ.**

## ಹರ್ಷವರ್ಧನ

**(ಕ್ರಿ.ಶ. 606 – 647)**

ಗುಪ್ತರ ನಂತರ ಉತ್ತರ ಭಾರತ ಮತ್ತೆ ಸಣ್ಣ ಸಣ್ಣ ರಾಜ್ಯಗಳಾಗಿ ವಿಭಜನೆಗೊಂಡಿತು. ಕ್ರಿ.ಶ. 500ರ ನಂತರ ಕಾಶ್ಮೀರ, ಪಂಜಾಬ ಹಾಗು ಪಶ್ಚಿಮ ಭಾರತಗಳ ಮೇಲೆ ಹೂಣರು ತಮ್ಮ ಅಧಿಪತ್ಯ ಸ್ಥಾಪಿಸಿದ್ದರು.

ಉತ್ತರ ಹಾಗೂ ಪಶ್ಚಿಮ ಭಾರತಗಳಲ್ಲಿ ಗುಪ್ತರ ಕೆಲವು ಸಾಮಂತರು ಅಲ್ಲಲ್ಲಿ ಪ್ರಬಲರಾಗಿದ್ದರು. ಇರವಲ್ಲಿ ಹರಿಯಾಣದಲ್ಲಿ ಆಳುತ್ತಿದ್ದ ಥಾನೇಶ್ವರ್ ಸಂತತಿ ಕ್ರಮೇಣವಾಗಿ ಉಳಿದ ಸಾಮಂತರ ಮೇಲೆ ಪ್ರಭುತ್ವ ಸಾಧಿಸಿತು. ಇದನ್ನು ಸಾಧಿಸಿದಾತನೇ ಹರ್ಷವರ್ಧನ. ಈತ ಕನೌಜನ್ನು ತನ್ನ ನೆಲೆಯನ್ನಾಗಿ ಮಾಡಿಕೊಂಡು 'ಕನೌಜಿನ ಹರ್ಷವರ್ಧನ' ಎಂದೇ ಖ್ಯಾತನಾದ.

ಹರ್ಷವರ್ಧನ ಪುಶ್ಯಭೂತಿ ವಂಶದ ಪ್ರಭಾಕರವರ್ಧನನ ಪುತ್ರ. ಹರ್ಷನ ಆಸ್ಥಾನದಲ್ಲಿ ಬಾಣಭಟ ಕವಿ ಇದ್ದ. ಚೈನಾದ ಯಾತ್ರಿಕ ಹ್ಯು– ಎನ್ – ತ್ಸಾಂಗ್ ಹರ್ಷವರ್ಧನನ ಕಾಲದಲ್ಲಿ ಭಾರತದ ಪ್ರವಾಸ ಮಾಡಿದ್ದ. ಹರ್ಷವರ್ಧನ ಭಾರತದ ಕೊನೆಯ ಮಹಾನ್ ಹಿಂದೂ ಸಾಮ್ರಾಟ್ ಎಂದು ಹೇಳಲಾಗಿದೆ.

ನಳಂದದಲ್ಲಿ ಬೌದ್ಧ ವಿಶ್ವ ವಿದ್ಯಾಲಯ ಹರ್ಷನ ಕಾಲದಲ್ಲಿ ಉತ್ತುಂಗಕ್ಕೇರಿತ್ತು. ಈತಮೂಲತಃ ಶೈವನಾಗಿದ್ದರೂ ನಂತರ ಬೌದ್ಧ ಮತದ ಆಶ್ರಯದಾತನಾದ. ಕನೌಜಿನಲ್ಲಿ ಬೌದ್ಧ ಸಮಾವೇಶವೊಂದನ್ನು ನಡೆಸಿದ. ಕ್ರಿ.ಶ. 635ರಲ್ಲಿ ದಕ್ಷಿಣದತ್ತ ಸಾಮ್ರಾಜ್ಯ ವಿಸ್ತರಿಸಲು ಹೊರಟ ಹರ್ಷವರ್ಧನ ಎರಡನೆ ಪುಲಕೇಶಿಯಿಂದ ಸೋತು ಹಿಂದಕ್ಕೆ ಬಂದ.

ಅಧಿಕಾರಗಳಿಗೆ ಸಂಬಳವಾಗಿ ಮತ್ತುಬಹುಮಾನವಾಗಿ ಭೂಮಿ ನೀಡುವ ಸಾಮಂತ ಪದ್ಧತಿ ಹರ್ಷನಿಂದ ಆರಂಭವಾಯಿತು. ಹರ್ಷನ ಸಾಮ್ರಾಜ್ಯದಲ್ಲಿ ಕಾನೂನ ಸುವ್ಯವಸ್ಥೆ ಸಮರ್ಪಕವಾಗಿರಲಿಲ್ಲ. ಅಪರಾಧಿಗಳಿಗೆ ಕಠಿಣ ಶಿಕ್ಷೆ ವಿಧಿಸಲಾಗುತ್ತಿತ್ತು.

**ಪ್ರಾಚೀನ ಸಾಹಿತ್ರ**

| **ಕವಿಗಳು** | **ಗ್ರಂಥಗಳು** |
|---|---|
| ಪಾಣಿನಿ | ಅಷ್ಟಾಧ್ಯಾಯಿ |
| ಪಾತಂಜಲಿ | ಮಹಾಭಾಷ್ಯ |
| ಹರ್ಷವರ್ಧನ | ನಾಗಾನಂದ |
| ಶೂದ್ರಕ | ಮೃಚ್ಛಕಟಿಕ |
| ಜಯದೇವ | ಗೀತಗೋವಿಂದ |
| ವೀರಸೇನ | ನವರತ್ನ |
| ವಿಶಾಖದತ್ತ | ಮುದ್ರಾರಾಕ್ಷಸ |
| ವಾತ್ಸಾಯನ | ನ್ಯಾಯಭಾಷ್ಯ, ಕಾಮಸೂತ್ರ |
| 1ನೇ ಅಮೋಘವರ್ಷ | ಕವಿರಾಜಮಾರ್ಗ, ಪ್ರಶ್ನೋತ್ತರ ಮಾಲಿಕ |
| ಭಾಸ | ಸ್ವಪ್ನವಾಸವದತ್ತ |
| ಅಶ್ವಘೋಶ | ಬುದ್ಧಚರಿತ |
| ಫಿರ್ದೋಸಿ | ಶಹನಾಮಾ |
| ಅಮರಸಿಂಹ | ಅಮರಕೋಶ |
| ವರಾಹಮಿಹಿರ | ಪಂಚಸಿದ್ಧಾಂತಿಕ, ಬೃಹತ್‌ಸಂಹಿತಾ |
| ಆರ್ಯಭಟ | ಸೂರ್ಯಸಿದ್ಧಾಂತ, ಆರ್ಯಭಟೀಯ |

| | |
|---|---|
| ವಿಷ್ಣುಶರ್ಮ | ಪಂಚತಂತ್ರ (ಸಂಸ್ಕೃತ) |
| ಗುಣಾಢ್ಯ | ಬೃಹತ್ಕಥ |
| ರಾಜಶೇಖರ | 'ಬಾಲರಾಮಾಯಣ |
| ರವಿಕೀರ್ತಿ | ಐಹೊಳೆ ಪ್ರಶಸ್ತಿ |
| ಮೆಗಾಸ್ಥನೀಸ್ | ಇಂಡಿಕಾ |
| ಹ್ಯುಯೆನ್‌ತ್ಸಾಂಗ್ | ಸಿ–ಯು–ಕಿ |
| ಕೌಟಿಲ್ಯ | ಅರ್ಥಶಾಸ್ತ್ರ |
| ಚರಕ | ಚರಕ ಸಂಹಿತ |
| ಬ್ರಹ್ಮಗುಪ್ತ | ಬಹ್ಮಸ್ಪುತ ಸಿದ್ಧಾಂತ, ಖಂಡ ಕಡೇಯಕ |
| ಎರಡನೆ ಭಾಸ್ಕರ | ಸಿದ್ಧಾಂತ ಶಿರೋಮಣಿ, ಲೀಲಾವತಿ |
| ಬಾಣಭಟ್ಟ | ಹರ್ಷಚರಿತ, ಕಾದಂಬರಿ,ರತ್ನಾವಳಿ, ಪ್ರಿಯದರ್ಶಿಕ |
| ಸುಬಂಧು | ವಾಸವದತ್ತ |
| ನಾರಾಯಣ ಪಂಡಿತ | ಹಿತೋಪದೇಶ |
| ಹಲ | ಗಾಥಾಸಪ್ತಶತಿ |
| ಕಾಳಿದಾಸ | ಅಭಿಜ್ಞಾನ ಶಾಕುಂತಲಂ, ವಿಕ್ರಮೋರ್ವಶಿ, ಮಾಳ್ವಿಕಾಗ್ನಿ ಮಿತ್ರ (ನಾಟಕಗಳು): ರಘುವಂಶ, ಕುಮಾರ ಸಂಭವ (ಮಹಗ್ರಂಥಗಳು): ಮೇಘದೂತಂ, ಋತು ಸಂಹಾರ (ಮಹಾ ಕಾವ್ಯಗಳು) |

| **ಆಸ್ಥಾನ ಕವಿಗಳು** | **ಆಶ್ರಯದಾತ ರಾಜ** |
|---|---|
| ಅಶ್ವಘೋಷ | ಕನಿಷ್ಕ |
| ಹರಿಸೇನ | ಸಮುದ್ರಗುಪ್ತ |
| ಕಾಳಿದಾಸ | ಎರಡನೆ ಚಂದ್ರಗುಪ್ತ |
| ಅಮರಸಿಂಹ | ಎರಡನೆ ಚಂದ್ರಗುಪ್ತ |
| ಗುಣಾಢ್ಯ | ಶಾತವಾಹನ ರಾಜ ಹಲ |
| ಬಾಣಭಟ್ಟ | ಹರ್ಷವರ್ಧನ |
| ಭವಭೂತಿ | ಕನೌಜಿನ ಯಶೋವರ್ಮ |
| ಮಹಾವೀರಾಚಾರ್ಯ | ಅಮೋಘ ವರ್ಷ |
| ಜಿನಸೇನ | ಅಮೋಘ ವರ್ಷ |
| ದಂಡಿ | ಅಮೋಘ ವರ್ಷ |
| ರಾಜಶೇಖರ್ | ಮಹಿಪಾಲ |
| ಸ್ವಯಂಭು | ರಾಷ್ಟ್ರಕೂಟರು |
| ಬಿಲ್ಹಣ | ಆರನೆ ವಿಕ್ರಮಾದಿತ್ಯ |
| ಸಾಮದೇವ | ಮೂರನೆ ಪೃಥ್ವಿರಾಜ |
| ಚಂದ್ರ ಬರ್ದೈ | ಪೃಥ್ವಿರಾಜ್ ಚೌಹಾಣ್ |

## ಪ್ರಾಚೀನ ಭಾರತದ ದಕ್ಷಿಣ ರಾಜ್ಯಗಳು

ಪ್ರಾಚೀನ ಭಾರತದ ದಕ್ಷಣ ರಾಜ್ಯಗಳ ಬಗ್ಗೆ ಸಂಗಮ ಸಾಹಿತ್ಯದಿಂದ ವಿವರಗಳು ದೊರೆಯುತ್ತವೆ. ಕ್ರಿ.ಪೂ. 300 ರಿಂದ ಕ್ರಿ.ಶ. 300ರ ವರೆಗಿನ ಅವಧಿಯನ್ನು ಸಂಗಮ ಅವಧಿಯೆಂದೇ ಕರೆಯಲಾಗಿದೆ.

ಕ್ರಿ.ಪೂ. 4ನೇ ಶತಮಾನಲ್ಲಿ ಈ ವಿಭಾಗದಲ್ಲಿ ನೆಲೆಸಿದ್ದ ಜನರ ಬಗ್ಗೆ ಬೃಹತ್ ಶಿಲಾ ಸಮಾಧಿಗಳಿಂದ ವಿವರಗಳುದೊರೆಯುತ್ತವೆ. ಕ್ರಿ.ಪೂ. 3ನೇ ಶತಮಾನದ ವೇಳೆಗೆ ಈ ಬೃಹತ್ ಶಿಲಾ ಸಮಾಧಿಯ ಜನರು ಗುಡ್ಡ ಬೆಟ್ಟಗಳಿಂದ ಇಳಿದು ಫಲವತ್ತಾದ ನದಿ ಬಯುಗಳಿಗೆ ಬಂದು ನೆಲೆಸಿದರು. ಅಲ್ಲಿಂದ ದಕ್ಷಿಣ ಭಾಗದಲ್ಲಿ ನಾಗರಿಕತೆ ಉಗಮವಾಗಿ ರಾಜ್ಯಗಳು ರಚನೆಗೊಂಡವು.

ಕೃಷ್ಣ ನದಿಯ ದಕ್ಷಿಣಕ್ಕಿರುವ ಪ್ರದೇಶ ಚೋಳ, ಪಾಂಡ್ಯ ಮತ್ತು ಚೇರರು ಎಂದು ಮೂರು ರಾಜ್ಯಗಳಲ್ಲಿ ವಿಭಜಿತವಾಗಿತ್ತು. ಕ್ರಿ.ಪೂ. 4ನೇ ಶತಮಾನದಿಂದ ದಕ್ಷಿಣದ ಭಾಗ ಪ್ರಾಮುಖ್ಯತೆ ಪಡಿಯುತು.

**ಪಾಂಡ್ಯರು**

ಪಾಟಲಿಪುತ್ರದಲ್ಲಿದ್ದ ಮೆಗಸ್ಥನೀಸ್ ಪಾಂಡ್ಯ ದೇಶದ ಬಗ್ಗೆ ದಾಖಲಿಸಿದ್ದಾನೆ. ಪಾಂಡ್ಯರ ರಾಜ್ಯ ದಕ್ಷಿಣದ ಕೊನೆ ಹಾಗೂ ಅಗ್ನೇಯ ಅಂಚುಗಳನ್ನು ಒಳಗೊಂಡಿತ್ತು ಮೆಗಸ್ಥನೀಸ್‌ನು. ಹೇಳಿರುವಂತೆ ಪಾಂಡ್ಯರ ನಾಡು ಮುತ್ತುಗಳಿಗೆಪ್ರಸಿದ್ಧವಾಗಿತ್ತು. ಸಮಾಜ ತಾಯಿಕಟ್ಟನದಾಗಿತ್ತು. ಒಬ್ಬ ಮಹಿಳೆಯ ಆಳ್ವಿಕೆಯಲ್ಲಿ ಅದು ಇತ್ತು. ರೋಮನ್ ಸಾಮ್ರಾಜ್ಯದಂದಿಗೆ ವ್ಯಾಪರಸಂಪರ್ಕ ಹೊಂದಿದ್ದ ಪಾಂಡ್ಯನ್ ರಾಜರು ಕ್ರಿಸ್ತ ಶಕದ ಆರಂಭಿಕ ಶತಮಾನದಲ್ಲಿ ವೈದಿಕ ಯಜ್ಞಗಳನ್ನು ಅಚರಿಸುತ್ತಿದ್ದರು.

ಚೋಳರು

ಇದು ಪೆನ್ನಾರ್ ಹಾಗೂ ಪಾಲರ್ ನದಿಗಳ ಮಧ್ಯ ವಿಸ್ತರಿಸಿತ್ತು. ಇದರ ಕೇಂದ್ರ ಹತ್ತಿಯ ವ್ಯಾಪಾರಕ್ಕೆ ಪ್ರಸಿದ್ಧವಾಗಿದ್ದ ಉರೆಯ್ಯೂರ್. ಕ್ರಿ.ಪೂ 2ನೇ ಶತಮಾನದ ಮಧ್ಯದಲ್ಲಿ ಏಲಾರ ಎಂಬ ಚೋಳ ರಾಜ ಶ್ರೀಲಂಕವನ್ನು ಗೆದ್ದು ಐವತ್ತು ವರ್ಷಗಳವರೆಗೆ ಅದರ ಮೇಲೆ ಪ್ರಭುತ್ವ ಹೊಂದಿದ್ದ.

ಕ್ರಿ.ಶ 2ನೇ ಶತಮಾನದ ಕರಿಕಾಲ ಎಂಬ ಪ್ರಸಿದ್ಧ ರಾಜ ಪೂಹಾರ್ ಪಟ್ಟಣವನ್ನು ಸ್ಥಾಪಿಸಿ ಕಾವೇರಿ ನದಿಗೆ 160 ಕಿ.ಮಿ. ಉದ್ದದ ಏರಿಯನ್ನು ಕಟ್ಟಿಸಿದ್ದ.

ಹತ್ತಿ ವ್ಯಾಪಾರ ಚೋಳರ ಸಂಪತ್ತಿನ ಪ್ರಮುಖ ಕಾರಣವಾಗಿತ್ತು. ಚೋಳರು ಒಂದು ಸಮರ್ಥ ನೌಕಾಪಡೆಯನ್ನು ಹೊಂದಿದ್ದರು. ನಂತರ ಕ್ರಿ.ಶ. ನಾಲ್ಕನೇ ಶತಮಾನದಿಂದ ಒಂಭತ್ತನೆ ಶತಮಾನದವರೆಗೆ ಚೋಳದ ಬಗ್ಗೆ ಪ್ರಾಮುಖ್ಯತೆ ಕಂಡುಬರಲಿಲ್ಲ.

**ಚೇರರು**

ಪಾಂಡ್ಯರ ನಾಡಿನ ಪಶ್ಚಿಮ ಹಾಗೂ ಉತ್ತರಕ್ಕೆ ಈ ರಾಜ್ಯ ವಿಸ್ತಿರಿಸಿತ್ತು. ಕ್ರಿ.ಶ.ದ ಅರಂಭಿಕ ಶತಮಾನಗಳಲಿ ಈ ರಾಜ್ಯ ಮಹತ್ವ ಪಡೆದಿತ್ತು. ಪಾಂಡ್ಯ ಹಾಗೂ ಚೋಳರಿಗಿಂತ ಚೇರರು ರೋಮನ್ನರೊಂದಿಗೆ ಹೆಚ್ಚು ವ್ಯಾಪಾರ ಸಂಪರ್ಕ ಹೊಂದಿದ್ದರು. ರೋಮನ್ನರು ಚೇರ ರಾಜ್ಯದಲ್ಲಿ ಈಗಿನ ಕ್ರಾಂಗನೂರು ಎಂದು ಗುರುತಿಸಲಾಗಿರುವ ಮುಸುರಿ ಎಂಬಲ್ಲಿ ಎರಡು ಸೇನಾ ತುಕಡಿಗಳನ್ನಿಟ್ಟದ್ದರು. ಇಲ್ಲಿ ರೋಮನ್ನರ ಚಕ್ರವರ್ತಿ ಅಗಸ್ಟಸ್‌ನ ಒಂದು ದೇವಾಲಯವಿತ್ತು.

ಚೇರರ ಅತ್ಯಂತ ಪ್ರಸಿದ್ಧ ರಾಜ ಸೆಂಗುಟ್ಟುವನ್. ಉದಯಾಂಜರಲ್ ಚೇರರ ಮೊದಲ ರಾಜ . ಚೇರರು ಕ್ರಿ.ಶ. 2ನೇ ಶತಮಾನದ ನಂತರ ಹಿನ್ನಡೆ ಹೊಂದಿದರು. ಮುಂದೆ ಕ್ರಿ.ಶ 8ನೇ ಶತಮಾನದವರೆಗೆ ಅವರ ಇತಿಹಾಸ ಅಸ್ಪಷ್ಟವಾಗಿದೆ.

ಚೇರರ ಇತಿಹಾಸದುದ್ದಕ್ಕೂ ಚೋಳ ಮತ್ತು ಪಾಂಡ್ಯರ ನಡುವೆ ಯುದ್ಧಗಳು ನಡೆಯುತ್ತಲೇ ಇದ್ದವು.

**ಪಲ್ಲವರು**

ಶಾತವಾಹನರ ನಂತರ ಇವರು ಪ್ರಭುತ್ವ ಸಾಧಿಸಿದರು. ಕ್ರಿಶ. 6ನೇ ಶತಮಾನದಲ್ಲಿ ಸಿಂಹವಿಷ್ಣು ಚೋಳರನ್ನು ಸೋಲಿಸಿದ. ಆತನ ಮಗ ಒಂದನೆ ಮಹೇಂದ್ರ ವರ್ಮ ಬಾದಾಮಿಯ ಚಾಲುಕ್ಯರೊಂದಿಗೆ ಸತತ ಯುದ್ಧದಲ್ಲಿ ತೊಡಗಿದ. ಒಂದನೆ ನರಸಿಂಹವರ್ಮ ಚಾಳುಕ್ಯರನ್ನು ಸೋಲಿಸಿ ಬಾದಾಮಿಯನ್ನು ವಶಪಡಿಸಿಕೊಂಡು 'ವಾತಾಪಿಕೊಂಡ' ಎನ್ನುವ ಬಿರುದು ಗಳಿಸಿದ. ಎರಡನೆ ನರಸಿಂಹವರ್ಮ ಕಂಚಿಯಲ್ಲಿ ಕೈಲಾಸನಾಥ ದೇವಾಲಯವನ್ನು ನಿರ್ಮಿಸಿದ.

**ಸಂಗಮ ಸಾಹಿತ್ಯ**

ಸಂಗಮ್‌ಎಂಬುದು ರಾಜಾಶ್ರಯದಲ್ಲಿ ಕೂಡಿದ್ದ ತಮಿಳು ಕವಿಗಳ ಒಂದು ಕೂಟ. ಇಂತಹ ಎಷ್ಟು ಕೂಟಗಳು ನಡೆದವೆಂಬುದು ತಿಳಿದಿಲ್ಲ. ಸಂಗಮ್ ಕೂಟ ಮಧುರೆಯಲ್ಲಿ ಜರುಗಿತ್ತು. ಆಗ ಸಂಗಮ್ ಸಾಹಿತ್ಯ ರಚನೆಯಾಯಿತು. ಈ ಸಾಹಿತ್ಯ ಕ್ರಿ.ಶ 300 ರಿಂದ ಕ್ರಿ.ಶ 600ರ ನಡುವೆ ರಚಿತವಾಯಿತು. ಇದರಲ್ಲಿ ಕೆಲವು ಭಾಗಗಳು ಕ್ರಿ.ಶ. ಎರಡನೆ ಶತಮಾನದಷ್ಟು ಹಿಂದಿನವು.

ಸಂಗಮ್ ಸಾಹಿತ್ಯವಲ್ಲವೆ ವ್ಯಾಕರಣ ಹಾಗೂ ಕಾವ್ಯ ಮೀಮಾಂಸೆಯ 'ತೊಲ್ಕಾಪಿಯಂ' ಎಂಬಕೃತಿ, ತತ್ವಶಾಸ್ತ್ರಗಳನ್ನೊಳಗೊಂಡ ತಿರುಕ್ಕುರಲ್ ಎಂಬ ಗ್ರಂಥಗಳು ಇವೆ. ಇದರ ಜೊತೆಗೆ 'ಸಿಲಪ್ಪದಿಕಾರಮ್ ' ಮತ್ತು 'ಮಣಿಮೇಕಲೈ' ಎಂಬ ಅವಳಿ ಮಹಾಕಾವ್ಯಗಳಿವೆ. ಕ್ರಿ.ಶ. 6ನೇ ಶತಮಾನದ ಸುತ್ತಿನಲ್ಲಿ ರಚಿತವಾದ ಇವು ತಮಿಳು ಸಾಹಿತ್ಯದ ಅನರ್ಘ್ಯರತ್ನಗಳಾಗಿವೆ.

ಸಿಲಪ್ಪದಿಕಾರಮ್‌ನಲ್ಲಿ ಕಾವೇರಿ ಪಟ್ಟಣದ ಕೋವಳನ ತನ್ನ ಪತ್ನಿ ಕನ್ನಗಿಯಿಂದ ದೂರವಾಗಿ ಮಾಧವಿ ಎಂಬ ವೇಶ್ಯೆಯಲ್ಲಿ ಅನುರಕ್ತನಾದದ ಕಥೆ ಇದೆ. ಈ ಅವಧಿಯಲ್ಲಿಯೇ ಚೇರ ರಾಜ ಸೆಂಗುಟ್ಟವನ್ ಇದ್ದನೆಂದು ಹೇಳಲಾಗಿದೆ.

## ಒಂಭತ್ತನೇ ಶತಮಾನದಲ್ಲಿ ಚೋಳರು

ವಿಜಯಾಲಯ ಈ ಚೋಳರ ಸಂಸ್ಥಾಪಕ. ಈತ ಕಂಚಿಯ ಪಲ್ಲವರ ಮಾಂಡಲಿಕನಾಗಿದ್ದ. ಕ್ರಿ.ಶ 903ರಲ್ಲಿ ಈತನ ಮಗ ಒಂದನೆ ಆದಿತ್ಯ ಚೋಳ ಪಲ್ಲವರ ಅಪರಾಜಿತನನ್ನು ಸೋಲಿಸಿದ.

**ಒಂದನೆ ಪರಾಂತಕ (ಕ್ರಿ.ಶ. 907 – 955) :**

ಒಂದನೆ ಆದಿತ್ಯ ಚೋಳನ ಮಗ. ಪಾಂಡ್ಯರ ರಾಜಸಿಂಹನನ್ನು ಸೋಲಿಸಿ ಮಧುರೈಯನ್ನು ವಶಪಡಿಸಿಕೊಂಡ. ಆದರೆ ಈತ ರಾಷ್ಟ್ರಕೂಟರ ಮೂರನೆ ಕೃಷ್ಣನಿಂದ ತಕ್ಕೋಲಮ್ ಯದ್ಧದಲ್ಲಿ ಸೋತ.

**ಸುಂದರ ಚೋಳ (ಕ್ರಿ.ಶ. 957 –973) :**
ಒಂದನೆ ಪರಾಂತಕನ ಮೊಮ್ಮಗ. ಈತನಿಗೆ ಎರಡನೆ ಪರಾಂತಕ ಎಂದೂ ಹೆಸರು. ರಾಷ್ಟ್ರಕೂಟರಿಂದ ತೋಡೈಮಂಡಲಮ್ ವಶಪಡಿಸಿಕೊಂಡ.

**ಒಂದನೆಯ ರಾಜರಾಜ (ಕ್ರಿ.ಶ. 985–1014) :**
ಸುಂದರ ಚೋಳನ ಮಗ. ಚೇರರ ನೌಕಾಪಡೆಯನ್ನು ಸೋಲಿಸಿದ. ಈತ ಸ್ಥಾನಿಕ ಸ್ವ ಸರ್ಕಾರ ಘಟಕ (ಗ್ರಾಮ ಪಂಚಾಯ್ತಿ)ಗಳೂನು ಸ್ಥಾಪಿಸಿದ. ತಂಜಾವೂರಿನಲ್ಲಿ ಬೃಹದೇಶ್ವರದೇವಾಲಯ ನಿರ್ಮಿಸಿದ.

**ಒಂದನೆ ರಾಜೇಂದ್ರ (ಕ್ರಿ.ಶ. 1014–1044) :**
ಶ್ರೀಲಂಕಾವನ್ನು ಸಂಪೂರ್ಣವಾಗಿ ವಶಪಡಿಸಿಕೊಂಡ. ಉತ್ತರದಲ್ಲಿ ಗಂಗಾ ನದಿ ದಾಟಿ ಕಳಿಂಗದಿಂದ ಬಂಗಾಳದವರೆಗೆ ವಿಜಯ ಯಾತ್ರೆ ಮಾಡಿದ . ಆ ಮೂಲಕ 'ಗಂಗೈ ಕೊಂಡ ಚೋಳ' ಬಿರುದು ಪಡೆದ. ಕಾವೇರಿ ದಂಡೆಯಲ್ಲಿ 'ಗಂಗೈ ಕೊಂಡ ಚೋಳಪುರಂ' ಎಂಬ ಹೊಸ ರಾಜಧಾನಿ ನಿರ್ಮಿಸಿದ. ಈತನ ನೌಕಾಪಡೆ ಎಷ್ಟು ಸಮರ್ಥವಾಗಿತ್ತೆಂದರೆ ಮಲಯ, ಸುಮಾತ್ರಾ, ನಿಕೊಬಾರ್ ದ್ವೀಪಗಳನ್ನು ಅದು ವಶಪಡಿಸಿಕೊಂಡಿತ್ತು.

**ರಾಜಾಧಿರಾಜ (ಕ್ರಿ.ಶ. 1044–1054)** ಚಾಳುಕ್ಯರ ಒಂದನೆ ಸೋಮೇಶ್ವರನಿಂದ ಕ್ರಿ.ಶ. 1054ರ ಕಪ್ಪಮ್ ಉದ್ಧದಲ್ಲಿ ಹತನಾದ ನಂತರ ಬಂದ ಚೋಳರು ಚಾಳುಕ್ಯರೊಂದಿಗೆ ಸತತ ಯುದ್ಧಗಳಲ್ಲಿ ತೊಡಗಿದರು. ದೆಹಲಿ ಸುಲ್ತಾನರ ಅಕ್ರಮಣದಿಂದ 13ನೇ ಶತಮಾನದ ಕೊನೆಗೆ ಚೋಳರು ಅವನತಿ ಹೊಂದಿದರು.

**ನೆನಪಿಡಿ :**
ಚೋಳರ ಸಾಮ್ರಾಜ್ಯ 'ಮಂಡಲ'ಗಳಲ್ಲಿ ವಿಭಜಿತವಾಗಿತ್ತು. ಮಂಡಲಗಳು ಒಳನಾಡು ಮತ್ತು ನಾಡುಗಳಾಗಿ ವಿಭಜಿತವಾಗಿದ್ದವು. 'ಊರು' ಎಂಬ ಸಣ್ಣ ಸಭೆ ಹಾಗೂ 'ಸಭಾ' ಎಂಬ ಮಹಾಸಭೆಗಳು ಚೋಳರ ಕಾಲದ ಗ್ರಾಮಗಳಲ್ಲಿ ನಡೆಯುತ್ತಿದ್ದವು.

## ಇತರ ರಾಜವಂಶಗಳು

1. **ವಕಟಕರು (ಕ್ರಿ.ಶ. 284 ) :** ಗುಪ್ತರ ಸಮಕಾಲೀನರು. ಮಧ್ಯಪ್ರದೇಶ, ಬೆರಾರ್ ಹಾಗೂ ಉತ್ತರದ ದಖನ್‌ನಲ್ಲಿ ಆಳಿದರು.
2. **ಬಂಗಾಲದ ಪಾಲರು (ಕ್ರಿ.ಶ. 750 ) :** ಸ್ಥಾಪಕ – ಗೋಪಾಲ.
3. **ಬಂಗಾಲದ ಸೇನರು (ಕ್ರಿ.ಶ. 1095) :** ವಿಜಯಸೇನನಿಂದ ಸ್ಥಾಪನೆ
4. **ಪ್ರತಿಹಾರರು (ಕ್ರಿ.ಶ. 836 ) :** ಗರ್ಜರ ಪ್ರತಿಹಾರ ಭೋಜರಾಜ ಈ ವಂಶದ ಶ್ರೇಷ್ಠ ರಾಜ
5. **ಕನೌಜಿನ ಗಹದ್ ವಾಲರು (ಕ್ರಿ.ಶ. 170) :** ಚಂದ್ರದೇವ ಮೊದಲ ರಾಜ. ಕ್ರಿ.ಶ 1193ರಲ್ಲಿ ಘೋರಿ ಮಹ್ಮದ್ ಜಯಚಂದ್ರನನ್ನು ಕೊಲೆ ಮಾಡಿ ಕನೌಜನ್ನು ವಶಪಡಿಸಿಕೊಂಡ.
6. **ಮಾಳ್ವದ ಪರಮಾರು (ಕ್ರಿ.ಶ. 9ನೇ ಶತಮಾನ ) :** ಇವರು ರಾಷ್ಟ್ರಕೂಟರ ವಂಶಜರು. ಉಪೇಂದ್ರ ಪಾರಮಾರರ ವಂಶದ ಸ್ಥಾಪಕ. ಇಲ್ತುಮಿಶ್ ಮಾಳ್ವವನ್ನು ಕ್ರಿ.ಶ 1233ರಲ್ಲಿ ವಶಪಡಿಸಿಕೊಂಡ.
7. **ಚೌಹಾಣರು (ಕ್ರಿ.ಶ. 10ನೇ ಶತಮಾನ ):** ರಾಜಸ್ಥಾನದ ಶಾಕಾಂಬರಿಯ ರಾಜಪೂತರು ಇವರಲ್ಲಿ ಪ್ರಮುಖರು, ಚೌಹಾಣರು ಪ್ರತಿಹಾರರ ಮಾಂಡಲೀಕರಾಗಿದ್ದರು. ಸಿಂಹರಾಜ ಸ್ವತಂತ್ರ ಆಡಳಿತ ನಡೆಸಲು 10ನೇ ಶತಮಾನದಲ್ಲಿ ಮುಂದಾದ. ಮೂರನೆ ಪೃಥ್ವಿರಾಜ ಇವರ ಪ್ರಮುಖ ದೊರೆ. ಕ್ರಿ.ಶ. 1177ರಲ್ಲಿ ಪಟ್ಟಕ್ಕೇರಿದ್ದ.
8. **ವಾರಂಗಲ್‌ನ ಕಾಕತೀಯರು (ಕ್ರಿ.ಶ. 1160):** ಇವರು ಚಾಲುಕ್ಯರ ಮಾಂಡಳೀಕರಾಗಿದ್ದರು. ಒಂದನೇ ರುದ್ರ ಇವರ ಪ್ರಮುಖ ರಾಜ. ವಾರಂಗಲ್ ಗೆ ಏಕಶಿಲಾ ನಗರಿ ಎಂಬ ಹೆಸರೂ ಇತ್ತು.

## ಮಧ್ಯಕಾಲೀನ ಭಾರತ

## ಮುಸ್ಲಿಮರ ದಾಳಿ

ಕ್ರಿ.ಶ 712ರಲ್ಲಿ ಮಹಮ್ಮದ್ ಬಿನ್ ಕಾಸಿಂ ಸಿಂಧ್ ಪ್ರದೇಶವನ್ನು ಆಕ್ರಮಿಸಿಕೊಂಡ. ಈತನ ನಂತರ ಘಜ್ನಿ ಮಹಮದ್ ಕ್ರಿ.ಶ 1000 ದಿಂದ ಕ್ರಿ.ಶ. 1027ರ ವರೆಗೆ ಒಟ್ಟು 17 ಬಾರಿ ಭಾರತದ ಮೇಲೆ ದಾಳಿ ಮಾಡಿದ. ಕ್ರಿ.ಶ. 1025ರಲ್ಲಿ ಗುಜರಾತ್‌ನ ಸೋಮನಾಥ್ ದೇವಾಲಯದ ಮೇಲೆ ಈತ ದಾಳಿ ಮಾಡಿದ . ಇದು ಆತನ ಭಾರತದ ಮೇಲಿನ 15ನೇ ದಾಳಿಯಾಗಿತ್ತು.

ಈತನ ಆಶ್ರಯದಲ್ಲಿ 'ಶಾಹನಾಮ' ಬರೆದ ಫಿರ್ದೋಸಿ ಕವಿ ಇದ್ದ.

ಕ್ರಿ.ಶ. 1150ರ ಸುಮಾರಿಗೆ ಘೋರಿ ಮಹಮದ್ ಭಾರತದ ಮೇಲೆ ದಂಡೆತ್ತಿ ಬಂದ. ಘೋರಿ ಮಹಮದ್‌ನ ಇನ್ನೊಂದು ಹೆಸರು ಮುಯಿಜುದೀನ್ ಮಹಮದ್, ಈತ ಕ್ರಿ.ಶ 1173ರಲ್ಲಿ ಘಜ್ನಿ ಸಿಂಹಾಸನ ಏರಿದ ಕ್ರಿ.ಶ. 1178ರಲ್ಲಿ ಗುಜರಾತ್ ಮೇಲೆ ಈತ ದಾಳಿ ಮಾಡಿದಾಗ ಎರಡನೆ ಭೀಮನಿಂದ ಸೋತು ಹಿಂದಕ್ಕೆ ಸರಿದ. ನಂತರ ಘೋರಿ ಮಹಮದ್ ಖೈಬರ್ ಕಡಣಿವೆಯ ಮೂಲಕ ಪಂಜಾಬ್ ಪ್ರವೇಶಿಸಿ 1180ರಲ್ಲಿ ಪೇಶಾವರವನ್ನು ಆಕ್ರಮಿಸಿದ.

ಕ್ರಿ.ಶ. 1182ರಲ್ಲಿ ಮೂರನೇ ಪೃಥ್ವಿರಾಜ್ (ಪೃಥ್ವಿರಾಜ್ ಚೌಹಾಣ್ ) ಅಜ್ಮೇರದ ಸಿಂಹಾಸನ ಏರಿದ.

ಕ್ರಿ.ಶ 1191ರಲ್ಲಿ ಪೃಥ್ವಿರಾಜ್ ಚೌಹಾಣ್ ಘೋರಿ ಮಹಮದ್‌ನನ್ನು ತರೈನ್ ಯದ್ಧದಲ್ಲಿ ಸೋಲಿಸಿದ. ಆದರೆ ಕ್ರಿ.ಶ 1192ರಲ್ಲಿ ನಡೆದ ಎರಡನೆ ತರೈನ್ ಕದನದಲ್ಲಿ ಮಹಮದ್ ಘೋರಿ ಗೆದ್ದು ಕುತ್ಬುದ್ದೀನ್ ಐಬಕ್‌ನನ್ನು ಇಲಿ ಬಿಟ್ಟು ಘಜ್ನಿಗೆ ಮರಳಿದ.

## ದೆಹಲಿ ಸುಲ್ತಾನರು

**(ಕ್ರಿ.ಶ. 1200–1400):**

**ಗುಲಾಮಿ ಸಂತತಿ (ಕ್ರಿ.ಶ. 1206 –1290)**

**ಕುತ್ಬುದ್ದೀನ್ ಐಬಕ್ (ಕ್ರಿ.ಶ. 1206 – 1210)**

ಈತ ಗುಲಾಮಿ ಸಂತತಿಯ ಸ್ಥಾಪಕ. ಕ್ರಿ.ಶ. 1206ರಲ್ಲಿ ಘೋರಿ ಮಹಮದ್‌ನ ನಿಧನದ ನಂತರ ಈತ ಆಳ್ವಿಕೆ **ಪ್ರಾರಂಭಿಸಿದ. ಈತ ಲಾಕ್‌ಭಕ್ಷ್ ಎಂದೂ ಪ್ರಸಿದ್ಧನಾಗಿದ್ದ.** ಕ್ರಿ.ಶ 1192ರಲ್ಲಿ ಝಾನ್ಸಿ, ದೆಹಲಿ, ಮೀರತ್ ಹಾಗೂ ಅಲಿಘರ್‌ಗಳನ್ನು ಈತ ವಶಪಡಿಸಿಕೊಂಡ. ಕ್ರಿ.ಶ 1194ರಲ್ಲಿ ಚಾಂದ್ವಾರ್ ಯದ್ಧದಲ್ಲ ಘೋರಿ ಮಹಮದ್‌ಗೆ ಸಹಾಯ ಮಾಡಿದ. ಕ್ರಿ.ಶ 1210ರಲ್ಲಿ ಚೌಗಣಿ (ಪೋಲೊ) ಆಡುತ್ತಿದ್ದಾಗ ಕುದುರೆಯಿಂದ ಬಿದ್ದು ಈತ ನಿಧನ ಹೊಂದಿದ. ಈತ 'ಕುತಬ್ ಮಿನಾರ್ ' ನಿರ್ಮಾಣವನ್ನು ಪ್ರಾರಂಭಿಸಿದ.

**ಇಲ್ತುಮಿಶ್ (ಕ್ರಿ.ಶ. 1210–1236)**

ಕುತ್ಬುದ್ದೀನ್ ಐಬಕ್‌ನ ಸಹೋದರಿಯ ಪತಿ ನಾಸಿರುದ್ದೀನ್ ಕುಬಾಚಾ. ಕುಬಾಚಾನ ಮಗಳು ಇಲ್ತುಮಿಶ್‌ನ ಪತ್ನಿ. ಇಲ್ತಮಿಶ್ ಪಟ್ಟಕ್ಕೇರಿದಾಗ ಕುಬಾಚಾ ಲಾಹೋರನ್ನು ವಶಪಡಿಸಿಕೊಂಡಿದ್ದ. ಇಲ್ತುಮಿಶ್ ಕ್ರಿ.ಶ 1217ರಲ್ಲಿ ಕುಬಾಚಾನನ್ನು ಸೋಲಿಸಿ ಲಾಹೋರನ್ನು ದೆಹಲಿ ಸುಲ್ತಾನ್ ಆಡಳಿತಕ್ಕೆ ಸೇರಿಸಿಕೊಂಡ.

**'ಸುಲ್ತಾನಿ ಅಜಂ'** ಎನ್ನುವ ಬಿರುದನ್ನು ಈತ ಹೊಂದಿದ್ದ. ಈತ ಅರೇಬಿಯನ್ ನಾಣ್ಯಗಳನ್ನು ಚಲಾವಣೆಗೆ ತಂದ ಮೊದಲಿಗೆ. ಕ್ರಿ.ಶ 1226ರಲ್ಲಿ ರಣಥಂಬುರ್ ಹಾಗೂ ಕ್ರಿ.ಶ 1236ರಲ್ಲಿ ಉಜ್ಜಯಿನಿಗಳನ್ನು ವಶಪಡಿಸಿಕೊಂಡ. ಈತನ ಆಳ್ವಿಕೆಯಲ್ಲಿ ಚಾಂಗೇಜ್ ಖಾನ್ ಭಾರತದ ಮೇಲೆ ದಂಡೆತ್ತಿ ಬಂದ. **ಇಕ್ಕತ್‌ದಗಾರಿ** ಪದ್ಧತಿ ಜಾರಿಗೆ ತಂದ. ಬೆಳ್ಳಿ ಟಂಕಾ ಹಾಗೂ ತಾಮ್ರದಸ **ಚಿತ್ತಾಲ್** ನಾಣ್ಯಗಳನ್ನು ಚಲಾವಣೆಗೆ ತಂದ.

ಇಲ್ತುಮಿಶ್ ಕ್ರಿ.ಶ 1231 – 32ರಲ್ಲಿ ಕುತುಬ್‌ಮಿನಾರ್‌ನ್ನು ಪೂರ್ಣಗೊಳಿಸಿದ. ಕ್ವಾಜಾ ಕುತ್ಬುದ್ದೀನ್ ಕಾಕಿ ಎನ್ನುವ ಸಂತನ ಹೆಸರನ್ನೇ ಅದಕ್ಕೆ ಇಡಲಾಯಿತು.

**ರಜಿಯಾ ಸುಲ್ತಾನ್ (ಕ್ರಿ.ಶ. 1236–123)**

ಇಲ್ತುಮಿಶ್ ಸಾಯುವಾಗ ತನ್ನ ಮಗಳು ರಜಿಯಾ ಪಟ್ಟಕೇರಬೇಕೆಂದು ಹೇಳಿದ್ದ. ಆದರೆ ಇದನ್ನು ಆಸ್ಥಾನದ ಸರದಾರರು ಒಪ್ಪದೆ ರುಕ್ನುದ್ದೀನನ್ನು ಸುಲ್ತಾನನ್ನಾಗಿ ಮಾಡಿದರು. ಆದರೆ ಆತ ದುರ್ಬಲನಾಗಿದ್ದರಿಂದ ಅಧಿಕಾರ ಕಳೆದುಕೊಂಡು.

ರಜಿಯಾ ಆಧಿಕಾರಕ್ಕೇರಿದಳು. ಅಬಿಸಿಯಾದ ಜೆಲಾಲುದ್ದೀನ್ ಯಾಕುತ್ ಎನ್ನುವನನ್ನು ಅಶ್ವದಳಕ್ಕೆ ಸೇನಾಪತಿಯನ್ನಾಗಿ ಮಾಡಿದಳು. ಇದು ಆಸ್ಥಾನದ ಸರದಾರರಿಗೆ ಸರಿ ಎನಿಸಲಿಲ್ಲ. ಆಸ್ಥಾನದ ಟರ್ಕಿ ಸರ್ದಾರರು ರಜಿಯಾ ಯಾಕೂತ್‌ನೊಂದಿಗೆ ಸಲಿಗೆಯಿಂದಿದ್ದಾಳೆಂದು ಆರೋಪಿಸಿ ಆಕೆಯನ್ನು ಪದಚ್ಯುತಗೊಳಿಸಲು ನೋಡಿದರು. ರಜಿಯಾಳ ವಿರುದ್ಧ ನೂರುದ್ದೀನ್ ದಂಗೆ ಎದ್ದ, ಆತನನ್ನು ಸೋಲಿಸಿ ರಜಿಯಾ ರಣಥಂಬೂರ್ ಕೋಟೆಯನ್ನು ವಶಪಡಿಸಿಕೊಂಡಳು. ರಜಿಯಾ ದೆಹಲಿ ಸಿಂಹಾಸನವೇರಿದ ಪ್ರಪ್ರಥಮ ರಾಣಿ.

ಮಿಂದಾಜಂ ಎಂಬ ಇತಿಹಾಸ ತಜ್ಞ ರಜಿಯಾಳ ಪರಾಕ್ರಮ ಹಾಗೂ ಒಳ್ಳೆಯತನಗಳ ಬಗ್ಗೆ ಪ್ರಶಂಸಿಸಿದ್ದಾನೆ. ರಜಿಯಾ ಪುರದಾ ಪದ್ಧತಿಯನ್ನು ತೆಗೆದು ಹಾಕಿದಳು.

ಭಟೆಂಡಾದ ಪ್ರಾಂತ್ಯಾಧಿಕಾರಿ ಮಲ್ಲಿಕ್ ಇಕ್ತಿಯಾರುದ್ದೀನ್ ಅಲ್ತೂನಿಯಾ ರಜಿಯಾಳನ್ನು ಸೋಲಿಸಿ ಸೆರೆಯಲ್ಲಿಟ್ಟನು. ರಜಿಯಾ ನಂತರ

ಆತನನ್ನು ಮದುವೆಯಾದಳು. ಈ ಮಧ್ಯೆ ದೆಹಲಿಯನ್ನು ಆಕ್ರಮಿಸಿದ್ದ ಸಹೋದರ ಬಹರಂ ದಾಳಿ ಇಟ್ಟು ವಿಫಲರಾದರು. ಕ್ರಿ.ಶ. 1240ರಲ್ಲಿ ಇಬ್ಬರಿಗೂ ಮರಣ ದಂಡನೆ ವಿಧಿಸಲಾಯಿತು.

**ನಾಸಿರುದ್ದೀನ್ ಮಹಮದ್ (ಕ್ರಿ.ಶ 1246 –1266 )**

ದೆಹಲಿಯಲ್ಲಿ ಕ್ರಿ.ಶ 1240 ಬಹರಂ ಷಾ ನಂತರ ಕ್ರಿ.ಶ 1242– 1246ರ ವರೆಗೆ ಅಲ್ಲಾ ಉದ್ದೀನ್ ಮಾಸೂದ್ ಆಳ್ವಿಕೆ ನಡೆಸಿದರು. ಇವರ ನಂತರ ನಾಸಿರುದ್ದೀನ್ ಮಹಮದ್ ಇಪ್ಪತ್ತು ವರ್ಷಗಳ ಕಾಲ ಸುಲ್ತಾನನಾಗಿದ್ದ. ಈತನ ಪ್ರಾಧಾನಿಯಾಗಿ ಬಲ್ಬನ್ ಕಾರ್ಯ ನಿರ್ವಹಿಸಿದ. ನಾಸಿರುದ್ದೀನ್ ನಿಧನದ ನಂತರ ಆತನಿಗೆ ಗಂಡು ಮಕ್ಕಳಿಲ್ಲದ್ದರಿಂದ
ಬಲ್ಬನ್ ದೆಹಲಿ ಸುಲ್ತಾನನಾದ.

**ಬಲ್ಬನ್ (ಕ್ರಿ.ಶ. 1266–1287)**

ಬಲ್ಬನ್ ಗುಲಾಮಿ ಸಂತತಿಯ ಅತ್ಯಂತ ಪ್ರಬಲ ರಾಜನಾಗಿ ಆಳ್ವಿಕೆ ನಡೆಸಿದ. ಬಲ್ಬನ್ನನು ಟರ್ಕಿ ಜನಾಂಗದ ಇಬರಿ ಪಂಗಡದವನು. ಮಂಗೋಲರು ಈತನನ್ನು ಸೆರೆ ಹಿಡಿದು ಬಾಗ್ದಾದ್‌ನಲ್ಲಿ ಇಲ್ತ್‌ಮಿಶ್‌ಗೆ ಮಾರಿದ್ದರು. ರಜಿಯಾಳ ಕಾಲದಲ್ಲಿ ಬಿಲ್ಬನ್ ಅಮಿರ್ ಇಶಿಕಾರ್ ಸ್ಥಾನ ಪಡೆದಿದ್ದ. ರಜಿಯಾಳನ್ನು ಸಿಂಹಾಸನದಿಂದ ಕೆಳಗಿಸಲು ಈತ ಬಹರಂ ಷಾಗೆ ನೆರವಾಗಿದ್ದ. ನಾಸಿರುದ್ದೀನ್ ಕಾಲದಲ್ಲಿ ಮಂತ್ರಿಯಾಗಿದ್ದ ಈತ ರಾಜ ತಾಂತ್ರಿಕ ನಿಪುಣತೆಯನ್ನು ಪ್ರದರ್ಶಿಸಿದ್ದ. ಕ್ರಿ.ಶ 1249ರ ನಾಸಿರುದ್ದೀನ್ ಬಲ್ಬನ್ನನ ಮಗಳನ್ನು ಮದುವೆಯಾಗಿದ್ದ. ಬಲ್ಬನ್ ಅಧಿಕಾರಕ್ಕೆ ಬಂದಾಗ ಆತನಿಗೆ 60 ವರ್ಷಗಳಾಗಿದ್ದವು. ಆಡಳಿತಕ್ಕೆ ವ್ಯಕ್ತಿಗಳನ್ನು ನೇಮಿಸಿವಾಗ ಆತನ ವಂಶವನ್ನು ಪರಿಗಣಿಸುವ ಪದ್ಧತಿಯನ್ನು ಈತ ಜಾರಿಗೆ ತಂದ. ಈತ ಚೆಹಲ್‌ಗಾನಿ ಪದ್ಧತಿಯನ್ನು ನಾಶಪಡಿಸಿದ. ಗೂಢಚಾರ ವ್ಯವಸ್ಥೆಯನ್ನು ಭದ್ರಪಡಿಸಿದ ಹಾಗೂ ಸೇನಾ ಪಡೆಗಾಗಿ ದಿವಾನ್–ಐ ಅರ್ಜ್ ಸ್ಥಾಪಿಸಿದ. ಈತನ ಕಾಲದಲ್ಲಿ ಕೇಂದ್ರದ ಪ್ರಾಬಲ್ಯ ಇರುವ ಆಡಳಿತ ಆರಂಭವಾಯಿತು. ಮಂಗೋಲರ ದಾಳಿಯನ್ನು ಈತ ತಡೆಗಟ್ಟಿದ. ಸತ್ಯನಾಥ್ ಐಯ್ಯರ್ ಬಲ್ಬನ್ ಬಗ್ಗೆ ಹೇಳುತ್ತಾ: 'ಕುತ್ತದ್ದೀನ್ ಐಬಕ್ ಗುಲಾಮಿ ಸಂತತಿಯ ಸ್ಥಾಪಕ, ಇಲ್ತುಮಿಶ್ ಗುಲಾಮಿ ಸಾಮ್ರಾಜ್ಯದ ನಿಜವಾದ ಸ್ಥಾಪಕ. ಬಲ್ಬನ್ ಗುಲಾಮಿ ಸಾಮ್ರಾಜ್ಯದ ಮರುಸ್ಥಾಪಕ' ಎಂದಿದ್ದಾರೆ.

**ಬಲ್ಬನ್ 'ಪೈಬೋಸ್' ಮತ್ತು 'ಸಿಜ್ದಾ' ಪದ್ಧತಿಗಳನ್ನು ಜಾರಿ ಮಾಡಿದ.**

ಬಲ್ಬನ್ ಇಂಡೋ ಇಸ್ಲಾಮಿಕ್ ಮತ್ತು ವಾಸ್ತು ಶಿಲ್ಪ ಮತ್ತು ಕಲೆಯನ್ನು ಪ್ರಾರಂಭಿಸಿದ. ಕ್ರಿ.ಶ. 1286ರಲ್ಲಿ ಮಗ ಮಹಮ್ಮದ್ ಖಾನ್ ಸೇನಾ ಕಾರ್ಯಚರಣೆಯೊಂದರಲ್ಲಿ ನಿಧನ ಹೊಂದಿದೆ ಚಿಂತೆಯಲ್ಲಿ ಬಲ್ಬನ್ ಮರಣ ಹೊಂದಿದ.

ಬಲ್ಬನ್ ನಂತರ ಮಹಮ್ಮದ್ ಖಾನ್‌ನ ಮಗ ಕೈಖುಸ್ರೂ ಸುಲ್ತಾನನಾದ. ಇವನ ನಂತರ ಬಲ್ಬನ್‌ನ ಇನ್ನೊಬ್ಬ ಮಗ ಬುಗ್ರಾ ಖಾನ್‌ನ ಮಗ ಕೈಕೊಬ್ ಪಟ್ಟಕ್ಕೆ ಬಂದ. ಆದರೆ ಇವರು ದುರ್ಬಲರಾಗಿದ್ದರು. ಹೀಗಾಗಿ ಕ್ರಿ.ಶ 1290ರಲ್ಲಿ ಇವರ ಸಂತತಿಯ ಆಳ್ವಿಕೆ ಕೊನೆಗೊಂಡಿತು.

**ಖಿಲ್ಜಿ ವಂಶ (ಕ್ರಿ.ಶ. 1290 – 1320 )**

**ಜಲಾಲುದ್ದೀನ್ ಖಿಲ್ಜಿ(ಕ್ರಿ.ಶ. 1290–1296)**

ಈತ ಖಿಲ್ಜಿ ಸಂತತಿಯ ಸ್ಥಾಪಕ. ಸಿಂಹಾಸನಕ್ಕೆ ಬಂದಾಗ ಈತನಿಗೆ 70 ವರ್ಷ ಹೀಗಾಗಿ ಬಿಗಿಯಾದ ಆಡಳಿತ ಈತನಿಂದ ಸಾಧ್ಯವಾಗಲಿಲ್ಲ. ಆದರೂ ಈತ ಕಾರಾದಂಗೆಯನ್ನು ಹತ್ತಿಕ್ಕದ್ದ. ಕ್ರಿ.ಶ 1292ರಲ್ಲಿ ಭಾರತದ ಮೇಲೆ ದಾಳಿ ಮಾಡಿದ ಮಂಗೋಲರನ್ನ ಈತ ಸೋಲಿಸಿದ. ಈತನ ಅಣ್ಣನ ಮಗ ಹಾಗೂ ಅಳಿಯಾನಾದ ಅಲ್ಲಾವುದ್ದೀನ್ ಖಿಲ್ಜಿಯಿಂದ ಕೊಲೆಯಾದ.

**ಅಲ್ಲಾವುದ್ದೀನ್ ಖಿಲ್ಜಿ (ಕ್ರಿ.ಶ. 1296–1316)**

ಅಧಿಕಾರಕ್ಕೆ ಬಂದ ತಕ್ಷಣ ಅಲ್ಲಾವುದ್ದೀನ್ ಖಿಲ್ಜಿ ಮುಲ್ತಾನ್ ರಾಜನನ್ನು ಸೋಲಿಸಿದ. ಗುಜಾರತ್ ಮೇಲೆ ಅಕ್ರಮಣ ನಡೆಸಿದ. ಅಲ್ಲಿ ಮಲ್ಲಿಕ್ ಕಾಫರ್‌ನನ್ನು ಸೆರೆ ಹಿಡಿದು ಕ್ರಿ.ಶ 1299ರಲ್ಲಿ ಗುಜರಾತ್‌ನನ್ನು ವಶಪಡಿಸಿಕೊಂಡ. ಕ್ರಿ.ಶ.1301ರಲ್ಲಿ ರಣಥಂಬೂರನ್ನು ವಶಪಡಿಸಿಕೊಂಡ. ಕ್ರಿ.ಶ 1303ರಲ್ಲಿ ಚಿತ್ತೂರನ್ನು, ಕ್ರಿ.ಶ 1311ರಲ್ಲಿ ಜೂಲೂರ್‌ಗಳನ್ನು ವಶಪಡಿಸಿಕೊಂಡ.

ಮಲ್ಲಿಕ್ ಕಾಫರ್‌ಗೆ ವಜೀರ್ ಸ್ಥಾನವನ್ನು ಕೊಟ್ಟಿದ್ದ. ಕ್ರಿ.ಶ 1308 – 1312ರ ಅವಧಿಯಲ್ಲಿ ಮಲ್ಲಿಕ್ ಕಾಫರ್ ದಕ್ಷಣದ ದೇವಗಿರಿ ಯಾದವರನ್ನು, ವಾರಂಗಲ್‌ನ ಕಾಕತೀಯರನ್ನು, ದ್ವಾರಸಮುದ್ರದ ಹೊಯ್ಸಳರನ್ನ ಹಾಗೂ ಮಧುರೈನ ಪಾಂಡ್ಯರನ್ನು ಸೋಲಿಸಿದ. ಅಲ್ಲಾವುದ್ದೀನ್ ಖಿಲ್ಜಿಯ ಮಾರುಕಟ್ಟೆ ನಿಯಂತ್ರಣ ಸಾಧಿಸಿದ ಸುಲ್ತಾನನಾಗಿದ್ದಾನೆ.

**ಅಲ್ಲಾವುದ್ದೀನ್ ಮುಬಾರಕ್ ಖಿಲ್ಜಿ (ಕ್ರಿ.ಶ. 1316–1320)**

ಅಲ್ಲಾವುದ್ದೀನ್ ಖಿಲ್ಜಿ ನಂತರ ಆತನ ಅಪ್ರಾಪ್ತ ಮಗನನ್ನು ಸಿಂಹಾಸನದ ಮೇಲೆ ಕೂಡಿಸಿ ಮಲ್ಲಿಕ್ ಕಾಫರ್ ಆಡಳಿತ ಮುಂದುವರೆಸಿದ. ಆದರೆ ಅಲ್ಲಾವುದ್ದೀನ್‌ನ ಇನ್ನೊಬ್ಬ ಮಗ ಕುತ್ಬುದ್ದೀನ್ ಷಾ ಮಲ್ಲಿಕ್ ಕಾಫರ್‌ನನ್ನು ಕೊಂದು ಸಿಂಹಾಸನ ಏರಿದ.

**ತುಘಲಕ್ ಸಂತತಿ ಕ್ರಿ.ಶ. (1320–1412)**

**ಘಿಯಾಸುದ್ದೀನ್ ತುಘಲಕ್ (ಕ್ರಿ.ಶ. 1320–1325) :**

ಖಿಲ್ಜಿ ಸಂತತಿಯ ಕೊನೆ ಸುಲ್ತಾನ ನಾಸಿರುದ್ದೀನ್ ಖುಸ್ರಾವ್‌ನನ್ನು ಸೋಲಿಸಿ ಈತ ದೆಹಲಿಯಲ್ಲಿ ತುಘಲಕ್‌ಆಳ್ವಿಕೆ ಆರಂಭಿಸಿದ. ಈತನ ಮೊದಲ ಹೆಸರು ಘಾಜಿ ಮಲ್ಲಿಕ್, ಟರ್ಕ್ ಹಾಗೂ ಮುಂಗೋಲ ಮಿಶ್ರ ಪಂಗಡಗಳ 'ಕತೌಬ್ ಟರ್ಕ್ ಪಂಗಡಕ್ಕೆ ಈತ ಸೇರಿದವನು. ಈತನ ತಂದೆ ಪಂಜಾಬ್‌ನ ಜಾಟ್ ಹುಡುಗಿಯನ್ನು ಮದುವೆಯಾಗಿದ್ದ.

ಈತ ಯೋಧ ಹಾಗೂ ದಕ್ಷ ಆಡಳಿತಗಾರ. ಸಾಲ ಮರುಪಾವತಿ ಮಾಡದವರಿಗೆ ಇದ್ದ ದೈಹಿಕ ಶಿಕ್ಷೆ ತೆಗೆದು ಹಾಕಿದ. ಭೂಕಂದಾಯವನ್ನು 1/3ಕ್ಕೆ ಇಳಿಸಿದ ಹಾಗೂ ಒಟ್ಟು ಉತ್ಪಾದನೆಯ 1/4 ಭಾಗವನ್ನು ಅದು ಮೀರಬಾರದೆಂದು ಆದೇಶಿಸಿದ. ನೀರಾವರಿ ಸೌಲಭ್ಯಕ್ಕಾಗಿ ನಿರ್ಮಿಸಿದ.

ದೆಹಲಿಯ ಬಳಿ 'ತುಘಲಕಾಬಾದ್ ' ಕೋಟೆ ಸ್ಥಾಪಿಸಿದ. ಮಗ ರಾಜಕುಮಾರ ಜೌನ್‌ಖಾನ್ ಮೂಲಕ ವಾರಂಗಲ್‌ನ ಕಾಕತೀಯರನ್ನು ಗೆದ್ದು ಅದನ್ನು 'ಸುಲ್ತಾನಪುರ' ಎಂದು ಹೆಸರಿಸಿದ.

ರಾಜಕುಮಾರ ಜೌನ್ ಖಾನ್‌ನನ್ನು ನೋಡಲು ದೆಹಲಿಯ ಬಳಿಯ ಅಫಘನ್‌ಪುರಕ್ಕೆ ಹೋದಾಗ ಅಲ್ಲಿ ಆತನ ಮಗ ನಿರ್ಮಿಸಿದ್ದ ಡೇರರ ಕುಸಿದು ಸಾವನ್ನಪ್ಪಿದ.

ಇಬ್ಬಬತೂತ ಇದು ಆತನ ಮಗನ ಸಂಚು ಎಂದಿದ್ದಾನೆ.

**ಮಹ್ಮದ್ ಬಿನ್ ತುಘಲಕ್ (ಕ್ರಿ.ಶ. 1325 – 1318)**

ತಂದೆ ಘಿಯಾಸುದ್ದೀನ್‌ನ ಉತ್ತರಾಧಿಕಾರಿಯಾಗಿ ಜೌನ್‌ಖಾನ್ **'ಮಹ್ಮದ್‌ಬಿನ್ ತುಘಲಕ್'** ಹೆಸರಿನಲ್ಲಿ ಸಿಂಹಾಸನ ಏರಿದ. ದೆಹಲಿ ಸುಲ್ತಾನದಲ್ಲಯೇ ಈತ ಅತ್ಯಂತ ಗಮನಾರ್ಹ ವ್ಯಕ್ತಿ.

ಪರ್ಷಿಯನ್ ಹಾಗೂ ಅರೆಬಿಕ್ ವಿದ್ವಾಂಸನಾಗಿದ್ದ ಈತ ಖಗೋಳಶಾಸ್ತ್ರ, ತತ್ವಶಾಸ್ತ್ರ, ಗಣಿತಶಾಸ್ತ್ರ, ವೈದ್ಯಕೀಯ, ತರ್ಕ ಮುಂತಾದ ಕ್ಷೇತ್ರಗಳಲ್ಲಿ ಪ್ರಾವಿಣ್ಯತೆಯನ್ನೂ ಹೊಂದಿದ್ದ.

ದೋಬ್ ಪ್ರಾಂತ್ಯದಲ್ಲಿ ತೆರಿಗೆಯನ್ನು ಹೆಚ್ಚಿಸಿದ್ದು (1326), ರಾಜಧಾನಿ ದೆಹಲಿಯನ್ನು ದಖನ್ ಮಧ್ಯದ ದೌಲತಾಬಾದ್ (ದೇವಗಿರಿ)ಗೆ ವರ್ಗಾಯಿಸಿದ್ದು (1326–27), ತುರ್ಮಶಿರಿನ್ ಖಾನ್ ನೇತೃತ್ವದಲ್ಲಿ ಮಂಗೋಲರು ದೆಹಲಿ ಮೇಲೆ ದಾಳಿ ಮಾಡಿದಾಗ ಅವರೊಂದಿಗೆ ಹಣದ ಮೂಲಕ ಸಂಧಾನಮಾಡಿಕೊಂಡದ್ದು (1328), ಸಂಪನ್ಮೂಲ ಹೆಚ್ಚಿಸಲು ತಾಮ್ರದ ನಾಣ್ಯಗಳನ್ನು ಚಲಾವಣೆಗೆ ತಂದದ್ದು (1330) ಹಾಗೂ ಪ್ರಪಂಚ ಗೆಲ್ಲುವ ಮೊದಲ ಹೆಜ್ಜೆಯಾಗಿ ಪರ್ಷಿಯಾದ ಕೊರಸಾನ್ ಮೇಲಿನ ದಾಳಿಯ ಯೋಜನೆ ವಿಫಲವಾದದ್ದು – ಇವು ಮಹ್ಮದ್ ಬಿನ್ ತುಘಲಕ್‌ನ ಐದು ಪ್ರಯೋಗಗಳು ಹಾಗೂ ಮಹಾ ವೈಫಲ್ಯಗಳು.

**ಫಿರೋಜ್ ಷಾ ತುಘಲಕ್ (ಕ್ರಿ.ಶ. 1315–1388):**

ಮಹ್ಮದ್ ಬಿನ್ ತುಘಲಕ್‌ಗೆ ಗಂಡು ಮಕ್ಕಳಿಲ್ಲದ್ದರಿಂದ ಆತನ ದಾಯಾದಿ ಫಿರೋಜ್ ಸಿಂಹಾಸನ ಏರಿದ. ಶಾಂತಿಪ್ರಿಯನಾಗಿದ್ದ ಈತ ತನ್ನ ಕಾಲದಲ್ಲಿ ಎದ್ದ ಹಲವಾರು ದಂಗೆಗಳನ್ನು ಎತ್ತಿ ಹಾಕಲು ಅಸಮರ್ಥನಾದ.

ಸಾಲ ಮನ್ನಾ ಮಾಡಿದ, 23 ವಿವಿಧ ತೆರಿಗೆಗಳನ್ನು ತೆಗೆದು ಕೇವಲ ನಾಲ್ಕು ತೆರಿಗೆಗಳನ್ನು (ಖರಾಜ್, ಝುಕಾತ್, ಜೀಬಾ ಹಾಗೂ ಖಾಮ್ಸ್) ಮಾತ್ರ ಉಳಿಸಿಕೊಂಡ.

ಬ್ರಾಹ್ಮಣರಿಗೆ ಜೀಜಾ (ತಲೆಗಂದಾಯ) ವಿಧಿಸಿದ. ನೀರಾವರಿ ತೆರಿಗೆ ಜಾರಿಗೆ ತಂದ (ಉತ್ಪಾದನೆಯ ಶೇಕಡ 10)

ಈತನನ್ನು 'ನೀರಾವರಿ ಅಥವಾ ಕಾಲುವೆಗಳ ಸುಲ್ತಾನ' ಎನ್ನಬಹುದು. ನೀರಾವರಿ ಮೂಲಕ ಕೃಷಿಯ ಅಭಿವೃದ್ಧಿ, 150 ಬಾವಿಗಳನ್ನು ತೋಡಿಸಿ ಕುಡಿಯುವ ನೀರಿನ ಸೌಲಭ್ಯ, ಜಮುನಾ ನದಿಯಿಂದ ಫಿರೋಜಾಬಾದ್‌ವರೆಗೆ 150 ಮೈಲುಗಳ ಕಾಲುವೆ. 1200 ಹಣ್ಣಿನ ತೋಟಗಳ ಅಭಿವೃದ್ಧಿ – ಇವು ಈತನ ಸಾಧನೆಗಳು.

ಅಷ್ಟೇ ಅಲ್ಲ ಈತ 'ಲೋಕೋಪಯೋಗಿ' ಸುಲ್ತಾನ ಎಂದೂ ಹೆಸರಾಗಿದ್ದಾನೆ. 50 ಅಣೆಕಟ್ಟು, 40 ಮಸೀದಿ. 30 ವಿದ್ಯಾಲಯ, 20 ಅರಮನೆ, ಹೆದ್ದಾರಿಯಲ್ಲಿ 100ಸರಾಯ್‌ಗಳನ್ನು ಈತ ನಿರ್ಮಿಸಿದನು.

ಹಿಸ್ಸಾರ್, ಫಿರುಜಾ, ಜೌನ್‌ಪುರ, ಫತ್ತೇಬಾದ್, ಫಿರೋಜಾಬಾದ ಸೇರಿದ ಸುಮಾರು 300 ಪಟ್ಟಣಗಳನ್ನು ನಿರ್ಮಿಸಿದ. ದೆಹಲಿಯಲ್ಲಿ ಈಗಿರುವ 'ಫಿರೋಜ್ ಷಾ ಕೋಟ್ಲಾದಲ್ಲಿ' ಈತ ವಾಸಿಸುತ್ತಿದ್ದ, ಫಿರೋಜಾಬಾದ್ ಅರಮನೆಯಾಗಿತ್ತು.

ಬಡವರಿಗೆ ಸಹಾಯ ಮಾಡಲು 'ದಿವಾನ್ ಐ ಖಾರಿಯಾತ' ಇಲಾಖೆಯಲ್ಲಿ 'ದರ್ ಉಲ್ – ಷಾಷಾ' ಎಂಬ ಉಚಿತ ಆಸ್ಪತ್ರೆ ಸ್ಥಾಪಿಸಿದ. 'ಅಧಾ' ಹಾಗೂ 'ಬಿಕ್ ' ನಾಣ್ಯಗಳನ್ನು ಜಾರಿಗೆ ತಂದ. ಖೋಟಾ ನಾಣ್ಯ ತಡೆಯಲು ಕ್ರಮ ಕೈಗೊಂಡ. ಅಂಗಛೇದನೆಯಂಥ ಉಗ್ರ ಶಿಕ್ಷೆಯನ್ನು ಕೈಬಿಟ್ಟ.

**ನಾಸಿರುದ್ದೀನ್ ಮಹ್ಮದ್ (ಕ್ರಿ.ಶ. 1394–1412)**

ಇತ ದುರ್ಬಲನಾಗಿದ್ದ. 1398ರಲ್ಲಿ ತೈಮೂರ ದಾಳಿಯಂದ ತುಘಲಕ್ ಸಾಮ್ರಾಜ್ಯ ನಾಶವಾಯಿತು. ನಾಸಿರುದ್ದೀನ್ ಗುಜರಾತ್‌ಗೆ ಓಡಿದ. ತೈಮೂರ್ ಸೈಯದ್ ಕಿಜ್ರ ಖಾನ್‌ನನ್ನು ದೆಹಲಿಯನ್ನು ಬಿಟ್ಟು ಸಮರಖಂಡಕ್ಕೆ ಮರಳಿದ.

**ದೆಹಲಿ ಸುಲ್ತಾನರ ಕಾಲದ ಕಂದಾಯ ಮೂಲಗಳು**

- ಖರಾಜ್: ಹಿಂದು ಮುಖಂಡರ ಹಾಗೂ ಜಮೀನ್ದಾರರ ಮೇಲಿನ ಕಂದಾಯ
- ಖಾಮ್ಸ: ಯುದ್ಧದಲ್ಲಿನ ವಶಗಳಿಂದ ಸಂಗ್ರಹಿಸುತ್ತಿದದ 1/5 ಭಾಗ ಕಂದಾಯ
- ಝಕಾತ್ : ಶ್ರೀಮಂತ ಮುಸ್ಲಿಂರ ಮೇಲಿ ತೆರಿಗೆ
- ಅಬ್ಬಬ್ಸ್: ಕುದುರೆಗಳ ಮೇಲಿನ ತೆರಿಗೆ
- ಶರಾಬ್: ನೀರಾವರಿ ತೆರಿಗೆ
- ಇಕ್ತಾ: ಅಧಿಕಾರಿಗಳಿಗೆ ನೀಡಿದ ಜಮೀನಿನ ಮೇಲಿನ ತೆರಿಗೆ
- ಖಾಲ್ಸಾ: ಅಮೀಲರ ನಿರ್ವಹಣೆಯಲ್ಲಿದ್ದ ಜಮೀನಿನವರ ರಾಜ್ಯದ ಬೊಕ್ಕಸಕ್ಕೆ ಸಲ್ಲುತ್ತಿದ್ದ ಕಂದಾಯ
- ಮುಲ್ಕಾ ಹಾಗೂ ಇನಾಮ್ : ಕಾಣಿಕೆಗಳು

**ದೆಹಲಿ ಗುಲಾಮಿ ಸಂತತಿ ಆಳ್ವಿಕೆಯಲ್ಲಿನ ವಿವಿಧ ಆಡಳಿತ ಇಲಾಖೆಗಳು**

- ದಿವಾನ್–ಇ–ಅರ್ಜ್: ಸೈನಿಕ ಮಂತ್ರಿಯ ಇಲಾಖೆ
- ದಿವಾನ್–ಇ–ಇಷಾ : ಲೆಕ್ಕಪತ್ರ ಇಲಾಖೆ
- ದಿವಾನ್–ಇ–ರಸಾವ್ : ವಿದೇಶಾಂಗ ವ್ಯವಹಾರಗಳ ಇಲಾಖೆ
- ದಿವಾನ್–ಇ–ಖ್ವಾಜಿ: ಮುಖ್ಯ ನ್ಯಾಯಾಧಿಪತಿ ಇಲಾಖೆ
- ದಿವಾನ್–ಇ–ಅಮಿರ್ ಕೋಹಿ : ಕೃಷಿ ಇಲಾಖೆ
- ದಿವಾನ್–ಇ–ಮುಸ್ತಾಬ್ರಾಜ್ : ಬಾಕಿ ವಸೂಲಿ ಇಲಾಖೆ
- ಸಾದರ್–ಉಸ್–ಸದರ್ : ಧಾರ್ಮಿಕಇಲಾಖೆ

**ಸಯ್ಯದ್‌ವಂಶ (ಕ್ರಿ.ಶ. 1414–1415)**

ಖಿಜಿರ್ ಖಾನ್ ಇದರ ಸ್ಥಾಪಕ. ತಾನು ಮೊಹ್ಮದ್ ಪೈಗಂಬರ್‌ರ ಸಂತತಿಯಿಂದ ಬಂದವನೆಂದು ಈತ ಹೇಳಿಕೊಂಡಿದ್ದ. 1421ರಲ್ಲಿ ಮೇವಾಡದ ದಿಗ್ವಿಜಯದಿಂದ ದೆಹಲಿಗೆ ಮರಳುತ್ತಿರುವಾಗ ಈತ ನಿಧನ ಹೊಂದಿದ.

ನಂತರ ಈತನ ಮಗ ಮುಬಾರಕ್ ಷಾ (ಕ್ರಿ.ಶ. 1421–1434) ಅಧಿಕಾರಕ್ಕೇರಿದ. ಹೆಚ್ಚಿನ ಸಂಖ್ಯೆಯಲ್ಲಿ ಅಫ್ಘನ್‌ರನ್ನು ಈತ ಸೈನ್ಯದಲ್ಲಿ ಸೇರಿಸಿಕೊಂಡ. ಈತನ ನಂತರ ಮಗ ಮಹ್ಮದ್ ಷಾ (ಕ್ರಿ.ಶ. 1434–1443) ಅಧಿಕಾರಕ್ಕೇರಿದ. ಈತ ದುರ್ಬಲನಾಗಿದ್ದ. ನಂತರ ಈತನ ಮಗ ಅಲ್ಲಾವುದ್ದೀನ್ ಅಲ್ ಷಾ (ಕ್ರಿ.ಶ 1445–1451) ಅತ್ಯಂತ ದುರ್ಬಲ ಅಧಿಕಾರ ನಡೆಸಿ ಮಂತ್ರಿ ಹಮೀದ್ ಖಾನ್‌ನೊಂದಿಗೆ ದ್ವೇಷ ಕಟ್ಟಿಕೊಂಡ.

ಹಮೀದ್ ಖಾನ್ ಸಿರ್‌ಹಿಂದ್‌ನ ರಾಜ್ಯಪಾಲ ಬಹಲೂಲ್ ಲೋದಿಗೆ ದೆಹಲಿ ಮೇಲೆ ಅಕ್ರಮಣ ಮಾಡುವಂತೆ ಸ್ವಾಗತಿಸಿದ.

**ಲೋದಿ ಸಂತತಿ (ಕ್ರಿ.ಶ. 1451–1526)**

**ಬಹಲೂಲ್ ಲೋದಿ (ಕ್ರಿ.ಶ. 1451–1489) :**

ಈತ ಲೋದಿ ಸಂತತಿಯ ಸ್ಥಾಪಕ. ಇದು ದೆಹಲಿ ಸಾಮ್ರಾಜ್ಯವನ್ನಾಳಿದ ಕೊನೆಯ ಸುಲ್ತಾನ ಸಂತತಿ. ಬಹಲೂಲ್ ಲೋದಿಯ ದೊಡ್ಡ ಸಾಧನೆ ಎಂದರೆ ಜಾನ್‌ಪುರ ವಶಪಡಿಸಿಕೊಂಡು ಬಿಹಾರದವರೆಗೂ ಸಾಮ್ರಜ್ಯವನ್ನು ವಿಸ್ತರಿಸಿದ್ದು.

ಈತನ ಆಳ್ವಿಕೆಯಲ್ಲಿ ಈಗಿನ ಉತ್ತರ ಪ್ರದೇಶ ಒಂದಾಗಿ ವಿಸ್ತರಿಸಿತು. ಹಿಂದೂ ಧರ್ಮದ ಬಗ್ಗೆ ಸಹಿಷ್ಣುತೆ ತೋರಿಸಿದ.

**ಸಿಕಂದರ್ ಲೋದಿ (ಕ್ರಿ.ಶ. 1489–1517):**

ಈತ ಬಹಲೂಲ್ ಲೋದಿಯ ಮೂರನೆ ಮಗ. ಈತ 'ಆಗ್ರಾ ನಗರ ನಿರ್ಮಾಪಕ' (1505). ಈತ ದಕ್ಷ ಹಾಗೂ ಪ್ರಾಮಾಣಿಕನಾಗಿದ್ದ. ಅದರೆ ಹಿಂದೂ ದೇವಾಲಯಗಳನ್ನ ನಾಶ ಮಾಡಿದ. ಚಂದೇರಿ. ರಣಥಂಬೂರ ಕೋಟೆಗಳನ್ನು ವಶಪಡಿಸಿಕೊಂಡ, ಗ್ವಾಲಿಯರ್‌ನ ಮಾನ್‌ಸಿಂಗ್ ಮೇಲೆ ನಿರಂತರ ಅಕ್ರಮಣ ಮಾಡಿ ಹಲವಾರು ಕೋಟೆಗಳನ್ನು ಗೆದ್ದ.

**ಇಬ್ರಾಹಿಂ ಲೋದಿ (ಕ್ರಿ.ಶ. 1517–1526):**

ಸಿಕಂದರ್ ಲೋದಿಯ ಹಿರಿಯ ಮಗ, ಸಿಂಹಾಸನ ಏರಿದ ತಕ್ಷಣವೇ ಗ್ವಾಲಿಯರ್‌ಗೆ ಮುತ್ತಿಗೆ ಹಾಕಿದ. ನಂತರ ಮೇವಾರ, ಮಾಳ್ವಗಳ ಮೇಲೆ ಆಕ್ರಮಣ ಮಾಡಿದ. ಅಫ್‌ಘನ್ ವರಿಷ್ಠರನ್ನು ಎದುರು ಹಾಕಿಕೊಂಡ.

ಪಂಜಾಬ್‌ನ ರಾಜ್ಯಪಾಲನಾಗಿದ್ದ ದೌಲತ್ ಖಾನ್ ಕಬೂಲ್‌ನು ಮೊಘಲರ ಬಾಬರ್‌ನಿಗೆ ದೆಹಲಿ ಮೇಲೆ ಆಕ್ರಮಣ ಮಾಡುವಂತೆ ಆಹ್ವಾನಿಸಿದ.

ಕ್ರಿ.ಶ. 1525ರಲ್ಲಿ ಬಾಬರ್ ದೆಹಲಿಯತ್ತ ಬಂದ. 1526ರ ಏಪ್ರಿಲ್ 21ರಂದು ಪಾಣಿಪತ್‌ನಲ್ಲಿ ಬಾಬರ್ ಇಬ್ರಾಹಿಂನನ್ನು ಸೋಲಿಸಿ ದೆಹಲಿ ಹಾಗೂ ಆಗ್ರಾಗಳನ್ನು ವಶಪಡಿಸಿಕೊಂಡು ಭಾರತದಲ್ಲಿ ಮೊಘಲ್ ಸಾಮ್ರಾಜ್ಯಕ್ಕೆ ಬುನಾದಿ ಹಾಕಿದ. ದೆಹಲಿಯಲ್ಲಿ ಗುಲಾಮಿ ಸಂತತಿ ಆಳ್ವಿಕೆ ಕೊನೆಗೊಂಡಿತು.

## ಮಧ್ಯಕಾಲೀನ ಭಾರತದ ಪ್ರಾದೇಶಿಕ ರಾಜ್ಯಗಳು

**ಮಾಳ್ವ :**

ಕ್ರಿ.ಶ 1392ರಲ್ಲಿ ದಿಲಾವರ್ ಖಾನ್ ಇದರ ರಾಜ್ಯಪಾಲನಾಗಿದ್ದ. ನಂತರ 1401 ರಿಂದ 1406ರವರೆಗೆ ಸ್ವಂತಂತ್ರವಾಗಿ ಆಳಿದ. ಈತನ ನಂತರ ಆಲ್ವಖಾನ್‌ನು 'ಹೌಶಂಗು ಶಾ' ಬಿರುದಿನಲ್ಲಿ ಅಧಿಕಾರಕ್ಕೇರಿ ಮಂಡುವನ್ನು ರಾಜಧಾನಿಯಾಗಿ ಮಾಡಿಕೊಂಡು, 1435ರಲ್ಲಿ ನಿಧನನಾದ.

ನಂತರ ಮಹ್ಮದ್ ಖಿಲ್ಜಿ 1436ರ ಅಧಿಕಾರ ವಹಿಸಿಕೊಂಡು ಮೇವಾಂದ ರಾಣಾಕುಂಭನ ಮೇಲ ಯುದ್ಧ ಹೂಡಿದ. ನಿರಂತರ ಯುದ್ಧಗಳು ನಡೆದವು. ಚಿತ್ತೋರ್‌ನಲ್ಲಿ ಮೇವಾರದ ರಾಣಾ ವಿಜಯಗೋಪುರ ಕಟ್ಟಿದರೆ, ಮಂಡುವಿನಲ್ಲಿ ಮಹ್ಮದ್ ಖಿಲ್ಜಿ ಏಳು ಅಂತಸ್ತಿನ ಸ್ತಂಭ ಕಟ್ಟಿದ.

1496ರಲ್ಲಿ ಮಹ್ಮದ್ ಖಿಲ್ಜಿಯ ಮಗ ಮಹ್ಮದ್ ಶಾ 'ಸುಲ್ತಾನ್ ಘಿಯಾಸುದ್ದೀನ್' ಬಿರುದಿನಿಂದ ಪಟ್ಟಕ್ಕೇರಿದ. 'ಜಹಾಜ್ ಮಹಲ್ ' ನಿರ್ಮಿಸಿದ.

ಬಾಜ್ ಬಹದ್ದೂರ್ ಮಾಳ್ವದ ಕೊನೆಯ ಸ್ವತಂತ್ರ ರಾಜ. 1562ರಲ್ಲಿ ಮಾಳ್ವ ಮೊಘಲರ ವಶವಾಯಿತು.

**ಜೌನ್‌ಪುರ :**

1359 ರಲ್ಲಿ ಈ ನಗರವನ್ನು ಫಿರೋಜ್ ಶಾ ನಿರ್ಮಿಸಿದ. ತುಘಲಕ್ ಸಂತತಿಯ ಕೊನೆಯ ರಾಜ ಸುಲ್ತಾನ್ ಮಹ್ಮದ್ ಇಲ್ಲಿ ಮಲೀಕ್ ಸರ್ದಾರ್‌ನನ್ನು ರಾಜ್ಯಪಾಲನನ್ನಾಗಿ ನೇಮಿಸಿದ್ದ. ಆದರೆ ತೈಮೂರ್ ದಾಳಿಯ ಸಂದರ್ಭದಲ್ಲಿ ಮಾಲೀಕ್ ಸರ್ದಾರ್ ಸ್ವತಂತ್ರವಾಗಿ ಜೌನ್‌ಪುರದಲ್ಲಿ 'ಶಕ್ತಿ ಸಂತತಿ' ಸ್ಥಾಪಿಸಿದ. 1399ರಲ್ಲಿ ಆತ ನಿಧನನಾದ. 1440ರ ನಂತರ ಸಿಕಂದರ್ ಲೋದಿ ತನ್ನ ವಶಕ್ಕೆ ತೆಗೆದುಕೊಂಡ.

**ಗುಜರಾತ್ :**

1407ರಲ್ಲಿ ಇಲ್ಲಿ ಜಾಫರ್‌ಖಾನ್ ಮುಝುಫಾರಿ ಸಂತತಿ ಸ್ಥಾಪಿಸಿದ. 1573ರಲ್ಲಿ ಅಕ್ಬರ್ ಇದನ್ನು ವಶಪಡಿಸಿಕೊಂಡ.

ಮುಝುಫಾರಿ ಸಂತತಿಯಲ್ಲಿ 14 ರಾಜರು ಆಳ್ವಿಕೆ ನಡೆಸಿದರು. ಅಹ್ಮದ್ ಶಾ (ಕ್ರಿ.ಶ. 1411–1442) ಸಾಬರಮತಿ ನದಿಯ ದಂಡೆಯ ಮೇಲೆ ಅಹ್ಮದಾಬಾದ್ ನಗರವನ್ನು ನಿರ್ಮಿಸಿದ.

**ಖಾನ್ ದೇಶ:**

ಫಿರೋಜ್ ತುಘಲಕ್ ಕಾಲದಲ್ಲಿ ಮಾಲಿಕ್ ರಾಜಾ ಇದರ ರಾಜ್ಯಪಾಲನಾಗಿದ್ದ. ಈತ ಇಲ್ಲಿ 'ಫರೂಕಿ' ಸಂತತಿ ಸ್ಥಾಪಿಸಿದ. 1601ರಲ್ಲಿ ಅಕ್ಬರ್‌ನು ಈ ಖಾನ್ ದೇಶವನ್ನು ವಶಪಡಿಸಿಕೊಂಡ.

**ಬಂಗಾಳ :**

ಕ್ರಿ.ಶ 1338ರಲ್ಲಿ ಬಂಗಾಳ ದೆಹಲಿ ಸುಲ್ತಾನರ ಆಳ್ವಿಕೆಯಿಂದ ತಪ್ಪಿಸಿಕೊಂಡಿತು. ಇಲ್ಯಾಸ್ ಖಾನ್ ಇಲ್ಲಿ 'ಷಾ' ಸಂತತಿ ಸ್ಥಾಪಿಸಿದ. 1415ರವರೆಗೆ 'ಶಾಹಿ' ಆಳ್ವಿಕೆ ನಡೆಯಿತು. 1493–1519ರ ವರೆಗೆ ಆಳ್ವಿಕೆ ನಡೆಸಿದ ಸೈಯದ್ ಹುಸೇನ್ 'ಅಲ್ಲಾವುದ್ದೀನ್ ಹುಸೇನ್ ಶಾ 'ಎನ್ನುವ ಬಿರುದು ಹೊಂದಿದ್ದ.

ಗುರು ಚೈತನ್ಯ ಈತನ ಆಶ್ರಯದಲ್ಲಿದ್ದರು. 1575ರಲ್ಲಿ ಬಂಗಾಳ ಮೊಗಲರ ವಶವಾಯಿತು.

**ಕಾಶ್ಮೀರ :**

ಝ್ಯೆನುಲ್ ಆಬಿದಿನ್‌ಬಿರುದಿನಲ್ಲಿ ಶಾಹಿ ಖಾನ್ 1420–1470ರ ವರೆಗೆ ಆಡಳಿತ ನಡೆಸಿದ. 1586ರಲ್ಲಿ ಅಕ್ಬರ್‌ನು ಕಾಶ್ಮೀರವನ್ನು ಮೊಗಲ್ ಸಾಮ್ರಜ್ಯಕ್ಕೆ ಸೇರಿಸಿದ.

## ಬಹಮನಿ ಸುಲ್ತಾನರು

**(ಕ್ರಿ.ಶ. 1347–1526)**

**ಹಸನ್ ಗಂಗು (ಕ್ರಿ.ಶ. 1345–1358) :**

ಗುಲ್ಬರ್ಗವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಅಲ್ಲಾವುದ್ದೀನ್ ಹಸನ್‌ಗಂಗು ಬಹಮನ್ ಶಾ ಬಹಮನಿ ರಾಜ್ಯವನ್ನು ಸ್ಥಾಪಿಸಿದ. ಈತನ ಮೊದಲ ಹೆಸರು ಜಾಫರ್ ಖಾನ್. 1358ರಲ್ಲಿ ಈತ ನಿಧನನಾದ.

**ಒಂದನೇ ಮಹಮ್ಮದ್ (ಕ್ರಿ.ಶ 1358–1375) :**

ಹಲವಾರು ಆಡಳಿತಾತ್ಮಕ ಸುಧಾರಣೆ ಮಾಡಿದ. ರಾಜ್ಯವನ್ನು ಐದು ಪ್ರಾಂತ್ಯಗಳಲ್ಲಿ ವಿಭಜಿಸಿದ. ಇವುಗಳನ್ನು 'ತರಾಫ್'ಎಂದು ಕರೆದ.

**ಎರಡನೇ ಮಹಮ್ಮದ್ (ಕ್ರಿ.ಶ 1358–1375) :** ಶಾಂತಿಪ್ರಿಯ ಸುಲ್ತಾನ

**ಫಿರೂಜ್ ಶಾ ಬಹ್ಮನ್ (ಕ್ರಿ.ಶ. 1397–1422) :** ವಿಜಯನಗರದೊಡನೆ ಯುದ್ಧಕ್ಕಿಳಿದ.

**ಅಹ್ಮದ್ ಶಾ ವಾಲಿ (ಕ್ರಿ.ಶ. 1422–1436) :** ಬಹುಮನಿ ರಾಜಾಧಾನಿಯನ್ನು ಬೀದರ್‌ಗೆ 1424ರಲ್ಲಿ ವರ್ಗಾಯಿಸಿದ.

**ಹುಮಾಯೂನ್ ಶಾ (ಕ್ರಿ.ಶ. 1458 – 1461) :**

ಈತ ಎರಡನೆ ಅಲ್ಲಾವುದೀನ್ ಶಾ (ಕ್ರಿ.ಶ. 1436 –1458 ) ನಂತರ ಅಧಿಕಾರವಹಿಸಿಕೊಂಡ. ಮಹ್ಮದ್ ಗವಾನ್ ಈತನ ಮಂತ್ರಿಯಾಗಿ ನೇಮಕಗೊಂಡ. 'ತರಾಫ್ 'ಗಳನ್ನು ಎರಡೆರಡು ಭಾಗಗಳಾಗಿ ವಿಭಜಿಸಿದ.

**ಶಂಸುದ್ದೀನ್ ಮಹ್ಮದ್ (ಕ್ರಿ.ಶ. 1463–1482) :**

ಮಹ್ಮದ್ ಗವಾನ್ ನನ್ನು ಗಲ್ಲಿಗೇರಿಸಿದ. ಶಂಸುದ್ದೀನ್ ಮಹ್ಮದ್ ನಂತರ ಆತನ ಅಪ್ರಾಪ್ತ ಮಗ ಮಹ್ಮದ್‌ನನ್ನು ಪಟ್ಟಕ್ಕೇರಿಸಿ. ಮಾಲೀಕ್ ನಯೀಬ್ ಆಡಳಿತ ನಡೆಸಿದರು. ಈ ಅವಧಿಯಲ್ಲಿ ಬಹಮನಿ ರಾಜ್ಯ ಐದು ವಿಭಾಗಗಳಲ್ಲಿ ಒಡೆಯಿತು.

**ಬಿಜಾಪುರ – ಅದಿಲ್ ಶಾಹಿ:**

**ಗೋಲ್ಕಂಡ – ಕುತುಬ್ ಶಾಹಿ:**

**ಅಹ್ಮದ್ ನಗರ – ನಿಜಾಮ್ ಶಾಹಿ:**

**ಬೀದರ್ – ಬರೀದ್ ಶಾಹಿ:**

**ಬೇರರ್ – ಇಮಾಮ್ ಶಾಹಿ :**

ಮುಂದೆ ಮಹ್ಮದ್ ಶಾ 1518ರ ವರೆಗೆ ಆಡಳಿತ ನಡೆಸಿದ. 1528ರಲ್ಲಿ ಕಾಲಿಮುಲ್ಲಾ ಬಹಮುನಿ ಸಂತತಿಯ ಕೊನೆಯ ಸುಲ್ತಾನನಾಗಿ ನಿಧನ ಹೊಂದಿದೆ ನಂತರ ಆ ಸಂತತಿ ಕೊನೆಗೊಂಡಿತು.

## ಬಹಮನಿ ಉತ್ತರಾಧಿಕಾರಿಗಳು

**(ಕ್ರಿ.ಶ. 1528 – 1619 )**

**ಬೀದರ್ :**

ಬಹಮನಿಯ ಕೊನೆಯ ಸುಲ್ತಾನ ಕಾಲಿಮುಲ್ಲಾನ ನಿಧನದ ನಂತರ ಬಹಮನಿ ರಾಜ್ಯ ಬೀದರ್‌ಗಷ್ಟೇ ಸೀಮಿತಗೊಂಡಿತು. ಅಮೀಲ್ ಅಲಿ ಬರೀದ್ 1542ರವರೆಗೆ ಆಡಳಿತ ನಡೆಸಿದ. ನಂತರ ಆತನ ಮಗ ಅಲ ಬರೀದ್ ಶಾ. ಈತ 1565ರ ನಂತರ ವಿಜಯನಗರದ ವಿರುದ್ಧ ತಾಳಿಕೊಟೆ ಕದನದಲ್ಲಿ ಹೋರಾಡಿದ. 1619ರಲ್ಲಿ ಬಿಜಾಪುರದ ಎರಡನೆ ಇಬ್ರಾಹಿಂ ಆದಿಲ್ ಶಾ ಇದನ್ನು ವಶಪಡಿಸಿಕೊಂಡಾಗ ಬರೀದ್ ಶಾಹಿ ಆಡಳಿತ ಕೊನೆಯಾಯಿತು.

**ಬೆರಾರ್ (ವಿದರ್ಭ) :**

ಇಲ್ಲಿ ಇಮಾದ್ ಶಾಹಿ ಸಂತತಿಯನ್ನು ಫಲಾಉಲ್ ಇಮಾದುಲ್ ಮುಲ್ಕ 1484ರಲ್ಲಿ ಸ್ಥಾಪಿಸಿದ. ನಂತರ 1504ರಲ್ಲಿ ಈತ ಮಗ ಅಲ್ಲಾವುದ್ದೀನ್ 'ಇಮಾಮ್ ಶಾ' ಬಿರುದಿನಲ್ಲಿ ಆಡಳಿತ ನಡೆಸಿದ. 1574ರಲ್ಲಿ ಅಹ್ಮದ್ ನಗರ ನಿಜಾಮ್ ಶಾಹಿ ಸಂತತಿ ಬೇರಾರ್ ಅನ್ನು ವಶಪಡಿಸಿಕೊಂಡಿತು.

**ಅಹ್ಮದ್ ನಗರ :**

ಇಲ್ಲಿ ನಿಜಾಮ್ ಶಾಹಿ ಸಂತತಿಯನ್ನು ಮಾಲೀಕ್ ಅಹ್ಮದ್ ಸ್ಥಾಪಿಸಿದ. ಅಹ್ಮದ್‌ನಗರವನ್ನು ನಿರ್ಮಿಸಿ. ಜುನ್ನಾರ್‌ನಿಂದ ಅಲ್ಲಿಗೆ

ರಾಜಧಾನಿಯನ್ನು ವರ್ಗಾಯಿಸಿದ. 1565ರಲ್ಲಿ ವಿಜಯನಗರದ ವಿರುದ್ಧ ತಾಳಿಕೋಟೆ ಕದನದಲ್ಲಿ ಅಹ್ಮದ್ ನಗರದ ನಿಜಾಮ್ ಶಾಹಿಯ ಹುಸೇನ್ ನಿಜಾಮ್ ಶಾ ಭಾಗವಹಿಸಿದ. ನಿಜಾಮ್ ಶಾಹಿಯ ಮುಖ್ಯ ಘಟನೆ ಎಂದರೆ ಅಕ್ಬರ್‌ನ ಮಗ ರಾಜಕುಮಾರ ಮುರಾದ್ ವಿರುದ್ಧ ವಿಧವೆ **ಚಾಂದ್ ಬೀಬಿ** ಒಡ್ಡಿದ ಪ್ರತಿರೋಧ.

1636ರಲ್ಲಿ ನಿಜಾಮ್ ಶಾಹಿಯ ಭಾಗಗಳನ್ನು ಮೊಗಲರು ಹಾಗೂ ಬಿಜಾಪುರದ ಆದಿಲ್ ಷಾಗಳು ಹಂಚಿಕೊಂಡರು.

**ಬಿಜಾಪುರ :**

ಇಲ್ಲಿ ಆದಿಲ್ ಶಾಹಿ ಸಂತತಿಯನ್ನು ಯೂಸುಫ್ ಆದಿಲ್ ಖಾನ್ ಸ್ಥಾಪಿಸಿದ. ಕ್ರಿ.ಶ. 1510ರವರೆಗೆ ಆತ ಬಿಜಾಪುರದಲ್ಲಿ ಆಳಿದ. ಈ ಸಂತತಿಯ ಇನ್ನೊಬ್ಬ ಪ್ರಮುಖ ಸುಲ್ತಾನ ಎಂದರೆ ಇಬ್ರಾಹಿಂ ಆದಿಲ್ ಷಾ (ಕ್ರಿ.ಶ. 1580–1627 ) ಆತನಿಗೆ 'ಜಗದ್ಗುರು' ಎನ್ನುವ ಬಿರುದಿತ್ತು. 1686ರಲ್ಲಿ ಔರಂಗಜೇಬ್ ಬಿಜಾಪುರವನ್ನು ವಶಪಡಿಸಿಕೊಂಡ.

**ಗೋಲ್ಕೊಂಡ:**

ಇಲ್ಲಿ ಕುತುಬ್‌ಷಾಹಿ ಸಂತತಿ ಸ್ಥಾಪಿಸಿದವ ಕುಲಿ ಕುತುಬ್ ಶಾ, 1512ರಲ್ಲಿ. ಆತ 1542ರಲ್ಲಿ ತನ್ನ 98ನೇ ವಯಸ್ಸಿನಲ್ಲಿ ಮಗ ಜಮ್‌ಷೆಡ್‌ನಿಂದ ಹತನಾದ. ಜೆಮ್‌ಷೆಡ್‌ನ ಸಹೋದರ ಇಬ್ರಾಹಿಂ ನಂತರ ಆಳಿದ. ಈ ಇಬ್ರಾಹಿಂ 1565ರ ತಾಳಿಕೋಟೆ ಕದನದಲ್ಲಿ ವಿಜಯನಗರದ ವಿರುದ್ಧ ಪಾಲ್ಗೊಂಡಿದ್ದ. 1687ರಲ್ಲಿ ಔರಂಗಜೇಬ್ ಗೋಲ್ಕೊಂಡವನ್ನು ವಶಪಡಿಸಿಕೊಂಡ.

## ಮೊಘಲ್ ಸಾಮ್ರಾಜ್ಯ

**ಬಾಬರ್ (ಕ್ರಿ.ಶ. 1526 – 1530)**

ಮೊದಲನೆ ಪಾಣಿಪಟ್ (1526) ಯುದ್ಧದಲ್ಲಿ ಇಬ್ರಾಹಿಂ ಲೋದಿಯನ್ನು ಸೋಲಿಸಿ ಈತ ಭಾರತದಲ್ಲಿ ಮೊಘಲ್ ಸಾಮ್ರಾಜ್ಯದ ಅಡಿಗಲ್ಲು ಸ್ಥಾಪಿಸಿದ. ಈತನ ನಿಜವಾದ ಹೆಸರು ಜಾಹಿರುದ್ದೀನ್ ಮೊಹಮ್ಮದ್ . ಅಮಿರ್ ತೈಮೋರ್ ಈತನ ತಂದೆಯ ಸಂಬಂಧಿ ಹಾಗೂ ಚಾಂಗೀಜ್ ಖಾನ್ ಈತನ ತಾಯಿ ಸಂಬಂಧಿ. ಇವರು ಜಾಗ್ನೆ ಟರ್ಕಿ ಪಂಗಡದವರು.

1527ರ ಮಾರ್ಚ್ 16ರಂದು ಆಗ್ರಾದ ಪಶ್ಚಿಮಕ್ಕಿರುವ ಕಣ್ವಎಂಬ ಹಳ್ಳಿಯಲ್ಲಿ ರಾಣಾಸಂಘನನ್ನು ಸೋಲಿಸಿದ. ಇದು ಬಾಬರ್‌ನಿಗೆ ಭಾರತದಲ್ಲಿ ಸಾರ್ವಭೌಮತ್ವ ಸ್ಥಾಪಿಸಲು ಕಾರಣವಾದ ಯುದ್ಧ.

ನಂತರ ಕ್ರಿ.ಶ. 1528ರಲ್ಲಿ ಚಾಂದೇರಿಯ ಮೇದಿನಿ ರಾಯ್‌ನನ್ನು ಸೋಲಿಸಿದ. ಕ್ರಿ.ಶ. 1529ರ ಮೇ 6ರಂದು ಘಾಗ್ರದಲ್ಲಿ ಇಬ್ರಾಹಿಂ ಲೋದಿಯ ಕಿರಿಯ ಸಹೋದರ ಮೊಹಮ್ಮದ್ ಲೋದಿ ಹಾಗೂ ಬಂಗಾಳದ ರಾಜ ಮುಶ್ರತ್ ಶಾರ ಸಂಯುಕ್ತ ಪಡೆಗಳನ್ನು ಸೋಲಿಸಿದ.

ಬಾಬರ್ ತುಜಿಕ್–ಐ–ಬಾಬ್ರಿ ಅಥವಾ ವಕೀಯತ್–ಈ–ಬಾಬ್ರಿ ಅಥವಾ **ಬಾಬರ್‌ನಾಮಾ** ಎಂಬ ಕೃತಯನ್ನು ಚಗತೈ ತುರ್ಕಿಯಲಲಿ ಬರೆದಿದ್ದಾನೆ. ಇದು ಅವನ ಆತ್ಮ ಕಥನವಾಗಿದ್ದು ಹದಿನಾರನೆ ಶತಮಾನದ ಭಾರತದ ಸ್ಥಿತಿಗತಿಗಳನ್ನೂ ವಿವರಿಸುತ್ತದೆ. ಅಕ್ಬರ್‌ನ ಕಾಲದಲ್ಲಿ ಈ ಕೃತಿ ಪರ್ಷಿಯನ್‌ಗೆ ಭಾಷಾಂತರಗೊಂಡಿದೆ.

ಲೇಡನ್ ಮತ್ತು ಯರ್ಸಿಕಿನ್ ಎಲ್ಕಂಗ್ ಮತ್ತು ಶ್ರೀಮತಿ ಬ್ರೇವ್ರಿಚ್ ಬಾಬರ್ ನಾಮಾವನ್ನು ಇಂಗ್ಲೀಷ್‌ಗೆ ಭಾಷಾಂತರಿಸಿದ್ದಾರೆ.

**ಹುಮಾಯೂನ್ (ಕ್ರಿ.ಶ 1530–1556)**

ಕ್ರಿ.ಶ. 1539ರಲ್ಲಿ ಈತ ಕಾಲಿಂಜಾರ್ ವಶಪಡಿಸಿಕೊಂಡ. ಗುಜರಾತ್‌ನ ಬಹದೂರ್ ಶಾ ವಿರುದ್ಧ ಜಯ ಸಾಧಿಸಿದ. ಆದರೆ ಸಂಪೂರ್ಣ ಪ್ರಭುತ್ವ ಸಾಧಿಸಲು ಸಾಧ್ಯವಾಗಲಿಲ್ಲ.

ಅಫ್ಘಾನ್‌ರಾಜ ಶೇರ್ ಶಾ ದೆಹಲಿಯತ್ತ ಕಣ್ಣಿಟ್ಟಿದ್ದ. ಶೇರ್ ಶಾ ವಿರುದ್ಧಕ್ರಿ.ಶ 1539ರ ಚೌಸಾ ಕದನ ಹಾಗೂ ಕ್ರಿ.ಶ 1540ರ ಕನೌಜ್ ಕದನದಲ್ಲಿ ಸೋತ ಹುಮಾಯೂನ್ ನಂತರ 15 ವರ್ಷಗಳ ಕಾಲ ತಲೆತಪ್ಪಿಸಿಕೊಂಡ. ಈ ಅವಧಿಯಲ್ಲಿ ಅಮರ್ ಕೋಟ್ನಲ್ಲಿ ಕ್ರಿ.ಶ 1542ರ ಅಕ್ಟೋಬರ್ 15ರಂದು ಅಕ್ಬರ್ ಹುಟ್ಟಿದ.

**ಶೇರ್ ಶಾ ಸೂರಿ (ಕ್ರಿ.ಶ. 1542–1555) :**

ಈತ ಸೂರ್ ಸಂತತಿಯ ಸ್ಥಾಪಕ. ಹುಮಾಯೂನ್‌ನನ್ನು ಸೋಲಿಸಿ ದೆಹಲಿ ಸಿಂಹಾಸನವೇರಿದಾಗಿ ಈತನಿಗೆ 67ವರ್ಷ. ಈತನ ಮೊದಲ ಹೆಸರು ಫರೀದ್. ಕ್ರಿ.ಶ 1530ರಲ್ಲಿ ಶೇರ್ ಶಾ ಚುನಾರ್ ಕೋಟೆಯನ್ನು , ಕ್ರಿ.ಶ 1534ರಲ್ಲಿ ಸೂರಜ್‌ಘರ್ ಕದನದಲ್ಲಿ ಬಂಗಾಳವನ್ನು ವಶಪಡಿಸಿಕೊಂಡ.

ನಂತರ ಕ್ರಿ.ಶ 1539ರಲ್ಲಿ ಹುಮಾಯೂನ್‌ನನ್ನು ಚೌಸಾ ಕದನದಲ್ಲಿ ಸೋಲಿಸಿದ. ಕ್ರಿ.ಶ 1540ರಲ್ಲಿ ಹುಮಾಯೂನ್ ಚೌಸಾ ಕಾದನದಲ್ಲಿ ಸೋತಿದ್ದರೂ ಕನೌಜಿನಲ್ಲಿ ಶೇರ್ ಶಾನ ವಿರುದ್ಧ ಮತ್ತೆ ಯುದ್ಧ ಸಾರಿದ. ಆದರೆ ಆ ಸಫಲನಾಗಲಿಲ್ಲ. ದೆಹಲಿ ಶೇರ್ ಶಾನ ವಶವಾಯಿತು.

ಕ್ರಿ.ಶ 1542ರಲ್ಲಿ ಶೇರ್ ಶಾ ಮಾಳ್ವಾವನ್ನು, ಕ್ರಿ.ಶ 1543ರಲ್ಲಿ ರಾಯ್‌ಸಿನ್‌ನನ್ನು, ಕ್ರಿ.ಶ 1544ರಲ್ಲಿ ರಾಜ್‌ಪುತಾನಾವನ್ನು ವಶಪಡಿಸಿಕೊಂಡ. ಕ್ರಿ.ಶ. 1545ರಲ್ಲಿ ರಾಜಾ ಕೀರತ್ ಸಿಂಗ್‌ನ ಕಾಲಿಂಚಾರ ಕೋಟೆಯನ್ನು ವಶಪಡಿಸಿಕೊಂಡ ಶೇರ್ ಶಾ ಅದೇ ಯುದ್ಧದಲ್ಲಿ ದುರ್ಮರಣಕ್ಕೀಡಾದ.

ಶೇರ್ ಶಾ ಸಮರ್ಥ ಆಡಳಿತಗಾರನಾಗಿದ್ದ ಆಡಳಿತದಲ್ಲಿ ಇವನು ದಿನಾವ್–ಇ–ಮಿಜಾರತ್ (ಮಂತ್ರಿಗಳ ಮೇಲ್ವಿಚಾರಣೆ). ದಿವಾನ್–ಇ–ಅಂಜ್ (ಸೇನಾ ಉಸ್ತಾವಾರಿ), ದಿನಾವ್–ಇ–ರಸಾಲತ್ (ವಿದೇಶ ವ್ಯವಹಾರ) ಹಾಗೂ ದಿವಾನ್–ಇ–ಇಂಶಾನ್ (ರಾಜಾಜ್ಞೆ) ಮುಂತಾದ ವಿಭಾಗಗಳನ್ನು ಮಾಡಿಕೊಂಡಿದ್ದ.

ರಾಜ್ಯವನ್ನು 47 ಸರ್ಕಾರಗಳನ್ನಾಗಿ ವಿಭಜಿಸಿಕೊಂಡಿದ್ದ. ಪ್ರಬಲ ಸೈನ್ಯವನು ಹೊಂದಿದ್ದ. ಸೈನಿಕರು ಪ್ರತಿನಿತ್ಯ ಹಾಜರಾತಿ ಪುಸ್ತಕದಲ್ಲಿ ಸಹಿ ಹಾಕುವ ಪದ್ಧತಿಯನ್ನು ತಂದಿದ್ದಲ್ಲದೆ ಅಲ್ಲಾವುದ್ದೀನ್ ಖಿಲ್ಜಿ ರೂಢಿಯಲ್ಲಿ ತಂದಿದ್ದ ಕುದುರೆಗಳಿಗೆ ಮುದ್ರೆ ಹಾಕುವ ಪದ್ದತಿಯನ್ನು ಈತ ಜಾರಿಗೆ ತಂದ. ಡಾ. ಕಾನುಂಗೊ ಶೇರ್ ಶಾನ ಸಮರ್ಥ ಸೈನ್ಯ ಪದ್ಧತಿ ಬಗ್ಗೆ ವಿವರಿಸಿದ್ದಾರೆ.

**ಶೇರ್ ಶಾ ಜಾರಿಗೆ ತಂದ ನಾಣ್ಯ ಪದ್ಧತಿ ಮುಂದೆ ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿಯ ಆಡಳಿತದಲ್ಲಿ ಕ್ರಿ.ಶ 1835ರವರೆಗೂ ಮುಂದುವರೆಯಿತು. ಶೇರ್ ಶಾ 'ದಾಂ'** ಎನ್ನುವ ಹೊಸ ನಾಣ್ಯವನ್ನು ಚಲಾವಣೆಗೆ ತಂದ. ದಾಂ ಮತ್ತು ರೂಪಾಯಿಗಳ ನಡುವಿನ ವಿನಿಮಯ ಬೆಲೆ ಅರವತ್ತನಾಲ್ಕಕ್ಕೆ ಒಂದು ಆಗಿತ್ತು.

ಕಲೆಗೂ ಪ್ರಾಧಾನ್ಯತೆ ನೀಡಿದ ಆತ ಸಾಸಾರಂ ಸರೋವರದ ಮಧ್ಯದಲ್ಲಿ ನಿರ್ಮಿಸಿದ ಗೋರಿ ಹಾಗೂ ದೆಹಲಿ ಬಳಿ ಇರುವ ಪುರಾನಾ ಕಿಲಾ ಮಸೀದಿ ಪ್ರಸಿದ್ಧಿ ಪಡೆದಿವೆ.

ಆತ ಸಾರಿಗೆ ಸಂಪರ್ಕವನು ಅಭಿವೃದ್ಧಿ ಪಡಿಸಿದ. ನಾಲ್ಕು ಹೆದ್ದಾರಿಗಳನ್ನು ಆತ ನಿರ್ಮಿಸಿದ. (ದೆಹಲಿಯಿಂದ ಸೋನಾರ್ ಗಾಂವ್, ಆಗ್ರಾದಿಂದ ಬಹ್ರಾಂಪುರ್, ಆಗ್ರಾದಿಂದ ಜೋಧ್‌ಪುರ್ ಮತ್ತು ಚಿತ್ತೂರು ಹಾಗೂ ಲಾಹೋರ್‌ನಿಂದ ಮುಲ್ತಾನ್ ) ಹೆದ್ದಾರಿಗಳ ಮಧ್ಯೆ 1700 ಸಾರಾಯ್ (ತಂಗುದಾಣ) ಗಳನ್ನು ನಿರ್ಮಿಸಿದ.

ಕುದುರೆ ಹಾಗೂ ಒಂಟೆಗಳ ಮೂಲಕ **ಅಂಚೆ ವ್ಯವಸ್ಥೆ ಜಾರಿಗೆ** ತಂದ. ಶೇರ್ ಶಾ ಕಂದಾಯ ಇಲಾಖೆಯ ಭ್ರಷ್ಟಾಚಾರ ತೊಡೆದು ಹಾಕಿದ. ಮಧ್ಯವರ್ತಿಗಳ ಪಾತ್ರವನ್ನುರದ್ದು ಮಾಡಿ ರೈತರೊಂದಿಗೆ ನೇರ ಸಂಪರ್ಕ ಸಾಧಿಸಿದ. ಆತ ದಿನಕ್ಕೆ 16 ಗಂಟೆಗಿಂತ ಹೆಚ್ಚು ಸಮಯವನ್ನು ರಾಜ್ಯದ ಆಡಳಿತದಲ್ಲಿ ವಿನಿಯೋಗಿಸುತ್ತಿದ್ದ.

**ಆತ ಇನ್ನಷ್ಟು ಕಾಲ ಬದುಕಿದ್ದರೆ ಭಾರತದ ಇತಿಹಾಸದ ರಂಗಸಜ್ಜಿಕೆ ಮೇಲೆ ಮೊಘಲರು ಸ್ಥಾಪನೆಯಾಗುತ್ತಿರಲಿಲ್ಲ– ಎಂದು ಡಾ. ಸ್ಮಿತ್ ಹೇಳಿದ್ದಾರೆ.**

**ಅಕ್ಬರ್ (ಕ್ರಿ.ಶ. 1556 – 1605 ) :**

ಕ್ರಿ.ಶ 1556ರಲ್ಲಿ ಹುಮಾಯೂನ್ ದೆಹಲಿಯನ್ನು ಮತ್ತೆ ಅಕ್ರಮಿಸುವುದಕ್ಕಾಗಿ ಸಿಂಧು ನದಿಯನ್ನು ದಾಟಿ ಬಂದ. ಶೇರ್ ಶಾನ ಮರಣದ ನಂತರ ದುರ್ಬಲ ಉತ್ತರಾಧಿಕಾರಿಗಳು ಆಡಳಿತ ನಡೆಸುತ್ತಿದ್ದುದರಿಂದ ಹುಮಾಯೂನ್ ಲಾಗೋರ್ ವಶಪಡಿಸಿಕೊಂಡ.

ಕ್ರಿ.ಶ 1555ರಲ್ಲಿ ಪೂಚಿವಾರ್ ಎಂಬಲ್ಲಿ ಅಫ್ಘನ್ನರನ್ನು ಸೋಲಿಸಿ ಮುನ್ನುಗ್ಗಿದ ಹುಮಾಯೂನ್ ಸೂರ್ ಸಂತತಿಯ ಸಿಂಕದರ್‌ನನ್ನು ಸೋಲಿಸಿ ದೆಹಲಿಯನ್ನು ಆಕ್ರಮಿಸಿದ. ಆದರೆ ಕ್ರಿ.ಶ 1556ರಲ್ಲಿ ಆತ ಮಹಡಿಯಿಂದ ಜಾರಿ ಬಿದ್ದು ನಿಧನ ಹೊಂದಿದ. **ಜೀನವೆಲ್ಲಾ ಎಡವಿದ ಆತ ಕೊನೆಗೊಮ್ಮೆ ಬದುಕಿನಿಂದಲೇ ಎಡವಿದ** ಎಂದು ಲೇನ್ ಪೂಲ್ ತಿಳಿ ಹಾಸ್ಯದಿಂದ ಹೇಳಿದ್ದಾರೆ.

ಹುಮಾಯೂನ್‌ನ ನಿಧನದ ನಂತರ ಅಕ್ಬರ್ ದೆಹಲಿ ಸಿಂಹಾಸನ ಏರಿದ. ಆಗ ಆತನಿಗೆ ಹದಿನಾಲ್ಕು ವರ್ಷ. ಅಪ್ರಾಪ್ತ ವಯಸ್ಕನಾಗಿದ್ದರಿಂದ ಆಡಳಿತ ಬೈರಂಖಾನ್ ನೇತೃತ್ವದಲ್ಲಿ ನಡೆಯಿತು.

ಕ್ರಿ.ಶ 1556ರಲ್ಲಿ ಬಂಗಾಳದಲ್ಲಿ ಆದಿಲ್ ಶಾನ ಮಂತ್ರಿ ಹೇಮು ಅಕ್ಬರ್‌ನ ವಿರುದ್ಧ ಪಾಣಿಪಟ್‌ನಲ್ಲಿ ಯುದ್ಧ ಮಾಡಿದ. ಇದು **ಎರಡನೆ ಪಾಣಿಪಟ್ ಕದನ**ವೆಂದು ಖ್ಯಾತಿಯಾಗಿದೆ. ಈ ಯುದ್ಧದಲ್ಲಿ ಹೇಮು ಸೋತ. ಈ ವಿಜಯದ ನಂತರ ಅಕ್ಬರ್ ದೆಹಲಿ ಹಾಗೂ ಆಗ್ರಾಗಳ ಮೇಲೆ ಪ್ರಭುತ್ವ ಸಾಧಿಸಿದ. ನಂತರ ಅಕ್ಬರ್ ಗ್ವಾಲಿಯರ್ ಹಾಗೂ ಜಾನ್‌ಪುರ್‌ಗಳನ್ನು ವಶಪಡಿಸಿಕೊಂಡ.

ಕ್ರಿ.ಶ 1561–62ರಲ್ಲಿ ಮಾಳ್ವಾವನ್ನು,

ಕ್ರಿ.ಶ 1564ರಲ್ಲಿ ಗೊಂಡಾವನವನ್ನು,

ಕ್ರಿ.ಶ. 1567–68ರಲ್ಲಿ ಮೇವಾರದ ಚಿತ್ತೋರ್ ಕೋಟೆಯನ್ನು,

ಕ್ರಿ.ಶ. 1569ರಲ್ಲಿ ಕಾಲಿಂಜರ್ ಕೋಟೆಯನ್ನು,

ಕ್ರಿ.ಶ. 1572–73ರಲ್ಲಿ ಗುಜರಾತ್ ಅನ್ನು,

ಕ್ರಿ.ಶ. 1576ರಲ್ಲಿ ಬಂಗಾಳ ಹಾಗೂ ಒರಿಸ್ಸಾಗಳನ್ನು,

ಕ್ರಿ.ಶ. 1569 ಹಿಂದೂಗಳ ಪ್ರಬಲ ಕೋಟೆಯಾದ ರಣಥಂಬೂರ್ ಅನ್ನು ವಶಪಡಿಸಿಕೊಂಡ.

ಕ್ರಿ.ಶ. 1585ರಲ್ಲಿ ಕಾಬೂಲಿನ ಅರಸ ಹಕೀಮ್ ಮಿರ್ಜಾರನ್ನು,

ಕ್ರಿ.ಶ. 1586ರಲಿ ಕಾಶ್ಮೀರದ ಅರಸ ಯೂಸುಫ್ ಖಾನ್‌ರನ್ನು,
ಕ್ರಿ.ಶ. 1519ರಲ್ಲಿ ಸಿಂಧೂ ಪ್ರಾಂತ್ಯವನ್ನು,
ಕ್ರಿ.ಶ. 1595ರಲ್ಲಿ ಕಂದಹಾರ್ ಪ್ರದೇಶವನ್ನು,

ಕ್ರಿ.ಶ 1601ರಲ್ಲಿ ಆಸಿರ್‌ಘರ್ ಕೋಟೆಯನ್ನು ಅಕ್ಬರನು ವಶಪಡಿಸಿಕೊಂಡ. **ಆಸಿರ್‌ಘರ್** ಇದು ಅಕ್ಬರನ ಕೊನೆಯ ಯುದ್ಧ.
ಅಕ್ಬರ್ ಅಂಬರ್‌ನ ರಜಪೂತ್ ರಾಜ ಬಿಹಾರಿಮಲ್‌ನ ಮಗಳನ್ನು ಮದುವೆಯಾದದ್ದು ಆತನ ಸಾಮಾಜಿಕ, ಧಾರ್ಮಿಕ ನೀತಿಗಳ ಬದಲಾವಣೆಗೆ ಕಾರಣವಾದವು. ಅಕ್ಬರ್ ಈ ನೀತಿಯ ಪ್ರಕಾರ ಹೆಚ್ಚು ಹೆಚ್ಚು ಹಿಂದೂಗಳನ್ನುಆಡಿಳಿತದಲ್ಲಿ ಉನ್ನತ ಸ್ಥಾನಗಳಿಗೆ ನೇಮಿಸಿದ. ತನ್ನ ರಜಪೂತ ಹೆಂಡತಿಯನ್ನು ಮುಖ್ಯ ರಾಣಿ ಸ್ಥಾನಕ್ಕೂ ಏರಿಸಿದ.
ಕಾಬೂಲ್‌ನಲ್ಲಿದ್ದಾಗ ಅಕ್ಬರ್ ಅಬ್ದುಲ್ ಲತೀಫ್ ಎಂಬ ಶಿಕ್ಷಕನಿಂದ ಉದಾರ ಹಾಗೂ ಉದಾತ್ತ ಮೌಲ್ಯಗಳನ್ನು ಅರಿತುಕೊಂಡ. ಫತೇಪುರ್ ಸಿಕ್ರಿಯಲ್ಲಿ ಇಬಾದತ್ ಖಾನಾ (ಆರಾಧನಾ ಮಂದಿರ) ಕಟ್ಟಿಸಿ ಅಲ್ಲಿ ತತ್ವಶಾಸ್ತ್ರ ಹಾಗೂ ಧರ್ಮಶಾಸ್ತ್ರಗಳ ಬಗ್ಗೆ ಚರ್ಚಿಸುತ್ತಿದ್ದ. ಆ ಚರ್ಚೆಗಳ ಮೂಲಕ 'ದಿನ್-ಎ-ಇಲಾಹಿ' ಎಂಬ ಹೊಸ ಧರ್ಮ ರೂಪುಗೊಂಡಿತು.
ಕ್ರಿ.ಶ. 1563ರಲ್ಲಿ ಆತ ಜಮುನಾ ನದಿಯಲ್ಲಿ ಸ್ನಾನ ಮಾಡುವ ಯಾತ್ರ ಶುಲ್ಕವನ್ನು ತೆಗೆದು ಹಾಕಿದ. ಅಕ್ಬರ್ ತನ್ನ ಕೊನೆಯ ಕಾಲದಲ್ಲಿ ಸರ್ವಧರ್ಮ ಸಮಾನತೆಯನ್ನು ಮೆರೆದು ಯಾವ ಧರ್ಮಕ್ಕೂ ಸೇರದೆ ನಿಧನ ಹೊಂದಿದೆ.

**ಜಹಾಂಗೀರ್ (ಕ್ರಿ.ಶ. 1605 – 1627) :**

ಈತ ಅಕ್ಬರ್ ಹಾಗೂ ಆತನ ರಜಪೂತ ರಾಣಿಯ ಮಗ. ಈತನಿಗೆ ಸಲೀಂ ಎಂದು ಹೆಸರು. ಅಕ್ಬರ್ ಹಾಕಿದ್ದ ಭದ್ರ ಬುನಾದಿಯ ಮೇಲೆ ಈತ ಮೊಗಲ್ ಸಾಮ್ರಾಜ್ಯವನ್ನು ಮುನ್ನಡೆಸಿದ. ಕ್ರಿ.ಶ. 1606 ಮತ್ತು ಕ್ರಿ.ಶ. 1608ರ ಮಧ್ಯೆ ಸತತ ಹೋರಾಟದ ನಂತರ ಜಹಾಂಗೀರ್ ಮೇವಾರವನ್ನು ವಶಪಡಿಸಿಕೊಂಡ. ಅದರೆ ಈತನ ಕಾಲದ ಹೀನಾಯ ಸೋಲೆಂದರೆ ಕಂದಹಾರ್ ಪರ್ಶಿಯನ್ನರ ವಶವಾದದ್ದು. ಕ್ರಿ.ಶ. 1622ರಲ್ಲಿ ಷಾ ಅಬ್ಬಾಸ್ ಕಂದಹಾರ್ ಅನ್ನು ವಶಪಡಿಸಿಕೊಂಡ.
ಜಹಾಂಗೀರ್‌ನ ಕಾಲದಲ್ಲಿ ಇಂಗ್ಲೆಂಡ್‌ನ ರಾಜ ಒಂದನೆ ಜೇಮ್ಸ್‌ನ ಆಜ್ಞೆಯ ಮೇರೆಗೆ ಕ್ಯಾಪ್ಟನ್ ಹಾಕಿನ್ಸ ಹಾಗೂ ಸರ್‌ಥಾಮಸ್ ರೋ ಭಾರತಕ್ಕೆ ಬಂದು ವ್ಯಾಪರ ವಿಸ್ತಿರಿಸಲು ಮುಂದಾದರು.

**ಷಹಜಹಾನ್ (ಕ್ರಿ.ಶ. 1628 – 1658) :**

ಜಹಾಂಗೀರ್‌ಸತ್ತ ನಂತರ ನೂರ್‌ಜಹಾನ್ ಅಪೇಕ್ಷೆಯಂತೆ ದೆಹಲಿ ಸಿಂಹಾಸನದ ಮೇಲಿದ್ದ ಶೆಹರಿಯಾರ್‌ನನ್ನು ಕ್ರಿ.ಶ. 1628ರಲ್ಲಿ ಶಹಜಹಾನ್ ಸೋಲಿಸಿದ. ಸಿಂಹಾಸನವನ್ನು ಬಲಪಡಿಸಿಕೊಂಡ ನಂತರ ಶಹಜಹಾನ್ ಸಾಮ್ರಾಜ್ಯ ವಿಸ್ತಿರಣೆಗೆ ತೊಡಗಿದ.
ಕ್ರಿ.ಶ. 1632ರಲ್ಲಿ ಆತ ಹೂಗ್ಲಿಕೋಟೆಯನ್ನು ವಶಪಡಿಸಿಕೊಂಡ. ಕ್ರಿ.ಶ. 1631ರಲಿ ದೌಲತಾಬಾದ್ ಹಾಗೂ ಅಹ್ಮದಾಬಾದ್ ಅನ್ನು ವಶಪಡಿಸಿಕೊಂಡ ಶಹಜಹಾನ್ ನಂತರ ಗೋಲ್ಕೊಂಡ ಹಾಗೂ ಬಿಜಾಪುರಗಳನ್ನು ಮೊಗಲ್ ಸಾಮ್ರಾಜ್ಯಕ್ಕೆ ಸೇರಿಸಿದ.
ಆದರೆ ಈತನ ಆಳ್ವಿಕೆಯ ಕೊನೆಯ ಕಾಲದಲ್ಲಿ ಸಿಂಹಾಸನಕ್ಕಾಗಿ ಈತನ ಮಕ್ಕಳು 'ಅಂತರ್ ಯುದ್ಧ ನಡೆಸಿದರು. ದಾರಾ, ಶೂಜ್. ಔರಂಗಜೇಬ ಹಾಗೂ ಮುರಾದ್ ಎಂಬ ಈ ನಾಲ್ವರಲ್ಲಿ ಪೈಪೋಟಿ ನಡೆದು ಕ್ರಿ.ಶ. 1658ರಲ್ಲಿ ಔರಂಗಜೇಬ್ ಸಿಂಹಾಸನವೇರಿದ.

**ಔರಂಗಜೇಬ್ (ಕ್ರಿ.ಶ. 1658–1704) :**

ತನ್ನ ಸಹೋದರನನ್ನು ಸೋಲಿಸುವುದರ ಮೂಲಕ ಕ್ರಿ.ಶ. 1658ರ ಜುಲೈ 21ರಂದು ಆಗ್ರಾದಲ್ಲಿ ಪಟ್ಟಾಭಿಷೇಕ ಮಾಡಿಕೊಂಡ ಔರಂಗಜೇಬ್ ನಂತರ ಕ್ರಿ.ಶ 1659ರ ಜೂನ್ 5ರಂದು ಕಣ್ವ ಹಾಗೂ ದಿಯೋರೈಗಳಲ್ಲಿ ಪೂರ್ಣ ವಿಜಯ ಸಾಧಿಸಿದ ನಂತರ ಮತ್ತೂಮ್ಮೆ ಪಟ್ಟಾಭಿಷೇಕ ಮಾಡಿಕೊಂಡು ಮುಂದಿನ 50 ವರ್ಷಗಳ ಕಾಲ ಆಳ್ವಿಕೆ ನಡೆಸಿದ.
ಈತನ ಆಳ್ವಿಕೆ ಕಾಲವನ್ನು ಕ್ರಿ.ಶ 1658–1681ರ ನಡುವಿನ ಉತ್ತರ ಭಾರತದ ಆಳ್ವಿಕೆ ಹಾಗೂ ಕ್ರಿ.ಶ. 1681–1707ರವರೆಗಿನ ದಕ್ಷಿಣ ಭಾರತದ ಆಳ್ವಿಕೆ ಎಂದು ಎರಡು ಭಾಗಗಳಾಗಿ ಗುರುತಿಸಬಹುದು. ಕ್ರಿ.ಶ. 1679ರಲ್ಲಿ ಜೀಜಾವನ್ನು ಮತ್ತೆ ಹೇರಿದ. ನಾಣ್ಯಗಳ ಮೇಲೆ ಕಲೀಮಾ ಮುದ್ರಿಸುವುದನ್ನು ತಡೆದ. ನೌರೋಜ್ ಆಚರಣೆ, ಟಕ್ಕಾ ಪದ್ಧತಿ, ರಾಜರನ್ನು ಬೆಳ್ಳಿ ಹಾಗೂ ನಾಣ್ಯಗಳಿಂದ ತೂಗುವುದು, ಮಧ್ಯ ಇವುಗಳ ರದ್ಧತಿ ಈತನ ಆಳ್ವಿಕೆಯ ಇತರ ವಿಶೇಷಗಳು. ಕ್ರಿ.ಶ. 1675ರಲ್ಲಿ ಈತ ಸಿಖ್ ಗುರುತೇಜ್ ಬಹದ್ದೂರ್‌ಗೆ ಮರಣ ದಂಡನೆ ಶಿಕ್ಷೆ ವಿಧಿಸಿದ. ಔರಂಗಜೇಬ್ ಇತರ ಮೊಗಳ್ ದೊರೆಗಳಂಎ ವಾಸ್ತುಶಿಲ್ಪದಲ್ಲಿ ಆಸಕ್ತಿ ಹೊಂದಿರಲಿಲ್ಲ. ಆದರೂ ಆತ ಔರಂಗಬಾದ್‌ನಲ್ಲಿ **ಬೀಬಿ ಕಾ ಮಕಾಬರ** (ಇದು ಆತನ ರಾಣಿ ರೆಬಾವುದ್ ದೌರಾನಿಯ ಗೋರಿ), ದೆಹಲಿಯ ಕೆಂಪು ಅವರಣದಲ್ಲಿ ಮೋತಿ ಮಸ್ವದ್ ಹಾಗೂ ಲಾಹೋರ್‌ಲ್ಲಿ ಜಾಮಿ ಮಸೀದಿಗಳನ್ನು ಈತ ಕಟ್ಟಿಸಿದ.

**ಬಹದ್ದೂರ್ ಶಾ (ಕ್ರಿ.ಶ. 1707 – 1712) :**

ಔರಂಗಜೇಬ್ ನಿಧನ ಹೊಂದಿದೆ ನಂತರ ಕ್ರಿ.ಶ. 1707ರಲ್ಲಿ ಆತನ ಮೂವರು ಮಕ್ಕಳಾದ ಮೌಜಾಂ, ಅಜಂ ಹಾಗೂ ಖಾನ್ ಭಕ್ಷ್‌ರಲ್ಲಿ ಸಿಂಹಾಸನಕ್ಕಾಗಿ ಪೈಪೋಟಿ ನಡೆಯಿತು. ಇದರಲ್ಲಿ ಮೌಜಾಂ ಗೆದ್ದು ಬಹದ್ದೂರ್ ಶಾ ಎಂಬ ಬಿರುದಿನೊಂದಿಗೆ ಸಿಂಹಾಸನವೇರಿದ. ಆಗ ಈತನಿಗೆ 64 ವರ್ಷಗಳಾಗಿದ್ದವು. ಹೀಗಾಗಿ ಈತ ದುರ್ಬಲ ಆಡಳಿತಕ್ಕೆ ಕಾರಣವಾದ. ಈ ಮೂಲಕ ಈತ ಶಾಹ–ಐ–ಬೇಖಬರ್ (ತಲೆ ಇಲ್ಲದ ರಾಜ) ಎನ್ನುವ ಬಿರುದು ಪಡೆದ. ಈತನ ಆಳ್ವಿಕೆಯಲ್ಲಿ ಪಂಜಾಬ್‌ನ ಬಂದಾ ಬಹದ್ದೂರ್ ದಂಗೆ ಎದ್ದ.

**ಜಹಂದರ್ ಶಾ (ಕ್ರಿ.ಶ. 1712 – 1713 ):**

ಬಹದ್ದೂರ್ ಶಾ ಸತ್ತ ನಂತರ ಆತನ ನಾಲ್ಕು ಮಕ್ಕಳಲ್ಲಿ ಸ್ಪರ್ಧೆ ನಡೆದು ಜಹಂದರ್ ಶಾ ಜುಲ್ಫಿಕರ್ ಖಾನ್‌ನ ಸಹಾಯದೊಂದಿಗೆ ಸಿಂಹಸನ ಏರಿದ. ಜಹಂದರ್ ಶಾ ಜೀಜಾವನ್ನ ರದ್ದುಗೊಳಿಸಿದ. ಆದರೆ ಇಜಿರಾ (ಕೃಷಿ ಕಂದಾಯ)ವನ್ನು ಹೇರಿದ. ಕ್ರಿ.ಶ 1713ರಲ್ಲಿ ಆಗ್ರಾಮದಲ್ಲಿ ಸೈಯದ್ ಸಹೋದರರ (ಅಬ್ದುಲ್ಲಾ ಖಾನ್, ಹುಸೇನ್ ಆಲಿ ಖಾನ್–ಇವರನ್ನು ಕಿಂಗ್ ಮೇಕರ್ಸ ಎನ್ನಲಾಗಿದೆ) ಸಹಾಯದಿಂದ ಫಾರೂಕ್ ಸಿಯಾರ್ ಜಹಂದರ್ ಶಾನನ್ನು ಸೋಲಿಸಿದ.

**ಫಾರೂಕ್ ಸಿಯಾರ್ (ಕ್ರಿ.ಶ. 1713 – 1719):**

ಈತ ಹ್ಯಾಮಿಲ್ಟನ್ ಸಹೋದರರಿಗೆ ವಜೀರ್‌ಹಾಗೂ ಮೀರ್‌ಭಕ್ಷ್ ಸ್ಥಾನಗಳನ್ನು ಕಲ್ಪಿಸಿದ. ಈತ ಬಂದಾ ಬಹದ್ದೂರ್‌ನನ್ನು ಸೆರೆ ಹಿಡಿದು ಕ್ರಿ.ಶ 1716ರಲ್ಲಿ ಮರಣ ದಂಡನೆ ವಿಧಿಸಿದ.

ಡಾ. ಹ್ಯಾಮಿಲ್ಟನ್ ಎಂಬ ಇಂಗ್ಲಿಷ್ ವೈದ್ಯರು ಹಲವಾರು ಖಾಯಿಲೆಗಳಿಂದ ನರಳುತ್ತಿದ್ದ ಫಾರೂಕ್ ಸಿಯಾರ್‌ನನ್ನು ದಯಾಮರಣ ಪಾಲಿಸಿದರೆನ್ನಲಾಗಿದೆ. ನಂತರ ರಫಿ ಉದ್ಧನ್ ದರಿಯಾತ್ ಹಾಗೂ ರಫಿ ಉದ್ದೀನ್ ದನ್‌ಲಾ ಎನ್ನುವವರನ್ನು ಸೈಯ್ಯದ್ ಸಹೋದರರು ಪಟ್ಟಕ್ಕೇರಿಸಿದರು.

**ಮಹಮದ್ ಶಾ (ಕ್ರಿ.ಶ. 1719 –1948):**

ಈತನ ಆಳ್ವಿಕೆಯಲ್ಲಿಮೊಗಲ್ ಸಾಮ್ರಾಜ್ಯ ಕ್ರಮೇಣವಾಗಿ ಪತನದತ್ತ ಸಾಗಿತು. ಬಂಗಾಳ, ಅವಧ್ ಹಾಗೂ ಹೈದರಾಬಾಗಳು ಸ್ವತಂತ್ರಗೊಂಡವು. ಕ್ರಿ.ಶ. 1739ರಲ್ಲಿ ನಾದಿರ್ ಶಾ ಅಬ್ದಾಲಿ ದಾಳಿ ಮಾಡಿದ. ಮರಾಠರು, ಸಿಖ್ಖರು, ಜಾಟರು ಹಾಗೂ ರೋಹಿಲ್ಲರು ಕ್ರಮೇಣವಾಗಿ ಪ್ರಬಲಗೊಂಡರು. ಸೈಯ್ಯದ್ ಸಹೋದರರು ನಿಜಾಂ ಉಲ್ ಮುಲ್ಕ್‌ನಿಂದ ಕೊಲೆಗೀಡಾದರು. ಮಹಮದ್ ಶಾ ತನ್ನ ಮೋಜಿನ ಬದುಕಿನಿಂದ 'ರಂಗೀಲ' ಎನ್ನುವ ಬಿರುದು ಗಳಿಸಿದ್ದ. ಈತನನ್ನು ಬಾಬರ್ ಸಂತತಿಯಲ್ಲಿ ಹುಟ್ಟಿದ ಮೊಗಲ್ ಸಾಮ್ರಾಜ್ಯದ ಕೊನೆಯ ಸಾಮ್ರಾಟ ಎನ್ನಬಹುದು.

**ಅಹಮದ್ ಶಾ ಅಬ್ದಾಲಿ (ಕ್ರಿ.ಶ 1748–1754):**

ಈತ ಕ್ರಿ.ಶ 1748, 1749, 172ರಲ್ಲಿ ಭಾರತದಲ್ಲಿ ಮೇಲೆ ದಾಳಿ ಮಾಡಿ ಮುಲ್ತಾನ್ ಹಾಗೂ ಪಂಜಾಬ್‌ಗಳನ್ನು ವಶಪಡಿಸಿಕೊಂಡ. ಈತನ ದಾಳಿಯಿಂದಾಗಿ ಮೊಗಲ್ ಸಾಮ್ರಾಜ್ಯಕ್ಕೆ ತೀವ್ರ ಧಕ್ಕೆ ಉಂಟಾಯಿತು.

**ಎರಡನೆ ಅಲಂಗೀರ್ (ಕ್ರಿ.ಶ 1754–1759):**

ಅಹಮದ್ ಶಾ ಅಬ್ದಾಲಿಯ ವಜೀರ ಇಮಾದ್ ಉಲ್ ಮುಲ್ಕ್ ಕೈಯಲ್ಲಿ ಈ ಗೊಂಬೆಯಾಗಿದ್ದ, ಈತನ ಆಳ್ವಿಕೆಯಲ್ಲಿ ಅಹಮದ್ ಶಾ ಅಬ್ದಾಲಿ ಕ್ರಿ.ಶ 1756–57ರಲ್ಲಿ ಭಾರತದ ಮೇಲೆ ದಾಳಿ ಮಾಡಿ ದೆಹಲಿಯವರೆಗೂ ಬಂದಿದ್ದ.

**ಎರಡನೆ ಶಾ ಅಲಂ (ಕ್ರಿ.ಶ 1759–1806):**

ಈತನ ಅವಧಿಯಲ್ಲಿ ಅಹಮದ್ ಶಾ ಅಬ್ದಾಲಿ ಮೆತ್ತೊಮ್ಮೆ ದಾಳಿ ಮಾಡಿ ಕ್ರಿ.ಶ 1761ರ ಮೂರನೆ ಪಾಣಿಪಟ್‌ಯುದ್ಧದಲ್ಲಿ ಮರಾಠರನ್ನು ಸೋಲಿಸಿದ. ಕ್ರಿ.ಶ 1764ರಲ್ಲಿ ಬ್ರಿಟಿಷರು ಶಾ ಆಲಂನನು ಬಕ್ಸಾರ್ ಕದನದಲ್ಲಿ ಸೋಲಿಸಿದರು.

ಕ್ರಿ.ಶ. 1803ರಲ್ಲಿ ದೆಹಲಿಯನ್ನುಬ್ರಿಟಿಷರು ಆಕ್ರಮಿಸಿದರು. ಕೆಂಪುಕೋಟೆಯಲ್ಲಿ ಏಕಾಂಗಿಯಾಗಿದ್ದ ಶಾ ಆಲಂ ಕ್ರಿ.ಶ 1806ರಲ್ಲಿ ನಿಧನ ಹೊಂದಿದ.

**ಎರಡನೆ ಅಕ್ಬರ್ (ಕ್ರಿ.ಶ. 1816–1837):**

ಶಾ ಆಲಂನ ಮಗನಾದ ಈತನೂ ಕೂಡ ಬ್ರಿಟಿಷರ ಬಂಧಿಯಾಗಿ ಕ್ರಿ.ಶ. 1837ರವರೆಗೂ ಇದ್ದ.

**ಎರಡನೆ ಬಹದ್ದೂರ್ ಶಾ (ಕ್ರಿ.ಶ. 1837–1857):**

ಈತ ಮೊಗಲ್ ವಂಶದ ಕೊನೆಯ ದೊರೆ. ಕ್ರಿ.ಶ 1857ರವರೆಗೂ ಮೊಗಲ್ ದೊರೆಯಿಂದೇ ಬಿರುದನ್ನು ಉಳಿಸಿಕೊಂಡಿದ್ದ ಈತ ಕ್ರಿ.ಶ 1857ರ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸಿ ಸೋತ ನಂತರ ಬ್ರಿಟಿಷರಿಂದ ಬಂಧಿತನಾಗಿ ರಂಗೂನ್ ಜೈಲಿನಲ್ಲಿ ಕ್ರಿ.ಶ 1862ರವರೆಗೂ ಇದ್ದು ಅಲ್ಲಿಯೇ ನಿಧನ ಹೊಂದಿದ,

## ಹಿಂದೂ ಧಾರ್ಮಿಕ ಚಳವಳಿಗಳು

**ದಕ್ಷಿಣ ಭಾರತ :**

**ಶಂಕರಾಚಾರ್ಯ** (ಕ್ರಿ.ಶ. 783–770) : ಅದ್ವೈತ ಮತದ ಪ್ರತಿಪಾದಕ

**ರಾಮಾನುಜ** (ಜನ್ಮ ಕ್ರಿ.ಶ. 1018) : ವಿಶಿಷ್ಟಾದ್ವೈತದ ಮೂಲಕ ವೈಷ್ಣವ ಪಂಥವನ್ನು ಹುಟ್ಟು ಹಾಕಿದರು.

**ಮಧ್ವಾಚಾರ್ಯ** (ಕ್ರಿ.ಶ. 1199–1278): ದ್ವೈತ ಮತದ ಪ್ರತಿಪಾದಕ

**ಮಹಾರಾಷ್ಟ್ರ :**

**ನಾಮದೇವ** (ಕ್ರಿ.ಶ. 1270–1350): ಶಿಂಪಿಗೆ ಜನಾಂಗಕ್ಕೆ ಸೇರಿದ ಈತ ವಿಶೋಭ ಕೇಚಾರ್‌ರ ಶಿಷ್ಯ ಹಾಗೂ ನಿರ್ಗುಣ ಉಪಾಸಕ. ಈತನ ಅಭಂಗಗಳು ಗುರು ಗ್ರಂಥ್ ಸಾಹಿಬ್‌ನಲ್ಲಿ ಸೇರವೆ.

**ಜ್ಞಾನದೇವ** (ಕ್ರಿ.ಶ 1275–1296): ಭಕ್ತಿ ಚಳವಳಿಯ ಹರಿಕಾರ.

**ಏಕನಾಥ** (ಜನ್ಮ ಕ್ರಿ.ಶ. 1548) : ಈತ ಸಂತ ಭಾನುದಾಸರ ಮೊಮ್ಮಗ. ಜಾತಿ ಪದ್ಧತಿ ವಿರುದ್ಧ ಭಕ್ತಿ ಚಳುವಳಿ ಆರಂಭಿಸಿದ.

**ತುಕಾರಾಂ** (ಜನ್ಮ ಕ್ರಿ.ಶ 1608): ಮಹಾರಾಷ್ಟ್ರದಲ್ಲಿ ಅನೇಕ ಮಠಗಳನ್ನು ಸ್ಥಾಪಿಸಿದ. ಶಿವಾಜಿ ಇವರಿಮದ ದೀಕ್ಷೆ ಪಡೆದ.

**ಉತ್ತರ ಭಾರತ:**

**ರಮಾನಂದ:**

ರಾಮಾನುಜರಿಂದ ಸ್ಫೂರ್ತಿ ಪಡೆದು ಉತ್ತರ ಭಾರತದಲ್ಲಿ ಭಕ್ತಿ ಚಳವಳಿಯನ್ನು ಪ್ರಚಾರ ಪಡೆಸಿದರು. ಜಾತಿ ಪದ್ಧತಿ ವಿರುದ್ಧ ಹೋರಾಡಿದರು. ಇವರ ಶಿಷ್ಯರಲ್ಲಿ ರಾಯಿದಾಸ (ಚಮ್ಮಾರ), ಕಬೀರ (ನೇಕಾರ), ಸೇನ (ಕ್ಷೌರಿಕ) ಪ್ರಮುಖರು.

**ಕಬೀರ (ಕ್ರಿ.ಶ. 1398–1518) :**

ರಾಮಾನಂದರ ಶಿಷ್ಯ. ಜಾತಿ ಪದ್ಧತಿಗಳ ವಿರುದ್ಧ ಧ್ವನಿ ಎತ್ತಿದ ಈತ ದೇವರನ್ನು ರಾಮ–ರಹೀಮ ಎಂದು ಕರೆದ.
ಧರಣಿ ದಾಸ್ ಕಬೀರ್ ಪಂಥವ ವಿಭಾಗವೊಂದನ್ನು ರಚಿಸಿದ.

**ರಾಯಿದಾಸ್ :**

ನಿರ್ಗುಣ ಮತದ ಪ್ರತಿಪಾದಕ. ಈತನ ಕೆಲವು ರಚನೆಗಳು ಗುರುಗ್ರಂಥ್ ಸಾಹಿಬ್‌ನಲಲಿ ಸೇರಿವೆ ಈತನ ಅನುಯಾಯಿಗಳು ರಾಯಿದಾಸ ಪಂಥವನ್ನು ಆರಂಭಿಸಿದರು.

**ಗುರುನಾನಕ್** (ಕ್ರಿ.ಶ. 1469–1539) : ಸಿಖ್ ಮತದ ಸ್ಥಾಪಕ.

**ತುಳಸಿದಾಸ್** (ಕ್ರಿ.ಶ. 1532–1623) :

ಹಿಂದೂ ತತ್ವಶಾಸ್ತ್ರದ ಸುಗುಣ ಪದ್ಧತಿಗೆ ಸೇರಿದವರು. ರಾಮಚರಿತ ಮಾನಸವನ್ನು ರಚಿಸಿದರು.

**ಸೂರದಾಸ್** (ಕ್ರಿ.ಶ. 1486–1563):

ಇವರು ಸುಗುಣ ಪಂಥಕ್ಕೆ ಸೇರಿದವರು. ವಲ್ಲಭಾಚಾರ್ಯರ ಶಿಷ್ಯ. ಸುರ ಸಾಗರದ ಮೂಲಕ ಕೃಷ್ಣನ ಬಾಲ್ಯ ಹಾಗೂ ಯೌವ್ವನಗಳ ಬಗ್ಗೆ ಇವರು ಹಾಡಿದ್ದಾರೆ.

**ಮೀರಾಬಾಯಿ** (ಕ್ರಿ.ಶ. 1498–1546) :

ಚಿತ್ತೋರಿನ ರಾಜಕುಮಾರನನ್ನು ಮದುವೆಯಾದ ಈಕೆ ಬೇಗನೆ ವಿಧವೆಯಾಗಿ ಬಿಟ್ಟಳು. ಆನಂತರ ಈಕೆ ಕೃಷ್ಣನನ್ನು ತನ್ನು ಪತಿ ಎಂದು ಹೇಳುತ್ತಾ ಆತನ ಭಕ್ತೆಯಾದಳು.

**ಚೈತನ್ಯ** (ಕ್ರಿ.ಶ. 1486–1533) :

ಬಂಗಾಳದಲ್ಲಿ ಇವರು ವೈಷ್ಣವ ಪಂಥವನ್ನು ಪ್ರಚಾರ ಪಡಿಸಿದರು. ಮೋಕ್ಷ ಪಡೆಯಲು ರಾಗ ಮಾರ್ಗ ಅನುಸರಿಸಬೇಕೆಂದು ಬೋಧಿಸಿದರು.

**ಶಂಕರದೇವ** (ಕ್ರಿ.ಶ. 1449–1569) : ಅಸ್ಸಾಂನಲ್ಲಿ ಭಕ್ತಿ ಪಂಥವನ್ನು ಪ್ರಚಾರಪಡಿಸಿದ.

## ವಿದೇಶಿ ಯಾತ್ರಿಕರು

**ಮೆಗಸ್ಥನೀಸ್** –

ಚಂದ್ರಗುಪ್ತನ ಮೌರ್ಯನ ಕಾಲದಲ್ಲಿ ಸೆಲ್ಯೂಕಸ್‌ನ ರಾಯಭಾರಿಯಾಗಿ ಭಾರತಕ್ಕೆ ಬಂದ. ಇಂಡಿಕಾ ಈತ ರಚಿಸಿದ ಕೃತಿ.

**ಡೆಲ್ಮಕೋಸ್** – ಗ್ರೀಕ್ ರಾಯಭಾರಿ. ಬಿಂದುಸಾರನ ಆಸ್ಥಾನಕ್ಕೆ ಭೇಟಿ ನೀಡಿದ್ದ.

**ಫಾಹೀಯಾನ–** ಎರಡನೇ ಚಂದ್ರಗುಪ್ತನ ಕಾಲದಲಲಿ ಕ್ರಿ.ಶ. 401 ರಿಂದ 410ರ ಅವಧಿಯಲ್ಲಿ ಚೈನಾದ ಯಾತ್ರಿಕನಾಗಿ ಭಾರತಕ್ಕೆ ಭೇಟಿ ನೀಡಿದ.

**ಹ್ಯೂ ಎನ್ ತ್ಸಾಂಗ್** – ಚೈನಾದ ಯಾತ್ರಿಕ. ಹರ್ಷವರ್ಧನನ ಕಾಲದಲ್ಲಿ ಭಾರತಕ್ಕೆ ಭೇಟಿ ನೀಡಿದ (ಕ್ರಿ.ಶ. 629–643) ಸಿ–ಯು–ಕಿ ಈತ ಬರೆದ ಗ್ರಂಥ.

**ವಾಂಗ್ ಹ್ಯೂ ಎನ್ ತ್ಸೆ** – ಕ್ರಿ.ಶ 657ರಲ್ಲಿ ಭಾರತಕ್ಕೆ ಭೇಟಿ ನೀಡಿದ ಚೈನಾದ ಯಾತ್ರಿಕ.

**ಇ–ತ್ಸಿಂಗ್** – ನಳಂದ ವಿಶ್ವವಿದ್ಯಾನಿಲಯದಲ್ಲಿ ಅಧ್ಯಯನ ಮಾಡಲು ಕ್ರಿ.ಶ. 650ರಲ್ಲಿ ಭಾರತಕ್ಕೆ ಬಮದ ಚೈನಾದ ವಿದ್ವಾಂಸ.

**ಸುಲೇಮಾನ್** – ಅರಬ್ ವ್ಯಾಪಾರಿ. ಕ್ರಿ.ಶ. 850ರಲ್ಲಿ ಭಾರತಕ್ಕೆ ಭೇಟಿ ನೀಡಿದ.

**ಅಲ್ ಮಸೂದಿ–** ಬಾಗ್ದಾದ್‌ನ ಈತ ಹತ್ತನೆ ಶತಮಾನದ ಪೂರ್ವಾರ್ಧದಲ್ಲಿ ಭಾರತಕ್ಕೆ ಭೇಟಿ ನೀಡಿದ.

**ಅಲ್ ಬುರಾನಿ–** ಮದ್ಯ ಏಷ್ಯಾದ ವಿಜ್ಞಾನಿ ಹಾಗೂ ವಿದ್ವಾಂಸ. ಹನ್ನೊಂದನೆ ಶತಮಾನದ ಪೂರ್ವಾರ್ಧದಲ್ಲಿ ಹತ್ತು ವರ್ಷಗಳ ಕಾಲ ಭಾರತದಲ್ಲಿದ್ದ.

ಮಾರ್ಕೊ ಪೋಲೊ – ವೆನೇಶಿಯಾದ ಯಾತ್ರಿಕ. ಕ್ರಿ.ಶ. 1288 –1293ರ ಮಧ್ಯ ಪಾಂಡ್ಯರ ರಾಜ್ಯಕ್ಕೆ ಭೇಟಿ ನೀಡಿದ.

**ಇಬ್ನ ಬತೂತ–** ಉತ್ತರ ಆಫ್ರಿಕದ ಮೊರಕ್ಕೊದ ನಿವಾಸಿ, ಹದಿನಾಲ್ಕನೆ ಶತಮಾನದ ಪೂರ್ವಾರ್ಧದಲ್ಲಿ ಭಾರತಕ್ಕೆ ಭೇಟಿ ನೀಡಿ ಮೊಹಮ್ಮದ್ ಬಿನ್ ತುಘಲಕ್ ಆಸ್ಥಾನದಲ್ಲಿ ಎಂಟು ವರ್ಷ ಇದ್ದ.

**ನಿಕಾಲೊ ಕೊಂಟೆ** – ಇಟಲಿಯ ಯಾತ್ರಿಕ. ಕ್ರಿ.ಶ. 1420ರಲ್ಲಿ ಒಂದನೆ ದೇವರಾಯನ ಕಾಲದಲ್ಲಿ ವಿಜಯನಗರಕ್ಕೆ ಭೇಟಿ ನೀಡಿದ.

**ಅಬ್ದುಲ್ ರಜಾಕ್** – ಪರ್ಶಿಯನ್ ಯಾತ್ರಿಕ. ಎರಡನೆ ದೇವರಾಯನ ಕಾಲದಲ್ಲಿ ವಿಜಯನಗರಕ್ಕೆ ಭೇಟಿ ನೀಡಿದ.

**ನಿಕಿಟಿನ್** – ರಷ್ಯಾದ ಯಾತ್ರಿಕ. ಕ್ರಿ.ಶ. 1470–1474ರ ಮಧ್ಯೆ ಫಿರೋಜ್‌ನ ಅವಧಿಯಲ್ಲಿ ಬಹಮನಿ ರಾಜ್ಯಕ್ಕೆ ಭೇಟಿ ನೀಡಿದ.

**ನ್ಯು ನಿಜ್** – ಪೋರ್ಚುಗೀಸ್ ಬರಹಗಾರ. ಅಚ್ಯುತರಾಯನ ಕಾಲದಲ್ಲಿ ವಿಜಯನಗರಕ್ಕೆ ಭೇಟಿ ನೀಡಿದ.

**ಪೆಯಿಸ್** – ಇಟಲಿಯ ಯಾತ್ರಿಕ. ಕೃಷ್ಣದೇವರಾಯನ ಆಸ್ಥಾನದಲ್ಲಿ ಹಲವಾರು ವರ್ಷ ಕಳೆದ.

**ಬಾರ್ಬೋಸ** – ಪೋರ್ಚುಗೀಸ್ ಯಾತ್ರಿಕ. ಕೃಷ್ಣದೇವರಾಯನಆಸ್ಥಾನದಲ್ಲಿ ಭೇಟಿ ನೀಡಿದ.

**ವಾಸ್ಕೊಡಗಾಮ** – ಪೋರ್ಚುಗೀಸ್ ನಾವಿಕ. ಕೇಪ್ ಆಫ್ ಗುಡ್ ಹೋಪ್ ಮೂಲಕ ಕ್ರಿ.ಶ. 1498ರಲ್ಲಿ ಕ್ಯಾಲಿಕತ್‌ಗೆ ಬಂದಿಳಿದ.

**ಸೀಜರ್ ಫೆಡ್ರಿಕ್** – ವೆನೇಶಿಯಾದ ಯಾತ್ರಿಕ. 16ನೇ ಶತಮಾನದ ಉತ್ತರರ್ಧದಲ್ಲಿ ವಿಜಯನಗರಕ್ಕೆ ಭೇಟಿ ನೀಡಿದ.

**ಮ್ಯಾನೂಕಿ–** ಇಟಲಿಯ ಯಾತ್ರಿಕ. ಶಹಜಹಾನ್‌ನಿಂದ ಫಾರೂಕ್ ಶಿಯಾರ್‌ವರೆಗಿನ ಮೊಗಲ್ ಸಾಮ್ರಾಟದ ಅವಧಿಯಲ್ಲಿ ಈತ ಭಾರತದಲ್ಲಿದ್ದ.

## ಸಿಖ್ ಗುರುಗಳು

**ನಾನಕ್** (ಕ್ರಿ.ಶ. 1469 –1538) : ಸಿಖ್ ಮತದ ಸ್ಥಾಪಕ.

**ಅಂಗದ** (ಕ್ರಿ.ಶ. 1538–1552) : ಗುರುಮುಖಿಯನ್ನು ಕಂಡುಹಿಡಿದ.

**ಅಮರದಾಸ** (ಕ್ರಿ.ಶ. 1552–1574) : ಸತಿ ಹಾಗೂ ಪರದಾ ಪದ್ಧತಿಗಳ ವಿರುದ್ಧ ಹೋರಾಡಿದ. ಸಿಖ್ ಮತವನ್ನು ಪ್ರಚಾರ ಪಡಿಸಲು 22 ಗದ್ದಿಗೆಗಳನ್ನು ಸ್ಥಾಪಿಸದ.

**ರಾಮದಾಸ** (ಕ್ರಿ.ಶ. 1574 – 1581) : ಕ್ರಿ.ಶ 1577ರಲಲಿ ಅಮೃತಸರವನ್ನು ನಿರ್ಮಿಸಿದ.

**ಅರ್ಜುನ್** (ಕ್ರಿ.ಶ. 1581–1606) : ಸ್ವರ್ಣಮಂದಿರದ ಸ್ಥಾಪಕ. ಆದಿ ಗ್ರಂಥವನ್ನು ರಚಿಸಿದ.ಜಹಾಂಗೀರ್‌ನಿಂದ ಈತ ಮರನ ದಂಡನೆಗೆ ಒಳಗಾದ.

**ಹರಗೋವಿಂದ್ ಸಿಂಗ್** (ಕ್ರಿ.ಶ. 1606–1645) : ಸಿಖ್‌ರನ್ನು ಉಗ್ರರನ್ನಾಗಿ ಪರಿವರ್ತಿಸಿದ. ಅಕಾಲ್ ತಖ್ತ್ ಸ್ಥಾಪಿಸಿ ಅಮೃತಸರದ ಕೋಟೆ ಸ್ಥಾಪಿಸಿದ.

**ಹರ್ ರಾಯ್** (ಕ್ರಿ.ಶ. 1645 – 1661)

**ಹರಿಕಿಷನ್** (ಕ್ರಿ.ಶ. 1661–1664) : ಆನಂದಪುರ್ ಸಾಹಿಬ್ ಸ್ಥಾಪನೆ.

**ತೇಜ್ ಬಹದ್ದೂರ್** (ಕ್ರಿ.ಶ. 1664–1675) : ಔರಂಗಜೇಬ್‌ನಿಂದ ಮರಣ ದಂಡನೆಗೆ ಒಳಗಾದ.

**ಗೋವಿಂದ ಸಿಂಗ್** (ಕ್ರಿ.ಶ. 1675–1708) : ಈತ ಸಿಖ್ಖರ ಕೊನೆಯ ಗುರು. ಈತ ಖಾಲ್ಸಾ ಸೈನ್ಯವನ್ನು ಕಟ್ಟಿದ.

## ಮೊಗಲ್ ಉದ್ಯಾನವನಗಳು

HIMALAI
MAKING INDIAN ADMINISTRATORS
SINCE 1998

ಭಾರತದಲ್ಲಿ ಬಾಬರ್ ಆಗ್ರಾದಲ್ಲಿ ಮೊಟ್ಟ ಮೊದಲ ಮೊಗಲ್ ಉದ್ಯಾನವನನು ನಿಮಿಸಿದ. ಇದನ್ನು ಹಶ್ತ್– ಇಶ್ತ್ ಅಥವಾ ನೂರ್–ಐ–ಅಬ್‌ಶಂ ಎಂದು ಆತ ಕರೆದ. ಇದು ರಾಮ್ ಬಾಗ್ ಎಂದು ಜನಿಪ್ರಿಯಾವಾಗಿದೆ.

ಫತೇಪುರ್ ಸಿಕ್ರಿಯ ಆಗ್ರಾ ಕೋಟಿಎಯಲ್ಲಿ ಅಕ್ಬರ್ ಉದ್ಯಾನವನವೊಂದನ್ನು ನಿರ್ಮಿಸಿದ. ಆದರ್ ಆತ ನಿರ್ಮಿಸಿದ ಸಿಕಂದರ ತೋಟ ಹೆಚ್ಚು ಪ್ರಸಿದ್ಧವಾಗಿದೆ.

ಜಹಾಂಗೀರ್ ಶ್ರೀನಗರದಲ್ಲಿ ನಿರ್ಮಿಸಿದ ಶಾಲಿಮಾರ್ ತೋಟ ಉಳಿದೆಲ್ಲಾ ತೋಟಗಳಿಗಿಂತ ಹೆಚ್ಚು ಪ್ರಸಿದ್ಧವಾಗಿದೆ. ಆತ ಆಗ್ರಾದಲ್ಲಿ ಐತ್‌ಮಾದ್ ಉದಂ ದನ್ ಲಾ ಹಾಗೂ ಲಾಹೋರ್‌ನಲ್ಲಿ ಶಹದಾರ ತೋಟಗಳನ್ನೂ ನಿರ್ಮಿಸಿದ್ದಾನೆ.

ಶಹಜಹಾನ್ ಆಗ್ರಾ ಕೋಟೆಯಲ್ಲಿಅಂಗುರಿ ಬಾಗ್ ಹಾಗೂ ಲಾಹೋರ್‌ನಲ್ಲಿ ಶಾಲಿಮಾರ್ ಬಾಗ್‌ಗಳನ್ನು ನಿರ್ಮಿಸಿದ್ದಾನೆ.

## ಮೊಘಲ್ ವಾಸ್ತು ಶಿಲ್ಪ

**ಬಾಬರ್** – ಪಾಣಿಪಟ್‌ನ ಕಾಬೂಲ್ ಬಾಗ್ ಮಸೀದೆ, ಸಂಬಲ್‌ನ ಜಾಮಿ ಮಸೀದೆ.

**ಹುಮಾಯೂನ್** – ಫಾತೇಬಾದ್‌ನಲ್ಲಿ ದಿನ್‌ಪಾನಾ.

**ಶೇರ್ ಶಾ**– ಸಾರಾಸರಂನಲ್ಲಿ ಗೋರಿ, ದೆಹಲಿಯಲ್ಲಿ ಪುರಾನಾ ಕಿಲಾ, ಪುರಾನಾ ಕಿಲಾದೊಳಗೆ ಕಿಲಾ–ಐ–ಕುನಾ ಮಸೀದಿ.

**ಅಕ್ಬರ್** – ಫತೇಪುರ್ ಸಿಕ್ರಿಯಲ್ಲಿ : ಬುಲಂದ್ ದರ್ವಾಜ್ (176 ಅಡಿ ಎತ್ತರ) ಹಾಗೂ ಜಾಮಾ ಮಸೀದಿ, ಬೀರ್‌ಬಲ್ ಮಕಾನ್, ಅಂಬರ್ ರಾಣಿ ಮಕಾನ್, ಸೋನಾಲಾ ಮಕಾನ್ ಹಾಗೂ ದಿವಾನ್–ಐ–ಖಾಸ್. (**ಡಾ. ಸ್ಮಿತ್ ಫತೇಪುರ್ ಸಿಕ್ರಿಯನ್ನು ಕಲ್ಲಿನಲ್ಲಿ ಕಾವ್ಯ ಎಂದಿದ್ದಾರೆ**):

**ಅಗ್ರಾದಲ್ಲಿ : ಆಗ್ರಾಕೋಟೆ (ಕ್ರಿ.ಶ. 1572), ದೆಹಲಿ ಗೇಟ್, ಲಾಹೋರ್ ಕೋಟೆ, ಅಕ್ಬರ್ ಸಿಕಂದರ್ ಗೋರಿಯನ್ನು ಪ್ರಾರಂಭಿಸಿದ ಇದು ಜಹಾಂಗೀರ್‌ನಿಂದ ಪೂರ್ಣಗೊಂಡಿತು.**

**ಜಹಾಂಗೀರ್**– ತಮದ್– ಉದ್ – ದೌಲಾ, ಶಹದಾರಾದಲ್ಲಿ ಜಹಾಂಗೀರ್ ಗೋರಿ.

**ಶಹಜಹಾನ್** – ದೆಹಲಿಯಲ್ಲಿ ದಿವಾನ್–ಐ–ಖಾಸ್ ಹಾಗೂ ದಿವಾನ್–ಅಮ್. ಶಹಜಹಾನ್ ದಿವಾನ್–ಐ–ಖಾಸ್ ಅನ್ನು ಭೂಮಿಯ ಮೇಲಿನ ಸ್ವರ್ಗ ಎಂದಿದ್ದಾನೆ. ಮೋತಿ ಮಸೀದಿ, ತಾಜ್‌ಮಹಲ್ (ಇದರ ವಾಸ್ತು ಶಿಲ್ಪ ಉಸ್ತಾದ್ ಇಸ್ಸಾ. ಇದಕ್ಕೆ 22 ವರ್ಷಗಳು ಬೇಕಾದವು).

**ಔರಂಗಜೇಬ**– ಲಾಹೋರ್‌ನಲ್ಲಿ ಬಾದ್ ಶಾಹಿ ಗೋರಿ. ಔರಂಗಬಾದ್‌ನಲ್ಲಿ ಬೀಬಿ ಕಾ ಮಕಾಬರಾ, ದೆಹಲಿಯ ಕೆಂಪುಕೋಟೆಯಲ್ಲಿ ಮೋತಿ ಮಸೀದಿ.

**ನೆನಪಿಡಿ**

- ಕಾಬುಲ್–ಘಜ್ನಿ–ಕಂದಹಾರ್ ಈ ಮಾರ್ಗವನ್ನು ಸ್ಥಾಪಿಸಿದ್ದು ಅಕ್ಬರ್.
- ಕಿವಿ ಚುಚ್ಚಿ ಬೆಲೆ ಬಾಳುವ ಓಲೆಗಳನ್ನು ಧರಿಸುವ ರೂಢಿಯನ್ನು ಜಹಾಂಗೀರ್ ಜಾರಿಗೆ ತಂದ.
- ಕಲ್ಹಣ ಬರೆದಿರುವ ರಾಜ ತರಂಗಿಣಿಯಲ್ಲಿ ಅಶೋಕ ಶ್ರೀನಗರವನ್ನು ನಿರ್ಮಿಸಿದ ಅನ್ನಲಾಗಿದೆ.
- ಸಾರನಾಥನ ಅಶೋಕನ ಸ್ರಂಭ ಶಾಸನದಲ್ಲಿರುವ ಪ್ರಾಣಿಗಳು ಸಿಂಹ, ವೃಷಭ, ಆನೆ ಹಾಗೂ ಕುದುರೆಗಳು.
- ಅಕ್ವರ್‌ನ ಆಸ್ಥಾನದಲ್ಲಿ ಪ್ರಸಿದ್ಧ ಕವಿ ಫಿಜಾಲಿ
- ಔರಂಗಜೇಬ್ ನುರಿತ ವೈಣಿಕನಾಗಿದ್ದ.
- ಎರಡನೆ ಶಿವಾಜಿ **'ಸಾಹು'** ಎಂದು ಪ್ರಸಿದ್ಧನಾಗಿದ್ದಾನೆ.
- ಅಕ್ಬರ್ ಕಾಲದಲ್ಲಿ ಫ್ರೆಸ್‌ಕೊ ಚಿತ್ರಕಲೆ ಅಭಿವೃದ್ಧಿ ಹೊಂದಿತು.

## ಹೊಸ ರಾಜ್ಯಗಳ ಉದಯ

**ಹೈದರಾಬಾದ್ :**

ಸ್ಥಾಪಕ–ಆಸಫ್ ಜಾಜಿ ಚಿಂಕಿಲಿಕ್ ಖಾನ್. ಈತನ ಜನಪ್ರಿಯ ಹೆಸರು ನಿಜಾಂ ಉಲ್ ಮುಲ್ಕ್. ಕ್ರಿ.ಶ. 1722–1724ರ ವರೆಗೆ ಮೊಗಲ್ ಸಾಮ್ರಾಜ್ಯದಲ್ಲಿ ವಜೀರ ಆಗಿದ್ದ. ನಂತರ ಈತ ಹೈದರಾಬಾದ್‌ಗೆ ಹೋಗಿ ಆಸಫ್ ಜಾಹಿ ವಂಶವನ್ನು ಸ್ಥಾಪಿಸಿದ.

**ಅವಧ್**–

ಸ್ಥಾಪಕ – ಸದಾತ್ ಖಾನ್. ಕ್ರಿ.ಶ. 1722ರಲ್ಲಿ ಅವಧ್‌ನ ರಾಜ್ಯಪಾಲನಾದ. ಈತನ ನಂತರ ಸಫ್‌ದರ್ ಜಂಗ್ ಅವಧ್‌ನ ವಜೀರನಾಗಿ ಅಹ್ಮದ್ ಷಹಾನಿಂದ ನೇಮಕಗೊಂಡ.

**ಬೆಂಗಾಳ:**

ಸ್ಥಾಪಕ– ಮುರ್ಷಿದ್ ತುಲಿ ಖಾನ್, ಕ್ರಿ.ಶ. 1757ರ ಪ್ಲಾಸಿ ಕದನದಲ್ಲಿ ಈಸ್ಟ್ ಇಂಡಿಯಾ ಕಂಪನಿ ಬಂಗಾಳದ ಸಿರಾಜ್–ಉದ್–ದೌಲ್‌ನನ್ನು ಸೋಲಿಸಿತು.

**ರಜಪೂತ್ :**

ಸ್ಥಾಪಕ– ಅಂಬರ್‌ನ ರಾಜಾ ಸವಾಯಿ ಜೈಸಿಂಗ್, 18ನೇ ಶತಮಾನದ ರಜಪೂತರ ಪ್ರಸಿದ್ಧ ರಾಜ. ಜೈಪುರ್ ನಗರ ನಿರ್ಮಾಪಕ. ದೆಹಲಿ, ಜೈಪುರ್, ಉಜ್ಜಯನಿ, ವಾರಣಾಸಿ ಹಾಗೂ ಮಥುರಾಗಳಲ್ಲಿ ಖಗೋಳ ಗೋಪುರಗಳನ್ನು ಸ್ಥಾಪಿಸಿದ. ಕ್ರಿ.ಶ 199–1743ರ ವರೆಗೆ ಈತ ಜೈಪುರವನ್ನು ಆಳಿದ.

**ಜಾಟರು :**

ಸ್ಥಾಪಕ– ಚುರುಮನ್ ಮತ್ತು ಬದನ್ ಸಿಂಗ್, ಭರತ್‌ಪುರದಲ್ಲಿ 18ನೇ ಶತಮಾನದಲ್ಲಿ ಆಳಿದ ಜಾಟರಲ್ಲಿ ಸೂರಜ್‌ಮಲ್ ಪ್ರಸಿದ್ಧ ರಾಜನಾಗಿದ್ದಾನದ. ಈತನನ್ನು **ಜಾಟ್‌ರ ಪ್ಲೇಟೂ ಹಾಗೂ ಜಾಟರ ಯುಲೆಸಿಸ್ ಎನ್ನಲಾಗಿದೆ.**

**ರುಹೇಲರು :** ಸ್ಥಾಪಕರು – ದಾವುದ್ ಹಾಗೂ ಅಲಿ ಮಹಮದ್ ಖಾನ್, ರೊಹಿಲ್ ಖಂಡದ ಪ್ರಮುಖರು ಇವರು.

**ಸಿಖ್ಖರು :** ಕ್ರಿ.ಶ. 1765–1800 ಅವಧಿಯಲ್ಲಿ ಪಂಜಾಬ್ ಹಾಗೂ ಜಮ್ಮುಗಳನ್ನು ಸಿಖ್ಖರು ಆಕ್ರಮಿಸಿಕೊಂಡಿದ್ದರು. 12 ಸಿಖ್ ಭ್ರಾತೃ ಗುಂಪುಗಳಲ್ಲಿ (ಮಿಸ್ಲ್ಸ್) ಸುಕೇರ್ ಚಕಿಯಾ ಗುಂಪಿನ ರಣಜಿತ್ ಸಿಂಗ್ ಅತ್ಯಂತ ಪ್ರಬಲನಾಗಿದ್ದ. ಕ್ರಿ.ಶ. 1799ರಲ್ಲಿ ಲಾಹೋರನ್ನು ಹಾಗೂ ಕ್ರಿ.ಶ. 1802ರಲ್ಲಿ ಅಮೃತಸರವನ್ನು ಆತ ವಶಪಡಿಸಿಕೊಂಡ.

**ಮರಾಠರು :** ಸ್ಥಾಪಕ – ಶಿವಾಜಿ.

ಕ್ರಿ.ಶ. 1628ರಲ್ಲಿ ಶಿವಾಜಿ ಜನನ. ಕ್ರಿ.ಶ. 1645–1647ರಲ್ಲಿ ರಾಯಘಡ್, ಕೊಂಡಣ ಹಾಗೂ ತೋರಣದುರ್ಗಗಳ ವಶ. ಜಾವ್ಳಿ ವಶ, ಅಫಜಲ್ ಖಾನ್ ಹತ್ಯೆ, ಕ್ರಿ.ಶ. 1664ರಲ್ಲಿ ಸೂರತ್ ವಶ. ಕ್ರಿ.ಶ. 1666ರಲ್ಲಿ ಔರಂಗಜೇಬ್‌ನ ವಶದಿಂದ ಪಾರು, ಕ್ರಿ.ಶ. 1674ರಲಲಿ ರಾಯಘಡ್‌ನಲ್ಲಿ ಪಟ್ಟಾಭಿಷೇಕ, 'ಹೈಂದವ ಧರ್ಮೋದ್ಧಾರಕ' ಬಿರುದು, ಕ್ರಿ.ಶ. 1686ರಲ್ಲಿ ಮರಣ.

**ಶಿವಾಜಿಯ ಉತ್ತರಾಧಿಕಾರಿಗಳು:**

ಶಿವಾಜಿಯ ಮಗ ಸಂಬಾಜಿ ಕ್ರಿ.ಶ. 1688ರಲ್ಲಿ ಔರಂಗಜೇಬ ವಶ, ಸಹೋದರ ರಾಜಾ ರಮಣ್‌ಗೆ ಪಟ್ಟ, ಜಿಂಜಿಯಲಲಿ ರಾಜ್ಯಸ್ಥಾಪನೆ, ಮೊಗಲ್‌ರಿಂದ ಆಕ್ರಮಣ, ಸಾತಾರಕ್ಕೆ ರಾಜಾ ರಮಣ್ ಜಿಂಜಿಯಲ್ಲಿ ರಾಜ್ಯಸ್ಥಾಪನೆ, ಮೊಗಲ್‌ರಿಂದ ಆಕ್ರಮಣ, ಸಾತಾರಕ್ಕೆ ರಾಜಾ ರಮಣ್ ವಾಪಸ್ಸು, ಕ್ರಿ.ಶ. 1700ರಲ್ಲಿ ರಾಜಾ ರಮಣ್ ಸಾವು. ವಿಧವೆ ತಾರಾಬಾಯಿಯಿಂದ ಅಪ್ರಾಪ್ತ ಮಗ ಸಾಹುವಿನ ಬಿಡುಗಡೆ. ಸಾಹು ಹಾಗೂ ತಾರಾಬಾಯಿ ಮಧ್ಯೆ ಯುದ್ಧ. ಸಾಹೂನ ಅವಧಿಯಲ್ಲಿ ಪೇಶ್ವೆಗಳ ಆಳ್ವಿಕೆ ಆರಂಭ, ಪೇಶ್ವ ಎಂದರೆ ಪ್ರಧಾನಮಂತ್ರಿ ಎಂದರ್ಥ.

**ಪೇಶ್ವೆಗಳು :**

**ಬಾಲಾಜಿ ವಿಶ್ವನಾಥ್ (ಕ್ರಿ.ಶ. 1712–1720)**

ಈತ ಆಡಳಿತ ವಹಿಸಿಕೊಂಡ ಮೊದಲನೆ ಪೇಶ್ವೆ, ಸಾಹುಗೆ ಮರಳಿ ರಾಜ್ಯ ಪಡೆಯಲು ಸಹಾಯ ಮಡಿದ.

**ಒಂದನೆ ಬಾಜಿ ರಾವ್(ಕ್ರಿ.ಶ. 1720–1740)**

'ಹಿಂದೂಪಾದ ಬಾದಶಾಹಿ' (ಹಿಂದೂ ಸಾಮ್ರಾಜ್)ಯ ಪ್ರತಿಪಾದಕ, ಕ್ರಿ.ಶ. 1736ರ ಭೂಪಾಲ್ ಯುದ್ಧದಲ್ಲಿ ನಿಜಾಂ ಮೇಲೆ ಗೆಲುವು.

**ಬಾಲಾಜಿ ಬಾಜಿ ರಾವ್ (ಕ್ರಿ.ಶ. 1740–1761)**

ಬಂಗಾಳದ ಅಲವರ್ದಿ ಖಾನ್‌ನನ್ನು ಸೋಲಿಸಿ ಒರಿಸ್ಸಾದ ಮೇಲೆ ಹಿಡಿತ.

**ಮಾಧವರಾವ್. (ಕ್ರಿ.ಶ. 1761–1772)**

ಈತನ ಕಾಲದಲ್ಲಿ ಮರಾಠ ಸಾಮ್ರಾಜ್ಯ ಹಲವಾರು ಸ್ವತಂತ್ರ ರಾಜ್ಯಗಳಾಗಿ ವಿಭಜನೆಯಾಯಿತು. ಇವುಗಳಲ್ಲಿ–

ಇಂದೋರ್‌ನ – ಹೋಳ್ಕರ್ ವಂಶ,

ನಾಗ್ಪುರದ – ಭೋಂಸ್ಲೆ ವಂಶ,

ಗ್ವಾಲಿಯರ್‌ನ– ಸಿಂಧ್ಯ ವಂಶ ಹಾಗೂ

ಬರೋಡಾದ – ಗಾಯಕ್ವಾಡ್ ವಂಶಗಳು ಮುಖ್ಯವಾಗಿವೆ.

**ನಂತರದ ಪೇಶ್ವೆಗಳು:**

ನಾರಾಯಣ ರಾವ್ (1772–73),

ಮಾಧವರಾವ್ ನರಾಯಣ್ (1773–95),

ಎರಡನೆ ಬಾಜಿರಾವ್ (1795–1818).

# ಐತಿಹಾಸಿಕ ಸ್ಮಾರಕಗಳು

ಕಾರ್ಲೆಯ ಚೈತ್ಯ – ಶಾತವಾಹನರು
ಎಲ್ಲೋರದ ಸ್ತೂಪಗಳು– ಶಾತವಾಹನರು
ಅಜಂತ ಚಿತ್ರಕಲ –ಗುಪ್ತರು
ರಾಮೇಶ್ವರಮ್ ದೇವಾಲಯ – ರಾಷ್ಟ್ರಕೂಟರ ಮೂರನೆ ಕೃಷ್ಣ
ಕಂಚಿಯ ಕೈಲಾಸನಾಥ ದೇವಾಲಯ –ಪಲ್ಲವರು
ತಂಜಾವೂರಿನ ಬೃಹದೇಶ್ವರ ದೇವಾಲಯ–ಒಂದನೆ ರಾಜರಾಜ ಚೋಳ
ಗೊಮ್ಮಟೇಶ್ವರ – ಚಾವುಂಡರಾಯ (ಗಂಗರ ರಾಜಮಲ್ಲನ ಮಂತ್ರಿ)
ನಾಟ್ಯ ನಟರಾಜ – ಚೋಳರು
ಜಗನ್ನಾಥಪುರಿ ದೇವಾಲಯ – ಅನಂತವರ್ಮ
ಕೋಣಾರ್ಕದ ಸೂರ್ಯ ದೇವಾಲಯ –ಒಂದನೆ ನರಸಿಂಹ
ಖಜುರಾಹೊ ದೇವಾಲಯ – ಚಂದೇಲರು
(ಭಾರತದಲ್ಲಿ ಮೊದಲ ಇಸ್ಲಾಮಿಕ್ ಸ್ಮಾರಕ ) ಕುವಾತ್–ಉಲ್–ಇಸ್ಲಾಂ – ಕುತ್ಬದ್ದೀನ್ ಐಬಕ್
ಕುತುಬ್ ಮಿನಾರ್ – ಕುತ್ಬದ್ದೀನ್ ಆರಂಭಿಸಿದ ಇಲ್ತುಮಿಶ್ ಮುಗಿಸಿದ
ಅಲಾಯ್ ದರ್ವಾಜಾ – ಅಲ್ಲಾವುದ್ದೀನ್ ಖಿಲ್ಜಿ
ಸಿರಿ ಕೋಟೆ – ಅಲ್ಲಾವುದ್ದೀನ್ ಖಿಲ್ಜಿಬ
ಸಾವಿರ ಕಂಬಗಳ ಸ್ಥಳ–ಅಲ್ಲಾವುದ್ದೀನ್ ಖಿಲ್ಜಿ
ಚಿತ್ತೂರ್‌ನ ಕೀರ್ತಿ ಸ್ತಂಭ– ರಾಣಾ ಕುಂಭ
ಹೈದರಾಬಾದ್‌ನ ಚಾರ್ ಮಿನಾರ್– ಬಿಜಾಪುರದ ಆದಿಲ್ ಷಾ
ಬಿಜಾಪುರದ ಗೋಲಗುಮ್ಮಟ – ಇಬ್ರಾಹಿಂ ಆದಿಲ್ ಷಾ
ದೆಹಲಿಯ ಕೆಂಪುಕೋಟೆ – ಶಹಜಹಾನ್
ಪುರಾನಾ ಕಿಲಾ – ಶೇರ್ ಷಾ

# ಪ್ರಮುಖ ಯುದ್ಧಗಳು

ಕ್ರಿ.ಶ. 1191– ಮೊದಲನೆ ತರೈನ ಕದನ, ಪೃಥ್ವಿರಾಜ್ ಚೌಹಾಣ್‌ಗೆ ಘೋರಿ ಮೊಹಮ್ಮದ್ ವಿರುದ್ಧ ಗೆಲುವು
ಕ್ರಿ.ಶ. 1192 – ಎರಡನೆ ತರೈನ ಕದನ, ಪೃಥ್ವಿರಾಜ್ ಚೌಹಾಣ್‌ಗೆ ಗೋರಿ ಮೊಹಮ್ಮದ್ ವಿರುದ್ಧ ಸೋಲು
ಕ್ರಿ.ಶ. 1194– ಚಂದ್ವಾರ್ ಕದನ, ಕನೌಜಿನ ಜಯಚಂದ್ರನಿಗೆ ಮೊಹಮ್ಮದ್ ಘೋರಿ ವಿರುದ್ಧ ಸೋಲು
ಕ್ರಿ.ಶ. 1526 – ಮೊದಲನೆ ಪಾಣಿಪತ್ ಯುದ್ಧ, ಇಬ್ರಾಹಿಂ ಲೋದಿ ವಿರುದ್ಧ ಬಾಬರ್‌ಗೆ ಗೆಲುವು
ಕ್ರಿ.ಶ. 1529 – ಘಾಗ್ರಾ ಕದನ, ರಾಣಾಸಿಂಗ್ ವಿರುದ್ಧ ಬಾಬರ್‌ಗೆ ಗೆಲುವು
ಕ್ರಿ.ಶ್ರ 1539 – ಚೌಸಾ ಕದನ ಹುಮಾಯೂನ್‌ಗೆ ಶೇರ್ ಷಾನಿಂದ ಸೋಲು
ಕ್ರಿ.ಶ. 1540 – ಕನೌಜ್ ಕದನ, ಹುಮಾಯೂನ್‌ಗೆ ಮತ್ತೆ ಸೋಲು, ಶೇರುಷಾಗೆ ದೆಹಲಿ
ಕ್ರಿ.ಶ. 1556– ಎರಡನೆ ಪಾಣಿಪತ್ ಯುದ್ಧ, ಅಕ್ಬರ್‌ಗೆ ಹೇಮೂ ವಿರುದ್ಧ ಗೆಲುವು
ಕ್ರಿ.ಶ. 1656– ತಾಳಿಕೋಟೆ ಕದನ, ಬಹುಮುನಿ ಸುಲ್ತಾನರಿಂದ ವಿಜಯನಗರಕ್ಕೆ ಸೋಲು
ಕ್ರಿ.ಶ. 1576– ಹಳದಿ ಘಾಟ್ ಕದನ, ರಾಣಾ ಪ್ರತಾಪ್‌ಗೆ ಅಕ್ಬರ್‌ನಿಂದ ಸೋಲು
ಕ್ರಿ.ಶ. 1601– ಅಸಿರ್‌ಘರ್ ಕದನ, ಅಕ್ಬರ್‌ನ ಕೊನೆಯ ಯುದ್ಧ
ಕ್ರಿ.ಶ. 1607– ಮೊಗಲ್‌ರಿಗೆ ಕಂದಹಾರ್
ಕ್ರಿ.ಶ. 1622– ಪರ್ಷಿಯನ್ನರಿಗೆ ಮತ್ತೆ ಕಂದಹಾರ್
ಕ್ರಿ.ಶ. 1638– ಮೊಗಲರಿಗೆ ಮತ್ತೆ ಕಂದಹಾರ್
ಕ್ರಿ.ಶ. 1649– ಪರ್ಷಿಯನ್ನರಿಗೆ ಶಾಶ್ವತವಾಗಿ ಕಂದಹಾರ್
ಕ್ರಿ.ಶ. 1757– ಪ್ಲಾಸಿಕದನ, ಸಿರಾಜುದ್ದೌಲನ ಸೋಲು
ಕ್ರಿ.ಶ. 1760– ವಾಂಡಿವಾಷ್ ಕದನ, ಇಂಗ್ಲಿಷರಿಗೆ ಫ್ರೆಂಚರ ಮೇಲೆ ಗೆಲುವು.

ಕ್ರಿ.ಶ. 1761– ಮೂರನೆ ಪಾಣಿಪಟ್ ಯುದ್ಧ, ಅಹಮದ್ ಅಬ್ದಾಲಿಗೆ ಬಾಲಾಜಿ ಬಾಜಿರಾಯನ ಮರಾಠ ಸೇನೆಯ ವಿರುದ್ಧ ಗೆಲುವು

ಕ್ರಿ.ಶ. 1775–1782 : ಒಂದನೇ ಆಂಗ್ಲೊ ಮರಾಠ ಕದನ, ಮರಾಠರಿಗೆ ಸೋಲು, ಸಾಲ್ಬಾಯ್ ಒಪ್ಪಂದ

ಕ್ರಿ.ಶ. 1803–1805 : ಎರಡನೆ ಆಂಗ್ಲೊ ಮರಾಠ ಕದನ, ಗ್ವಾಲಿಯರ್‌ನ ಸಿಂಧ್ಯಾ ಹಾಗೂ ಬನಾರಸ್‌ನ ಭೋಂಸ್ಲೆಯ ಸಂಯುಕ್ತ ಸೇನೆಯ ಮೇಲೆ ಬ್ರಿಟಿಷರ ಗೆಲುವು. ನಂತರ ಹೋಲ್ಕರ್‌ಗೂ ಸೋಲು

ಕ್ರಿ.ಶ. 1817–1818 : ಮೂರನೆ ಆಂಗ್ಲೊ ಮರಾಠ ಕದನ, ಮರಾಠರಿಗೆ ಸೋಲು

ಕ್ರಿ.ಶ. 1845–1846 : ಒಂದನೆ ಆಂಗ್ಲೊ ಸಿಖ್ ಕದನ, ಸಿಖ್‌ರಿಗೆ ಸೋಲು, ಲಾಹೋರ್ ಒಪ್ಪಂದ

ಕ್ರಿ.ಶ. 1848–1849 : ಎರಡನೆ ಆಂಗ್ಲೊ ಸಿಖ್ ಕದನ ಸಿಖ್‌ರಿಗೆ ಸೋಲು, ದಿಲೀಪ್‌ಸಿಂಗ್‌ನಿಂದ ಬಿಟಿಷ್‌ರಿಗೆ ಕೊಹಿನೂರು ವಜ್ರ

## ಆಧುನಿಕ ಭಾರತ

## ಯುರೋಪಿಯನ್ನರ ಆಗಮನ

ಮೊಗಲರು ನೌಕಾಬಲವನ್ನು ಕಡೆಗಣಿಸಿದ್ದರು. ಸಮುದ್ರ ಮಾರ್ಗದ ಮೂಲಕ ಯೂರೋಪ್‌ನ ವರ್ತಕರು ಭಾರತಕ್ಕೆ ಪ್ರವೇಶಿಸಿದರು. ಇದು ಭಾರತದ ಇತಿಹಾಸಕ್ಕೆ ಹೊಸ ಆಕಾರವನ್ನೇ ಕೊಟ್ಟಿತು.

1487– ಬಾರ್ತೂಲೊಮೆವ್ ಡೈಯಾಸ್‌ನಿಂದ ಕೇಪ್ ಆಫ್ ಗುಡ್ ಹೋಪ್ ಶೋಧ

**1–1. ಪೋರ್ಚುಗೀಸರ ಆಗಮನ**

1498–ಬಾರ್ತೊಲೊಮೆವ್‌ನ ಮಾರ್ಗ ಅನುಸರಿಸಿ ಮೇ 17ರಂದು ಭಾರತದ ಕಲ್ಲಿಕೋಟೆಗೆ ವಾಸ್ಕೊ–ಡ–ಗಾಮ ಬಂದಿಳಿದ. ಜಾಮೊರಿನ್ ಆಗ ಕಲ್ಲಿಕೋಟೆಯ ರಾಜ.

1502– ಕೊಚ್ಚಿನ್‌ನಲ್ಲಿ ಪೋರ್ಚುಗೀಸ್‌ರಿಂದ ವಸಾಹತು. ಕ್ರಮೇಣ ಅವರು ರಾಜಕೀಯದಲ್ಲಿ ಹಸ್ತಕ್ಷೇಪ ಮಾಡಿದರು. ಜಾಮೋರಿನ್ ರಾಜ ವೈರಿ ಕೊಚ್ಚಿನ್ ರಾಜನೊಡನೆ ಮೈತ್ರಿ ಬೆಳೆಸಿದ್ದ.

1503–ಅಲ್ಫಾನ್ಸೊ–ಡ–ಅಲ್ಬುಕರ್ಕ್ ಪೋರ್ಚುಗೀಸ್ ಸೇನಾ ತುಕಡಿ ನಾಯಕನಾಗಿ ಆಗಮನ

1505–ಸ್ಕೊ–ಡ–ಅಲ್ಮೇರಿಯಾ ಮೊದಲ ಪೋರ್ಚುಗೀಸ್ ಗವರ್ನರ್ ಅಂಜರಿವಾ, ಕನ್ನಾನೂರ್,ಕೊಚ್ಚಿನ್‌ಗಳಲ್ಲಿ ಉದ್ಯಮಗಳು

1509–ಅಲ್ಫಾನ್ಸೊ–ಡಿ–ಅಲ್ಬುಕರ್ಕ್ ಎರಡನೆ ಗವರ್ನರ್ ಹಾಗೂ ಭಾರತದಲ್ಲಿ ಪೋರ್ಚುಗೀಸರ ಭದ್ರ ಬುನಾದಿ

1510–ಆತ ಬಿಜಾಪುರ ಸುಲ್ತಾನನಿಂದ ಗೋವಾ ವಶಪಡಿಸಿಕೊಂಡ (* ಸತಿ ಪದ್ಧತಿ ರದ್ದತಿಗೆ ಆತ ಶ್ರಮಿಸಿದ)

ಪೋರ್ಚುಗೀಸರ ಪ್ರಮುಖ ವಸಾಹತುಗಳು:

ದಿಯು,ದಾಮನ್,ಸಾಲ್ಫೆಟ್, ಬಾಂಬೆ,ಬೆಸ್ಸಿನ್,ಸ್ಯಾಂತೋಮ್,ಹೊಗ್ಲಿ,

**ಡಚ್ಚರ ಆಗಮನ**

1602–ಯುನೈಟೆಡ್ ಈಸ್ಟ್ ಇಂಡಿಯಾ ಕಂಪನಿ ಆಫ್ ನೆದರ್‌ಲೆಂಡ್ಸ್ ಸ್ಥಾಪನೆ, ಭಾರತಕ್ಕೆ ಆಗಮನ

1605–ಪೋರ್ಚುಗೀಸ್ ಹಿಡಿತದಿಂದ ಅಂಬೊಯ್ನ ವಶ

1619–ಜಾವಾ ವಶ

1639–ಗೋವಾವನ್ನು ಸುತ್ತುಗಟ್ಟಿದರು

1641–ಮಲಕ್ಕಾ ವಶ

1658–ಶ್ರೀಲಂಕಾದಲ್ಲಿನ ಪೋರ್ಚುಗೀಸರ ವಸಾಹತು ವಶ

1759–ಇಲ್ಲಿಯವರೆಗೂ ಡಚ್ ಹಾಗೂ ಇಂಗ್ಲಿಷರ ಮಧ್ಯ ವಾಣಿಜ್ಯ ಪೈಪೋಟಿ ನಡೆಯಿತು

**ಪ್ರಮುಖ ಡಚ್ ವಸಾಹತುಗಳು:**

ಮಚಲಿಪಟ್ಟನ,ಸೂರತ್, ಮಲಿಕಾಟ್, ಕಾರೈಕಲ್, ಪಾಟ್ನ,ನಾಗಪಟ್ಟಣಂ, ಬಾಲ್‌ಸೂರ್, ಬೆನ್ಸುರ್, ಕಾಸಿಂಬಜಾರ್, ಬಿಮಲಿಪಟ್ಟಣ, ಕೊಚ್ಚಿನ್,

**ಇಂಗ್ಲಿಷ್‌ರ ಆಗಮನ:**

1599–ವರ್ತಕ ಜಾನ್ ಮಿಲ್ಡೆನ್‌ಹಾಲ್ ಮೆಡಿಟರೆನಿಯನ್ ಸಮುದ್ರದ ಮೂಲಕ ಭಾರತಕ್ಕೆ

1600–ಡಿಸೆಂಬರ್ 31ರಂದು ಇಂಗ್ಲೆಂಡ್‌ನ ವಾಣಿಜ್ಯ ಬೆಳವಣಿಗೆಗೆ ಒತ್ತು ಕೊಟ್ಟು, ಈಸ್ಟ್ ಇಂಡಿಯಾ ಕಂಪನಿ ವಾಣಿಜ್ಯ ಸ್ವಾಮ್ಯ ಪಡಿಯುವ ಸನ್ನದನ್ನು ರಾಣಿ ಎಲಿಜಬೆತ್‌ಳಿಂದ ಪಡೆಯಿತು.

1609–1611: ಇಂಗ್ಲೆಂಡ್ ರಾಜ ಒಂದನೇ ಜೇಮ್ಸ್ ಕಳುಹಿಸಿದ ವಿಲಿಯಂ ಹಾಕಿನ್ಸ್ ಜಹಾಂಗೀರ್ ಆಸ್ಥಾನದಲ್ಲಿ ರಾಯಭಾರಿ.

1612–ಸೂರತ್ ಸಮುದ್ರದಲ್ಲಿ ಪೋರ್ಚುಗೀಸರಿಗೆ ಈಸ್ಟ್ ಇಂಡಿಆ ಕಂಪನಿಯಿಂದ ಸೋಲು

1613–ಸೂರತ್‌ನಲ್ಲಿ ಕಂಪನಿಯ ವಸಾಹತು

1626–ಆರ್ಮಗಾಂವ್‌ನಲ್ಲಿ ವಸಾಹತು

1632–ಗೋಲ್ಕೊಂಡದಲ್ಲಿ ವ್ಯಾಪರ ಅನುಮತಿ

1639–ಮದ್ರಾಸ್‌ನಲ್ಲಿ ಸೈಂಟ್ ಜಾರ್ಜ್ ಕೋಟೆ ಕಟ್ಟಲು ಚಂದ್ರಗಿರಿ ರಾಜನಿಂದ ಅನುಮತಿ, ಕೋರಮಂಡಲ ತೀರದಲ್ಲಿ ಸೈಂಟ್ ಜಾರ್ಜ್ ಕೋಟೆ, ಮಚಲಿಪಟ್ಟಣಂ ಬದಲಾಗಿ ಕಂಪನಿಯ ಕೇಂದ್ರವಾಗಿ ಸ್ಥಾಪನೆ

1668–ಪೋರ್ಚುಗೀಸ್‌ರವರು ಎರಡನೆ ಚಾರ್ಲ್ಸ್‌ಗೆ 'ಕಾಣಿಕೆ'ಯಾಗಿ ಕೊಟ್ಟಿದ್ದ ಬಾಂಬೆ ಕಂಪನಿಗೆ

1687–ಪಶ್ಚಿಮ ಕರಾವಳಿಯಲ್ಲಿ ಕೇಂದ್ರವಾಗಿ ಬಾಂಬೆ

1690–ಸುತಾನತಿಯಲ್ಲಿ ಜಾಬ್ ಚಾರ್ನಾಕ್‌ನಿಂದ ವಸಾಹತು

1696–ಸುತಾನತಿ ಹಾಗೂ ಕಾಲಿಕಟ್ ಪ್ರದೇಶಗಳು ಸೇರಿ **ಕಲ್ಕತ್ತ ನಗರದ ಉಗಮ**, ಸೈಂಟ್ ವಿಲಿಯಂ ಕೋಟೆ ನಿರ್ಮಾಣ

1707–ಭಾರತದಲ್ಲಿ ಕಂಪನಿ ವಿವಿಧೆಡೆ ಸ್ಥಾಪಿಸಿದ್ದ ವಸಾಹತುಗಳೆಲ್ಲ 'ಇಂಗ್ಲೆಂಡ್ ವರ್ತಕರ ಸಂಯುಕ್ತ ಸಂಘದ ಹೆಸರಿನಲ್ಲಿ ಒಂದಾದವು. ಇದೇ ಮುಂದೆ ಭಾರತದಲ್ಲಿ ಬ್ರಿಟಿಷ್ ಸಾಮ್ರಾಜ್ಯ ಸ್ಥಾಪಿಸುತ್ತದೆ.

1717–ಫಾರೂಕ್ ಸಿಯಾರ್‌ನಿಂದ ಕಂಪನಿಯ ಜಾನ್ ಸುರ್ಮನ್‌ಗೆ ವಿವಿಧ ರಿಯಾಯತಿಗಳ 'ಫರ್ಮಾನ್' ಈ ಫರ್ಮಾನ್ ಕಂಪನಿಯ 'ಮ್ಯಾಗ್ನ–ಕಾರ್ಟಾ' ಎಂದು ಖ್ಯಾತಿ ಪಡೆದಿದೆ.

**ಫ್ರೆಂಚರ ಆಗಮನ**

1664–ರಾಜ 14ನೇ ಲೂಯಿಯ ಮಂತ್ರಿ ಕೊಲ್ಬರ್ಟ್ ಸಲಹೆಯಂತೆ ವಾಣಿಜ್ಯ ಉದೇಶಕ್ಕಾಗಿ compagnic des Indies Orientales- ಫ್ರೆಂಚ್ ಕಂಪನಿ ಸ್ಥಾಪನೆ

1668–ಸೂರತ್, ಮಚಲಿಪಟ್ಟಣಗಳಲ್ಲಿ ಫ್ರೆಂಚ್ ವಸಾಹತುಗಳು

1673–ಪಾಂಡಿಚೇರಿ ಸ್ಥಾಪನೆ

1690–ಚಂದರ್‌ನಗರದಲ್ಲಿ ವಸಾಹತು

**ಇತರ ಯುರೋಪ್ ದೇಶಗಳಿಂದ**

1616–ಡ್ಯಾನಿಷ್ ಕಂಪನಿ (ಡೆಸ್ಮಾರ್ಕ್) ಆಗಮನ

1620–ಟ್ರಾಂ ಕ್ವೆಬಾರ್‌ನಲ್ಲಿ ವಸಾಹತು

1775–ಸಿರಾಮ್‌ಪುರ್‌ನಲ್ಲಿ ವಸಾಹತು

1845–ತಮ್ಮ ವಸಾಹತುಗಳನ್ನು ಡೇನ್‌ರು ಇಂಗ್ಲಿಷ್‌ರಿಗೆ ಮಾರಿದರು

1722–ಫ್ಲ್ಯಾಂಡರ್ಸ್‌ನ ವರ್ತಕರು

1731–ಸ್ವೀಡಿಶ್ ಈಸ್ಟ್ ಇಂಡಿಯಾ ಕಂಪನಿ

## ಬ್ರಿಟಿಷ್‌ರ ವಿಸ್ತಾರ ಹಾಗೂ ಪ್ರಾಬಲ್ಯ

**ಕರ್ನಾಟಿಕ್ (Carnatic) ಯುದ್ಧಗಳು**

**ಮೊದಲನೆಯದು:1744–48**

ಫ್ರೆಂಚರು (ಡೂಪ್ಲೆ ನೇತೃತ್ವ) ಬ್ರಿಟಿಷ್ ಕಂಪನಿಗಳು Vs (ಬಾರ್ನೆಟ್ ನೇತೃತ್ವ)

(ಯೂರೋಪ್‌ನಲ್ಲಿ ನಡೆದ ಆಸ್ಟ್ರಿಯಾ ಯುದ್ಧದಲ್ಲಿ ಫ್ರಾನ್ಸ್ ಹಾಗೂ ಇಂಗ್ಲೆಂಡ್ ವಿರುದ್ಧ ಗುಂಪುಗಳಲ್ಲಿದ್ದವು. ಈ ಕಾರಣಕ್ಕೆ ಭಾರತದಲ್ಲೂ ಈ ಎರಡು ಕಂಪನಿಗಳೂ ಯುದ್ಧಕಿಳಿದವು)

**ಪರಿಣಾಮ:**

ಡೂಪ್ಲೆಯಿಂದ ಮದ್ರಾಸ್‌ಕೋಟೆ ವಶ, ಪಾಂಡಿಚೇರಿಯ ಸೈಂಟ್ ಡೇವಿಸ್ ಕೋಟೆಯತ್ತ ದಾಳಿ

1748–ಏಕ್ಸ್–ಲಾ–ಚಾಪೆಲ್ ಒಪ್ಪಂದ, ಮದ್ರಾಸ್ ಮರಳಿ ಬ್ರಿಟಿಷ್ ಕಂಪನಿಗೆ, ಫ್ರೆಂಚರಿಗೆ ಲೂಯಿಬರ್ಗ್

**ಎರಡನೆಯದು : 1745–543**

ಇಂಗ್ಲಿಷರನ್ನು ಸೋಲಿಸಿ ಡೂಪ್ಲೆಯಿಂದ ಹೈದರಾಬಾದ್ ನಿಜಾಮನಾಗಿ ಸಲಾಬತ್ ಜಂಗ್ ಹಾಗೂ ಕರ್ನಾಟಕ್ ನವಾಬನಾಗಿ ಚಾಂದ ಸಾಹೇಬ್.

1751 ರಾಬರ್ಟ್ ಕ್ಲೈವ್ ನೇತೃತ್ವದ ಕಂಪನಿ ತಿರುಚಿನಾಪಳ್ಳಿಯಲ್ಲಿ ಚಾಂದ್ ಸಾಹೇಬ್‌ನನ್ನು ಸೋಲಿಸಿ. ಮಹ್ಮದ್ ಅಲಿಯನನು ಕರ್ನಾಟಕ್ ನವಾಬನನ್ನಾಗಿ ಮಾಡಿತು.

1754ರಲ್ಲ ಡೂಪ್ಲೆ ಸ್ಥಾನದಲ್ಲಿ ನೇಮಕವಾಗಿ ಬಂದಿದ್ದ ಗೊಡ್ಡೆಯುನಿಂದ ರಾಬರ್ಟ್ ಕ್ಲೈವ್ ಜೊತೆ ಪಾಂಡಿಚೇರಿಒಪ್ಪಂದ (1755), ಇಂಗ್ಲಿಷರ ಪ್ರಾಬಲ್ಯ

**ಮೂರನೆಯದು(1758–1763)**

ಯೂರೋಪ್‌ನಲ್ಲಿ ಮತ್ತೆ ಫ್ರಾನ್ಸ್ ಹಾಗೂ ಇಂಗ್ಲೆಂಡ್‌ಗಳ ಮಧ್ಯ ಯುದ್ಧ ('ಏಳು ವರ್ಷಗಳ ಯುದ್ಧ') ಇದು ಭಾರತದಲ್ಲಿ ಫ್ರೆಂಚ್ ಹಾಗೂ ಇಂಗ್ಲಿಷ್ ಕಂಪನಿಗಳ ಮಧ್ಯ ಮತ್ತೆ ಯುದ್ಧಕ್ಕೆ ಕಾರಣವಾಯಿತು.

ಇಂಗ್ಲಿಷರಿಂದ ಪಾಂಡಿಚೇರಿ ವಶ. ಇದು ಭಾರತದಲ್ಲಿ ಫ್ರೆಂಚ್ ಶಕ್ತಿಯನ್ನು ಅಡಗಿಸಿತು. 1763ರ 'ಪ್ಯಾರಿಸ್ ಒಪ್ಪಂದ'ದಂತೆ ಬ್ರಿಟಿಷರು ಫ್ರೆಂಚ್ ಕಂಪನಿಗೆ ಪಾಂಡಿಚೇರಿ, ಇತರ ಫ್ರೆಂಚ್ ವಸಹತುಗಳನ್ನು ಮರಳಿಸಿದರೂ, ಫ್ರೆಂಚರು ಮುಂದೆ ಒಂದು ಶಕ್ತಿಯಾಗಿ ಬೆಳೆಯಲಿಲ್ಲ.

**ಪ್ಲಾಸಿ ಕದನ 1757, ಜೂನ್ 23**

1714ರಲ್ಲಿ ಬಂಗಾಳದ ರಾಜ್ಯಪಾಲ ಅಲಿವರ್ದಿ ಖಾನ್‌ನಿಂದ ತಾನು ಸ್ವತಂತ್ರ ಆಡಳಿತಗಾರನಾಗಿ ಘೋಷಣೆ, ಮುರ್ಶಿದಾಬಾದ್ ರಾಜಧಾನಿ.

1756ರಲ್ಲಿ ಅಲಿವರ್ದಿ ಖಾನ್‌ನ ಮೊಮ್ಮಗ ಸಿರಾಜ್-ಉದ್-ದೌಲ್ (ಮಿರ್ಜಾ ಮೊಹ್ಮದ್ ) ಪಟ್ಟಕ್ಕೆ.1756 ಜೂನ್ 16ರಂದು ಸಿರಾಜ್-ಉದ್-ದೌಲಾನಿಂದ ಬ್ರಿಟಿಷರ ಫೋರ್ಟ್ ವಿಲಿಯಂ ವಶ. 143 ಬ್ರಿಟಿಷರ ಬಂಧನ. ('ಬ್ಲ್ಯಾಕ್ ಹೋಲ್ ದುರಂತ'ದಲ್ಲಿ 123 ಜನರ ಸಾವು)

- ರಾಬರ್ಟ್ ಕ್ಲೈವ್ ನೇತೃತ್ವದಲ್ಲಿ ಬ್ರಿಟಿಷ್ ಪಡೆ ಸಿರಾಜ್-ಉದ್-ದೌಲಾನನ್ನು ಸೋಲಿಸಲು ಮದ್ರಾಸ್‌ನಿಂದ ಆಗಮನ. ಮೀರ್ ಜಾಫರ್ ಜೊತೆ ಸೇರಿ ಸಂಚು,
- 1757ರ ಜೂನ್ 23ರಂದು ಪ್ಲಾಸಿಯಲ್ಲಿ ಕದನ, ಸಿರಾಜ್-ಉದ್-ದೌಲನ ಬಂಧನ, ಬಂಗಾಳದ ನವಾಬನಾಗಿ ಮೀರ್ ಜಾಫರ್. ಬಕ್ಸಾರ್ ಕದನ 1764, ಅಕ್ಟೋಬರ್ 2
- ಮೀರ್ ಜಾಫರ್‌ಗೂ ಬ್ರಿಟಿಷರಿಗೂ ವೈಮನಸ್ಯ, ಮೀರ್ ಕಾಸಿಮ್ (ಮೀರ್ ಜಾಫರ್‌ನ ಅಳಿಯ)ಗೆ ಬಂಗಾಲದ ನವಾಬ ಪಟ್ಟ
- ಅವಧ್ ನವಾಬ ಶುಜಾ-ಉದ್-ದೌಲಾ ಹಾಗೂ ಮೊಗಲ ದೊರೆ ಎರಡನೆ ಶಾ ಆಲಂರಿಂದ ಮೀರ್ ಕಾಸಿಂಗೆ ಬೆಂಬಲ – ಬಕ್ಸಾರ್‌ನಲ್ಲಿ ಬ್ರಿಟಿಷ್ ವಿರುದ್ಧ ಯುದ್ಧ, ಮೇಜರ್ ಮನ್ರೊ ನೇತೃತ್ವದಲ್ಲಿ ಬ್ರಿಟಿಷ್ ಪಡೆಗೆ ಜಯ
- **ಈ ಯುದ್ಧದ ಪ್ರಾಮುಖ್ಯ** – ಮೊಗಲ ಸಾಮ್ರಾಟ್‌ನಿಗೆ ಬ್ರಿಟಿಷ್‌ರಿಂದ ಸೋಲು, ಇಡೀ ಬಂಗಾಳ (ಬಂಗಾಳ, ಬಿಹಾರ್ ಹಾಗೂ ಒರಿಸ್ಸಾ) ಬ್ರಿಟಿಷರಿಗೆ.

## ಗವರ್ನರ್ ಜನರಲ್‌ಗಳು

**ರಾಬರ್ಟ್ ಕ್ಲೈವ್** (ಕ್ರಿ.ಶ. 1757–1760 ಹಾಗೂ ಕ್ರಿ.ಶ. 1765–1767

- ಈ ಎರಡು ಅವಧಿಗೆ ಬಂಗಾಳದ ಗವರ್ನರ್
- ಬಂಗಾಳದಲ್ಲಿ ದ್ವಿ ಆಡಳಿತ ಪದ್ಧತಿ

**ವಾರ್ನ್ ಹೇಸ್ಟಿಂಗ್ಸ್** (ಕ್ರಿ.ಶ. 1772–1785)

- ಕ್ರಿ.ಶ. 1772–1774ರ ವರೆಗೆ ಬಂಗಾಲದ ಗವರ್ನರ್ ನಂತರ ಬಂಗಾಳದ ಗವರ್ನರ್ ಜನರಲ್
- ಕ್ರಿ.ಶ. 1773ರ ರೆಗ್ಯುಲೇಟಿಂಗ್ ಆಕ್ಟ್
- ಕ್ರಿ.ಶ. 1781ರಲ್ಲಿ ಕಲ್ಕತ್ತದಲ್ಲಿ ಸುಪ್ರಿಂ ಕೋರ್ಟ್ ಸ್ಥಾಪನೆ
- ಕ್ರಿ.ಶ. 1784ರಲ್ಲಿ ಪಿಟ್ಸ್ ಇಂಡಿಯಾ ಆಕ್ಟ್
- ಕ್ರಿ.ಶ. 1774ರಲ್ಲಿ ರೋಹಿಲ್ಲರೊಡನೆ ಯುದ್ಧ
- ಕ್ರಿ.ಶ. 1775–1782ರ ವರೆಗೆ ಮೊದಲನೆ ಮರಾಠ ಯುದ್ಧ, ಸಾಲ್‌ಬಾಯ್ ಒಪ್ಪಂದ
- ಕ್ರಿ.ಶ. 1780–1874ರಲ್ಲಿ ಎರಡನೆ ಮೈಸೂರು ಯುದ್ಧ,
- ಕ್ರಿ.ಶ. 1784ರಲ್ಲಿ ಬಂಗಾಳದಲ್ಲಿ 'ಏಷ್ಯಾಟಿಕ್ ಸೊಸೈಟಿ'

**ಲಾರ್ಡ್‌ಕಾರ್ನ್‌ವಾಲಿಸ್ (ಕ್ರಿ.ಶ್. 14786–1793)**

- ಮೂರನೆ ಮೈಸೂರು ಯುದ್ಧ (ಕ್ರಿ.ಶ. 1790–1792), ಶ್ರೀರಂಗಪಟ್ಟಣ ಒಪ್ಪಂದ.
- ಕ್ರಿ.ಶ. 1793ರಲ್ಲಿ ಖಾಯಂ ಜಮೀನ್ದಾರಿ ಪದ್ಧತಿ
- ನಾಗರಿಕ ಸೇವೆಗಳ ಜಾರಿ
- ಕಂದಾಯ ಆಡಳಿತದಿಂದ ನ್ಯಾಯಾಂಗದ ಬೇರ್ಪಡೆ

**ಸರ್ ಜಾನ್ ಶೋರ್ (ಕ್ರಿ.ಶ. 1793–1798)**

- ಕ್ರಿ.ಶ. 1793ರ ಸನ್ನದು ಶಾಸನ
- ಕಾರ್ಡಾ ಕದನ (ನಿಜಾಂ ಹಾಗೂ ಮರಾಠದ ಮಧ್ಯ)

**ಲಾರ್ಡ್‌ವೆಲ್ಲೆಸ್ಲಿ (ಕ್ರಿ.ಶ. 1798–1805)**

- ಕ್ರಿ.ಶ. 1798ರಲ್ಲಿ ಸಹಾಯಕ ಸೈನ್ಯ ಪದ್ಧತಿ ಜಾರಿ
- ಹೈದರಾಬಾದ್ ನಿಜಾಂನೊಂದಿಗೆ ಮೊದಲ ಸ್ನೇಹ
- ನಾಲ್ಕನೆ ಮೈಸೂರು ಯುದ್ಧ (ಕ್ರಿ.ಶ. 1799)
- ಎರಡನೆ ಮರಾಠ ಯುದ್ಧ (ಕ್ರಿ.ಶ. 1803–1805)
- ತಂಜಾವೂರ್, ಸೂರತ್ ಹಾಗೂ ಕರ್ನಾಟಕಗಳಲ್ಲಿ ಆಡಳಿತ ಸ್ಥಾಪನೆ
- ಬೇಸಿನ್ ಒಪ್ಪಂದ (ಕ್ರಿ.ಶ. 1802)

**ಸರ್ ಜಾರ್ಜ್ ಬಾರ್ಲೋ (ಕ್ರಿ.ಶ. 1805–1807)**

- ವೆಲ್ಲೂರು ದಂಗೆ

**ಲಾರ್ಡ್ ಒಂದನೆ ಮಿಂಟೊ (ಕ್ರಿ.ಶ. 1807–1813)**

- ರಣಜಿತ್ ಸಿಂಗ್ ಜೊತೆ ಅಮೃತಸರ್ ಒಪ್ಪಂದ (ಕ್ರಿ.ಶ. 1809)

**ಲಾರ್ಡ್ ಹೇಸ್ಟಿಂಗ್ಸ್ (ಕ್ರಿ.ಶ. 1813–1819)**

- ಆಂಗ್ಲೋ–ನೇಪಾಳ್ ಯುದ್ಧ (ಕ್ರಿ.ಶ. 1814–1816), ಸಗೋಲಿ ಒಪ್ಪಂದ
- ಮೂರನೆ ಮರಾಠ ಯುದ್ಧ (ಕ್ರಿ.ಶ. 1817–1819)
- ಬಾಂಬೆ ಪ್ರೆಸಿಡೆನ್ಸಿ ಸ್ಥಾಪನೆ (ಕ್ರಿ.ಶ. 1818)
- ಪಿಂಡಾರಿ ದಮನ (ಕ್ರಿ.ಶ. 1817–1818)
- ಸಿಧ್ಯಾ ಜೊತೆ ಒಪ್ಪಂದ (ಕ್ರಿ.ಶ. 1817)
- ಮೆದ್ರಾಸ್ ಪ್ರಾಂತ್ಯದಲ್ಲಿ ರೈತವಾರಿ ಪದ್ಧತಿ (ಕ್ರಿ.ಶ. 1820)

**ಲಾರ್ಡ್ ಅಮೆರೆಸ್ಟ್**(ಕ್ರಿ.ಶ. 1823–1828)

- ಮೊದಲನೆ ಬರ್ಮ ಯುದ್ಧ (ಕ್ರಿ.ಶ. 1824–1826). ಭರತ್‌ಪುರ್ ವಶ

**ಲಾರ್ಡ್ ವಿಲಿಯಮ್ ಬೆಂಟಿಕ್ (ಕ್ರಿ.ಶ. 1828–1835)**

- ಸತಿ ಪದ್ಧತಿ ರದ್ದತಿ (ಕ್ರಿ.ಶ. 1829)
- ಆರ್ಥಿಕ ಸ್ಥಿತಿ ಸುಧಾರಿಸಲು ತಾಜ್‌ಮಹಲ್ ಹರಾಜಿಗೆ ನಿರ್ಧಾರ
- ತುಗ್ಗಿಗಳ ದಮನ (ಕ್ರಿ.ಶ. 1830)
- ಕ್ರಿ.ಶ. 1833ರ ಸನ್ನದು ಶಾಸನ
- ಮೈಸೂರು ವಶ (ಕ್ರಿ.ಶ 1831)
- ಪ್ರಾಂತೀಯ ನ್ಯಾಯಾಲಯಗಳ ರದ್ದತಿ, ಕಂದಾಯ ಆಯುಕ್ತರ ನೇಮಕ

**ಲಾರ್ಡ್ ಮೆಕಾಫೇ (ಕ್ರಿ.ಶ. 1835–1842)**

- ಮೊದಲ ಅಫ್ಘನ್ ಯುದ್ಧ (ಕ್ರಿ.ಶ 1838–1844)
- ರಿಣ್‌ಜೀತ್ ಸಿಂಗ್ ಸಾವು (ಕ್ರಿ.ಶ. 1844–1848)

**ಒಂದನೆ ಹಾರ್ಡಿಂಜ್ (ಕ್ರಿ.ಶ. 1844–1848)**

- ಮೊದಲ ಅಂಗ್ಲೋ–ಸಿಖ್ ಯುದ್ಧ (ಕ್ರಿ.ಶ. 1845–1846), ಲಾಹೋರ್ ಒಪ್ಪಂದ
- ಹೆಣ್ಣು ಶಿಶು ಹತ್ಯೆ ನಿರ್ಬಂಧ

**ಲಾರ್ಡ್ ಡಾಲ್‌ಹೌಸಿ (ಕ್ರಿ.ಶ. 1848–1856)**

- ಎರಡನೆ ಆಂಗ್ಲೊ ಸಿಖ್ ಯುದ್ಧ (ಕ್ರಿ.ಶ. 1849), ಪಂಜಾಬ್ ವಶ
- ಪೆಗು ವಶ (ಕ್ರಿ.ಶ. 1852)

- 'ದತ್ತು ಮಕ್ಕಳಿಗೆ ಹಕ್ಕಿಲ್ಲ' ಎಂದು ಕ್ರಿ.ಶ. 1848ರಲ್ಲಿ ಸಾತಾರ್, ಕ್ರಿ.ಶ 1849ರಲ್ಲಿ ಜೈಪುರ್ ಹಾಗೂ ಸಂಬಲ್‌ಪುರ, ಕ್ರಿ.ಶ. 1852ರಲ್ಲಿ ಉದಯ್‌ಪುರ್ ಕ್ರಿ.ಶ. 1853ರಲ್ಲ ಝಾನ್ಸಿ, ಕ್ರಿ.ಶ. 1854ರಲ್ಲಿ ನಾಗ್ಪುರ್, ಹಾಗೂ ಕ್ರಿ.ಶ. 1856ರಲ್ಲಿ ಅವಧ್‌ಗಳ ವಶ.
- ಕ್ರಿ.ಶ. 1858ರಲ್ಲಿ ವುಡ್ಸ್ ಶೈಕ್ಷಣಿಕ ಶಿಫಾರಸ್ಸುಗಳನ್ನಾಧರಿಸಿ ಆಂಗ್ಲೋ ವರ್ನಾಕುಲರ್ ಶಾಲೆಗಳ ಹಾಗೂ ಸರ್ಕಾರಿ ಕಾಲೇಜುಗಳ ಸ್ಥಾಪನೆ.
- ಕ್ರಿ.ಶ. 1853ರಲ್ಲಿ ಬಾಂಬೆ ಹಾಗೂ ಠಾಣೆಗಳ ಮಧ್ಯೆ ಮೊದಲ ರೈಲು
- ಕಲ್ಕತ್ತ – ಬಾಂಬೆ ಹಾಗೂ ಮದ್ರಾಸ್–ಪೇಶಾವರ್‌ಗಳ ಮಧ್ಯ ದೂರವಾನಿ ಸಂಪರ್ಕ, ಕ್ರಿ.ಶ 1854ರಲ್ಲಿ ಅಂಚೆ ವ್ಯವಸ್ಥೆ ಸುಧಾರಣೆ
- ವಿಧವಾ ವಿವಾಹ ಕಾಯ್ದೆ 1856, ಜಾರಿ
- **ಲಾರ್ಡ್ ಕ್ಯಾನಿಂಗ್ (ಕ್ರಿ.ಶ. 1856–57)**
- ಕ್ರಿ.ಶ. 1857ರಲ್ಲಿ ಕಲ್ಕತ್ತ, ಮದ್ರಾಸ್ ಹಾಗೂ ಮುಂಬೈಗಳಲ್ಲಿ ವಿಶ್ವವಿದ್ಯಾಲಯಗಳ ಸ್ಥಾಪನೆ. ಕ್ರಿ.ಶ. 1857ರಸಿಪಾಯಿದಂಗೆ

## ವೈಸ್‌ರಾಯ್‌ಗಳು

**ಲಾರ್ಡ್ ಕ್ಯಾನಿಂಗ್** (ಕ್ರಿ.ಶ 1858–1863)

- ಕ್ರಿ.ಶ. 1858ರ ಭಾರತದ ಸರ್ಕಾರ ಕಾಯಿದೆ ಮೂಲಕ ಈಸ್ಟ್ ಇಂಡಿಯಾ ಕಂಪನಿಯಿಂದ ಬ್ರಿಟಿಷ್ ಕ್ರೌನ್‌ಗೆ ಭಾರತದ ಆಡಳಿತ ಹಸ್ತಾಂತರ
- ಕ್ರಿ.ಶ 1861ರ ಇಂಡಿಯನ್ ಕೌನ್ಸಿಲ್ ಆ್ಯಕ್ಟ್

**ಲಾರ್ಡ್‌ಎಲ್ಗಿನ್** (ಕ್ರಿ.ಶ. 1862–1863)

- ವಹಾಬಿಗಳ ದಂಗೆ, ನಿರ್ಮೂಲನ

**ಲಾರ್ಡ್ ಜಾನ್ ಲಾರೆನ್ಸ್**(ಕ್ರಿ.ಶ. 1864–1869)

- ಭೂತಾನ್ ಯುದ್ಧ
- ಕಲ್ಕತ್ತ, ಮುಂಬೈ, ಮದ್ರಾಸ್‌ಗಳಲ್ಲಿ ಹೈಕೋರ್ಟ್ ಸ್ಥಾಪನೆ
- ಕ್ರಿ.ಶ 1866ರಲ್ಲಿ ಒರಿಸ್ಸಾದಲಲಿ ಭೀಕರ ಬರಗಾಲ

**ಲಾರ್ಡ್ ಮೇಯೊ** (ಕ್ರಿ.ಶ. 1869–1872)

- ಸ್ಟಾಟಿಸ್ಟಿಕಲ್ ಸರ್ವೆ ಆಫ್ ಇಂಡಿಯಾ ಸ್ಥಾಪನೆ.
- **ಕ್ರಿ.ಶ 1871ರಲ್ಲಿ ಮೊಟ್ಟ ಮೊದಲ ಜನಗಣತಿ**
- ರಾಜ್ಯಗಳಲ್ಲಿ ರೈಲುಗಳು
- ಕೃಷಿ ಹಾಗೂ ವಾಣಿಜ್ಯ ಇಲಾಖೆಗಳ ಸ್ಥಾಪನೆ

**ಲಾರ್ಡ್ ನಾರ್ಥ್ ಬ್ರೂಕ್** (ಕ್ರಿ.ಶ. 1872–1876)

- ವೇಲ್ಸ್ ರಾಜಕುಮಾರನ ಭಾರತ ಭೇಟಿ, ಕ್ರಿ.ಶ. 1875
- ಪಂಜಾಬಿನಲ್ಲಿ ಕೂಕಾ ಚಳುವಳಿ

**ಲಾರ್ಡ್ ಲಿಟ್ಟನ್** (ಕ್ರಿ.ಶ. 1876–1880)

- ಮದ್ರಾಸ್, ಬಾಂಬೆ, ಮೈಸೂರು, ಹೈದರಾಬಾದ್ ಹಾಗೂ ದಕ್ಷಿಣ ಮಧ್ಯ ಭಾರತ, ಪಂಜಾಬ್‌ಗಳಲ್ಲಿ ಬರಗಾಲ (ಕ್ರಿ.ಶ. 1876–1878)
- ರಿಚರ್ಡ್ ಸ್ಟ್ರಾಶ್ ಅಧ್ಯಕ್ಷತೆಯಲ್ಲಿ ಕ್ಷಾಮ ಆಯೋಗದ ನೇಮಕ (ಕ್ರಿ.ಶ. 1878)
- ವಿಕ್ಟೋರಿಯಾ ರಾಣಿಗೆ ಕೈಸರ್–ಐ–ಹಿಂದ್ (ಭಾರತದ ಸಾಮ್ರಾಜ್ಯ) ಬಿರುದು (ಕ್ರಿ.ಶ. 1876)
- ವರ್ನಾಕುಲರ್ ಪ್ರೆಸ್ ಆ್ಯಕ್ಟ್ ಮೂಲಕ ದೇಶಿ ಭಾಷಾ ಪತ್ರಿಕೆಗಳ ಮೇಲೆ ನಿರ್ಬಂಧ (ಕ್ರಿ.ಶ. 1878)
- ಅರ್ಮ್ಸ್ ಆ್ಯಕ್ಟ್ (ಶಾಸ್ತ್ರಾಸ್ತ್ರಗಳ ಕಾಯಿದೆ) 1878
- ಎರಡನೆ ಅಫ್ಘನ್ ಯುದ್ಧ (ಕ್ರಿ.ಶ. 1878–1880)

**ಲಾರ್ಡ್ ರಿಪ್ಪನ್** (ಕ್ರಿ.ಸ. 1880–1884)

- ವರ್ನಾಕುಲರ್ ಪ್ರೆಸ್ ಆ್ಯಕ್ಟ್ ರದ್ದು (ಕ್ರಿ.ಸ. 1882)

- ಮೊದಲ ಗಿರಣಿ ಕಾಯಿದೆ (ಕ್ರಿ.ಶ 1881)
- ಮೈಸೂರು ಒಡೆಯರಿಗೆ ರಾಜ್ಯಾಡಳಿತದ ಹಸ್ತಾಂತರ (ಕ್ರಿ.ಶ. 1881
- ಆಡಳಿತ ವಿಕೇಂದ್ರೀಕರಣ ಹಾಗು ಸ್ಥಳೀಯ ಸಂಸ್ಥೆಗಳಿಗೆ ಪ್ರೋತ್ಸಾಹ (ಕ್ರಿ.ಶ. 1882)
- ಸರ್ ವಿಲಿಯಂ ಹಂಟರ್ ಅಧ್ಯಕ್ಷತೆಯಲ್ಲಿ ಶಿಕ್ಷನ ಆಯೋಗದ ನೇಮಕ (ಕ್ರಿ.ಶ. 1882)
- ಇಲ್ಬರ್ಟ್ ಮಸೂದೆ ವಿವಾದ (ಕ್ರಿ.ಶ. 1883–1884)

**ಲಾರ್ಡ್ ಡ್ಯುಫರಿನ್** (ಕ್ರಿ.ಶ. 1884–1888)

- ಮೂರನೆ ಬರ್ಮಾ ಯುದ್ಧ (ಕ್ರಿ.ಶ. 1885–86)
- ಭಾರತ ರಾಷ್ಟ್ರೀಯ ಕಾಂಗ್ರೆಸ್ ಸ್ಥಾಪನೆ (ಕ್ರಿ.ಶ. 1885)

**ಲಾರ್ಡ್ ಲಾನ್ಸ್ ಡೌನ್** (ಕ್ರಿ.ಶ. 1888–1894)

- ಗಿರಿಣಿ ಕಾಯಿದೆ 1891
- ಇಂಡಿಯನ್ ಕೌನ್ಸಿಲ್ಸ್ ಆ್ಯಕ್ಟ್ 1882
- ಡ್ಯಾರಾಂಡ್ ಆಯೋಗದ ನೇಮಕ, ಭಾರತ ಅಫ್ಘಾನಿಸ್ತಾನ್‌ಗಳ ಮಧ್ಯ ಸರಹದ್ದು (ಕ್ರಿ.ಶ. 1893), (ಡ್ಯೂರಾಂಡ್) ಸರಹದ್ದು ಈಗ ಪಾಕಿಸ್ತಾನ ಮತ್ತು ಅಫ್ಘಾನಿಸ್ತಾನಗಳ ಮಧ್ಯ ಇದೆ)
- ಲಂಡನ್ನಿನಲ್ಲೇ ನಡೆಯುತ್ತಿದ್ದ ನಾಗರಿಕ ಸೇವಾ ಪರೀಕ್ಷೆಗಳಿಗೆ ಭಾರತೀಯರಿಗೂ ಪ್ರವೇಶ

**ಲಾರ್ಡ್ ಎರಡನೆ ಎಲ್ಗಿನ್** (ಕ್ರಿ.ಶ. 1894–1899)

- ಛಾಪೇಕರ್ ಸಹೋದರರಿಂದ ಇಬ್ಬರು ಬ್ರಿಟಿಷ್ ಅಧಿಕಾರಿಗಳ ಹತ್ಯೆ (ಕ್ರಿ.ಶ. 1897)

**ಲಾರ್ಡ್ ಕರ್ಜ್‌ನ್** (ಕ್ರಿ.ಶ. 1899–1905)

- ಪೊಲೀಸ್ ಆಯೋಗದ ನೇಮಕ (ಕ್ರಿ.ಶ. 1902), ಸರ್ ಆಂಡ್ರೂ ಫ್ರೇಸರ್ ಅಧ್ಯಕ್ಷತೆಯಲ್ಲಿ
- ವಿಶ್ವವಿದ್ಯಾಲಯಗಳ ಆಯೋಗದ ನೇಮಕ (ಕ್ರಿ.ಶ. 1902), ಭಾರತ ವಿಶ್ವವಿದ್ಯಾಲಯಗಳ ಕಾಯ್ದೆ (ಕ್ರಿ.ಶ. 1904)
- ಬಂಗಾಳದ ವಿಭಜನೆ (ಕ್ರಿ.ಶ. 1905)
- ಕರ್ಜನ್–ಕಿಚ್‌ನರ್ ವಿವಾದ

**ಲಾರ್ಡ್ ಎರಡನೆ ಮೊಂಟೊ** (1905–1910)

- ಸ್ವದೇಶಿ ಚಳುವಳಿ
- ಕ್ರಿ.ಶ. 1907ರ ಸೂರತ್ ಅಧಿವೇಶನದಲ್ಲಿ ಕಾಂಗ್ರೆಸ್ ವಿಭಜನೆ
- ಕ್ರಿ.ಶ. 1906ರಲ್ಲಿ ಆಗಾ ಖಾನ್‌ನಿಂದ ಮುಸ್ಲಿಂ ಲೀಗ್ ಸ್ಥಾಪನೆ

**ಲಾರ್ಡ್ ಎರಡನೆ ಹಾರ್ಡಿಂಜ್** (ಕ್ರಿ.ಶ. 1910–1916)

- ಕ್ರಿ.ಶ. 1911ರಲ್ಲಿ ಬಂಗಾಳ ಪ್ರೆಸಿಡೆನ್ಸಿ ಸ್ಥಾಪನೆ
- ಕಲ್ಕತ್ತಾದಿಂದ ದೆಹಲಿಗೆ ರಾಜಧಾನಿ ವರ್ಗಾವಣೆ (ಕ್ರಿ.ಶ. 1911)
- ಮದನ್ ಮೋಹನ ಮಾಳವೀಯರಿಂದ ಹಿಂದೂ ಮಹಾಸಭಾ ಸ್ಥಾಪನೆ (ಕ್ರಿ.ಶ. 1915)
- ದೆಹಲಿಯಲ್ಲಿ ಇಂಗ್ಲೆಂಡ್ ರಾಜ 5ನೇ ಜಾರ್ಜ್‌ನ ದರ್ಬಾರ್ (ಕ್ರಿ.ಶ 1911)

**ಲಾರ್ಡ್ ಚೆಲ್ಮ್ಸ್ ಫೋರ್ಡ್** (ಕ್ರಿ.ಶ. 1916–1921)

- ಅನಿಬೆಸೆಂಟ್ ಮತ್ತು ತಿಲಕ್‌ನಿಂದ ಹೋಂರೂಲ್ ಚಳವಳಿ (ಕ್ರಿ.ಶ 1916)
- ಮುಸ್ಲಿಂ ಲೀಗ್ ಹಾಗೂ ಕಾಂಗ್ರೆಸ್ ಮಧ್ಯೆ ಲಕ್ನೊ ಒಪ್ಪಂದ (ಕ್ರಿ.ಸ 1916)
- ಗಾಂಧೀಜಿಯಿಂದ ಸಾಬರಮತಿ ಆಶ್ರಮ ಸ್ಥಾಪನೆ (ಕ್ರಿ.ಶ.1916)
- ಗಾಂಧೀಜಿಯಿಂದ ಚಂಪಾರಣ ಸತ್ಯಾಗ್ರಹ (ಕ್ರಿ.ಶ. 1916), ಖೇಡಾ ಸತ್ಯಾಗ್ರಹ
- ಮಾಂಟಗೂನಿಂದ ಆಗಸ್ಟ್ ಘೋಷಣೆ (ಕ್ರಿ.ಶ. 1917)
- ಭಾರತ ಸರ್ಕಾರದ ಕಾಯಿದೆ 1919, ರೌಲಟ್ ಕಾಯಿದೆ 1919, ಜಲಿಯನ್ ವಾಲಾ ಬಾಗ್ ಹತ್ಯಾಕಾಂಡ (ಕ್ರಿ.ಶ. 1919), ಅಸಹಕಾರ ಹಾಗೂ ಖಿಲಾಫತ್ ಚಳವಳಿ
- ಪೂನಾದಲ್ಲಿ ಮಹಿಳಾ ವಿಶ್ವವಿದ್ಯಾಲಯ ಸ್ಥಾಪನೆ (ಕ್ರಿ.ಶ. 1916)
- ಶೈಕ್ಷಣಿಕ ನೀತಿ ಸುಧಾರಣೆಗೆ ಸ್ಯಾಡ್ಲರ್ ಆಯೋಗದ ನೇಮಕ (ಕ್ರಿ.ಶ. 1917)

- ತಿಲಕ್‌ರ ಮರಣ (ಕ್ರಿ.ಶ. 1920, ಆಗಸ್ಟ್ 1)
- ಮೊದಲ ಭಾರತೀಯಾಗಿ ಎಸ್.ಪಿ. ಸಿನ್ಹಾ ಬಿಹಾರದ ರಾಜ್ಯಪಾಲರು

**ಲಾರ್ಡ್ ರೀಡಿಂಗ್ (ಕ್ರಿ.ಶ. 1921–1926)**

- ಚೌರಿ ಚೌರ ದುರಂತ (ಕ್ರಿ.ಶ. 1922, ಫೆಬ್ರವರಿ 5)
- ಅಸಹಕಾರಿ ಚಳುವಳಿಯ ಹಿಂತೆಗೆತ
- ಕೇರಳದಲ್ಲಿ ಮಾಪೆಲ್ಲಾ ದಂಗೆ
- ರೌಲತ್ ಆ್ಯಕ್ಟ್ ಹಾಗೂ 1910ರ ಪ್ರೆಸ್ ಆ್ಯಕ್ಟ್‌ಗಳ ರದ್ದು
- ಕಾಕೋರಿ ರೈಲು ದರೋಡೆ (ಕ್ರಿ.ಶ. 1925)
- ಚಿತ್ತರಂಜನ್ ದಾಸ್ ಹಾಗೂ ಮೋತಿಲಾಲ್ ನೆಹರೂರಿಂದ ಸ್ವರಾಜ್ ಪಾರ್ಟಿ ಸ್ಥಾಪನದ (ಕ್ರಿ.ಶ. 1922)
- ಭಾರತದಲ್ಲಿ ಕಮ್ಯುನಿಸ್ಟ್ ಪಾರ್ಟಿ ಸ್ಥಾಪನೆ (ಕ್ರಿ.ಶ. 1925)
- ಲಂಡನ್ ಹಾಗೂ ದೆಹಲಿಗಳಲ್ಲಿ ಏಕ ಕಾಲಕ್ಕೆ ಐ.ಸಿ,ಎಸ್ ಪರೀಕ್ಷೆಗಳು (ಕ್ರಿ.ಶ. 1923ರಿಂದ)

**ಲಾರ್ಡ್ ಇರ್ವಿನ್ (ಕ್ರಿ.ಶ. 1926–1931)**

- ಭಾರತಕ್ಕೆ ಸೈಮನ್ ಆಯೋಗ (ಕ್ರಿ.ಶ. 1928)
- ಲಕ್ನೊದಲ್ಲಿ ಸರ್ವಪಕ್ಷಗಳ ಸಭೆ, ಭಾರತದ ಸಂವಿಧನದ ಬಗ್ಗೆ ಭವಿಷ್ಯದ ರೂಪುರೇಷೆಗಳು: ನೆಹರೂ ವರದಿ (ಕ್ರಿ.ಶ. 1928)
- ಕ್ರಿ.ಶ. 1929ರ ಲಾಹೋರ್ ಅಧಿವೇಶಮದಲ್ಲಿ ಕಾಂಗ್ರೆಸ್‌ನಿಂದ ಪೂರ್ಣ ಸ್ವರಾಜ್ಯದ ಘೋಷಣೆ,
- ಸ್ಯಾಂಡರ್ಸ್ ವಧೆ' (ಕ್ರಿ.ಶ. 1927
- ದೆಹಲಿಯ ಅಸೆಂಬ್ಲಿ ಸಭಾಂಗನದಲ್ಲಿ ಬಾಂಬ್ ಸ್ಫೋಟ (ಕ್ರಿ.ಶ. 1929)
- ಕಾನೂನು ಭಾಂಗ ಚಳುವಳಿ, ಗಾಂಧಿಯಿಂದ ದಂಡಿ ಸತ್ಯಾಗ್ರಹ (ಕ್ರಿ.ಶ. 1930, ಮಾರ್ಚ್ 12)
- ಇರ್‌ವಿನ್‌ನಿಂದ ದೀಪಾವಳಿ ಘೋಷಣೆ
- ಮೊದಲನೆ ದುಂಡುಮೇಜಿನ ಪರಿಷತ್ತಿನ ಬಹಿಷ್ಕಾರ (ಕ್ರಿ.ಶ. 1930), ಗಾಂಧಿ ಇರ್ವಿನ್ ಒಪ್ಪಂದ (ಕ್ರಿ.ಶ. 1931), ಕಾನೂನು ಭಾಂಗ ಚಲವಳಿ ಸ್ಥಗಿತ

**ಲಾರ್ಡ್‌ವಿಲ್ಲಿಂಗ್ಟನ್** (ಕ್ರಿ.ಶ. 1931–1936)

- ಎರಡನೆ ದುಂಡು ಮೇಜಿನ ಪರಿಷತ್ತು (ಕ್ರಿ.ಶ. 1931 ವೈಫಲ್ಯ ಕಾನೂನು ಭಂಗ ಚಳುವಳಿಯ ಪುನರ್ ಸ್ಥಾಪನೆ
- ಕಮ್ಯೂನಲ್ ಅವಾಡ್ (1932) ಘೋಷಣೆ
- ಯುರ್ವಾಡಾ ಜೈಲಿನಲ್ಲಿ ಗಾಂಧಿಯಿಂದ ಆಮರಣ ಉಪವಾಸದ ಘೋಷಣೆ, ಪೂನಾ ಒಪ್ಪಂದ (ಕ್ರಿ.ಶ. 1932)
- ಮೂರನೆ ದುಂಡುಮೇಜಿನ ಪರಿಷತ್ತು (ಕ್ರಿ.ಶ. 1932)
- ವೈಯಕ್ತಿಕ ಕಾನೂನು ಭಂಗ ಚಳವಳಿ (ಕ್ರಿ.ಶ. 1933)
- ಭಾರತ ಸರ್ಕಾರದ ಕಾಯಿದೆ 1935
- ಕ್ರಿ.ಶ. 1936ರಲ್ಲಿ ಅಖಿಲ ಭಾರತ ಕಿಸಾನ್ ಸಭೆ ಸ್ಥಾಪನೆ
- ಕ್ರಿ.ಶ. 1934ರಲ್ಲಿ ಕಾಂಗ್ರೆಸ್ ಸಮಾಜವಾದಿ ಪಾರ್ಟಿ ಸ್ಥಾಪನೆ
- ಭಾರತದಿಂದ ಬರ್ಮಾದ ಬೇರ್ಪಡೆ (ಕ್ರಿ.ಶ. 1935)

**ಲಾರ್ಡ್ ಲಿನ್ ಲಿತ್‌ಗೊ (ಕ್ರಿ.ಶ. 1936–1944)**

- ಮೊಟ್ಟಮೊದಲ ಸಾಮಾನ್ಯ ಚುನಾವಣೆಗಳು (ಕ್ರಿ.ಶ. 1936–1937), ಕಾಂಗ್ರೆಸ್‌ಗೆ ಬಹುಮತ
- ಕ್ರಾಂಗ್ರೆಸ್ ಅಧ್ಯಕ್ಷರಾಗಿ ಸುಭಾಸ್ ಚಂದ್ಯ ಬೋಸ್ ಆಯ್ಕೆ (ಕ್ರಿ.ಶ. 1938)
- ಕ್ರಿ.ಶ. 1933ರಲ್ಲಿ ಸುಭಾಷ್ ಚಂದ್ರ ಬೋಸ್‌ರಿಂದ 'ಫಾರ್ವರ್ಡ್ ಬ್ಲಾಕ್' ಸ್ಥಾಪನೆ
- ಕ್ರಿ.ಶ. 1940ರಲ್ಲಿ ವೈಸ್‌ರಾಯ್‌ನಿಂದ 'ಆಗಸ್ಟ್ ಕೊಡುಗೆ'
- ಇಂಗ್ಲೆಂಡ್ ಪ್ರಧಾನಿಯಾಗಿ ವಿನ್‌ಸ್ಟನ್ ಚರ್ಚಿಲ್ ಆಯ್ಕೆ (ಕ್ರಿ.ಶ. 1940)
- ಕ್ರಿ.ಶ. 1941ರಲ್ಲಿ ಸುಭಾಸ್ ಚಂದ್ರ ಬೋಸ್ ಭಾರತದಿಮದ ಪಾರು. ಇಂಡಿಯನ್ ನ್ಯಾಶನಲ್ ಆರ್ಮಿ ಚಟುವಟಿಕೆ
- ಕ್ರಿಪ್ಸ್ ಆಯೋಗ, 1942
- ಕಾಂಗ್ರೆಸ್‌ನಿಂದ ಭಾರತ ಬಿಟ್ಟು ತೊಲಗಿ ಚಳುವಳಿ, ಆಗಸ್ಟ್ ಕ್ರಾಂತಿ, 1942

- ಕ್ರಿ.ಶ. 1944ರ ಕರಾಚಿ ಅಧಿವೇಶನದಲ್ಲಿ ಮುಸ್ಲಿಂ ಲೀಗ್‌ನಿಂದ ಬ್ರಿಟಿಷ್ ವಿರುದ್ಧ 'ವಿಭಜಿಸಿ ಮತ್ತು ತೊಲಗಿ' ಘೋಷಣೆ

**ಲಾರ್ಡ್ ವೇವೆಲ್ (ಕ್ರಿ.ಶ. 1944–1847)**

- ರಾಜ್‌ಗೋಪಾಲಾಚಾರಿ ಸೂತ್ರ (ಕ್ರಿ.ಶ. 1944–1847)
- ವೇವೆಲ್ ಯೋಜನೆ ಹಾಗೂ ಸಿಮ್ಲಾ ಸಮ್ಮೇಳನ (ಕ್ರಿ.ಶ. 1945)
- ಎರಡನೆ ಮಹಾಯುದ್ಧದ ಅಂತ್ಯ (ಕ್ರಿ.ಶ. 1945)
- ಕ್ಯಾಬಿನೆಟ್ ಆಯೋಗದ ಶಿಫಾರಸ್ಸು (ಕ್ರಿ.ಶ. 1946), ಕಾಂಗ್ರೆಸ್ಸಿನಿಂದ ಒಪ್ಪಿಗೆ
- ಕ್ರಿ.ಶ. 1946ರ ಆಗಸ್ಟ್ 16ರಂದು ಮುಸ್ಲಿಂ ಲೀಗ್‌ನಿಂದ 'ನೇರ ಕ್ರಮದ ದಿನದ' ಆಚರಣೆ
- ಸಂವಿಧಾನ ಸಭೆಗೆ ಚುನಾವಣೆ, ಕಾಂಗ್ರೆಸ್ಸಿನಿಂದ ಮಧ್ಯಂತರ ಸರ್ಕಾರದ ರಚನೆ (ಕ್ರಿ.ಶ. 1946, ಸೆಪ್ಟೆಂಬರ್)
- ಬ್ರಿಟಿಷ್ ಪ್ರಧಾನಿ ಕ್ಲೆಮೆಂಟ್ ಅಟ್ಲೆಯಿಂದ ಕ್ರಿ.ಶ. 1947ರ ಫೆಬ್ರವರಿ 20ರಂದು ಭಾರತದಲ್ಲಿ ಬ್ರಿಟಿಷ್ ಆಡಳಿತದ ಅಂತ್ಯ ಘೋಷಣೆ

**ಲಾರ್ಡ್‌ಮೌಂಟ್ ಬ್ಯಾಟನ್** (ಕ್ರಿ.ಶ. 1947–1948)

- ಜೂನ್ 3ರ ಮೌಂಟ್ ಬ್ಯಾಟನ್ ಯೋಜನೆ (ಕ್ರಿ.ಶ. 1947) ಘೋಷಣೆ
- ಭಾರತಕ್ಕೆ ಸ್ವಾತಂತ್ರ್ಯ ಮಸೂದೆ – ಹೌಸ್ ಆಫ್ ಕಾಮನ್ಸ್‌ನಲ್ಲಿ ಮಂಡನೆ
- 1947, ಜುಲೈ 18– ಭಾರತದ ಸ್ವಾತಂತ್ರ್ಯದ ಅಧಿನಿಯಮ
- 1947, ಆಗಸ್ಟ್ 15– ಭಾರತಕ್ಕೆ ಸ್ವಾತಂತ್ರ್ಯ.

## ಕರ್ನಾಟಕದ ಇತಿಹಾಸ

**1. ಪ್ರಾಚೀನ ಕಾಲ**

**ಆದಿ ಶಿಲಾಯುಗದ ನಿವೇಶನಗಳು–**

ತುಮಕೂರಿನ ಕಿಬ್ಬನಹಳ್ಳಿ (ಇಲ್ಲಿ ಕಲ್ಲನ ಕೈ ಕೊಡಲಿ, ಚಕ್ಕೆ ಕಲ್ಲಿನ ಆಯುಧ ಮುಂತಾದವು ದೊರೆತಿವೆ):
ಮಲ್ಲಪ್ರಭಾ ನದಿ ದಂಡೆಯ ಖ್ಯಾತ ಮೆಣಸಿಗೆ: ತುಂಗಭದ್ರಾ ದಂಡೆಯ ಹಂಪಸಾಗರ:
ಬಳ್ಳಾರಿ ಜಿಲ್ಲೆಯ ದಾರೋಜಿ, ಗದಿಗನೂರು, ಹಲಕುಂದಿ:
ಚಿತ್ರದುರ್ಗದ ತಾಳ್ಯ, ಜಾನಕಲ್:
ಶಿವಮೊಗ್ಗದ ನ್ಯಾವತಿ: ಚಿಕ್ಕ ಮಗಳೂರನ ಲಿಂಗದಹಳ್ಳಿ,
ಮೇಲಿನ ಎಲ್ಲ ನಿವೇಶನಗಳೂ ಕ್ರಿ.ಪೂ 2500ರಿಂದ 1500ರ ಕಾಲದವು.

**ನವಶಿಲಾಯುಗದ ನಿವೇಸನಗಳು–**

ಬಳ್ಳಾರಿಯ ಸಂಗನಕಲ್ಲಿನಲ್ಲಿ ಕುದುರೆಯ ಮೂಳೆ ದೊರೆತಿವೆ ಹಾಗೆಯೇ ಇಲ್ಲಿ ಕಲ್ಗೊಡಲಿಯ ಒಂದು ಕಾರ್ಖಾನೆಯೂ ಇತ್ತು.
ಹಳ್ಳೂರಿನಲ್ಲಿ ದೊರೆತಿರುವ ಕಬ್ಬಿಣದ ವಸ್ತುಗಳು ದಕ್ಷಿಣ ಭಾರತದ ಜನ ಉತ್ತರ ಭಾರತದವರಿಗಿಂತ ಮೊದಲು ಕಬ್ಬಿಣದ ಬಳಕೆಯನ್ನು ಬಲ್ಲವರಾಗಿದ್ದರೆಂದು ಆಧಾರ ಒದಗಿಸುತ್ತವೆ,
ಮಸ್ಕಿಯಲ್ಲಿ ತಾಮ್ರದ ಬಳೆ, 'ಮೈಕ್ರೊಲಿತ್'ಗಳು ದೊರೆತಿವೆ:
ತೆಕ್ಕಾಲಕೋಟೆ, ಹಳ್ಳೂರುಗಳಲ್ಲಿ ರಾಗಿ, ಹುರುಳಿ ಅವಶೇಷಗಳು ದೊರೆತಿವೆ ಹಾಗೂ ಒಂದೇ ಕಂಬದ ಸುತ್ತಲೂ ಕೊಡೆಯಂತೆ ಕಟ್ಟಿದ ಮನೆಗಳಿವೆ:
ಟಿ–ನರಸಿಪುರದಲ್ಲಿ ಜೇಡಿಮಣ್ಣಿನ ಸುಟ್ಟ ತಲೆ ಕೊರಡು, ಸ್ತ್ರೀಯೊಬ್ಬಳ ಪೂರ್ಣ ಅಸ್ಥಿಪಂಜರ ದೊರೆತಿವೆ:
ಸಂಗನಕಲ್ಲು, ಬ್ರಹ್ಮಗಿರಿಗಳಲ್ಲಿ ತಾಮ್ರದ ಕೊಡಲಿ ದೊರೆತಿವೆ:
ಲೇಂದಾಳ, ಕಣ್ಣೂರುಗಳಲ್ಲಿ ಆಯತಕಾರದ, ಚೌಕಾಕಾರದ ಸಮಾಧಿಗಳು ದೊರೆತಿವೆ:
ಆನೆಗುಂದಿಯ ನಿಂಬಾಪುರದ 'ವಾಲಿಯ ದಿಬ್ಬ' ಎಂಬ ಅವಶೇಷದಲ್ಲಿ ಕಬ್ಬಿಣ ತಯಾರಿಕೆಯ ಲಕ್ಷಣಗಳಿವೆ.

**2. ಮೌರ್ಯರು**

- ಪಟ್ಟದ ಕಲ್ಲನ್ನು ಕುರಿತ 'ಸಿಂಗಿರಾಜ ಪುರಾಣ'ದಲ್ಲಿನ ಒಂದು ಹೇಳಿಕೆ ನಂದರು ಕರ್ನಾಟಕದಲ್ಲಿ ಆಳಿದ್ದರೆನ್ನುತ್ತದೆ.
- ಚಂದ್ರಗುಪ್ತ ಮೌರ್ಯ ತನ್ನ ಕೊನೆಗಾಲದಲ್ಲಿ (ಕ್ರಿ.ಪೂ. 300) ಶ್ರವಣಬೆಳಗೊಳಕ್ಕೆ ಒಂದು ಜೈನ ಸನ್ಯಾಸಿಯಾಗಿದ್ದ.
- ಅಶೋಕನ ಆರು ಶಾಸನಗಳು ರಾಯಚೂರಿನ ಮಸ್ಕಿ: ಕೊಪ್ಪಳದಲ್ಲಿನ ಗವಿಪುರ ಮತ್ತು ಪಾಲ್ಕಿಗುಂಡು: ಚಿತ್ರದುರ್ಗದ ಬ್ರಹ್ಮಗಿರಿ, ಸಿದ್ದಾಪುರ ಮತ್ತು ಜಟ್ಟಿಂಗ್ ರಾಮೇಶ್ವರಗಳಲ್ಲಿ ದೊರೆತಿವೆ. ಇವುಗಳ ಕಾಲ ಕ್ರಿ.ಪೂರ್ವ 259–58.
- 'ಸುವರ್ಣಗಿರಿ' (ಮಸ್ಕಿ ಬಳಿಯ ಕನಕಗಿರಿ) ಅಶೋಕನ ದಕ್ಷಿಣ ಪ್ರಾಂತವಾಗಿತ್ತು.
- ಭಾರತದಲ್ಲಿ ಮಸ್ಕಿಯ ಶಾಸನ ಮಾತ್ರ ಅಶೋಕನ ಹೆಸರನ್ನು ಹೊಂದಿದೆ ("ದೇವಾನಾಂಪಿಯ ಅಸೋಕಸ")
- ಭಾರತದಲ್ಲಿನ ಅಶೋಕನ ಉಳಿದ ಶಾಸನಗಳು ಕೇವಲ 'ದೇವನಾಂಪಿಯ' ಎಂದು ಮಾತ್ರ ಉಲ್ಲೇಖಿಸಿವೆ.

**3. ಶಾತವಾಹನರು**

- ಮೌರ್ಯರ ಪತನದ ನಂತರ ಇವರು ದಕ್ಷಿಣಾಪಥದಲ್ಲಿ ತಲೆಯೆತ್ತಿದ್ದರು. ಇವರ ರಾಜಧಾನಿ ಪೈಠನ (ಪ್ರತಿಷ್ಠಾನ). ಇದು ಅಗ ಕರ್ನಾಟಕದಲ್ಲಿಯೇ ಇತ್ತು ಬಳ್ಳಾರಿ ಹಾಗೂ ಧಾರವಾಡ ಜಿಲ್ಲಗಳ ಪ್ರದೇಶಗಳನ್ನು 'ಶಾತವಾಹನ ರಾಷ್ಟ್ರ' ಎಂದು ಶಾಸನಗಳಲ್ಲಿ ಹೇಳಲಾಗಿದೆ. ಆದರೆ ಈ ಶಾಸನಗಳೆಲ್ಲ ಪ್ರಾಕೃತದಲ್ಲಿವೆ.
- 'ಆಂಧ್ರಭೃತ್ವ'ರೆಂದು ಶಾತವಾಹನ ವಂಶ ಪ್ರಸಿದ್ಧವಾಗಿದೆ. ಇವರು ವೈದಿಕ ಬ್ರಾಹ್ಮಣರಾಗಿದ್ದರು. ಶ್ರೀಮುಖ ಈ ವಂಶದ ಮೊದಲ ರಾಜ.
- ಶ್ರೀಮುಖನ ಪುತ್ರ ಸಾತಕರಣಿಗೆ "ದಕ್ಷಿಣಾ ಪಥಾಧೀಶ್ವರ" ಬಿರುದಿತ್ತು.
- ಗಾಥಾ ಸಪ್ತಶತಿ' ಬರೆದ ಹಲ ಈ ವಂಶದ 17ನೇಯ ದೊರೆ. ಶ್ರೀ ಯಜ್ಞ ಶಾತವಾಹನರ ಕೊನೆಯ ಪ್ರಮುಖ ದೊರೆ. ಮೂರನೇ ಶತಮಾನದ ವೇಳೆ ಶಾತವಾಹನರು ದುರ್ಬಲರಾರು.
- ಅವರ ಮಾಂಡಲೀಕರಾದ ಚುಟುಗಳು ವೈಜಯಂತಿ (ಬನವಾಸಿ)ಯಲ್ಲಿ: ಇಕ್ಶ್ವಾಕುಗಳು ಆಂಧ್ರದಲ್ಲಿ ಪ್ರಾಬಲ್ಯ ಸಾಧಿಸಿದರು.
- ಶಾತವಾಹನರು ಹೊಲದ ಬಿತ್ತನೆ ಹಾಗೂ ಹಸನು ಕಾರ್ಯಕ್ಕಾಗಿ ರಂಟೆಗಳ ಬಳಕೆಗಳನ್ನು ಬಹುವಾಗಿ ಜಾರಿಗೆ ತಂದರು.

**4. ಕರ್ನಾಟಕದಲ್ಲಿ ಅರಸೊತ್ತಿಗೆ (ಕ್ರಿ.ಶ. 300–1000)**

**ಕದಂಬರು :**

ಚುಟುಗಳಂತೆ ಇವರು ಮಾನವ್ಯ ಗೋತ್ರದವರು. ಇವರ ಕಾಲ – ಕ್ರಿ.ಶ. 3ನೇ ಶತಮಾನದಿಂದ ಕ್ರಿ.ಶ. 7ನೇ ಶತಮಾನ.

ಚುಟುಗಳು ಹಾಗೂ ಕದಂಬರು ಇಬ್ಬರೂ ವೈಜಯಂತಿಪುರದ ಹೆಸರಿನಲ್ಲಿ ತಮ್ಮನ್ನು 'ವೈಜಯಂತಿ ಪುರವರಾಧೀಶ್ವರ'ರೆಂದು ಕರೆಯಕೊಂಡಿದ್ದಾರೆ.

ಚುಟುಗಳ ನಂತರ ಕ್ರಿ.ಶ 250ರ ಸುತ್ತಿನಲ್ಲಿ ಕದಂಬರು ಕನ್ನಡ ನಾಡಿನಲ್ಲಿ ಕ್ರಮೇಣ ತಲೆ ಎತ್ತಿದರು.

'ಮುಕ್ಕಣ್ಣ' ಅಥವಾ ಜಯಂತ ತ್ರಿಲೋಚನ ಕದಂಬರ ಮೂಲ ಪುರುಷ ಎಂದು ಇತ್ತೀಚಿನ ಒಂದು ಶಾಸನ ತಿಳಿಸುತ್ತದೆಯಾದರೂ, ಮಯೂರವರ್ಮ ಕದಂಬರ ಮೂಲಪುರುಷ ಎಂದು ನಂಬಲಾಗಿದೆ.

- ಕದಂಬರ ಮುದ್ರೆಯಲ್ಲಿ ಸಿಂಹ, ಧ್ವಜದಲ್ಲಿ ವಾನರ ಇವೆ
- ಕದಂಬರ ರಾಜರು 'ಧರ್ಮರಾಜ' ಎಂಬ ಬಿರುದು ಹೊಂದಿದ್ದರು.
- ಬನವಾಸಿ ಇವರ ರಾಜಧಾನಿಯಾಗಿತ್ತು.

**ಕದಂಬ ರಾಜರು**

**1. ಮಯೂರ ವರ್ಮ:**

ಶಿವಮೊಗ್ಗದ ತಾಳಗುಂದದಲ್ಲಿ ಜನಿಸಿದ ಈತ ಪಲ್ಲವ ರಾಜಧಾನಿ ಕಂಚಿಗೆ ಹೋದಾಗ ಅಲ್ಲಿ ಅಪಮಾನಿತನಾಗಿ ಕ್ಷಾತ್ರ ವೃತ್ತಿಯನ್ನು ಸ್ವೀಕರಿಸಿ, ಪಲ್ಲವರನ್ನು ನಿರ್ಮೂಲನ ಮಾಡುವ ಪಣ ತೊಟ್ಟು, ಶ್ರೀ ಪರ್ವತದ ಅರಣ್ಯದಲ್ಲಿ ರಾಜ್ಯ ಸ್ಥಾಪಿಸಿದ. ನಂತರ ಆತ ಪಶ್ಚಿಮ ಸಮುದ್ರದಿಂದ ಪಡರಿಯಾರ್‌ವರೆಗೆ ರಾಜ ಎಂದು ಮಾನ್ಯ ಮಾಡಲ್ಪಟ್ಟ,

ಮಯೂರವರ್ಮ ತನ್ನ ಮನೆಯ ಬಳಿ ಬೆಳೆದ ಕದಂಬ ವೃಕ್ಷದ ಪ್ರತೀಕವಾಗಿ ತನ್ನ ವಂಶಕ್ಕೂ 'ಕದಂಬ' ಎಂದು ನಾಮಕರಣ ಮಾಡಿದ ಎನ್ನುವ ಐತಿಹ್ಯ ಇದೆ.

**2. ಕಂಗವರ್ಮ :**

ವಾಕಟಕ ರಾಜ ವಿಂಧ್ಯಸೇನ ಈತನನ್ನು ಸೋಲಿಸಿ ಕುಂತಲವನ್ನು ಗೆದ್ದುಕೊಂಡ ಎಂದು ಅಜಂತಾದ 16ನೇ ಗುಹೆಯ ಶಾಸನ ಹೇಳುತ್ತದೆ.

ಈ ಸೋಲು ಕದಂಬರಿಗೆ ಮೊದಲನೆಯದು.

**3. ಭಗೀರಥ ವರ್ಮ :**

ತಂದೆ ಕಂಗವರ್ಮ ಶತೃ ಪೀಡೆಯಿಂದ ತಲೆ ಮರೆಸಿಕೊಂಡಾಗ ಈತ ಜನಿಸಿದನೆಂದು ಈತನಿಗೆ "ಕದಂಬ ಕುಲ ಪ್ರಚ್ಛನ್ನ ಜನ್ಮಾ" (ಕದಂಬ ಕುಲದಲ್ಲಿ ಗುಪ್ತವಾಗಿ ಜನಿಸಿದವ) ಎನ್ನುವ ವರ್ಣನೆ ಇದೆ. 'ಸಗರ;, 'ಕುಂತಳ ಭುವನವಲ್ಲಭ' ಎಂಬ ಬಿರುದುಗಳೂ ಈತನಿಗಿದ್ದವು.

**4. ರಘವರ್ಮ :**

'ರಘು', 'ಪರಶಿವ' ಎಂಬ ಕರೆದುಕೊಂಡಿದ್ದ ಭಗೀರಥವರ್ಮನ ಈ ಹಿರಿಯ ಮಗ ಪಲ್ಲವರೊಡನೆ ಯುದ್ಧ ಮಾಡುತ್ತಿದ್ದಾಗ ಮಡಿದ.

**5. ಕಾಕುಸ್ಥ ವರ್ಮ :**

ರಘುವರ್ಮನ ಸೋದರ. ತಾಳಗುಂದ ಶಾಸನ ಈತನನ್ನು 'ಕದಂಬ ಕುಲ ಶಿರೋಮಣಿ', 'ಕೀರ್ತಿ ಸೂರ್ಯ' ಎಂದು ಹೊಗಳಿದೆ. ಈತನ ಕಾಲದಲ್ಲಿ ಕದಂಬ ಸಾಮ್ರಾಜ್ಯ ಪರಾಕಾಷ್ಠೆ ಮುಟ್ಟಿತು. 'ಧರ್ಮ ಮಹಾರಾಜ' ಎನ್ನುವ ಬಿರುದು ಈತನದಾಗಿತ್ತು. ಹಲಸಿಯ ತಾಮ್ರ ಶಾಸನ ಈತನನ್ನು 'ಭವ್ಯ ವ್ಯಕ್ತಿ' ಎಂದಿದೆ.

ಕಾಕುಸ್ಥ ವರ್ಮನ ಮಗ ಶಾಂತಿ ವರ್ಮ ಅಕಾಲ ಮರಣಕ್ಕೀಡಾದ ನಂತರ ಕದಂಬ ವಂಶ ಮೂರು ಭಾಗಗಳಾಯಿತು.

ಕಾಕುಸ್ಥವರ್ಮ ತನ್ನ ಮೊಮ್ಮಗ ಮೃಗೇಶ ವರ್ಮನಿಗೆ ರಾಜಕಾರ್ಯ ವಹಿಸಿಕೊಟ್ಟದ್ದು. ಇನ್ನೊಬ್ಬ ಮಗ ಕೃಷ್ಣ ವರ್ಮನಿಗೆ ಹಿಡಿಸಲಿಲ್ಲ. ದಕ್ಷಿಣ ಭಾಗದ ಅಧಿಪತಿಯಾಗಿದ್ದ ಆತ ಸ್ವತಂತ್ರ ಎಂದು ಘೋಷಿಸಿಕೊಂಡ. ಇವನ ರಾಜಧಾನಿ ತ್ರಿಪರ್ವತ ನಗರ.

ಕಾಕುಸ್ಥವರ್ಮನ ಮೂರನೇ ಮಗ ಕುಮಾರ ವರ್ಮ ಪೂರ್ವ ಭಾಗಕ್ಕೆ ರಾಜನಾಗಿ ಉಚ್ಚಂಗಿಯನ್ನ ರಾಜಧಾನಿಯನ್ನಾಗಿ ಮಾಡಿಕೊಂಡ.

**6. ಕೃಷ್ಣ ವರ್ಮ :**

ಕೇಕೆಯ ರಾಜಕುಮಾರಿಯನ್ನು ಮದುವೆಯಾಗಿ, ಪಲ್ಲವರ ಸಹಾಯದಿಂದ ವೈಜಯಂತಿಯ ಕದಂಬರನ್ನು ಸೋಲಿಸಿ ಅಧಿಪತ್ಯ ಸಾಧಿಸಲು ಹವಣಿಸಿ ವಿಫಲನಾದ. ವೈಜಯಂತಿಯ ಮೃಗೇಶ ವರ್ಮನು ಕೇಕೆಯ ರಾಜಕುಮಾರಿಯನ್ನು ಮದುವೆಯಾಗಿ ಕೃಷ್ಣ ವರ್ಮನನ್ನು ಹಿಮ್ಮೆಟ್ಟಿಸಿದ.

**7. ಮೃಗೇಶ ವರ್ಮ :**

ಈತ ಗಂಗರು ಮತ್ತು ಪಲ್ಲವರ ಮೇಲೆ ಜಯ ಸಾಧಿಸಿದ್ದ. ನ್ಯಾಯಪಕ್ಷಪಾತಿಯಾದ ಈತ 'ಧರ್ಮರಾಯ' ಎಂದು ಬಿರುದು ಪಡೆದಿದ್ದ. ಬ್ರಾಹ್ಮಣರಿಗೂ ಜೈನರಿಗೂ ದಾನ ಕೊಡುತ್ತಿದ್ದ. ಹೀಗಾಗಿ 'ಪರಮ ಬ್ರಾಹ್ಮಣ' ಎಂದೂ ಈತ ಖ್ಯಾತನಾಗಿದ್ದ.

**8. ರವಿವರ್ಮ :**

**ತ್ರಿಪರ್ವತದ ಮೊದಲನೆ ವಿಷ್ಣುವರ್ಮನನ್ನು ಸೋಲಿಸಿದ ಕದಂಬ ಸಾಮ್ರಾಜ್ಯದ ಕೊನೆಯ ದೊರೆ. ವಾಕಾಟಕ ದೊರೆಯನ್ನು ಸೋಲಿಸಿ ಸಾಮ್ರಾಜ್ಯವನ್ನು ನರ್ಮದಾ ನದಿಯಿಂದ ಅಚೆ ವಿಸ್ತರಿಸಿದ ಖ್ಯಾತಿ ಈತನದು.**

**ತಲಕಾಡಿನ ಶುಂಗರಾಜ ಅವನೀತನನ್ನೂ ಈತ ಸೋಲಿಸದ.**

**9. ಹರಿವರ್ಮ :**

ರವಿವರ್ಮನ ಮಗನಾದ ಈತಕದಂಬ ಕುಲದ ಮುಖ್ಯ ಶಾಖೆಯ ಕೊನೆಯ ದೊರೆ.

ವಾಕಾಟಕ ರಾಜ ಹರಿಸೇನನಿಂದ ಸೋತು ಕರ್ನಾಟಕದ ದಕ್ಷಿನ ಪ್ರದೇಶವನ್ನು ಕಳೆದುಕೊಂಡ. ಫ್ರಪರ್ವತದ ಎರಡನೆಯ ಕೃಷ್ಣವರ್ಮನು ಈತನ ರಾಜ್ಯವನ್ನು ವಶಪಡಿಸಿಕೊಂಡ.

ಕೃಷ್ಣ ವರ್ಮನ ನಂತರ ಅಜವರ್ಮ, ಭೋಗಿ ವರ್ಮ ಮತ್ತು ಮಧುವರ್ಮ ಆಳಿದರು. ಅವರಾರೂ ಸಮರ್ಥರಾಗಿರಲಿಲ್ಲ.

ಪಲ್ಲವ ದೊರೆ ಸಿಂಹ ವಿಷ್ಣು ಮತ್ತು ಬಾದಾಮಿ ಚಾಳುಕ್ಯರ ಪ್ರಾಬಲ್ಯದಿಂದ ಕದಂಬ ಸಾಮ್ರಾಜ್ಯ ಕ್ರಿ.ಶ. 6ನೇ ಶತಮಾನದ ಆರಂಭದಲ್ಲಿ ಅಂತ್ಯ ಕಂಡಿತು.

**1.2 ತಲಕಾಡಿನ ಗಂಗರು**

- ಕ್ರಿ.ಶ 350ರ ಸುಮಾರಿಗೆ ಕೋಲಾರ (ಕುವಲಾಲ)ದಿಂದ ಆಳ್ವಿಕೆ ಆರಂಭಿಸಿದ ಗಂಗರು ತಮ್ಮನ್ನು 'ಕುವಲಾಲಪುರವರಾಧೀಶ್ವರರು' ಎಂದು ಕರೆದುಕೊಂಡಿದ್ದಾರೆ.
- ನಂತರ ಇವರು ರಾಜಧಾನಿಯನ್ನ ಮೈಸೂರು ಜಿಲ್ಲೆಯ ತಲಕಾಡಿಗೆ ವರ್ಗಾಯಿಸಿಕೊಂಡರು. ಈ ಕಾರಣಕ್ಕೆ ಇವರು ಇತಿಹಾಸದಲ್ಲಿ 'ತಲಕಾಡಿನ ಗಂಗರು' ಎಂದೇ ಖ್ಯಾತರಾಗಿದ್ದಾರೆ.

- ಆನೆ ಅವರ ಲಾಂಛನ
- ಜಾಹ್ನವೇಯ ಕುಲ, ರಾಣ್ವಾಯನ ಗೋತ್ರ ಇವರದು.

**ಗಂಗರಾಜರು :**

**1. ಕೊಂಗುಣಿ ವರ್ಮ :**

**ಈತ ಈ ವಂಶದ ಮುಲ ಪುರುಷ 'ದಿಡಿಗ' ಎನ್ನುವುದೂ ಈತನ ಇನ್ನೊಂದು ಹೆಸರು. 'ಧರ್ಮ ಮಹಾರಾಜ' ಈತನ ಬಿರುದಾಗಿತ್ತು.**

**2. ಅವನೀತ ಮತ್ತು ದುರ್ವಿನೀತ :**

ಕದಂಬ ವಂಶದ ಕಾಕುಸ್ಥ ವರ್ಮನ ಮಗಳನ್ನು ತಲಕಾಡಿನ ಎರಡನೇ ಮಾಧವ ಮದುವೆಯಾದ. ಇವರ ಮಗನೇ ಅವನೀತ. ಅವನೀತನ ಮಗ ದುರ್ವಿನೀತ (ಕ್ರಿ.ಶ. 605–650). ಈತ ಗಂಗರ ಪ್ರಮುಖ ದೊರೆ.

ದುರ್ವಿನೀತ ಹಲವಾರು ಯಾಗಗಳನ್ನು ಮಾಡಿದ. ಈತನ ಆಸ್ಥಾನದಲಿ ಜೈನ ಧರ್ಮಗುರು ಪೂಜ್ಯ ಪಾದನಿದ್ದ.

ದುರ್ಮಿನೀತ ಸಂಸ್ಕೃತ, ಕನ್ನಡ ಎರಡರಲ್ಲೂ ಪಾಂಡಿತ್ಯ ಸಾದಿಸಿದ್ದ.

ಪೂಜ್ಯ ಪಾದನ ಕೃತಿ 'ಜಿತೇಂದ್ರ ವ್ಯಾಕರಣಕ್ಕೆ' ದುರ್ವಿನೀತ 'ಶಬ್ಬಾವತಾರ' ಎನ್ನುವ ಟೀಕೆ ಬರೆದಿದ್ದಾನೆ.

ಭಾರವಿಯ 'ಕಿರಾತಾರ್ಜುನೀಯ'ದ 15ನೇ ಅಧ್ಯಾಯಕ್ಕೆ ದುರ್ವಿನೀತ ವ್ಯಾಖ್ಯಾನ ಬರೆದಿದ್ದಾನೆ.

ಪೈಶಾಚಿಯಲಿದ್ದ ಗುಣಾಢ್ಯನ ಬೃಹತ್ಕಥೆಯನ್ನು ಆತ ಸಂಸ್ಕೃತದಲ್ಲಿ ಬರೆದಿದ್ದಾನೆ.

**3. ಶ್ರೀಪುರುಷ:**

ದುರ್ವಿನೀತನ ನಂತರ ಮುಷ್ಕರ, ಭೂಮಿಕ್ರಮ, ಮೊದಲನೆ ಶಿವಮಾರ ಗಂಗರ ಆಳ್ವಿಕೆಯ ನಂತರ ಶ್ರೀ ಪುರಷ (ಕ್ರಿ.ಶ. 726–788) ಪಟ್ಟಕ್ಕೆ ಬಂದ. ಪಲ್ಲವ ನಂದಿವರ್ಮನನ್ನು ವಿಲಂದೆಯಲ್ಲಿ ಸೋಲಿಸಿ ಈತ 'ಪೆರ್ಮನಾಡಿ' ಎಂದು ಬಿರುದುಗಳಿಸಿದ್ದ.

ಗಜ ಯುದ್ಧದ ಬಗ್ಗೆ ಈತ ಪ್ರವೀಣನಾಗಿದ್ದ. ಈತ **'ಗಜಶಾಸ್ತ್ರ'** ಎಂಬ ಗ್ರಂಥವನ್ನೂ ಬರೆದ.

**4. ಎರಡನೆ ಶಿವಕುಮಾರ :**

ಈತ ಶ್ರೀ ಪುರುಷನ ಮಗ. ರಾಷ್ಟ್ರಕೂಟರಿಂದ ಈತ ಹಿನ್ನಡೆ ಹೊಂದಿದ. ಕನ್ನಡದಲ್ಲಿ **'ಗಜ ಶತಕ', 'ಸೇತು ಬಂಧ'** ಕೃತಿ ರಚಿಸಿದ.

**5. ನಾಲ್ಕನೇ ರಾಚಮಲ್ಲ:**

'ಸತ್ಯವಾಕ್ಯ' ಈತನ ಬಿರುದು. ಈತನ ಕಾಲದಲ್ಲಿ ಮಂತ್ರಿ ಚಾವುಂಡರಾಯ ಕನ್ನಡದಲ್ಲಿ **'ಚಾವುಂಡರಾಯ ಪುರಾಣ'** ಬರೆದ. ಚಾವುಮಡರಾಯ ಶ್ರವಣ ಬೆಳ್ಗೊಳದಲ್ಲಿ ಗೊಮ್ಮಟೇಶ್ವರ ವಿಗ್ರಹ ಕೆತ್ತಿಸಿದ (ಕ್ರಿ.ಶ. 982)

**6. ರಕ್ಕಸ ಗಂಗ:**

ರಾಚಮಲ್ಲನ ಸಹೋದರ ರಕ್ಕಸಗಂಗ ಗಂಗ ವಂಶದ ಕೊನೆಯ ದೊರೆ. 986ರಲ್ಲಿ ಈತ ಪಟ್ಟಕ್ಕೇರಿದ. ಈತ ಚೋಳರಿಂದ ಸೋತ. 999ರಲ್ಲಿ ಗಂಗವಾಡಿ ಚೋಳರ ವಶವಾಯಿತು. 1004ರಲ್ಲಿ ಚೋಳರ ಕೈ ಸೇರಿದ ತಲಕಾಡು ಮುಂದೆ ಒಂದು ಶತಮಾನಕ್ಕೂ ಹೆಚ್ಚುಕಾಲ ಅವರ ವಶದಲ್ಲಿತ್ತು.

**ನೆನೆಪಿಡಿ:**

**"**ದುರ್ವಿನೀತನ ಮರಿ ಮೊಮ್ಮಗ ಭೂವಿಕ್ರಮ ಕ್ರಿ.ಶ. 670ರಲ್ಲಿ ಪಲ್ಲವ ಪರಮೇಶ್ವರನನ್ನು ಸೂಲಿಸ **'ಉಗ್ರೋದಯ'** ಎಂಬ ಅಮೂಲ್ಯ ಹಾರವನ್ನು ಅಪಹರಿಸಿದ್ದ,

- ಎರಡನೆಯ ನೀತಿಮಾರ್ಗ ಎರೆಯಪ್ಪ 'ಮಹೇಂದ್ರಾತರ' ಎಂಬ ಬಿರುದಿತ್ತು.
- ಗಂಗರು ಮೂಲತಃ ಜೈನರಾಗಿದ್ದರು. ಆದರೆ ವಿಷ್ಣುಗೋಪ ತಾನು 'ನಾರಾಯಣಚರಣಾನುಧ್ಯತ' ಎಂದು ಕರೆದುಕೊಂಡಿದ್ದಾನೆ.
- ಗಂಗರು ಕಾಲ ಕರ್ನಾಟಕದಲ್ಲಿ 'ಜೈನರ ಉತ್ಕರ್ಷಯುಗ' ಎನಿಸಿದೆ.

**ಬಾದಾಮಿಯ ಚಾಳುಕ್ಯರು**

- ಇವರ ಕಾಲ : 5 ರಿಂದ 18ನೇ ಶತಮಾನ ಹಾಗೂ 10ನೇ ಶತಮಾನದಿಂದ 12ನೇ ಶತಮಾನದವರೆಗೆ

- ‘ವರಾಹ ಇವರ ಲಾಂಛನ’
- ಜಯಸಿಂಹ ಈ ವಂಶದ ಮೊದಲ ರಾಜ. ಈತನಿಗೆ ‘ವಲ್ಲಭ’ ಎಂಬ ಬಿರುದಿತ್ತು. ಈತನ ಮಗ ರಣರಾಗ.
- ರಣರಾಗನ ಮಗ ಒಂದನೆ **ಪುಲಿಕೇಶಿ** ‘ಇಂದುಕಾಂತ’ದಿಂದ ವಾತಾಪಿ (ಬಾದಾಮಿ)ಗೆ ರಾಜಧಾನಿಯನ್ನು ಬದಲಾಯಿಸಿದ.
- ಪುಲಕೇಶಿಯ ನಂತರ ಆತನ ಹಿರಿಯ ಮಗ ಕೀತಿವರ್ಮ ಕ್ರಿ.ಶ. 566ರಲ್ಲಿ ಪಟ್ಟಕ್ಕೇರಿದ. ಈತನ ಬಗ್ಗೆ ಐಹೊಳೆ ಶಾಸನದಲ್ಲಿ ‘ನಳಮೌರ್ಯ ಕದಂಬ ಕಾಲರಾತ್ರಿಃ’ (ನಳರನ್ನೂ ಕದಂಬರನ್ನೂ ಕೊಂಕಣದ ಮೌರ್ಯರನ್ನು ಸೋಲಿಸಿದವ ಎಂದು ಅರ್ಥ) ಎಂದು ಪ್ರಶಂಸಿಸಲಾಗಿದೆ. ಹಾಗೆಯೇ ಈತನಿಗೆ ‘ಸತ್ಯಾಶ್ರಯ’, ‘ಶ್ರೀ ಪೃಥ್ವಿ ವಲ್ಲಭ’, ‘ಪುರಾಣ ಪರಾಕ್ರಮ’ ಎಂಬ ಬಿರುದುಗಳೂ ಇದ್ದವು.
- ಮಂಗಳೇಶ– ಕೀರ್ತಿವರ್ಮನ ಸೋದರ. ‘ರಣವಿಕ್ರಾಂತ’ ಎಂಬ ಬಿರುದು ಪಡೆದಿದ್ದ.

**ಎರಡನೆ ಪುಲಕೇಶಿ:**

ಕ್ರಿ.ಶ 609ರಲ್ಲಿ ಮಂಗಳೇಶನನ್ನು ಸೋಲಿಸಿ ಈತ ಪಟ್ಟಕ್ಕೇರಿದ. ಬನವಾಸಿಯ ಕದಂಬರನ್ನು, ತಲಕಾಡಿನ ಗಂಗರನ್ನು ಸೋಲಿಸಿದ. ನರ್ಮದಾ ನದಿ ತೀರದ ಮೇಲೆ ಹರ್ಷವರ್ಧನನ್ನೂ ಈತ ಸೋಲಿಸಿದ.

ಹ್ಯು ಯೆನ್ ತ್ಸಾಂಗ್ ಹರ್ಷನ ಆಸ್ಥಾನಕ್ಕೆ ಭೇಟಿ ನೀಡಿದ ನಂತರ ಈ ಎರಡನೆ ಪುಲಕೇಶಿ ಆಸ್ಥಾನಕ್ಕೂ ಬಂದಿದ್ದ. ಇರಾನ್‌ನ ದೊರೆ ಎರಡನೆ ಖುಸ್ರು ತನ್ನ ದೂತನನ್ನು ಎರಡನೆ ಪುಲಕೇಶಿಯ ಆಸ್ಥಾನಕ್ಕೆ ಕಳುಹಿಸಿದ್ದ ಎಂದು ಅರಬ್ ಇತಿಹಾಸಕಾರ ಟಬರಿ ಹೇಳಿದ್ದಾನೆ.

ರವಿಕೀರ್ತಿ ಈತನ ಆಸ್ಥಾನದಲ್ಲಿದ್ದ. ಪುಲಿಕೇಶಿಯ ಸೊಸೆ ವಿಜಯಾಲಿಕಾ **‘ಕೌಮುದಿ ಮಹೋತ್ಸವ’** ಎನ್ನುವ ನಾಟಕವನ್ನು ಬರೆದಳು

ಪಲ್ಲವಿ ನರಸಿಂಹವರ್ಮ ಬಾದಾಮಿಗೆ ಮುತ್ತಿಗೆ ಹಾಕಿ ಚಾಳುಕ್ಯರನ್ನು ಸೋಲಿಸಿದ. ಎರಡನೆ ಪುಲಿಕೇಶಿ ಹತನಾದ.

**ವಿಕ್ರಮಾದಿತ್ಯ :**

ಪುಲಿಕೇಶಿಯ ಸಾವನಿ ನಂತರ 10 ವರ್ಷ ಬಾದಾಮಿ ಪಲ್ಲವರ ಪಾಳಯದಲ್ಲೇ ಇತ್ತು. ಪುಲಕೇಶಿಯ ಮೂರನೆ ಮಗನಾದ ಈ ವಿಕ್ರಮಾದಿತ್ಯ ಕ್ರಿ.ಶ. 655ರಲಿ ಬಾದಾಮಿಯನ್ನು ವಶಪಡಿಸಿಕೊಂಡ.

ಈತನಿಗೆ ‘ರಣರಸಿಕ’, ‘ಅನಿವಾರಿತ’ ಎಂಬ ಬಿರುದುಗಳಿದ್ದವು.

**ವಿನಯಾದಿತ್ಯ :**

ಕ್ರಿ.ಶ. 681ರಲ್ಲಿ ಪಟ್ಟಕ್ಕೇರಿದ, ‘ಯುದ್ಧಮಲ್ಲ’, ‘ಧುರ್ಧುರಮಲ್ಲ’ ಎಂಬ ಬಿರುದುಗಳು ಈತನಿಗಿದ್ದವು.

**ವಿಜಯಾದಿತ್ಯ :**

ಕ್ರಿ.ಶ. 696ರಲ್ಲಿ ಪಟ್ಟ ಏರಿದ. ‘ಸಮಸ್ತ ಭುವನಾಶ್ರಯ’, ‘ಸಾಹಸ ರಸಿಕ,’ ‘ಪರಮ ಭಟ್ಟಾರಕ’ ಈತನ ಬಿರುದುಗಳು.

ಈತ ಪಟ್ಟದಕಲ್ಲಿನಲ್ಲಿ ಸಂಗಮೇಶ್ವರ (ವಿಜಯೇಶ್ವರ) ದೇವಾಲಯ ಕಟ್ಟಿಸದ.

**ಎರಡನೆ ವಿಕ್ರಮಾದಿತ್ಯ :**

ಕ್ರಿ.ಶ 734ರಲ್ಲಿ ಪಟ್ಟಕ್ಕೇರಿದ. ಪಲ್ಲವರ ರಾಜ ಚಿಹ್ನೆಯಾದ ಖಟ್ವಾಂಗ ಧ್ವಜವನ್ನು ಕಸಿದುಕೊಂಡು ನೂರು ವರ್ಷಗಳ ಹಿಂದಿನ ಸೇಡನ್ನು ತೀರಿಸಿಕೊಂಡು.

ಈತನ ಪತ್ನಿ ಲೋಕಮಹಾದೇವಿ ಪಟ್ಟದಕಲ್ಲಿನಲ್ಲಿ ಲೋಕೇಶ್ವರ (ವಿರೂಪಾಕ್ಷ) ದೇವಲಯವನ್ನೂ, ಇನ್ನೊಬ್ಬ ಪತ್ನಿ ತ್ರೈಲೋಕಮಹಾದೇವಿ ತ್ರೈಲೋಕೇಶ್ವರ (ಮಲ್ಲಿಕಾರ್ಜುನ) ದೇವಾಲಯ ಕಟ್ಟಿಸಿ ‘ಕಂಚಿ ವಿಜಯ’ ಆಚರಿಸಿದರು.

‘ತ್ರಿಭುವನಾಚಾರಿ’ ಎಂಬ ಬಿರುದು ಪಡೆದಿದ್ದ ಗಂಡ ಎಂಬ ಶಿಲ್ಪ ಈ ಕಾಲದಲ್ಲಿದ್ದ.

**ಎರಡನೆ ಕೀರ್ತಿವರ್ಮ :**

ಕ್ರಿ.ಶ 745ರಲ್ಲಿ ಈತ ಪಟ್ಟ ಏರಿದ. ‘ನೃತ್ಯ ಸಿಂಹ’ ಈತನ ಬಿರುದು. ಈತನ ಕಾಲದಲ್ಲಿ ರಾಷ್ಟ್ರಕೂಟ ಮಾಂಡಲೀಕ ದಂತಿದುರ್ಗ ಚಾಳುಕ್ಯ ಸಾಮ್ರಾಜ್ಯ ವಶಪಡಿಸಿಕೊಂಡ.

**ನೆನಪಿಡಿ :**

- ನೋಡುಗರ ಬಲಗಡೆಗೆ ಮುಖಮಾಡಿರುವ ‘ವರಾಹ’ ಇವರ ಲಾಂಛನ (ವಿಜಯನಗರದ ಅರಸರ ಲಾಂಛನ ನೋಡುಗರ ಎಡಗಡೆ ಮುಖ ಮಾಡಿರುವ ವರಾಹ!)
- ಚಾಲುಕ್ಯರ ಕಾಲದಲ್ಲಿ ಮಲಪ್ರಭಾ ನದಿ ದಂಡೆ ‘ದೇವಾಲಯ ರಚನೆಯ ಪ್ರಯೋಗಶಾಲೆ’ ಎನಿಸಿತ್ತು.

- ಔತ್ತರೇಯ ಮತ್ತು ದ್ರಾವಿಡ ಸಂಗಮವಾದ 'ಚಾಳುಕ್ಯ' ವಾಸ್ತು ಶೈಲಿ ಬಾದಾಮಿ ಐಹೊಳೆ ಪಟ್ಟದಕಲ್ಲುಗಳಲ್ಲಿ ರೂಪಿತವಾಯಿತು.
- ಬಾದಾಮಿಯ ಅಂತರ್ಗುಹೆಗಳು, ನರ್ತಿಸುವ ನಟರಾಜ ಚಾಳುಕ್ಯ ಶಿಲ್ಪದ ಶ್ರೇಷ್ಠ ಉದಾಹರಣೆಗಳು.

**ರಾಷ್ಟ್ರಕೂಟರು**

- ಯಾದವ ವಂಶರಾಜರಾದ ಇವರು 'ಲತ್ತಲೂರು ಪುರವಾಧೀಶ್ವರ'ರು
- ಕ್ರಿ.ಶ. 752ರಲ್ಲಿ ಚಾಳುಕ್ಯರ ಎರಡನೆ ಕೀರ್ತಿವರ್ಮನನ್ನು ಸೋಲಿಸಿ ದಂತಿದುರ್ಗ ರಾಷ್ಟ್ರಕೂಟರ ಆಡಳಿತ ಆರಂಭಿಸಿದ.

**ಒಂದನೆ ಕೃಷ್ಣ :**

ಈತ ದಂತಿದುರ್ಗನ ಚಿಕ್ಕಪ್ಪ. ಕ್ರಿ.ಶ 756ರಲ್ಲಿ ಈತ ಪಟ್ಟಕ್ಕೇರಿದ.
'ಅಕಾಲ ವರ್ಷ', 'ಶುಂಭತುಂಗ' ಈತನ ಬಿರುದುಗಳು. ಎಲ್ಲೋರಾದಲ್ಲಿ ಈತ ಏಕಶಿಲಾ ಕೈಲಾಸನಾಥ ದೇವಾಲಯ ಕಟ್ಟಿಸಿದ.

**ಧ್ರುವ:**

ಕ್ರಿ.ಶ. 773ರಲ್ಲಿ ಎರಡನೆ ಗೋವಿಂದ ಪಟ್ಟಕ್ಕೇರಿದ. ಆದರೆ ಈತ ದುರ್ಬಲನಾಗಿದ್ದ ಹೀಗಾಗಿ ಈತನ ಸೋದರ ಧ್ರುವ ಕ್ರಿ.ಶ. 780ರ ವೇಳೆಗೆ ರಾಜನಾದ.
ಧ್ರುವನಿಗೆ 'ಕಲಿವಲ್ಲಭ', 'ಧಾರಾವರ್ಷ', 'ನಿರುಪಮ' ಎಂಬ ಬಿರುದುಗಳಿದ್ದವು. ಗಂಗರಾಜ ಎರಡನೆ ಶಿವಮಾರನನ್ನು ಮುದುಗುಂದೂರು ಯುದ್ಧದಲ್ಲಿ ಧ್ರುವ ಸೋಲಿಸಿದ.
ಗಂಗಾ-ಯಮುನಾ ದೋಅಬ್ ಪ್ರದೇಶ ವಶಪಡಿಸಿಕೊಂಡು ಗಂಗಾ-ಯಮುನ ನದಿಗಳ ಚಿತ್ರ ಬರೆಸಿದ.
ಉತ್ತರದ ದಿಗ್ವಿಜಯದಲ್ಲಿ ಆತ ಗೂರ್ಜರ ಪ್ರತಿಹಾರ ವತ್ಸರಾಜ ಹಾಗೂ ಬಂಗಾಳದ ಧರ್ಮಪಾಲರನ್ನು ಸೋಲಿಸಿದ.
ಈತ ಮೂರು ಬೆಳ್ಗೊಡೆಗಳನ್ನು ಪಡೆದ ಎಂದು ಕರ್ಡಾ ಶಾಸನ ಹೇಳುತ್ತದೆ. ಧ್ರುವ ತನ್ನ ಗೆಲುವುಗಳಿಂದ ರಾಷ್ಟ್ರಕೂಟ ವಂಶಕ್ಕೆ ಒಂದು ಅಖಿಲ ಭಾರತ ಮಾನ್ಯತೆ ನೀಡಿದ. ಅವನ ರಾಜ್ಯ ದಕ್ಷಿಣದಲ್ಲಿ ಕಾವೇರಿವರೆಗೆ ವ್ಯಾಪಿಸಿತ್ತು.

**ಮೂರನೆ ಗೋವಿಂದ :**

ಕ್ರಿ.ಶ 193ರಲ್ಲಿ ಈತ ಪಟ್ಟ ಏರಿದ. ಕ್ರಿ.ಶ. 803ರಲ್ಲಿ ಪಲ್ಲವರ ಪ್ರದೇಶದಲ್ಲಿ ಬೀಡು ಬಿಟ್ಟಾಗ ಶ್ರೀಭವನ್‌ದ ದೊರೆ ಶಾರ್ವನು ಗೋವಿಂದನ ಬಳಿ ಬಂದು ಕಪ್ಪವನ್ನಿತ್ತ. ಇದರಿಂದ ತೃಪ್ತಿಗೊಂಡ ಗೋವಿಂದ ಶ್ರೀಭವನ್‌ಗೆ ಹೋಗಿ ಜಯಿಸಿದಾಗಿನ ಸಂದರ್ಭದಲ್ಲಿ ಜನಿಸಿದ ತನ್ನ ಮಗುವಿಗೆ, ಮಿತ್ರರಾಜನ ಗೌರವಾರ್ಥ ಶಾರ್ವ ಎಂದು ಹೆಸರಿಟ್ಟ. ಆತನೇ ಅಮೋಘವರ್ಷ.
ಪ್ರಭೂತವರ್ಷ, ಜಗತ್ತುಂಗ, ಅನುಪಮ, ತ್ರಿಭುವನ ಧವಳ, ಕೀರ್ತಿ ನಾರಾಯಣ ಮುಂತಾದ ಬಿರುದುಗಳು ಗೋವಿಂದನಿಗಿದ್ದವು. ಮಯೂರ ಖಂಡಿ (ಬಸವ ಕಲ್ಯಾಣದ ಬಳಿ ಈತನ ರಾಜಧಾನಿಯಾಗಿತ್ತು.

**ಅಮೋಘ ವರ್ಷ :**

ನೃಪತುಂಗ, ಅತಿಶಯಧವಳ, ರಟ್ಟ ಮಾರ್ತಾಂಡ, ವೀರನಾರಾಯಣ ಮುಂತಾದ ಬಿರುದು ಈತನಿಗೆ ಇದ್ದವು.
ಅರಬ್ ಲೇಖಕ ಸುಲೆಮಾನ್ ಭಾರತಕ್ಕೆ ಬಂದಾಗ (ಕ್ರಿ.ಶ. 851) ಅಮೋಘವರ್ಷನ ರಾಷ್ಟ್ರಕೂಟ ಸಾಮ್ರಾಜ್ಯ ಜಗತ್ತಿನ ನಾಲ್ಕು ಸಾಮ್ರಾಜ್ಯಗಳಲ್ಲಿ ಒಂದು ಎಂದಿದ್ದಾನೆ. (ಪೂರ್ವದ ರೋಂ ಸಾಮ್ರಾಜ್ಯ, ಚೀನಾದ ಸಾಮ್ರಾಜ್ಯ ಹಾಗೂ ಬಾಗ್ದಾದ್‌ನ ಖಲೀಫ್ ಸಾಮ್ಯಾಜ್ಯ ಉಳಿದ ಮೂರು ಸಾಮ್ರಾಜ್ಯಗಳು). ರಾಷ್ಟ್ರಕೂಟ ರಾಜ್ಯ ಆಗ ಅಷ್ಟು ದೊಡ್ಡದಾಗಿತು.
ಅಮೋಘವರ್ಷ ರಾಷ್ಟ್ರಕೂಟರ ಹೊಸ ರಾಜಧಾನಿ 'ಮಳಖೇಡ'ವನ್ನು ಕಟ್ಟಿಸಿದ. ಈ ರಾಜಧಾನಿಗೆ 'ಅಮರೇಂದ್ರ ಪುರೋಸಾಹಸಿ' ಎನ್ನುವ ಖ್ಯಾತಿ ಇತ್ತು.
ಅಮೋಘವರ್ಷ ವಿದ್ವಾಂಸನೂ ಆಗಿದ್ದ. ಆತ 'ಪ್ರಶ್ನೋತ್ತರ ಮಾಲಿಕಾ' ಎಂಬ ಸಂಸ್ಕೃತ ಕೃತಿ ರಚಿಸಿದ್ದಾನೆ.
ಕನ್ನಡದ ಮೊದಲ ಉಪಲಬ್ಧ ಗ್ರಂಥ 'ಕವಿರಾಜ ಮಾರ್ಗ' ಈತನಿಂದಲೇ ರಚಿತವಾಯಿತೆಂದು ಕೆಲವರು ಹೇಳುತ್ತಾರೆ. ಆದರೆ ಇದನ್ನು ಬರೆದವ ಈತನ ಆಸ್ಥಾನ ಕವಿ ಶ್ರೀವಿಜಯ ಎಂದು ನಂಬಲಾಗಿದೆ. 'ಶಬ್ದಾನುಶಾಸನ', 'ಅಮೋಘವೃತ್ತಿ' ಬರೆದ ಶಾಕಟಾಯನ, 'ಹರಿವಂಶ', ಆದಿಪುರಾಣ', 'ಜಯಧವಲಾ' ರಚಿಚಿದ ಜಿನಸೇನಾಚಾರ್ಯ ಆತನ ಆಶ್ರದಾತರಾಗಿದ್ದರು. **'ಗಣಿತಸಾರ ಸಂಗ್ರಹ'**ದ ಕರ್ತೃ ಮಹಾವೀರಾಚಾರ್ಯ ಆತನ ಸಮಕಾಲೀನ.

ಕುಮುದೇಂದು ಎಂಬ ಜೈನಮುನಿ ತಾನು ಅಮೋಘವರ್ಷನ ಗುರು ಎಂದು ಹೇಳಿಕೊಂಡಿದ್ದಾನೆ. ತನ್ನ ನಾಡಿನಲ್ಲಿ ಬರಗಾಲ ಬೀಲಬಾರದು. ಅಂಟುರೋಗಗಳು ಹರಡಬಾರದು ಎಂದು ಅಮೋಘವರ್ಷಹರಕೆ ಹೊತ್ತು ತನ್ನ ಎಡಗೈ ಹೆಬ್ಬೆರಳನ್ನು ಕೊಲ್ಲಾಪುರದ ಮಹಲಕ್ಷ್ಮಿಗೆ ಬಲಿ ಕೊಟ್ಟನೆಂಬ ಐತಿಹ್ಯ ಇದೆ.

**ಎರಡನೆ ಕೃಷ್ಣ :**

ಕ್ರಿ.ಶ 879ರಲ್ಲಿ ಈತ ಪಟ್ಟ ಏರಿಕೆ. ಗುರ್ಜರ ಪ್ರತೀಹಾರ ಭೋಜನವನ್ನು ಸೋಲಿಸಿದ. ಆದರೆ ವೆಂಗಿಯ ಚಾಳುಕ್ಯರಿಂದ ಅನೇಕ ಬಾರಿ ಸೋತ. ಚೇದಿ ರಾಜ ಕೊಡ್ಯಾಲನ ಮಗಳನ್ನು ಮದುವೆಯಾಗಿದ್ದ ಈತ ಚೇದಿಗಳಿಂದ ಅಪಾರ ಸಹಾಯ ಪಡೆದ. 'ಗುಣಭದ್ರ' ಈತನ ಗುರುಗಳು.

**ಮೂರನೇ ಇಂದ್ರ :**

ಕ್ರಿ.ಶ. 914ರಲ್ಲಿ ಈತ ರಾಜನಾದ. **ನಿತ್ಯವರ್ಷ** ಈತನ ಬಿರುದು. ಮಹಿಪಾಲನನ್ನು ಸೋಲಿಸಿ ಕನೌಜನ್ನು ವಶಪಡಿಸಿಕೊಂಡ.
ಕ್ರಿ.ಶ 929ರಲ್ಲಿ ಈತ ಮರಣ ಹೊಂದಿದ ನಂತರ ಹಿರಿಯ ಮಗ ಅಮೋಘವರ್ಷ ನಂತರ ಅವನ ಸೋದರ ನಾಲ್ಕನೆ ಗೋವಿಂದ ಆಳಿದರು. ಇವರು ದುರ್ಬಲರಾಗಿದ್ದರು. ಕನೌಜ್ ಮತ್ತೆ ಪ್ರತೀಹಾರರ ಕೈ ಸೇರಿತು.

**ಮೂರನೆ ಕೃಷ್ಣ :**

- ಕ್ರಿ.ಶ 139ರಲ್ಲಿ ಈತ ಪಟ್ಟ ಏರಿದ.
- ಕಂಚಿಯ ಪಲ್ಲವರನ್ನು, ತಂಜಾವೂರಿನ ಚೋಳರನ್ನು ಸೋಲಿಸ 'ಕಚ್ಚಿಯಂ ತಂಜೈಯುಂ ಕೊಂಡ' ಎಂಬ ಬಿರುದು ಪಡೆದ.
- ಈತ ರಾಮೇಶ್ವರದಲ್ಲಿ ಕೃಷ್ಣೇಶ್ವರ ದೇವಾಲಯ ಕಟ್ಟಿಸಿದ.
- ಇಡೀ ದಕ್ಷಿಣಾಪಥ ಈತನ ಕಾಲದಲ್ಲಿ ರಾಷ್ಟ್ರಕೂಟರ ವಶವಾಯಿತು.
- ಈತ ಸಾಹಿತ್ಯ ಪ್ರಿಯನೂ ಆಗಿದ್ದ.
- ಪೊನ್ನ ಇವನ ಕಾಲದಲ್ಲಿ **'ಶಾಂತಿಪುರಾಣ'** ಬರೆದ.
- ಹಲಾಯುಧ **'ಕವಿ ರಹ ಸ್ಯ'** ಎನ್ನುವ ಕೃತಿಯನ್ನು ರಚಿಸಿದ.

**ಖೊಟ್ಟಿಗ :**

ಕ್ರಿ.ಶ 968ರಲ್ಲಿ ಈತ ಪಟ್ಟ, ದುರ್ಬಲನಾಗಿದ್ದ ಈತನ ಕಾಲದಲ್ಲಿ ರಾಷ್ಟ್ರಕೂಟರ ಪತನ ಆರಂಭವಾಯಿತು. ಕ್ರಿ.ಶ 972ರಲ್ಲಿ ಪರಮಾರ ಸೀಯಕ ಮಳಖೇಡಕ್ಕೆ ಮುತ್ತಿಗೆ ಹಾಕಿದ. ಖೊಟ್ಟಿಗ ನಿಧನ ಹೊಂದಿದ.
ಎರಡನೆ ಕರ್ಕ ರಾಷ್ಟ್ರಕೂಟರ ಕೊನೆಯ ದೊರೆ **(972–73)** ಚಾಳುಕ್ಯರ ಎರಡನೆ ತೈಲಪ ಈತನನ್ನು ಪದಚ್ಯುತಗೊಳಿಸಿದ. ನಂತರ ರಾಷ್ಟ್ರಕೂಟರ ರಾಜರು ಚಾಳುಕ್ಯರ ಮಾಂಡಲಿಕರಾಗಿ ವೇಲುಗ್ರಾಮ (ಬೆಳಗಾವಿ) ಹಾಗೂ ಸೌಂದತ್ತಿಗಳಿಂದ ಆಳಿದರು.

**ಕಲ್ಯಾಣದ ಚಾಳುಕ್ಯರು (ಕ್ರಿ.ಶ 923–1189)**

- ಇವರು ಬಾದಾಮಿಯ ಚಾಳುಕ್ಯರ ವಂಶಜರೆಂದು ಹೇಳಿದ್ದಾರೆ.
- ಕ್ರಿ.ಶ. 973ರಲ್ಲಿ ತೈಲಪ ಮಳಖೇಡದಲ್ಲಿ ಪಟ್ಟಕ್ಕೇರಿದ.
- ತೈಲಪ ಎರಡು ಶತಮಾನಗಳಿಂದ ಮೂಲೆ ಗುಂಪಾಗಿದ್ದ ಚಾಲುಕ್ಯರನ್ನು ಮತ್ತೆ ಒಂದು ಪ್ರಬಲ ಶಕ್ತಿಯನ್ನಾಗಿ ಒಂದು ಮಾಡಿದ.
- ಗಂಗವಂಶದ ಪಾಂಚಲ ಮರ್ದನನನ್ನು ಸೋಲಿಸಿ ತೈಲಪ 'ಪಾಂಚಲಮರ್ದನ ಪಂಚಾನನ' ಎಂಬ ಬಿರುದು ತೊಟ್ಟ.
- 'ಅಹಮಮಲ್ಲ' ಎಂದೂ ಖ್ಯಾತನಾಗಿದ್ದತೈಲಪ 'ಮಹಾರಾಜಾಧಿರಾಜ,' 'ಪರಮೇಶ್ವರ', 'ಸತ್ಯಾಶ್ರಯ ಕುಲತಿಲಕ', 'ಶ್ರೀ ಪೃಥ್ವಿವಲ್ಲಭ' ಮುಂತಾದ ಬಿರುದುಗಳನ್ನು ಹೊಂದಿದ್ದ.
- ಚಾಳುಕ್ಯರು ಗಂಗರನ್ನು ನಿರ್ಮೂಲ ಮಾಡಿದ ಚೋಳರ ವಿರುದ್ಧ ಯುದ್ಧಕ್ಕೆ ನಿಂತರು.

**ಸತ್ಯಾಶ್ರಯ**

- ತೈಲಪನ ನಂತರ ಕ್ರಿ.ಶ 997ರಲ್ಲಿ ಸತ್ಯಾಶ್ರಯ ಪಟ್ಟಕ್ಕೇರಿದೆ. ಚೋಳರನ್ನು ಹಿಮ್ಮೆಟ್ಟಿಸಿದ.

- 'ಇರಿವಬೆಡಂಗ' ಎಂಬ ಬಿರುದು ಹೊಂದಿದ್ದ.
- ರನ್ನ ಸತ್ಯಾಶ್ರಯನ ಆಶ್ರಯದಲ್ಲಿದ್ದ.

**ಜಯಸಿಂಹ**

- ಕ್ರಿ.ಶ. 1015ರಲ್ಲಿ ಜಯಸಿಂಹ ಪಟ್ಟಕ್ಕೇರಿ, ಚೋಳರನ್ನು ಸೋಲಿಸಿ 'ಚೋಳೋಗ್ರ ಕಾಲಾನಲ' ಎಂದು ಬಿರುದು ಪಡೆದ.
- ಆಯಸಿಂಹನ ಅಕ್ಕ ಅಕ್ಕಾದೇವಿ ಪರಿಣಿತ ಸೇನಾಗಿಯಾಗಿದ್ದಳು. 'ರಣಭೈರವಿ' ಬಿರುದು ಆಕೆಗಿತ್ತು.
- ಜಯಸಿಂಹನ ಆಸ್ಥಾನದಲ್ಲಿ ದುರ್ಗಸಿಂಹ ಕನ್ನಡದಲ್ಲಿ 'ಪಂಚತಂತ್ರ' ರಚಿಸಿದ. ಇದು ವಸುಭಾಗಭಟ್ಟನ ಸಂಸ್ಕೃತ ಪಂಚತಂತ್ರದ ರೂಪಾಂತರ

**ಸೋಮೇಶ್ವರ**

- ಕ್ರಿ.ಶ 1043ರಲ್ಲಿ ಪಟ್ಟಕ್ಕೇರಿದ.
- 'ತ್ರೈಲೋಕ್ಯಮಲ್ಲ' ಈತನ ಬಿರುದು
- ಹೊಸ ರಾಜಧಾನಿ 'ಕಲ್ಯಾಣ'ವನ್ನು ಕಟ್ಟಿದ. ಆದರೆ ಇದನ್ನು ಚೋಳರು ಸೂರೆ ಮಾಡಿದರು.
- ಕ್ರಿ.ಶ 1054ರಲ್ಲಿ ಚೋಳರ ರಾಜಾಧಿರಾಜ ಚಾಳುಕ್ಯರ ಖಡ್ಗಕ್ಕೆ ಬಲಿಯಾದ. ಈ ವಿಜಯದ್ ಸಂಕೇತವಾಗಿ ಚಾಳುಕ್ಯರು ಅಣ್ಣಿಗೇರಿಯಲ್ಲಿ 'ಚೋಳಂಗೊಂಡ ಶ್ರೀ ಪುರುಷ ಮಂದಿರ'ವನ್ನು ಕಟ್ಟಿದರು.
- ಕೊನೆಗಾಲದಲ್ಲಿ ಕಾಯಿಲೆಗೆ ತುತ್ತಾದ ಸೋಮೇಶ್ವರ ಮಹಾ ಪರಾಕ್ರಮಿಯಾಗಿದ್ದ. ಆತ ಕುರುವತ್ತಿಯಲ್ಲಿ ತುಂಗಭದ್ರೆಯಲ್ಲಿ ಮುಳುಗಿ 'ಆತ್ಮಾರ್ಪಣೆ' ಮಾಡಿಕೊಂಡ.
- ಈತನ ಸಮಕಾಲಿನ – ನರಗುಂದದ ಶ್ರೀಶರಾಚಾರ್ಯ 'ಜಾತಕ ತಿಲಕ' ಬರೆದ.
- ಎರಡನೆ ಸೋಮೇಶ್ವರ ಆರನೇ ವಿಕ್ರಮ ಹಾಗೂ ಜಯಸಿಂಹ ಸೋಮೇಶ್ವರನ ಮಕ್ಕಳು.
- ಕ್ರಿ.ಶ 1068ರಲ್ಲಿ ಎರಡನೆ ಸೋಮೇಶ್ವರ ಪಟ್ಟಕ್ಕೇ ಬಂದ.
- ಈತ 'ಭುವನೇಕಮಲ್ಲ' ಎಂದು ಬಿರುದು ಪಡೆದಿದ್ದ.
- ಈತ ಚೋಳ ವೀರರಾಜೇಂದ್ರನ ಆಕ್ರಮಣವನ್ನು ವಿಫಲಗೊಳಿಸಿದ.

**ಆರನೆ ವಿಕ್ರಮ (ಕ್ರಿ.ಶ. 1076–1127)**

- ಕ್ರಿ.ಶ. 1076ರಲ್ಲಿ ಅಣ್ಣ ಎರಡನೇ ಸೋಮೇಶ್ವರನನ್ನು ಸೋಲಿಸಿ ಕಲ್ಯಾಣವನ್ನುಗೆದ್ದು, ಕ್ರಿ.ಶ. 1077ರ ಪಿಂಗಳ ಸಂವತ್ಸರದಲ್ಲಿ ಪಟ್ಟಾಭಿಷೇಕ ಮಾಡಿಕೊಂಡು ಹೊಸ ಸಂವತ್ಸರ ಆರಂಭಿಸಿದ.
- 50 ವರ್ಷಕ್ಕಿಂತ ಹೆಚ್ಚು ಕಾಲ ಆಳಿದ ಈತ 'ತ್ರಿಭುವನಮಲ್ಲ', 'ಪೆರ್ಮಾಡಿ ದೇವ' ಎಂಬ ಬಿರುದುಗಳನ್ನು ಹೊಂದಿದ್ದ.
- ಚಾಳುಕ್ಯರ ಮಂಡಲೀಕರಾಗಿದ್ದ ದ್ವಾರಸಮುದ್ರದ ಹೊಯ್ಸಳರು ಒಂದನೆ ಬಲ್ಲಾಳನ ಕಾಲದಲ್ಲಿ ಬಂಡೆದ್ದರು. ವಿಕ್ರಮಾದಿತ್ಯ ಕ್ರಿ.ಶ 1122ರಲ್ಲಿ ಇವರನ್ನು ಸೋಲಿಸಿದ.
- ಕಾಶ್ಮೀರದಲ್ಲಿ ಕವಿ ಬಿಲ್ಹಣ ವಿಕ್ರಮನ ಸ್ಥಾನದಲ್ಲಿ 'ವಿಕ್ರಮಾಂಕ ದೇವ ಚರಿತಂ' ಕೃತಿಯನ್ನು ಸಂಸ್ಕೃತದಲ್ಲಿ ರಚಿಸಿದ.
- ಮಿತಾಕ್ಷರ ಸಂಹಿತೆ'ಯನ್ನು ವಿಜ್ಞಾನೇಶ್ವರ ವಿಕ್ರಮನ ಆಶ್ರಯದಲ್ಲಿಯೇ ರಚಿಸಿದ.
- ವಿಕ್ರಮನ ತಮ್ಮ ಕೀರ್ತಿವರ್ಮ 'ಗೋವೈದ್ಯ' ಬರೆದ
- 'ಧರ್ಮಾಮೃತ' ಬರೆದ ನಯಸೇನ ವಿಕ್ರಮನ ಸಮಕಾಲೀನ
- ವಿಕ್ರಮನ ರಾಣಿ ಜಯದೇವಿ 'ನೃತ್ಯ ವಿದ್ಯಾಧಾರಿ,' 'ಅಭಿನವ ಸರಸ್ವತಿ' ಎಂದು ಖ್ಯಾತಳಾಗಿದ್ದಳು.

**ಮೂರನೆ ಸೋಮೇಶ್ವರ :**

- ಆರನೆ ವಿಕ್ರಮನ ಮಗ. ಈತ ಕ್ರಿ.ಶ. 1127ರಲ್ಲಿ ಪಟ್ಟಕ್ಕೇರಿದ 'ಭೂಲೋಕ ಮಲ್ಲ' ಈತನ ಬಿರುದು.
- ಸರ್ವಜ್ಞಭೂತ', 'ಸರ್ವಜ್ಞಾನ ಚಕ್ರವರ್ತಿ' ಮುಂತಾದ ಬಿರುದುಗಳನ್ನೂ ಧರಿಸಿದ್ದ ಈತ 'ಅಭಿವಕ್ಷಿತಾರ್ಥ ಚಿಂತಮಣಿ' ಅಥವಾ 'ಮಾನಸೋಲ್ಲಾಸ' ಎಂಬ ಸಂಸ್ಕೃತ ವಿಶ್ವ ಕೋಶ ರಚಿಸಿದ್ದಾನೆ.

**ಪತನ :**

- ಕ್ರಿ.ಶ 1149ರಲ್ಲಿ ಮೂರನೆ ತೈಲನು ಪಟ್ಟಕ್ಕೇರಿದ. ಇಲ್ಲಿಂದ ಕಲ್ಯಾಣದ ಚಾಳುಕ್ಯರ ಪತನ ಆರಂಭವಾಯಿತು.
- ಕ್ರಿ.ಶ 1153ರಲ್ಲಿ ಕಾಳಚೂರ್ಯ ಬಿಜ್ಜಳ ಸ್ವತಂತ್ರನಾಗಿ ಆಳಲು ಆರಂಭಿಸಿದ.
- ಕ್ರಿ.ಶ 1158ರಲ್ಲಿ ನಾಲ್ಕನೆ ಸೋಮೇಶ್ವರ ಅಧಿಕಾರಕ್ಕೇರಿದ. ಆದರೆ ನಾಲ್ಕೈದು ವರ್ಷಗಳಲ್ಲಿಯೇ ಆತ ಕಲ್ಯಾಣ ತ್ಯಜಿಸಿದ.

- 20 ವರ್ಷ ಕಲಚೂರಿಗಳು ಕಲ್ಯಾಣದಿಂದ ಆಳಿದರು. ಆದರೆ ಕ್ರಿ.ಶ 1183–1184ರಲ್ಲಿ ಸೋಮೇಶ್ವರ ಮತ್ತೆ ಕಲ್ಯಾಣ ಗೆದ್ದ. ಆದರೆ ಸೇವುಣರು ಪ್ರಬಲರಾಗಿ ಕಲ್ಯಾಣ ವಶಪಡಿಸಿಕೊಂಡರು.
- ಬನವಾಸಿಯ ಕದಂಬರಲ್ಲಿ ಸೋಮೇಶ್ವರ 13ನೇ ಶತಮಾನದ ಆರಂಭದವರೆಗೂ ಆಶ್ರಯ ಪಡೆದು ಬದುಕಿದ್ದ.
- ಕಲ್ಯಾಣದ ಚಾಳುಕ್ಯರ ಅಧಿಕಾರ ಕ್ರಿ.ಶ 1189ರಲ್ಲಯೇ ಕಳಚಿತು.

### 4.6 ಕಲಚೂರಿಗಳು (ಕ್ರಿ.ಶ. 1162–1184)

- ಇವರು ಮೂಲತಃ ಕಾಲಿಂಜರ್‌ಕ್ಕೆ ಸೇರಿದವರು
- 'ಸುವರ್ಣ ವೃಷಭ' ಇವರ ಲಾಂಛನ
- ಉಚಿತ ಎಂಬ ಈ ವಂಶದ ಅರಸು ಚಾಳುಕ್ಯರ ಮಾಂಡಳಿಕನಾಗಿ ಮಂಗಳವಾಡದಲ್ಲಿದ್ದ.
- ಕ್ರಿ.ಶ. 1162ರಲ್ಲಿ ಚಾಳುಕ್ಯ ತೈಲಪ ಮರಣ ಹೊಂದಿದಾಗ ಸ್ವತಂತ್ರನಾದ ಬಿಜ್ಜಳ ಕಲ್ಯಾಣದಲ್ಲಿ ಅಧಿಕಾರಕ್ಕೇರಿದ.
- 'ಕಲ್ಯಾಣ ಪುರವರಾಧೀಶ್ವರ', 'ಭುಜಬಲ ಚಕ್ರವರ್ತಿ', 'ಮಹಾ ರಾಜಾಧಿರಾಜ' ಮುಂತಾದ ಬಿರುದುಗಳನ್ನು ಬಿಜ್ಜಳ ಹೊಂದಿದ್ದ.
- ಕಲ್ಯಾಣದಲ್ಲಿ ಬಸವಣ್ಣನವರು ಸಾಮಾಜಿಕ ಕ್ರಾಂತಿ ಉಂಟುಮಾಡಿದ್ದು ಇದೇ ಕಾಲದಲ್ಲಿ
- ಬಸವ–ಬಿಜ್ಜಳ ಭಿನ್ನಾಭಿಪ್ರಾಯ, ಕ್ರಿ.ಶ 1167ರಲ್ಲಿ ಬಸವಣ್ಣನವರಿಂದ ಕಲ್ಯಾಣ ತ್ಯಾಗ. ಕ್ರಿ.ಶ. 1168ರ ಬಿಜ್ಜಳನ ಕೊನೆ
- ಬಿಜ್ಜಳನ ನಂತರ ಆತನ ಮಗ ಸೋಯಿದೇವ ಕ್ರಿ.ಶ. 1176ರ ವರೆಗೆ ಆಳಿದ ಕ್ರಿ.ಶ.
- 1184ರಲ್ಲಿ ಕಲಚೂರಿಗಳು ಕ್ಷೀಣಿಸಿದರು.

### 4.7 ಯಾದವರು (ಸೇವುಣರು) ಕ್ರಿ.ಶ. 1189–1318:

- ದೇವಗಿರಿಯ ಸೇವುಣರು (ಯಾದವರು ) ಆರಂಭದಲ್ಲಿ ರಾಷ್ಟ್ರಕೂಟರ ಹಾಗೂ ಚಾಳುಕ್ಯರ ಮಾಂಡಳಿಕರಾಗಿದ್ದರು
- ಇವರು ದ್ವಾರಕೆಯ ಯಾದವ ವಂಶದವರು
- ಸುಬಾಹು ಎಂಬ ಯಾದವ ವಂಶದ ಪ್ರಮುಖನ ಮಗನಾದ ದೃಢಪ್ರಹಾರ ಎಂಬಾತ ದಕ್ಷಿಣಕ್ಕೆ ಬಂದು ರಾಜ್ಯ ಸ್ಥಾಪಿಸಿದ. ಅವನ ಮಗ ಸೇವುಣ ಚಂದ್ರನಿಂದ ಇವರಿಗೆ ಸೇವುಣರು ಎನ್ನುವ ಹೆಸರು ಬಂತು.
- ಇವರು ವೈಷ್ಣವರು.
- ಗರುಡ ಇವರ ಲಾಂಛನ
- ಸೇವುಣರು ದೇವಗಿರಿ (ಮಹಾರಾಷ್ಟ್ರದ ದೌಲತಾಬಾದ್)ಯನನು ಹೊಸ ರಾಜಾಧಾನಿಯನ್ನಾಗಿ ನಿರ್ಮಿಸಿಕೊಂಡರು
- ಕ್ರಿ.ಶ 1173–1192ರ ಅವಧಿಯಲ್ಲಿ ಐದನೆ ಭಿಲ್ಲಮನ ಕಾಲದಿಂದ ಇವರು ಪ್ರಬಲರಾದರು.
- ಕ್ರಿ.ಶ 1186ರಲ್ಲಿ ಐದನೆ ಭಿಲ್ಲಮ ಕಲ್ಯಾಣವನ್ನು ವಶಪಡಿಸಿಕೊಂಡ.
- ಕ್ರಿ.ಶ 1190ರಲಿ ಹೊಯ್ಸಳ ಎರಡನೆ ಬಲ್ಲಾಳನೊಡನೆ ಧಾರವಾಡದ ಸೊರಟೂರಿನ ಬಳಿ ಯುದ್ಧ ಮಾಡಿ ಸೋತ.
- ಸೇವುಣರಲ್ಲಿ ಎರಡನೆ ಸಿಂಘಣ (ಕ್ರಿ.ಶ. 119–1247) ಅತ್ಯಂತ ಪ್ರಖ್ಯಾತ. ಆದರೆ ದೆಹಲಿ ಸುಲ್ತಾನರಿಂದ ಸೇವುಣರು ಕ್ರಿ.ಶ. 1318ರಲ್ಲಿ ಸಂಪೂರ್ಣವಾಗಿ ಸೋತರು.
- ಮೂರನೆ ಸಿಂಘಣ ಯಾದವ ವಂಶದ ಕೊನೆಯ ರಾಜ. ಕ್ರಿ.ಶ. 1334ರಲ್ಲಿ ಈತ ದೆಹಲಿ ಸುಲ್ತಾನರ ಮಾಂಡಲೀಕನಾಗಿದ್ದ.

**ನೆನಪಿಡಿ : ಬಿರುದುಗಳು**

ಎರಡನೆ ಭಿಲ್ಲಮ : **ಮಹಾಸಾವಂತ, ವಿಜಯಾಭರಣ**

ಮೂರನೆ ಭಿಲ್ಲಮ : **ಯಾದವ ನಾರಾಯಣ**

ಮಹಾದೇವ : **ಕೊಂಕಣ ಚಕ್ರವರ್ತಿ**

- ಮಹಾದೇವನ ಮಂತ್ರಿಯಾಗಿದ್ದ ಹೇಮಾದ್ರಿ 'ಚಿತ್ರುರ್ವರ್ಗ ಚಿಂತಾಮಣಿ' ಹಾಗೂ 'ಕೈವಲ್ಯ ದೀಪಿಕಾ' ಬರೆದಿದ್ದಾನೆ.
- ವಾಗ್ಭಟನು 'ಅಷ್ಟಾಂಗ ಹೃದಯ', 'ಆಯುರ್ವೇದ ರಸಾಯನ' ಬರೆದಿದ್ದಾನೆ. ಚಾಂಗದೇವ 'ಬೃಹಜ್ಜಾತಕ'ದ ಮೇಲೆ ಟೀಕಾ ಗ್ರಂಥ: ಶಾಂರ್ಙ್ಗದೇವ 'ಸಂಗೀತ ರತ್ನಾಕರ', ಕಮಲಭಟ 'ಶಾಂತೀಶ್ವರ ಪುರಾಣ' ರಚಿಸಿದರು.
- ಸೇಪುಣರು ಮಹಾರಾಷ್ಟ್ರದಲ್ಲಿ 'ಹೇಮಡಾಪಂಥಿ' ಎಂಬ ವಿಶಿಷ್ಟ ದೇವಾಲಯ ಕಟ್ಟಡಗಳನ್ನು ನಿರ್ಮಿಸಿದ್ದಾರೆ.
- ಕ್ರಿ.ಶ 1296ರಲ್ಲಿ ಅಲ್ಲಾವುದ್ದೀನ್ ಖಿಲ್ಜಿ ದೇವಿಗಿರಿಯನ್ನು ಮುತ್ತಿ ಅಪಾರ ಸಂಪತ್ತು ದೋಚಿ ದೆಹಲಿ ಸುಲ್ತಾನನಾದ.

- ಕ್ರಿ.ಶ 1307ರಲ್ಲಿ ಮಲ್ಲಿ ಕಾಫರ್ ದೇವಗಿರಿ ಮೇಲೆ ದಂಡೆತ್ತಿ ರಾಜ ರಾಮ ಚಂದ್ರನ್‌ನನ್ನು ಸೆರೆ ಹಿಡಿದು ದೆಹಲಿಯಲ್ಲಿ ಬಂಧಿಸಿದ. ಕ್ರಿ.ಶ. 1312ರ ರವರೆಗೆ ರಾಮಚಂದ್ರ ದೆಹಲಿ ಸುಲ್ತಾನ್‌ನಿಗೆ ಮಾಂಡಳಿಕನಾದ.

**4.8 ಹೊಯ್ಸಳರು (ಕ್ರಿ.ಶ. 1000–1346)**

- ಇವರು ಮಲೆನಾಡಿನ ಶಶಂಕಪುರದವರು.
- ಇವರ ಮೂಲಪುರಷ ಸಳ. ಈತ ಹುಲಿಯನ್ನು ಹೊಡೆದಿದ್ದರಿಂದ ಇವರ ವಂಶ 'ಹೊಯ್ಸಳ' ಎಂಬ ಬಿರುದು ಹೊಂದಿತು.
- ಕಾಮ (ಕ್ರಿ.ಶ. 1006–1047) ಇವರ ಮೊದಲ ದೊರೆ.
- ನಂತರ ವಿನಯಾದಿತ್ಯ (ಕ್ರಿ.ಶ. 1047–1098), ಎರಡನೆ ವಿನಯಾದಿತ್ಯ (ಎರೆಯಂಗ) ಕ್ರಿ.ಶ. 1102ರ ವರೆಗೆ ಆಳಿದ.
- ಎರೆಯಂಗನ ನಂತರ ಆತನ ಹಿರಿಯ ಮಗ ಬಲ್ಲಾಳ ಪಟ್ಟಕ್ಕೇರಿದ. 'ಅಭಿನವ ಪಂಪ' ನಾಗಚಂದ್ರ ಬಲ್ಲಾಳನ ಆಸ್ಥಾನದಲ್ಲಿದ್ದ. ಈತ ಜೈನ ಪಂಪರಾಮಾಯಣ ರಚಿಸಿದ್ದಾನೆ.

**ವಿಷ್ಣುವರ್ಧನ (ಕ್ರಿ.ಶ. 1108–112) :**

ಈತ ಬಲ್ಲಾಳನ ಸೋದರ. ಬಿಟ್ಟಿದೇವ ಈತನ ಇನ್ನೊಂದು ಹೆಸರು. ವಿಷ್ಣುವರ್ಧನ ಹೊಯ್ಸಳರ ಮೊದಲ ಶ್ರೇಷ್ಠ ದೊರೆ. ಈತ ಚೋಳರನ್ನು ಗಂಗವಾಡಿಯಿಂದ ಓಡಿಸಿ 'ತಲಕಾಡುಗೊಂಡ' ಎಂಬ ಬಿರುದು ಧರಿಸಿದ. ಅವರನ್ನು ಕಂಚಿವರೆಗೂ ಬೆನ್ನಟ್ಟಿ 'ಕಂಚಿಗೊಂಡ' ಎಂದೂ ಕರೆಸಿಕೊಂಡ.

- ರಾಜಧಾನಿಯನ್ನು ಬೇಲೂರಿನಿಂದ ದ್ವಾರಸಮುದ್ರಕ್ಕೆ ವರ್ಗಾಯಿಸಿದ.
- ರಾಮಾನುಜಾಚಾರ್ಯರಿಗೆ ಆಶ್ರಯ ನೀಡಿದ. ವಿಶಿಷ್ಟಾದ್ವೈತದ ವೈಷ್ಣವ ಸಂಪ್ರದಾಯವನ್ನು ವಿಷ್ಣುವರ್ಧನ ಸ್ವೀಕರಿಸಿದ.
- ಈತನ ಜೈನ ರಾಣಿ ಶಕುಂತಲೆ 'ನಾಟ್ಯ ಸರಸ್ವತಿ' ಎನಿಸಿದ್ದಳು.
- ಈತ 'ರಾಜ್ಯಾದಿತ್ಯ', 'ಕ್ಷೇತ್ರ ಗಣಿತ', 'ವ್ಯವಹಾರ ಗಣಿತ' ಗ್ರಂಥಗಳನ್ನು ಕನ್ನಡದಲ್ಲಿ ಬರೆದ.
- ಕ್ರಿ.ಶ. 999ರಿಂದ ಚೋಳರ ವಶದಲ್ಲಿದ್ದ ಗಂಗವಾಡಿಯನ್ನು ಮುಕ್ತಗೊಳಿಸಿ, ಆ ಜಯದ ನೆನಪಿಗೆ ಬೇಲೂರಿನಲ್ಲಿ ಚೆನ್ನಕೇಶವ ದೇವಾಲಯ ನಿರ್ಮಿಸಿದ.

**ಎರಡನೆ ಬಲ್ಲಾಳ (ಕ್ರಿ.ಶ. 1173–1220)**

ಈತ ವಿಷ್ಣುವರ್ಧನನ ಮೊಮ್ಮಗ. ಕ್ರಿ.ಶ. 1187ರಲ್ಲಿ ಚಾಳುಕ್ಯರ ನಾಲ್ಕನೆ ಸೋಮೇಶ್ವರನನ್ನು ಸೋಲಿಸಿದ. ಕ್ರಿ.ಶ. 1190ರಲ್ಲಿ ಸೊರಟೂರಿನಲ್ಲಿ ಸೇವುಣರ ಐದನೆ ಭಿಲ್ಲಮನನ್ನು ಸೋಲಿಸಿದ.

ಪಾಂಡ್ಯರನ್ನು ಸೋಲಿಸಿ. ಚೋಳರನ್ನು ರಕ್ಷಿಸಿ **'ಚೋಳರಾಜ್ಯ ಪ್ರತಿಷ್ಠಾಪನಾಚಾರ್ಯ'** ಬಿರುದು ಪಡೆದ. ಈತನಿಗೆ 'ಗಿರಿದುರ್ಗ ಮಲ್ಲ', 'ಶನಿವಾರ ಸಿದ್ಧಿ' ಬಿರುದುಗಳಿದ್ದವು. ಲಕ್ಕುಂಡಿ ಬಲ್ಲಾಳನ ಎರಡನೆ ರಾಜಧಾನಿ.

- ಎರಡನೇ ನರಸಿಂಹನ ಕಾಲ (ಕ್ರಿ.ಶ. 1120–1135)ದಲ್ಲಿ ಹೊಯ್ಸಳರು ತಮಿಳುನಾಡಿನಲ್ಲಿ ಪ್ರವೇಶಿಸಿ ಶ್ರೀರಂಗ ಬಳಿಯ ಕುಪ್ಪಂ ಅನ್ನು ಎರಡನೇ ರಾಜಧಾನಿಯನ್ನಾಗಿ ಮಾಡಿಕೊಂಡರು.
- ಹೊಯ್ಸಳರ ಕೊನೆಯ ಪ್ರಸಿದ್ಧ ದೊರೆ ಮೂರನೆ ಬಲ್ಲಾಳ (ಕ್ರಿ.ಶ. 1291–1343). ಈತನ ಅಧಿಕಾರಿಗಳೆ ಹಕ್ಕ–ಬುಕ್ಕರು
- ಹೊಯ್ಸಳರ ಕಾಲವು ರುದ್ರಭಟ್ಟ, ಜನ್ನ, ಹರಿಹರ ಮತ್ತು ರಾಘವಾಂಕರಂಥ ಶ್ರೇಷ್ಠ ಕನ್ನಡ ಕವಿಗಳನ್ನು ಕಂಡಿತು.
- ಎರಡನೆ ಬಲ್ಲಾಳ 'ಹೊಯ್ಸಳ ಚಕ್ರವರ್ತಿ', 'ದಕ್ಷಿಣ ಚಕ್ರವರ್ತಿ' ಎಂಬ ಬಿರುದುಗಳನ್ನು ಪಡೆದಿದ್ದ.
- ಎರಡನೆ ಬಲ್ಲಾಳನ ಮಗ ವೀರ (ಎರಡನೆ) ನರಸಿಂಹ 'ಚೋಳ ಕುಲೈಕ ರಾಕ್ಷ' ಎಂಬ ಬಿರುದು ಹೊಂದಿದ್ದ.

**4.9 ವಿಜಯನಗರ ಸಾಮ್ರಾಜ್ಯ (ಕ್ರಿ.ಶ. 1336–1565)**

- 1336ರಲ್ಲಿ ಹರಿಹರ ಹಾಗೂ ಬುಕ್ಕರಿಂದ ವಿದ್ಯಾರಣ್ಯ ಗುರುಗಳ ಮಾರ್ಗದರ್ಶನದಲ್ಲಿ ಸ್ಥಾಪನೆ.
- ನಾಲ್ಕು ಸಂತತಿಗಳು–

ಸಂಗಮ ಸಂತತಿ (ಕ್ರಿ.ಶ. 1336–1485),
ಸಾಳುವ ಸಂತತಿ (ಕ್ರಿ.ಶ. 1485–1505),
ತುಳುವ ಸಂತತಿ (ಕ್ರಿ.ಶ. 1505–1565) ಹಾಗೂ
ಅರವೀಡು ಸಂತತಿ (ಕ್ರಿ.ಶ. 1565–1572).

4.9.1 ಸಂಗಮ ಸಂತತಿ ಪ್ರಮುಖರು (ಕ್ರಿ.ಶ. 1336–1485)

**ಒಂದನೆ ಹರಿಹರ (ಕಿ.ಶ. 1336–1356) :**

–1346 ರಲ್ಲಿ ಹೊಯ್ಸಳ ಸಾಮ್ರಾಜ್ಯದ ವಶ
–1347 ರಲ್ಲಿ ಕದಂಬ ರಾಜ್ಯ ವಶ

**ಬುಕ್ಕ (ಕ್ರಿ.ಶ. 1356–1377):**

–ಬಹುಮನಿ ಸುಲ್ತಾನ್ ಮುಜಾಹಿದ್ ಶಾನನ್ನು ಹಿಮ್ಮೆಟ್ಟಿಸಿದ
–ಮಧುರೈ ವಶ

**ಎರಡನೆ ಹರಿಹರ (ಕ್ರಿ.ಶ 1377–1404) :**

–ಬಹುಮನಿ ಸುಲ್ತಾನ್ ಮುಜಾಹಿದ್ ಶಾನನ್ನು ಹಿಮ್ಮೆಟ್ಟಿಸಿದ
–1398ರಲ್ಲಿ ಬಹುಮನಿ ಮೇಲೆ ಗೆಲುವು

**ಒಂದನೆ ದೇವರಾಯ (ಕ್ರಿ.ಶ. 1406–1422):**

–ಬಹುಮನಿಯ ಫಿರೋಜ್ ಶಾನೊಂದಿಗೆ ಯುದ್ಧ : ಹಿನ್ನಡೆ.
–ಬಂಕಾಪುರ ಬಹುಮನಿಯ ವಶವಾಯಿತು.

**ಎರಡನೆ ದೇವರಾಯ (ಕ್ರಿ.ಶ. 1406–1422):**

–ಮುದುಗಲ್, ರಾಯಚೂರು ಹಾಗೂ ಬಂಕಾಪುರಗಳನ್ನು ವಶಪಡಿಸಿಕೊಂಡ
–1443ರಲ್ಲಿ ಇರಾನ್‌ನ ರಾಯಭಾರಿ ಅಬ್ದುಲ್ ರಜಾಕ್ ಈತನ ಆಸ್ಥಾನಕ್ಕೆ ಭೇಟಿ ನೀಡಿದ
ನಂತರ 1485ರಲ್ಲಿ ಎರಡನೆ ವಿರೂಪಾಕ್ಷನ ಅವಧಿಯಲ್ಲಿ ಸಂಗಮ ಸಂತತಿಯ ಆಳ್ವಿಕೆ ಕೊನೆಗೊಂಡಿತು.

**4.9.2 ಸಾಳುವ ಸಂತತಿಯ ಪ್ರಮುಖರು (ಕ್ರಿ.ಶ. 1485–1505)**

**ನರಸಿಂಹ (ಕ್ರಿ.ಶ. 1458–1490):**

ಚಂದ್ರಗಿರಿಯಲ್ಲಿ ಸಾಮಂತನಾಗಿದ್ದ ಈತ ಸಂಗಮ ಸಂತತಿಯ ಕಚ್ಚಾಟದ ಲಾಭ ಪಡೆದು ವಿಜಯನಗರ ಸಾಮ್ರಾಜ್ಯಕ್ಕೆ ಅಧಿಪತಿಯಾದ.

ಇಮ್ಮಡಿ ನರಸಿಂಹ (ಕ್ರಿ.ಶ. 1495–1505):

1505ರಲ್ಲಿ ಈತನ ಕೊಲೆಯಾಯಿತು. ಸಾಳುವ ಸಂತತಿ ಆಳ್ವಿಕೆಯ ಕೊನೆಗೊಂಡಿತು.

**ತುಳದ ಸಂತತಿ ಪ್ರಮುಖರು ಕ್ರಿ.ಶ. 1505–1565):**

- ವೀರನರಸಿಂಹ ಇಮ್ಮಡಿ ನರಸಿಂಹನ ಕಾಲದಲ್ಲಿಯೇ ಪರೋಕ್ಷ ಅಧಿಕಾರ ನಡೆಸಿದ್ದ. ಇಮ್ಮಡಿ ನರಸಿಂಹನ ಕೊಲೆಯ ನಂತರ ವೀರ ನರಸಿಂಹ ತುಳುವ ಸಂತತಿ ಆರಂಭಿಸದ.

**ಕೃಷ್ಣದೇವರಾಯ (ಕ್ರಿ.ಶ 1509–1529):**

ವಿಜಯನಗರದ ರಾಜರಲ್ಲಿಯೇ ಈತ ಅತ್ಯಂ ಪ್ರಸಿದ್ಧಿಗೇರಿದಾತ. ವಿಜಯನಗರ ಎಂದೂ ಕಾಣದಷ್ಟು ಸಮೃದ್ಧಿಯನ್ನು ಈತನ ಅವಧಿಯಲ್ಲಿ ಕಂಡಿತು.

**'ಯುವನ ರಾಜ ಪ್ರತಿಷ್ಠಾಪನಾಚಾರ್ಯ'** ಎನ್ನುವ ಬಿರುದು ಈತನದಾಗಿತ್ತು.

- ಕಲ್ಬುರ್ಗಿಯಲ್ಲಿ ಬಂಧನದಲ್ಲಿದ್ದ ಬಹುಮನಿ ಸುಲ್ತಾನನ್ನು ಬಿಡುಗಡೆ ಮಾಡಿಸಿದ್ದಕ್ಕೆ ಕೃಷ್ಣದೇವರಾಯನಿಗೆ 'ಯವನರಾಜ್ಯ ಪ್ರತಿಷ್ಠಾನಾಚಾರ್ಯ' ಬಿರುದು ಬಂತು.
- ಕಲೆ, ಸಾಹಿತ್ಯಗಳನ್ನು ಅಪಾರವಾಗಿ ಪ್ರೋತ್ಸಾಹಿಸುತ್ತಿದ್ದ ಈತ ಸ್ವತಃ ವಿದ್ವಾಂಸ ಹಾಗೂ ಕವಿಯೂ ಆಗಿದ್ದ.

**ಅಚ್ಯುತರಾಯ (ಕ್ರಿ.ಶ. 1529–1542) :**

ರಾಯಚೂರಿನ ಮೇಲೆ ದಾಳಿ ಮಾಡಿದ ಇಸ್ಮಾಯಿಲ್ ಆದಿಲ್ ಖಾನ್‌ನನ್ನು ಹಿಮ್ಮೆಟ್ಟಿಸಿದ. ಗೋಲ್ಕೊಂಡದ ರಾಜ ಗಜಪತಿಯನ್ನು ಸೋಲಿಸಿ. ಬಿಜಾಪುರದ ಸುಲ್ತಾನನನ್ನು ಶಾಂತಿಗಾಗಿ ಒಪ್ಪಿಸಿದ.

**ರಕ್ಕಸತಂಗಡಿ ಕಾಳಗ :**

1565ರಲ್ಲಿ ದುಖನ್ ಸುಲ್ತಾನರೆಲ್ಲ (ಬೇರಾರ್ ಬಿಟ್ಟು) ತಾಳಿಕೋಟೆಯಲ್ಲಿ ಒಂದಾಗಿ 1565ರ ಜನೆವರಿ 23ರಂದು ವಿಜಯನಗರ ಸಾಮ್ರಾಜ್ಯವನ್ನು ಸೋಲಿಸಿದರು. ಆಗ ವಿಜಯನಗರದ ರಾಜ ರಾಮರಾಯನಾಗಿದ್ದ.
ಸದಾಶಿವ ವಿಜಯನಗರದ ಕೊನೆಯ ತುಳುವ ರಾಜ. ಈತನ ಸಾವಿನ ನಂತರ ಅರವೀಡು ಸಂತತಿ 1672ವರೆಗೂ ಆಳ್ವಿಕೆ ನಡೆಸಿತು. ಆದರೆ ಇದು ಹಿಂದಿನ ಮೂರು ಸಂತತಿಗಳಷ್ಟು ಪ್ರಭಾವ ಬೀರಲಿಲ್ಲ.

**ನೆನಪಿಡಿ :**

- ಕೃಷ್ಣದೇವರಾಉ ತನ್ನ 'ಆಮುಕ್ತ ಮಾಲ್ಯದ' ತೆಲುಗು ಕೃತಿಯನ್ನು ತನ್ನನ್ನು 'ಕನ್ನಡರಾಯ' ಎಂದು ಕರೆದುಕೊಂಡಿದ್ದಾನೆ.
- ವಿಜಯನಗರದ ಸ್ಥಾಪನೆ ಕಾಲಕ್ಕೆ ವಿದ್ಯಾತೀರ್ಥರು ಶೃಂಗೇರಿ ಪೀಠದಲ್ಲಿದ್ದರು. ವಿದ್ಯಾರಣ್ಯರು ಶೃಂಗೇರಿ ಪೀಠಾರೋಹಣ ಮಾಡಿದ್ದು. ಸುಮಾರು ಕ್ರಿ.ಶ. 137೦ ನಂತರ.
- ಹರಿಹರ ಮತ್ತು ಬುಕ್ಕರು ತಮ್ಮನ್ನು ' ಮಹಾಮಂಡಲೇಶ್ವರ' ಎಂದು ಕರೆದುಕೊಂಡಿದ್ದಾರೆ.
- ವಿಜಯನಗರ ಸ್ಥಾಪಕ ಹರಿಹರನಿಗಿದ್ದ ಬಿರುದುಗಳು – 'ಪೂರ್ವ ಪಶ್ಚಿಮ ಸಮುದ್ರಾಧಿಪತಿ', 'ಅರಿರಾಯ ವಿಭಾಡ', 'ಭಾಷೆಗೆ ತಪ್ಪದ ರಾಯರ ಗಂಡ'
- ಬುಕ್ಕರಾಯನಿಗಿದ್ದ ಬಿರುದುಗಳು– 'ವೇದಮಾರ್ಗ ಪ್ರತಿಷ್ಠಾಪಕ', 'ವೈದಿಕ ಮಾರ್ಗ ಪ್ರವರ್ತಕ'
- 'ವೈದಿಕ ಮಾರ್ಗ ಸ್ಥಾಪನಾಚಾರ್ಯ', 'ರಾಜಾಧಿರಾಜ' ಎರಡನೆ ಹರಿಹರನ ಬಿರುದುಗಳು.
- ಸಂಗಮ ವಂಶದ ಪ್ರೌಡದೇವರಾಯನ ಬಿರುದು– 'ಗಜಬೇಂಟೆಕಾರ'
- 'ಮಹಾನಾಟಕ ಸುಧಾನಿಧಿ' – ಪ್ರೌಢದೇವರಾಯನ ಸಂಸ್ಕೃತ ಕೃತಿ
- ತುಳುವ ವಂಶದ ವೀರನರಸಿಂಹನ ಬಿರುದು– 'ಭುಜಬಲರಾಯ'
- ತುಳುವ ಕೃಷ್ಣದೇವರಾಯ ಪಟ್ಟಕ್ಕೆ ಬಂದ ಕೂಡಲೆ ದೋಣಿ ಕದನದಲ್ಲಿ ಬಹುಮನಿ ಸುಲ್ತಾನನ್ನು ಸೋಲಿಸಿದ.
- ಹಂಪೆಯಲ್ಲಿವಿರೂಪಾಕ್ಷ ದೇವಾಲಯಕ್ಕೆ ಕಲ್ಯಾಣ ಮಂಟಪ, ಒಂದು ಗೋಪುರ. ರಾಮಸ್ವಾಮಿ ದೇವಾಲಯದ ವಿಸ್ತರಣೆ. ಕೃಷ್ಣಸ್ವಾಮಿ ದೇವಾಲಯದ ನಿರ್ಮಾಣ, ವಿಠಲಸ್ವಾಮಿ ದೇವಾಲಯದ ನಿರ್ಮಾಣ ಹಾಗು ದೊಡ್ಡ ಗಾತ್ರದ ಉಗ್ರ ಲಕ್ಷ್ಮಿನರಸಿಂಹ ಸ್ವಾಮಿಯ ಪ್ರತಿಮೆಯ ಸ್ಥಾಪನೆ – ಇವು ಕೃಷ್ಣದೇವರಾಯನ ಕಲಾ ಸಾಧನೆಗಳು.
- ವಿಜಯನಗರ ಸಾಮ್ರಾಜ್ಯಕ್ಕೆ ಕೊನೆಗಾಲದಲ್ಲಿ 'ವೆಲ್ಲೂರು' ರಾಜಧಾನಿಯಾಗಿತ್ತು.
- ಕ್ರಿ.ಶ 1642ರಲ್ಲಿ ಶ್ರೀರಂಗ ವಿಜಯನಗರದ 'ಸಾಮ್ರಾಜ್ಯವಿಲ್ಲದ ಸಾಮ್ರಾಟ'ನಾಗಿ ಕೆಲದಿ. ಮೈಸೂರುಗಳ ಆಶ್ರಯ ಪಡೆದ.

**4.10 ಆದಿಲ್ ಷಾಹಿ**

- ಬಿಜಾಪುರದಲಲಿ ಆದಿಲ್ ಷಾಹಿ ವಂಶವನ್ನು ಕ್ರಿ.ಶ 1498ರಲ್ಲಿ ಆರಂಭಿಸಿದ ಯುಸುಫ್ ಆದಿಲ್ ಖಾನ್ ಕ್ರಿ.ಶ. 1510ರಲ್ಲಿ ಕೃಷ್ಣದೇವರಾಯನ ವಿರುದ್ಧ ಯುದ್ಧದಲ್ಲಿ ಹತನಾದ.
- ಕ್ರಿ.ಶ 1512ರಲ್ಲಿ ರಾಯಚೂರನ್ನು ಕೃಷ್ಣದೇವರಾಯ ಬಿಜಾಪುರದಿಂದ ಗೆದ್ದುಕೊಂಡ.
- ಆದಿಲ್ ಷಾದ ಎರಡನೆ ಇಬ್ರಾಹಿಂ ಬಿಜಾಪುರದಲ್ಲಿ ತನ್ನ ಸಮಾಧಿ ಕಟ್ಟಡ ' ಇಬ್ರಾಹಿಂ ರೋಜಾ' ಕಟ್ಟಿಸಿದ.
- ಮಹಮ್ಮದ್ ಆದಿಲ್ ಷಾ ಗೋಲ್ ಗುಂಬಜ್ ಹಾಗೂ ಅಸಾರ್ ಮಹಲ್‌ಗಳನ್ನು ಕಟ್ಟಿಸಿದ.
- ಇವನ ರಾಜ್ಯವನ್ನು ಫ್ರೆಂಚ್ ಪ್ರವಾಸಿ ಟ್ರಾವರ್ನಿಯರು (ಕ್ರಿ.ಶ 1648) ಸಂದರ್ಶಿಸಿದ್ದ. ಈತ ಕಾಳು ಮೆಣಸು ಪ್ರಮುಖ ವ್ಯಾಪರ ಸರಕಾಗಿತ್ತೆಂದೂ, ವೆಂಗುರ್ಲಾ ಉತ್ತಮ ಬಂದರಾಗಿತ್ತೆಂದು ಹೇಳಿದ್ದಾನೆ.
- ಕ್ರಿ.ಶ 1686ರಲ್ಲಿ ಔರಂಗಜೇಬ ಬಿಜಾಪುರದವನ್ನು ಗೆದ್ದು ಆದಿಲ್ ಷಾಹಿಗಳನ್ನು ನಿರ್ನಾಮ ಮಾಡಿದ.

**4.11 ಕೆಳದಿ ನಾಯಕರು (ಕ್ರಿ.ಶ. 1500–1763)**

- ಭೇರುಂಡ ಇವರ ಲಾಂಛನ
- ಇವರು ವಿಜಯನಗರದ ಉತ್ತರಾಧಿಕಾರಿಗಳು, ಶಿವಮೊಗ್ಗ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳು. ಚಿಕ್ಕಮಗಳೂರು, ಹಾಸನ, ಧಾರವಾಡ, ಉತ್ತರ ಕನ್ನಡ ಹಾಗೂ ಕೇರಳದ ಉತ್ತರ ಭಾಗಗಲ ಮೇಲೆ ಇವರ ಆಳ್ವಿಕೆ ಇತ್ತು.
- ಈ ವಂಶದ ಸ್ಥಾಪಕರು– ಚೌಡಗೌಡ ಮತ್ತು ಭದ್ರಪ್ಪ
- ಸದಾಶಿವ ನಾಯಕ (ಕ್ರಿ.ಶ. 1540ರಲ್ಲಿ ಪಟ್ಟ) ಈ ವಂಶದ ಶ್ರೇಷ್ಠ ದೊರೆ. 'ಕೋಟೆಕೋಲಾಹಲ', 'ಶತ್ರು ಸಪ್ತಾಂಗಹರಣ' ಈತನ ಬಿರುದುಗಳು.
- ಬೀದರ್‌ನ ಬರೀದ್ ಷಾಹಿಯನ್ನೂ, ಬಿಜಾಪುರದ ಇಬ್ರಾಹಿಂ ಆದಿಲ್ ಷಾಹಿ ಹಾಗೂ ಚಿತ್ರದುರ್ಗದ ತಿಮ್ಮಣ್ಣ ನಾಯಕನನ್ನು ಈತ ಸೋಲಿಸಿದ.
- ಕ್ರಿ.ಶ. 1586ರಲ್ಲಿ ಪಟ್ಟ ಏರಿದ ವೆಂಕಟಪ್ಪನ ರಾಜ್ಯಕ್ಕೆ ಇಟಲಿಯ ಪ್ರವಾಸಿ ಪಿತ್ರೋ ಡಲ್ಲೆ ಭೇಟಿ ನೀಡಿದ್ದ.
- ವೆಂಕಟಪ್ಪನಿಗೆ 'ಪಡುಗಡಲೊಡೆಯ' ಬಿರುದಿತ್ತು. 'ಸಕಲಕಲಾಸತ್ವರಿಣತಂ', 'ವಿವಿಧ ಸಾಹಿತ್ಯವಿದಂ' ಎನ್ನುವ ಬಿರುದುಗಳೂ ಈತನಿಗಿದ್ದದವು.

- ಈತನ ಕಾಲದಲ್ಲಿ ತಿರುಮಲಭಟ್ಟ 'ಶಿವಗೀತೆ', ಭಟ್ಟೋಜಿ ದೀಕ್ಷಿತ 'ತತ್ವಕೌಸ್ತುಭ', ಅಶ್ವಪಂಡಿತ 'ಮಾನಪ್ರಿಯ'ಗಳನ್ನು ರಚಿಸಿದರು.
- ಕ್ರಿ.ಶ 1638ರಲ್ಲಿ ಪಟ್ಟ ಏರಿದ ಶಿವಪ್ಪನಾಯಕ ಪೋರ್ಚುಗೀಸರನ್ನು, ಇಂಗ್ಲಿಷರನ್ನು ಸೋಲಿಸಿದ. ಕೊಡಗಿನ ಭಾಗಗಳನ್ನು ಗೆದ್ದು ಕೇರಳದ ನೀಲೇಶ್ವರದಲ್ಲಿ ಒಂದು 'ತೊಲಗಿದ ಕಂಬ'ವನ್ನು ನೆಟ್ಟನು.
- ಕ್ರಿ.ಶ 1659ರಲ್ಲಿ ಮೈಸೂರು ರಾಜ್ಯದ ಮೇಲೆ ದಂಡೆತ್ತಿ ಹೋದ ಶಿವಪ್ಪ ನಾಯಕ ಸೋತ.
- ಶಿವಪ್ಪನಾಯಕ 'ಶಿಸ್ತು' ಎಂಬ ಜನಪ್ರಿಯ ಕಂದಾಯ ಪದ್ಧತಿಯನ್ನು ಜಾರಿಗೆ ತಂದ.
- ಸಂತ ಮಾರಿಯಾ ಎಂಬ ಪಾದ್ರಿ ಕ್ರಿ.ಶ. 1657ರಲ್ಲಿ ಶಿವಪ್ಪನ ರಾಜ್ಯಕ್ಕೆ ಬಂದಿದ್ದ.
- ಕ್ರಿ.ಶ 1665ರಲ್ಲಿ ಶಿವಾಜಿ ಕೆಳದಿಯ ಬಸರೂರು ಬಂದರನ್ನು ಸುಲಿಗೆ ಮಾಡಿದ.
- ಕ್ರಿ.ಶ 1671ರಲ್ಲಿ ಪತಿ ಸೋಮಶೇಖರನ ಸಾವಿನ ನಂತರ ಚೆನ್ನಮ್ಮ ಅಧಿಕಾರ ವಹಿಸಿಕೊಂಡಳು.
- ಈಕೆಯ ಆಳ್ವಿಕೆಯ ಒಂದು ವಿಶೇಷ ಎಂದರೆ– ಸಂಭಾಜಿಯ ಕೊಲೆ ನಂತರ ಆತನ ಮಗ ರಾಜಾರಾಮ ಕೆಳದಿಗೆ ಶರಣಾರ್ಥಿಯಾಗಿ ಬಂದ. ಆತನನ್ನು ಚೆನ್ನಮ್ಮ ಜಿಂಜಿಗೆ ಪಾರಾಗಲು ನೆರವು ನೀಡಿದಳು.
- ಚೆನ್ನಮ್ಮಾಜಿಯ ದತ್ತು ಪುತ್ರ ಬಸವಪ್ಪ ನಾಯಕ ಕ್ರಿ.ಶ 1697ರಲ್ಲಿ ಪಟ್ಟ ಏರಿದ. 'ಶಿವತತ್ವ ರತ್ನಾಕರ' ಎಂಬ ಸಂಸ್ಕೃತ ವಿಶ್ವಕೋಶವನ್ನು ಈತ ರಚಿಸಿದ.
- ಕ್ರಿ.ಶ 1748ರಲ್ಲಿ ಚಿತ್ರದುರ್ಗ ಮದಕರಿ ನಾಯಕ ಕೆಳದಿ ವಿರುದ್ಧ ಮಾಡಿದ ಯುದ್ಧದಲ್ಲಿ ಹತನಾದ.
- ಮರಾಠರು ಆಗಾಗ ನಡೆಸುತ್ತಿದ್ದ ದಾಳಿಯಿಂದ ಕೆಳದಿ ಪ್ರಾಬಲ್ಯ ಕ್ಷೀಣಿಸಿತು.
- ಕ್ರಿ.ಶ 1761ರಲ್ಲಿ ಇಂಗ್ಲಿಷರು ಕೆಳದಿಯೊಂದಿಗೆ ಒಪ್ಪಂದ ಮಾಡಿಕೊಂಡು ಹೊನ್ನಾವರ. ಕುಮಟಾಗಳಲ್ಲಿ ವ್ಯಾಪಾರ ಮಳಿಗೆ ಆರಂಭಿಸಿದರು.
- ಕ್ರಿ.ಶ 1763ರಲ್ಲಿ ಕೆಳದಿ ಹೈದರಾಲಿಯಿಂದ ಮೈಸೂರಿನ ವಶವಾಯಿತು.

**4.12 ಮೈಸೂರು ಒಡೆಯರು**

- ಭೇರುಂಡ ಇವರ ಲಾಂಛನ
- ದ್ವಾರಕೆಯ ಯಾದವ ವಂಶದವರು
- ವಿಜಯನಗರದ ಉತ್ತರಾಧಿಕಾರಿಗಳಾಗಿ ಕ್ರಿ.ಶ. 1399ರಿಂದ ಆಳ್ವಿಕೆ ಆರಂಭಿಸಿದರು.
- ಯದುರಾಯ ಮತ್ತು ಕೃಷ್ಣರಾಯ ಮೈಸೂರು ಒಡೆಯರ ಮೂಲ ಪುರುಷರು. ೦

**ಯದುರಾಯ:**

ಕ್ರಿ.ಶ. 1400ರ ಏಪ್ರಿಲ್ 29ರಂದು ಪಟ್ಟಕ್ಕೇರಿದ. ಶ್ರೀರಂಗಪಟ್ಟಣ ರಾಜಧಾನಿ. 23ವರ್ಷ ಆಳಿದ.

**ಒಂದನೆ ರಾಜ ಒಡೆಯ (ಕ್ರಿ.ಶ. 1578–1617) :**

ಚೋಳ ಚಾಮರಾಜ ಒಡೆಯನ ಎರಡನೆ ಮಗ ಈತ. ವಿಜಯನಗರಕ್ಕೆ ಮೈಸೂರು ಒಡೆಯರು ಕೊಡುತ್ತಿದ್ದ ಕಪ್ಪವನ್ನು ನಿಲ್ಲಿಸಿ ಸ್ವತಂತ್ರವೆಂದು ಘೋಷಿಸಿದ.

ಮೈಸೂರು ವಿಜಯನಗರದ ಮಾದರಿಯಲ್ಲಿ ನವರಾತ್ರಿ ಹಬ್ಬದ ಆಚರಣೆ ಆರಂಭಿಸಿದ್ದು ಈತನೇ.

**ಚಾಮರಾಜ ಒಡೆಯ (ಕ್ರಿ.ಶ. 1617–1637) :**

ರಾಜ ಒಡೆಯನ ಮೊಮ್ಮಗ.

ಶ್ರೀರಂಗ ಪಟ್ಟನದಲ್ಲಿ ಆಯುಧಾಗಾರವನ್ನು ನಿರ್ಮಿಸಿದ.

ಕಂಠೀರದ ನರಸರಾಜ **ಒಡೆಯ (ಕ್ರಿ.ಶ. 1638–1859) :**

ಈತನಿಗೆ 'ರಣಧೀರ' ಬಿರುದಿತ್ತು.

ಬಹುಮನಿಯ ರಣದುಲ್ಲಾಖಾನನನ್ನು ಸೋಲಿಸಿದ.

**ದೊಡ್ಡ ದೇವರಾಜ ಒಡೆಯ (ಕ್ರಿ.ಶ. 1658–1672) :**

ಶ್ರೀರಂಗಪಟ್ಟಣವನ್ನು ಮುತ್ತಿದ ಕೆಳದಿ ಶಿವಪ್ಪನಾಯಕನನ್ನು ಈತ ಸೋಲಿಸಿದ. ಫ್ರೆಂಚ್ ಪ್ರತಿನಿಧಿ ಫ್ಲಾಕನ್ ವ್ಯಾಪಾರ ಸಂಪರ್ಕಕ್ಕಾಗಿ ಈತನ ಆಸ್ಥಾನಕ್ಕೆ ಭೇಟಿ ನೀಡಿದ.

**ಚಿಕ್ಕ ದೇವರಾಯ ಒಡೆಯ (ಕ್ರಿ.ಶ. 1672–1704) :**

ಬಹುಮನಿ ಸುಲ್ತಾನರು, ಮರಾಠ ಶಿವಾಜಿಯು, ದೆಹಲಿಯ ಔರಂಗಜೇಬ ಈ ಎಲ್ಲರೂ ಮೈಸೂರಿನ ಮೇಲೆ ಕಣ್ಣಿಟ್ಟ ಕಾಲ ಇದು. ಚಿಕ್ಕದೇವರಾಜ ಒಡೆಯ ದಿಟ್ಟತನದಿಂದ ರಾಜ್ಯ ರಕ್ಷಣೆ ಮಾಡಿಕೊಂಡ.

**ಎರಡನೆ ಕಂಠೀರವ ನರಸರಾಜ ಒಡೆಯ (ಕ್ರಿ.ಶ. 1704–1713)**

ಮೂರನಾಗಿದ್ದ ಈತಪ್ರಧಾನಿ ತಿರುಮಲ್ಲಯ್ಯ, ದಳವಾಯಿ ಕಾಂತರಾಜಯ್ಯನವರ ಮೂಲಕ 10 ವರ್ಷ ರಾಜ್ಯ ಆಳಿದ. ಮೇಲುಕೋಟೆಯಲ್ಲಿ ಬಿಂದು ಮಾಧವ ದೇವಾಲಯ ನಿರ್ಮಿಸಿದ.

**ಒಂದನೆ ಕೃಷ್ಣರಾಜ ಒಡೆಯ ( ಕ್ರಿ.ಶ. 1713–1732) :**

ಈತ ದುರ್ಬಲನಾಗಿದ್ದ. ಪೇಶ್ವೆ ಒಂದನೆ ಬಾಜಿರಾಯ ಶ್ರೀರಂಗಪಟ್ಟನಕ್ಕೆ ಮುತ್ತಿಗೆ ಹಾಕಿ 21 ಲಕ್ಷ ರೂಪಾಯಿ 'ಚೌತ್' ಸಂಗ್ರಹಿಸಿದ.

**ಎರಡನೆ ಕೃಷರಾಜ ಒಡೆಯ (ಕ್ರಿ.ಶ. 1713–1732):**

ಹೈದರ್ ಆಲಿ ಈತನ ಸೈನ್ಯ ಸೇರಿದ. ಹೈದರ್ ಆಲಿಗೆ 'ಫತೇ ಹೈದರ್ ಬಹದ್ದೂರ್ 'ಬಿರುದು ಕೊಟಲಾಯಿತು.

ಕ್ರಿ.ಶ 1766ರಲ್ಲಿ ನಂಜರಾಜ ಪಟ್ಟಕ್ಕೇರಿದ. ಆದರೆ ಹೈದರ್ ಆಸ್ಥಾನದ ವ್ಯವಹಾರಗಳಲ್ಲಿ ಪ್ರಾಬಲ್ಯ. ನಂಜರಾಜ ಆತನ ಕೈಗೊಂಬೆಯಾಗಿದ್ದ.

**ಹೈದರ್ ಅಲಿ (ಕ್ರಿ.ಶ 1761–1782)**

ಈತನ ತಂದೆ ಸಿರಾದ ಮುಸ್ಲಿಂ ಪಾಳಿಗಾರರಲ್ಲಿ ಸೈನ್ಯಾಧಿಕಾರಿಯಾಗಿದ್ದ. ಹೈದರ್ ಹುಟ್ಟಿದ್ದು ಕೋಲಾರದ ಬೂದಿಕೋಟಿಎಯಲಲಿ, ಕ್ರಿ.ಶ. 1721ರಲ್ಲಿ.

**ಹೈದರ್‌ನ ಸಾಹಸಗಳು:**

1749–ದೇವನಹಳ್ಳಿ ಗೆಲವು,

1750– ಹೈದರಾಬಾದ್‌ನಲ್ಲಿ ಮುಜಾಫರ್ ಜಂಗ್ ವಿರುದ್ಧ ಜಯ,

1751– ತಿರುಚನಾಪಳ್ಳಿಯಲ್ಲಿ ಯುದ್ಧ,

1755 – ದಿಂಡಿಗಾಲ್‌ನ ಫೌಜುದಾರ್ ಆಗಿ ನೇಮಕ,

1759– ಮರಾಠರಿಂದ ಮೈಸೂರಿನ ರಕ್ಷಣೆ,

1770– ಅಸಮರ್ಥ ನಂಜರಾಜನ ಬದಲು ಬೆಟ್ಟದ ಚಾಮರಾಜ ಒಡೆಯನಿಗೆ ಪಟ್ಟ,

1776– ಖಾನಾ ರಾಮರಾಜರಿಗೆ ಪಟ್ಟ

**ಒಂದನೆ ಆಂಗ್ಲೋ ಮೈಸೂರಿ ಯುದ್ಧ (ಕ್ರಿ.ಶ. 1767–1769) :**

ಹೈದರ್ ಅಲಿ Vs ಬ್ರಿಟಿಷರು,

ಕದನಗಳು – ಪಾಲಲೂರು, ಪೋರ್ಟಿನೋವ ಸುತ್ತ

ಒಪ್ಪಂದ – ಮಂಗಳೂರಿನಲ್ಲಿ

(1782ರ ಡಿಸೆಂಬರ್ 7ರಂದು ಚಿತ್ತೂರ್ ಬಳಿ ಕದನದಲ್ಲಿ ಹೈದರ್ ಮೃತನಾದ. ನಂತರ ಟಿಪ್ಪು ಬ್ರಿಟಿಷರೊಡನೆ ಒಪ್ಪಂದ ಮಾಡಿಕೊಂಡ)

ಹೈದರ್ ಅಲಿಯ ಕಾಲದಲ್ಲಿ ರಾಜ್ಯಾದಾಯ 40 ಲಕ್ಷದಿಂದ ಒಂದು ಕೋಟೆ ಹತ್ತು ಲಕ್ಷಕ್ಕೆ ಏರಿತ್ತು. ಫ್ರಾನ್ಸಿಸ್ ಜೊಸೆಫ್ ಫ್ರಾಂಕ್ ರಾಯ್ ಡೊಪ್ಲಿಯಿಂದ ತನ್ನ ಸೈನ್ಯಕ್ಕೆ ಹೈದರ್ ತರಬೇತಿ ಕೊಡಿಸಿದ್ದ.

**ಟಿಪ್ಪು ಸುಲ್ತಾನ್ (ಕ್ರಿ. ಶ. 1753–1799) :**

ಕ್ರಿ.ಶ 1753ರ ನವೆಂಬರ್ 20ರಂದು ದೇವನಹಳ್ಳಿಯಲ್ಲಿ ಜನನ, ಫ್ರಾನ್ಸ್‌ನ ಚಕ್ರವರ್ತಿ 16ನೇ ಲೂಯಿ ಹಾಗೂ ನೆಪೊಲಿಯನ್ ಬೊನಾಪಾರ್ಟಿ ಟಿಪ್ಪುವಿನ ಸಮಕಾಲೀನರು.

**ಮೂರನೆ ಆಂಗ್ಲೊ ಮೈಸೂರು ಯುದ್ಧ (ಕ್ರಿ.ಶ. 1790–1792) :**

**ಟಿಪ್ಪು** Vs ಬ್ರಿಟಿಷರು, ಹೈದರಾಬಾದ್ ನಿಜಾಮ, ಮರಾಠರು (ಪೇಶ್ವೆ ಎರಡನೇ ಮಾಧವರಾಯ)

ಕದನಗಳು– ಬೆಂಗಳೂರು, 1791, ಶ್ರೀರಂಗಪಟ್ಟಣ 1792.

ಒಪ್ಪಂದ– ಶ್ರೀರಂಗಪಟ್ಟಣ, 1792

ಈ ಒಪ್ಪಂದದಂತೆ ಟಿಪ್ಪು ದಕ್ಷಿಣ ಭಾಗದ ಅರ್ಧ ರಾಜ್ಯವನ್ನು ಶತ್ರುಗಳಿಗೆ ಬಿಟ್ಟುಕೊಟ್ಟ, ತನ್ನ ಇಬ್ಬರು ಮಕ್ಕಳನ್ನು ಬ್ರಿಟಿಷ್‌ರಲ್ಲಿ ಒತ್ತೆ ಇಡಬೇಕಾಯಿತು.

**ನಾಲ್ಕನೆ ಆಂಗ್ಲೊ ಮೈಸೂರು ಯುದ್ಧ (ಕ್ರಿ.ಶ. 1799):**

ಕ್ರಿ.ಶ 1798ರಲ್ಲಿ ಲಾರ್ಡ್ ವೆಲ್ಲಸ್ಲಿ ಸಹಾಯಕ ಸೈನ್ಯ ಪದ್ಧತಿಯನ್ನು ಪಾಲಿಸಿ ಟಿಪ್ಪು ಬ್ರಿಟಿಷರೊಂದಿಗೆ ಮೈತ್ರಿಯನ್ನು, ಫ್ರೆಂಚರೊಂದಿಗೆ ಶತೃತ್ವವನ್ನು ಸಾಧಿಸಬೇಕೆಂದು ಒತ್ತಾಯಿಸಿದ. ಇದನ್ನು ಒಪ್ಪದ ಟಿಪ್ಪು ಯುದ್ಧಕ್ಕಿಳದ.

ಟಿಪ್ಪು Vs ಬ್ರಿಟಿಷರು–ಗವರ್ನರು ಜನರಲ್ ವೆಲ್ಲೆಸ್ಲಿ, ಜನರಲ್ ಹ್ಯಾರಿಸ್ (ದಂಡನಾಯಕ), ಕರ್ನಲ್ ಅರ್ಥರ್ ವೆಲ್ಲೆಸ್ಲಿ.

ಕದನ–ಮಳವಳ್ಳಿ, ಶ್ರೀರಂಗಟ್ಟಣದಲ್ಲಿ

ಕ್ರಿ.ಶ 1799ರ ಮೇ 4ರಂದು ಟಿಪ್ಪು ಈ ಯುದ್ಧದಲ್ಲಿ ಹೋರಾಡುತ್ತ ಮಡಿದ.

ನಂತರ ಬ್ರಿಟಿಷರು ಒಡೆಯರೊಂದಿಎ ಒಪ್ಪಂದಮಾಡಿಕೊಂಡು ಮೈಸೂರು ರಾಜ್ಯವನ್ನು ಕರಾವಳಿ ಪ್ರದೇಶ, ಧಾರವಾಡ, ಬಿಜಾಪುರ ಪ್ರದೇಶಗಳಲ್ಲೂ ಬೊಂಬಾಯಿ ಪ್ರಾಂತಕ್ಕೂ, ಗುರ್‍ರಂಕೊಂಡ ಪ್ರದೇಶವನ್ನು ಹೈದರಾಬಾದ್ ನಿಜಾಮನಿಗೂ, ಸೇಲಂ ಅರ್ಕಾಟ್ ಪ್ರದೇಶಗಳನ್ನು ಮದ್ರಾಸ್ ಪ್ರಾಂತಕ್ಕೂ ವಹಿಸಿಕೊಟ್ಟರು.

ಉಳಿದ ಪ್ರದೇಶಗಳನ್ನು ಒಡೆಯರಿಗೆ ಕೊಟ್ಟರು. ಸೈನ್ಯ ಸಹಾಯಕ ಒಪ್ಪಂದ ಮಾಡಿ ಕೊಳ್ಳಲಾಯಿತು. ಒಟ್ಟು 35 ಲಕ್ಷ ರೂಪಾಯಿಗಳನ್ನು ಪ್ರತಿ ವರ್ಷ ಒಡೆಯರು ಬ್ರಿಟಿಷರಿಗೆ ಕೊಡಲೇಬೇಕಾಯಿತು.

ಶ್ರೀರಂಗಪಟ್ಟನದಲ್ಲಿನ 'ದರಿಯಾ ದೌಲತ್' ಅರಮನೆ, ಮಜ್ಜಿದ್–ಎ–ಅಲಾ ಮಸೀದಿ ಟಿಪ್ಪುವಿನಿಂದ ನಿರ್ಮಿತವಾದ ಶ್ರೇಷ್ಠ ವಾಸ್ತುಶಿಲ್ಪಗಳು. ಬೆಂಗಳೂರಿನ ಲಾಲ್‌ಬಾಗ್‌ನ್ನು ಟಿಪ್ಪು ಅಭಿವೃದ್ಧಿ ಪಡಿಸಿದ.

**ಆಧುನಿಕ ಮೈಸೂರು**

- ಕ್ರಿ.ಶ. 1799ರಲ್ಲಿ ಟಿಪ್ಪು ಮರಣದ ನಂತರ ಮುಮ್ಮಡಿ ಕೃಷ್ಣರಾಜ ಒಡೆಯರಿಗೆ ಪಟ್ಟವಾಯಿತು. ಅವರಿಗೆ ಆಗ ಕೇವಲ 5 ವರ್ಷ, ದಿವನ್ ಪೂರ್ಣಯ್ಯ ಆಡಳಿತದ ಉಸ್ತುವಾರಿ ವಹಿಸಿಕೊಂಡಿದ್ದರು. ಬ್ಯಾರಿ ಕ್ಲೋಸ್ ಒಡೆಯರ ಆಸ್ಥಾನದಲ್ಲಿ ಬ್ರಿಟಿಷ್ ರೆಸಿಡೆಂಟ್ ಆಗಿದ್ದ. ಕ್ರಿ.ಶ 1811ರಲಲಿ ಪೂರ್ಣಯ್ಯ ನಿವೃತ್ತರಾದರು.
- ಶ್ರೀರಂಗಪಟ್ಟಣದ ಬದಲು ಮೈಸೂರು ರಾಜಧಾನಿಯಾಯಿತು.
- ಕ್ರಿ.ಶ. 1813ರ ಬೂದಿ ಬಸಪ್ಪನ 'ನಗರ ದಂಗೆ' ಕಾರಣದಿಂದ ಮುಮ್ಮಡಿ ಕೃಷ್ಣರಾಜ ಒಡೆಯರಿಂದ ಬ್ರಿಟಿಷರು ರಾಜ್ಯವನ್ನು ಕಿತ್ತುಕೊಂಡು ಒಡೆಯರಿಗೆ ವರ್ಷಾಸನ ನೀಡಿದರು.
- ಸ್ವತಃ ಬರಹಗಾರರಾಗಿದ್ದ ಮುಮ್ಮಡಿ ಕೃಷ್ಣರಾಜರ ಆಸ್ಥಾನದಲ್ಲಿ ಕೆಂಪು ನಾರಾಯಣ (ಮುದ್ರಾ ಮಂಜೂಷ – 1823), ಅಳಿಯ ಲಿಂಗರಾಜ, ಬಸವಪ್ಪ ಶಾಸ್ತ್ರಿ ('ಶಕುಂತಲ' ನಾಟಕವನ್ನು ಕನ್ನಡಕ್ಕೆ ಹಾಗು 'ಒಥೆಲೊ' ನಾಟಕವನ್ನು ಕನ್ನಡಕ್ಕೆ "ಶೂರಸೇನ ಚರಿತೆ" ಎಂದು ರೂಪಾಂತರಿಸಿದರು) ದೇವಚಂದ್ರ ಮುಂತಾದವರಿಗೆ ಪ್ರೋತ್ಸಾಹ ನೀಡಿದರು.
- ಮೈಸೂರು ಸದಾಶಿವರಾವ್ ಶೇಷಣ್ಣ ಹಾಗೂ ಸುಬ್ಬಣ್ಣರಿಗೆ ವೈಣಿಕೆ ಶಿಕ್ಷಣ ನೀಡಿದರು.

**ಕಮೀಷನರ್‌ಗಳು (ಕ್ರಿ.ಶ. 1831–1881)**

**ಮಾರ್ಕ್ ಕಬ್ಬನ್ (ಕ್ರಿ.ಶ. 1834–1861):**

ಇವರ ಕಾಲದಲ್ಲಿನ ಪ್ರಮುಖ ಅಂಶಗಳು:

- 45 ಲಕ್ಷ ರೂ ಆಪದ್ಧನ ಸಂಗ್ರಹ
- ಆರು ಆಡಳಿತ ವಿಭಾಗಗಳ ಬದಲು ನಾಲ್ಕು– ಬೆಂಗಳೂರು, ಚಿತ್ರದುರ್ಗ, ಅಷ್ಟಗ್ರಾಮ (ಮೈಸೂರು), ಹೈದರ್‌ನಗರ (ಬಿದನೂರು)
- ಅಠಾರ ಕಛೇರಿಗಳ ಬದಲು ಒಂಬತ್ತು ಇಲಾಖೆಗಳು– ಕಂದಾಯ, ಅಂಚೆ, ಪೊಲೀಸ್, ಸವಾರ್ (ಅಶ್ವದಳ), ಬಾರ್ (ಕಾಲಾಳು ಪಡೆ), ಮದಾಮಲ್ (ಲೋಲೋಪಯೋಗಿ), ಆರೋಗ್ಯ ಅಮೃತಮಹಲ್ (ಪಶು ಸಂಗೋಪನೆ) ಹಾಗೂ ನ್ಯಾಯಾಡಳಿತ ಮತ್ತು ಶಿಕ್ಷಣ.
- 1066 ಮೈಲು ಉದ್ದದ ರಸ್ತೆಗಳು
- ಕ್ರಿ.ಶ 1859ರಲ್ಲಿ ಬೆಂಗಳೂರಿನಿಂದ ಜೋಲಾರ್ ಪೇಟೆಗೆ ಪ್ರಪ್ರಥಮ ರೈಲು ಮಾರ್ಗ.

**ಲೂರಿ ಬೆಂತ್ವಾಮ್ ಬೌರಿಂಗ್ (ಕ್ರಿ.ಶ. 1861–1870):**

ಇವರ ಕಾಲದಲ್ಲಿನ ಪ್ರಮುಖ ಅಂಶಗಳು :

- ಮೂರು ಆಡಳಿತ ವಿಭಾಗಗಳು– ನಂದಿದುರ್ಗ, ಅಷ್ಟಗ್ರಾಮ, ಹೈದರ್‌ನಗರ
- ಆಯವ್ಯಯ ವಿಧಾನ, ಲೆಕ್ಕ ತನಿಖಾ ವಿಧಾನಗಳ ಜಾರಿ
- ಭೂಮಾಪನ ಹಾಗೂ ಕಂದಾಯ ನಿಷ್ಕರ್ಷೆ ಇಲಾಖೆ
- ಕ್ರಿ.ಶ. 1812–ಇನಾಮ್ ಆಯೋಗ
- 1862– ಭಾರತ ದಂಡಸಂಹಿತೆ ಜಾರಿ
- 1864– ರಜಿಸ್ಟ್ರೇಷನ್ ಆ್ಯಕ್ಟ್
- 1864–ಬೆಂಗಳೂರು ಸೆಂಟ್ರಲ್ ಕಾಲೇಜ್
- 1868–ಅಠಾರು ಕಚೇರಿ ನಿರ್ಮಾಣ (ಉಸ್ತುವಾರಿ ಅರ್ಕಾಟ್ ರಾಮಸ್ವಾಮಿ, ವೆಚ್ಚ 4.5 ಲಕ್ಷ ರೂ)

**ರಿಚರ್ಡ್ ಮೀಡ್ (ಕ್ರಿ.ಶ. 1870–75) :**

- ಸರ್ಕಾರಿ ವಸ್ತು ಸಂಗ್ರಹಾಲಯ

**ಸಿ.ಬಿ ಸ್ಯಾಂಡರ್ಸ್ (ಕ್ರಿ.ಶ. 1878–1881) :**

- ವೈಸ್‌ರಾಯ್ ರಿಪ್ಪನ್ ಆದೇಶದ ಮೇರೆಗೆ ಮೈಸೂರು ಒಡೆಯರಿಗೆ ರಾಜ್ಯ ಹಸ್ತಾಂತರ ಹತ್ತನೆ ಚಾಮರಾಜ ಒಡೆಯರಿಗೆ ಶಿಕ್ಷಣ

**ಕರ್ನಾಟಕದಲ್ಲಿ ವಿದೇಶಿ ವಿದ್ವಾಂಸರು**

**ಲೆ.ಕ. ಮೆಕಂಜಿ :**

- ಕ್ರಿ.ಶ. 1783ರಲ್ಲಿ ಭಾರತಕ್ಕೆ ಬಂದರು ಕನ್ನಡ ಜಾನಪದ ಅಧ್ಯಯನ
- 2070 ಕೈಫಿಯತ್ತುಗಳು

**ಬಿ.ಎಲ್.ರೈಸ್ (ಕ್ರಿ.ಶ. 1837–1927) :**

- ಕ್ರಿ.ಶ. 1860ರಲ್ಲಿ ಬೆಂಗಳೂರಿನ ಸೆಂಟ್ರಲ್ ಹೈಸ್ಕೂಲ್‌ನಲ್ಲಿ ಪ್ರಾಧ್ಯಾಪಕ
- ಶಿಕ್ಷಣ, ಇತಿಹಾಸ ಅಧ್ಯಯನ, ಶಾಸನಗಳು ಮತ್ತು ಪ್ರಾಚೀನ ಗ್ರಂಥಗಳ ಸಂಶೋಧನೆ ಹಾಗೂ ಅಶೋಕನ ಬ್ರಹ್ಮಗಿರಿ ಶಾಸನ ಸಂಶೋಧನೆ
- ಪಂಪಭಾರತ, ಪಂಪರಾಮಾಯಣ, ಕವಿರಾಜ ಮಾರ್ಗ, ಕಾವ್ಯಾವಲೋಕನ, ಅಮೃತ ಕೋಶ ಗ್ರಂಥಗಳ ಸಂಪಾದನೆ
- ಮೈಸೂರಿನ ಪ್ರಾಚ್ಯ ವಸ್ತು ಇಲಾಖೆ ಆರಂಭ. ಅದರ ನಿರ್ದೇಶಕರಾಗಿ ಕ್ರಿ.ಶ 1906ರಲ್ಲಿ ನಿವೃತ್ತಿ

**ಜೆ. ಎಫ್. ಫ್ಲೀಟ್ (ಕ್ರಿ.ಶ. 1847–1917) :**

- ಇತಿಹಾಸದಲ್ಲಿ ಸಂಶೋಧನೆ
- ಪಾಲಿ, ಪ್ರಾಕೃತ, ಕನ್ನಡ, ಸಂಸ್ಕೃತ ಮರಾಠಿಗಳಲ್ಲಿ ಪರಿಣಿತಿ
- 'ಭಾರತೀಯ ಶಾಸನಶಾಸ್ತ್ರ ಪಿತಾಮಹ' ಎಂಬ ಬಿರುದು
- ಗುಪ್ತರ ಕಾಲದ ಅಧ್ಯಯನ (ಕ್ರಿ.ಶ. 1888)

**ಫರ್ಡಿನೆಂಟ್ ಕಿಟೆಲ್ (ಕ್ರಿ.ಶ. 1832–1903) :**

- ಮೂಲತಃ ಜರ್ಮನಿಯವರು. ಪ್ರಾಟಿಸ್ಟಂಟ್ ಪಾದ್ರಿ
- ಕ್ರಿ.ಶ. 1853ರಲ್ಲಿ ಭಾರತಕ್ಕೆ ಬಂದರು
- ಧಾರವಾಡ, ಹುಬ್ಬಳ್ಳಿ, ಮಂಗಳೂರು, ಮಡಿಕೇರಿಗಳಲ್ಲಿ ಕ್ರೈಸ್ತ ಮತ ಪ್ರಚಾರ
- ಕನ್ನಡ–ಇಂಗ್ಲಿಷ್ ನಿಘಂಟು (ಕ್ರಿ.ಸ. 1984) (70ಸಾವಿರ ಶಬ್ದಗಲು)
- ಇಂಗ್ಲಿಷ್‌ನಲ್ಲಿ – 'ಗ್ರಾಮರ್ ಆಫ್ ದ ಕನ್ನಡ ಲಾಂಗ್ವೇಜ್'

**ಕರ್ನಲ್ ಮಾರ್ಕ್ ವಿಲ್ಕ್ಸ್ (ಕ್ರಿ.ಶ. 1760–1831):**

- ಕ್ರಿ.ಶ 1803ರಲ್ಲಿ ಮೈಸೂರಿನಲ್ಲಿ ರೆಸಿಡೆಂಟ್
- ಇತಿಹಾಸದ ರಚನೆ
- ಹಿಸ್ಟಾರಿಕಲ್ ಸ್ಕೆಚಸ್ ಆಫ್ ದ ಸೌತ್ಇಂಡಿಯ"–ಗ್ರಂಥ

**5.3 ಮೈಸೂರುದಿವಾನರು**

**ಸಿ . ರಂಗಾಚಾರ್ಲು (ಕ್ರಿ.ಶ. 1881–1883) :**

- ಪಜಾಪ್ರತಿನಿಧಿ ಸಭೆ ಸ್ಥಾಪನೆ
- ಕ್ರಿ.ಶ. 1881ರಲ್ಲಿ ಟೇಲರ್ ಕಂಪನಿಯೊಂದಿಗೆ ಒಪ್ಪಂದ–ಕೋಲಾರದಲ್ಲಿ ಚಿನ್ನದ ಗಣಿ ಆರಂಭ
- ಕ್ರಿ.ಶ. 1882ರಲ್ಲಿ ಬೆಂಗಳೂರು, ಮೈಸೂರು ಮಧ್ಯೆ ರೈಲು ಮಾರ್ಗ ನಿರ್ಮಾಣ ಆರಂಭ
- ಬ್ರಿಟಿಷ್ ಸರ್ಕಾರದಿಂದ ಸಿ.ಐ.ಇ. (ಕಂಪ್ಯಾನಿಯನ್ ಆಫ್ ದಿ ಇಂಡಿಯನ್ ಎಂಪೈರ್ )

**ಶೇಷಾದ್ರಿ ಅಯ್ಯರ್ (ಕ್ರಿ.ಶ. 1883–1900) :**

- ಹರಿಹರ– ಹಿಂದೂಪುರ, ಮೈಸೂರು–ನಂಜನಗೂಡು, ಬೀರೂರು– ಶಿವಮೊಗ್ಗಗಳ ಮಧ್ಯೆ ರೈಲು ಮಾರ್ಗ
- ಮೈಸೂರು–ಬೆಂಗಳೂರು ರೈಲು ಮಾರ್ಗ ಪೂರ್ಣ
- 'ಮೈಸೂರು ಸಿವಿಲ್ ಸರ್ವೀಸಸ್' ಸ್ಪರ್ಧಾತ್ಮಕ ಪರೀಕ್ಷೆಗಳು
- ರಾಜ್ಯದಲ್ಲಿ ಜೀವ ವಿಮಾ ಪದ್ಧತಿ
- ವಾಣಿವಿಲಾಸ ಸಾಗರ ಅಣೆಕಟ್ಟು
- ದಸರಾ 1888–ಮೊದಲ ಕೃಷಿ ಮತ್ತು ಕೈಗಾರಿಕಾ ಪ್ರದರ್ಶನ
- 'ಕಂದಾಯ ನ್ಯಾಯಾಧಿಕರಣ' ರಚನೆ, ಭೂಮಾಪನ ಕಾರ್ಯ
- ಕಾಫಿ ಬೆಳೆ ಉತ್ಪನ್ನ ಹೆಚ್ಚಳಕ್ಕೆ ಕ್ರಮ
- ಹೇಸರಘಟ್ಟ ಜಲಾಶಯದಿಂದ ಬೆಂಗಳೂರಿಗೆ ನೀರು
- ಕ್ರಿ.ಶ 1884– ಬ್ರೂಸ್‌ಫೂಟ್ ನೇತೃತ್ವದಲ್ಲಿ ಭೂಗರ್ಭ ಶಾಸ್ತ್ರ ಇಲಾಖೆ
- ಮೂರು ನ್ಯಾಯಾಧೀಶರ ಮುಖ್ಯ ನ್ಯಾಯಾಲಯ
- ಕ್ರಿ.ಶ 1877– 'ಕರ್ನಾಟಕ ಭಾಷೋಜ್ಜೀವಿನಿ ಸಭಾ'
- ಕ್ರಿ.ಶ 1901– ಮಹಾರಾಣಿ ಕಾಲೇಜ್
- ರತ್ನಾವಳಿ, ಉತ್ತರ ರಾಮಚರಿತ, ಮೃಚ್ಛಕಟಿಕ, ಒಥೆಲೊಗಳ ಕನ್ನಡೀಕರಣ
- ಕ್ರಿ.ಶ 1890– ಮೈಸೂರು ಪ್ರಾಚ್ಯ ಗ್ರಂಥಾಲಯ
- ಸ್ವಾಮಿ ವಿವೇಕಾನಂದರ ಭೇಟಿ. ಅವರಿಗೆ 1893ರಲ್ಲಿ ಚಿಕಾಗೊದ ವಿಶ್ವ ಧರ್ಮ ಸಮ್ಮೇಳನಕ್ಕೆ ಹೋಗಲು ಸಹಾಯ
- ಶಿವನಸಮುದ್ರದ ಬಳಿ 'ಜಲ ವಿದ್ಯುತ್ ಕೇಂದ್ರ'
- ಈ ವಿದ್ಯುಚ್ಛಕ್ತಿಯನ್ನು ಮೊದಲುಉ ಕೋಲಾರದ ಚಿನ್ನದ ಗಣಿಗೂ (ಕ್ರಿ.ಶ. 1902) ನಂತರ ಬೆಂಗಳೂರಿಗೂ (ಕ್ರಿ.ಶ. 1905) ಬಳಸಲಾಯಿತು.
- ಟಿಪ್ಪು ಕಾಲದಲ್ಲಿ ನಿಂತಿದ್ದ ದಸರಾ ಮೆರವಣಿಗೆ ಇವರಿಂದ ಮತ್ತೆ ಮೆರಗು.

**ಪಿ. ಎನ್. ಕೃಷ್ಣಮೂತ್ರಿ (ಕ್ರಿ.ಶ. 1901–1906) :**

**ಶೇಷಾದ್ರಿ ಅಯ್ಯರ್ ನಂತರ ತಂಬುಚೆಟ್ಟಿ ಒಂದು ವರ್ಷ ದಿವಾನರಾಗಿದ್ದರು. ನಂತರ ಪಿ.ಎನ್. ಕೃಷ್ಣಮೂರ್ತಿ.**

- ರೇಷ್ಮ ಅಭಿವೃದ್ಧಿ, ಚನ್ನಪಟ್ಟಣ ಕರಕುಶಲ ಕೈಗಾರಿಕಾ ಅಭಿವೃದ್ಧಿ, ನೇಯ್ಗೆ ವೃತ್ತಿ ಶಿಕ್ಷಣ, ಮಹಿಳೆಯರಿಗೆ ವಿದ್ಯಾರ್ಥಿವೇತನ , ವಿದ್ಯಾರ್ಥಿ ನಿಲಗಳ ಸ್ಥಾಪನೆ
- ಎಂಟು ಜಿಲ್ಲಾ ಬೋರ್ಡ್‌ಗಳು, 57 ತಾಲ್ಲೂಕು ಬೋರ್ಡ್‌ಗಳು
- ಸಹಕಾರಿ ಬ್ಯಾಂಕ್‌ಗಳಿಗೆ ಉತ್ತೇಜನ
- ಬೆಂಗಳೂರಿನಲ್ಲಿ 'ಟಾಟಾ ಇನ್‌ಸ್ಟಿಟ್ಯೂಟ್ ಆಫ್ ಸೈಂಟಿಫಿಕ್ ರಿಸರ್ಚ್'

- ಬೆಂಗಳೂರಿಗೆ ದೇಶದಲ್ಲಿಯೇ ಪ್ರಥಮವಾಗಿ ವಿದ್ಯುದ್ದೀಪಗಳ ಸೌಲಭ್ಯ ಕ್ರಿ.ಶ. 1905

**ಪಿ.ವಿ. ಮಾಧವರಾವ್ (ಕ್ರಿ.ಶ. 1906–1909) :**

- ಕ್ರಿ.ಶ 1907–ಶಾಸನ ಪರಿಷತ್ ಸ್ಥಾಪನೆ
- ಪಶುವೈದ್ಯ ಇಲಾಖೆ
- ಬೆಂಗಳೂರಿನಲ್ಲಿ 'ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ '
- ಪ್ರಾಥಮಿಕ ಶಾಲಾ ಮಟ್ಟದಲ್ಲಿ ಶುಲ್ಕ ರದ್ದತಿ
- ಕೊನೆಯಲ್ಲಿ ಇವರು ಬ್ರಿಟಿಷ್ ವಿರೋಧಿಯಾಗಿ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಧುಮುಕಿದರು
- ಕೈಸರ್–ಇ–ಹಿಂದ್ ಪ್ರಶಸ್ತಿ

**ಟಿ. ಆನಂದ್‌ರಾವ್ (ಕ್ರಿ.ಶ. 1909–1912) :**

- ಪೂನಾದಿಂದ ವಿಶ್ವೇಶ್ವರಯ್ಯನವರನ್ನು ಕರೆಸಿದರು
- ಕನ್ನಂಬಾಡಿಗೆ ಅಣೆಕಟ್ಟು
- ಮೈಸೂರು– ಅರಸಿಕೆರೆ ಮಧ್ಯೆ ರೈಲು ಮಾರ್ಗ
- ಪಿ.ಕೆ ಸ್ಯಾನಿಟೋರಿಯಮ್ ಕ್ಷಯರೋಗ ಆಸ್ಪತ್ರೆ
- ನವರಾತ್ರಿ ದರ್ಬಾರ್‌ನಲ್ಲಿ ಎಲ್ಲರಿಗೂ ಕುರ್ಚಿ ವ್ಯವಸ್ಥೆ
- ದಸರಾ ವಸ್ತು ಪ್ರದರ್ಶನ ಆರಂಭ
- ಹೆನ್ರಿ ಇರ್ವಿನ್ ಮೇಲ್ವಿಚಾರಣೆಯಲ್ಲಿ ಮೈಸೂರು ಅರಮನೆ.

**ಎಂ. ವಿಶ್ವೇಶ್ವರಯ್ಯ (ಕ್ರಿ.ಶ. 1912–1918) :**

- ಜನನ 1881, ಸೆಪ್ಟೆಂಬರ್ 15
- ಕ್ರಿ.ಶ. 1912ರಲ್ಲಿ ಮೈಸೂರಿನ ದಿವಾನಗಿರಿ
- ನೀರಾವರಿ ವ್ಯವಸ್ಥೆಯಲ್ಲಿ 'ಬ್ಲಾಕ್ ಪದ್ಧತಿ' ಜಾರಿ
- ಅರ್ಥಿಕಾಭಿವೃದ್ಧಿ ಸಂಪನ್ಮೂಲಗಳು
- ಕ್ರಿ.ಶ 1915– ಕನ್ನಡ ಸಾಹಿತ್ಯ ಪರಿಷತ್ ಸ್ಥಾಪನೆ
- ಗಂಧದ ತೈಲ ಕಾರ್ಖಾನೆ, ಮೋಟಾರು ಮತ್ತು ವಿಮಾನ ತಯಾರಿಕಾ ಕಾರ್ಖಾನೆ, ಮೈಸೂರ್ ಸೋಪ್, ಮೈಸೂರು ಲ್ಯಾಂಪ್ಸ
- ಕ್ರಿ.ಶ. 1916 ಮೈಸೂರು ವಿಶ್ವವಿದ್ಯಾನಿಲಯ ಸ್ಥಾಪನೆ
- ಮೈಸೂರು ಬ್ಯಾಂಕ್ ಸ್ಥಾಪನೆ
- ಕ್ರಿ.ಶ 1917–ರೇಷ್ಮ ಸಂಶೋಧನಾ ಕೇಂದ್ರ, ಚನ್ನಪಟ್ಟಣ
- ಕ್ರಿ.ಶ 1918–ಮೊದಲ ಘಟಿಕೋತ್ಸವ
- ಬ್ರಿಟಿಷ್ ಸರ್ಕಾರದಿಂದ 'ಸರ್' ಗೌರವ ಪ್ರಶಸ್ತಿ.
- ವಿಶ್ವೇಶ್ವರಯ್ಯನವರ ಕೃತಿಗಳು–'ಎ ವಿಜನ್ ಆಫ್ ಪ್ರಾಸ್ಪರಸ್ ಮೈಸೂರು', 'ರಿಕನ್‌ಸ್ಟ್ರಕಿಂಗ್ ಇಂಡಿಯಾ', 'ರಾಪಿಡ್ ಡೆವಲಪ್ ಮೆಂಟ್ ಆಫ್ ಇಂಡಸ್ಟ್ರೀಸ್', 'ಪ್ಲಾನ್ಡ್ ಎಕಾನಮಿ ಫಾರ್ ಇಂಡಿಯಾ', 'ಮೆಮಾಯಿರ್ಸ್ ಆಫ್ ಮೈ ವರ್ಕಿಂಗ್ ಲೈಫ್' (ಆತ್ಮ ಕಥನ)

**ಕಾಂತರಾಜ ಅರಸ್ (ಕ್ರಿ.ಶ. 1918–1922) :**

- ಹಿಂದುಳಿದ ವರ್ಗಗಳ ಪ್ರಥಮ ಬ್ರಾಹ್ಮಣೇತರ ದಿವಾನರಿವರು
- ಶಾಸನ ಪರಿಷತ್ತಿಗೆ ಪ್ರತಿ ಜಿಲ್ಲೆಯಿಂದ ಒಬ್ಬ ಪ್ರತಿನಿಧಿಗೆ ಅವಕಾಶ
- ಮಾಧ್ಯಮಿಕ ಹಂತದ ವರೆಗೆ ಉಚಿತ ಜಾರಿ
- ಕ್ರಿ.ಶ 1919–ವರಮಾನ ತೆರಿಗೆ ಜಾರಿ
- ಸರ್ಕಾರಿ ಶಾಲೆಗಳಲ್ಲಿ ಪರಿಶಷ್ಟ ಜಾತಿ, ಪರಿಶಿಷ್ಟ ಪಂಗಡಗಳ ಹಾಗೂ ಪಂಚಮ ಮಕ್ಕಳಿಗೆ ಪ್ರವೇಶ

- ಧಾನ್ಯಗಳ ರಫ್ತಿನ ಪದ್ಧತಿ
- ಹಿಂದುಳಿದ ವರ್ಗಗಳಿಗೆ ಜಸ್ಟಿಸ್ ಮಿಲ್ಲರ್ ವರದಿಯ ಶಿಫಾರಸ್ಸುಗಳ ಜಾರಿ 'ಹಿಂದುಳಿದ ವರ್ಗಗಳ ಹಿತ ರಕ್ಷಕ' ಎಂಬ ಬಿರುದು.

**ಎ.ಆರ್. ಬ್ಯಾನರ್ಜಿ (ಕ್ರಿ.ಶ. 1922–1926) :**

- ತಾಲ್ಲುಕು ಬೋರ್ಡ್‌ಗಳು ರದ್ದಾಗಿ, ಗ್ರಾಮ ಪಂಚಾಯ್ತಿಗಳು ಅಸ್ತಿತ್ವಕ್ಕೆ
- ರಾಜ್ಯಾಂಗದ ಬೆಳವಣಿಗೆಗಾಗಿ ಸೀಲ್ ಸಮಿತಿ ನೇಮಕ (1923)
- ಸರ್ ಮಿರ್ಜಾ ಇಸ್ಮಾಯಿಲ್ (ಕ್ರಿ.ಶ. 1926–1941) :
- ಇರ್ವಿನ್ ನಾಲೆ ನಾಮಕರಣ
- ಕ್ರಿ.ಶ. 1931ರ ದುಂಡು ಮೇಜು ಪರಿಷತ್ತಿನಲ್ಲಿ ಪ್ರತಿನಿಧಿ
- ಮಂಡ್ಯ ಸಕ್ಕರೆ ಕಾರ್ಖಾನೆ ಸ್ಥಾಪನೆ
- ಬೃಂದಾವನ ಉದ್ಯಾನವನ ನಿರ್ಮಾಣ ಕಾರ್ಯ ಪೂರ್ಣ
- ಬೆಂಗಳೂರು– ಮೈಸೂರುಗಳಲ್ಲಿ ಆಕಾಶವಾಣಿ ಕೇಂದ್ರಗಳು
- ವಯಸ್ಕರ ಶಿಕ್ಷಣ ಕಾರ್ಯಕ್ರಮ
- ಭಾರತದಲ್ಲಿ ಹಳ್ಳಿಗಳಿಗೆ ವಿದ್ಯುಚ್ಛಕ್ತಿ ಒದಗಿಸಿದ ಮೊದಲ ಸಂಸ್ಥಾನವಾಗಿ ಮೈಸೂರು– (1940ರ ವೇಳಗೆ 180 ಹಳ್ಳಿಗಳಲ್ಲಿ ವಿದ್ಯುತ್ ಸೌಲಭ್ಯ)
- ಬ್ರಿಟಿಷ್‌ರಿಂದ 'ಸರ್', ಕೃಷ್ಣರಾಜ ಒಡೆಯರಿಂದ ಅಮೀನ್–ಉಲ್–ಮುಲ್ಕ್ ಬಿರುದು.

**ವಿ ಪಿ ಮಾಧವರಾವ್ (ಕ್ರಿ.ಶ. 1941–1946) :**

- ಸರ್ಕಾರಿ ನೌಕರರಿಗೆ ಗೃಹ ನಿರ್ಮಾಣಕ್ಕಾಗಿ ಸಾಲ ನೀಡುವ ಯೋಜನೆ
- ಬೆಂಗಳೂರಿನಲ್ಲಿ 'ಸೆಂಚುರಿ ಕ್ಲಬ್'
- ಹೋಬಳಿ ಮತ್ತು ಇತರ ತಾಲ್ಲೂಕು ಮಟ್ಟಗಳಲ್ಲಿ ಪುನರ್ ನಿಮಾಣ ಕಾರ್ಯಕ್ರಮಗಳು.

**ಅರ್ಕಾಟ್ ರಾಮಸ್ವಾಮಿ ಮೊದಲಿಯರ್ (ಕ್ರಿ.ಶ. 1948–1947) :**

- ಲಂಡನ್‌ನಲ್ಲಿ ನಡೆದ ಮೂರೂ ದುಂಡು ಮೇಜುಗಳಲ್ಲಿ ಭಾಗವಹಿಸಿದ ಖ್ಯಾತಿ ಇವರದು 1947 ಅಕ್ಟೋಬರ್ 24– ಪ್ರಜಾ ಸರ್ಕಾರದ ಅಸ್ತಿತ್ವ, ದಿವಾನ್‌ಗಿರಿ ಅಂತ್ಯ

**ಕೊನೆಯ ಒಡೆಯರುಗಳು :**

**ನಾಲ್ವಡಿ ಕೃಷ್ಣರಾಜ ಒಡೆಯರ್ (ಕ್ರಿ.ಶ. 1902–1940) :**

ಬ್ರಿಟಿಷ್ ಸರ್ಕಾರ ಇವರಿಗೆ ಜಿ.ಸಿ.ಐ.ಇ. ಬಿರುದನ್ನು ಕೊಟ್ಟಿತು. 'ರಾಜರ್ಷಿ ' ಇವರ ಮತ್ತೊಂದು ಬಿರುದು. ವೀಣೆ ಶೇಷಣ್ಣ ಇವರ ಆಸ್ಥಾನದಲ್ಲಿದ್ದ.

**ಜಯ ಚಾಮರಾಜೇಂದ್ರ ಒಡೆಯರ್ (ಕ್ರಿ.ಶ. 1940–1947) :**

ಮೈಸೂರನ್ನಾಳಿದ ಯದುವಂಶದ ಅರಸರಲ್ಲಿ ಇವರು 25ನೇ ಯವರು ಮತ್ತು ಕೊನೆಯವರು.

ಕ್ರಿ.ಶ. 1947ರಲ್ಲಿ ಮೈಸೂರಿನಲ್ಲಿ ಜವಾಬ್ದಾರಿ ಸರ್ಕಾರ ರಚನೆಯಾಯಿತು. ಕ್ರಿ.ಶ 1956ರಲ್ಲಿ ಮಹಾರಾಜರ ಪದವಿ ರದ್ದಾದ ಮೇಲೆ ಇವರು ಮೈಸೂರಿನ ಪ್ರಥಮ ರಾಜ್ಯಪಾಲರಾಗಿ ನೇಮಕ ಗೊಂಡರು.

## ಭಾರತದ ಸ್ವಾತಂತ್ರ್ಯ ಹೋರಾಟ

**ಭಾಗ 1**

**ಭಾರತದ ಸ್ವಾತಂತ್ರ್ಯ ಹೋರಾಟ :**

**1. ಬ್ರಹ್ಮ ಸಮಾಜ**

ಬಂಗಾಳದ ರಾಜಾರಾಮ ಮೋಹನರಾಯ್ 1828ರಲ್ಲಿ ಇದನ್ನು ಸ್ಥಾಪಿಸಿದರು. ಜಿಡ್ಡುಗಟ್ಟಿ ಹೋಗಿದ್ದ ಸಮಾಜಕ್ಕೆ ಹೊಸ ಚೈತನ್ಯ ತುಂಬಲು ರಾಜಾರಾಮ ಮೋಹನರಾಯ ಶ್ರಮಿಸಿದರು.

ವಿಗ್ರಹಾರಾಧನೆ, ಮೂಢನಂಬಿಕೆ. ಕಂದಾಚಾರ, ಯುಜ್ಞ–ಯಾಗಾದಿಗಳು, ಸತಿ ಪದ್ಧತಿ, ಬಾಲ್ಯ ವಿವಾಹ ಇತ್ಯಾದಿಗಳನ್ನು ವಿರೋಧಿಸಿದ ಬ್ರಹ್ಮ ಸಮಾಜ ದೇವರು ಒಬ್ಬನೇ ಎಂದು ಹೇಳಿತು.

ವಿಧವಾ ವಿವಾಹ ಪ್ರೋತ್ಸಾಹಿಸುವುದು, ಸ್ತ್ರೀಯರಿಗೆ ಸಮಾನ ಸ್ವಾತಂತ್ರ್ಯ ನೀಡುವುದು. ಜಾತಿ ಮತ್ತು ವರ್ಗ ಭೇದ ತಡೆಯುವುದು– ಇವು ಬ್ರಹ್ಮ ಸಮಾಜದ ರಚನಾತ್ಮಕ ಚಟುವಟಿಕೆಗಳು.

ಲಾರ್ಡ್ ಬೆಂಟಿಂಕ್ 1829ರ ಸತಿ ಪದ್ಧತಿಯನ್ನು ಕಾನೂನು ಬಾಹಿರ ಎಂದು ಘೋಷಿಸಿದ್ದರಲ್ಲಿ ಬ್ರಹ್ಮ ಸಮಾಜದ ಚಟುವಟಿಕೆಗಳ ಪ್ರಭಾವವಿತ್ತು.

ಶಿಕ್ಷಣಕ್ಕೂ ಮಹತ್ವ ನೀಡಿದ್ದ ರಾಜಾರಾಂ ಮೋಹನ್‌ರಾಯ್ **'ಆಧುನಿಕ ಭಾರತ ಪಿತಾಮಹ'** ಎಂಬ ವಿಶೇಷಣವನ್ನು ಪಡೆದಿದ್ದಾರೆ.

1833ರಲ್ಲಿ ರಾಜಾರಾಮ ಮೋಹನ್‌ರಾಯರ ನಿಧನದಿಂದ ಬ್ರಹ್ಮಸಮಾಜ ಅಶಕ್ತಗೊಂಡಿತು.

1842ರಲ್ಲಿ ಮಹರ್ಷಿ ದೇವೇಂದ್ರನಾಥ ಟಾಗೋರ್ (1817–1905) (ರವೀಂದ್ರನಾಥ್ ಟಾಗೋರ್‌ರ ತಂದೆ), ಬ್ರಹ್ಮ ಸಮಾಜವನ್ನು ಸೇರಿ ಅದಕ್ಕೆ ಹೊಸ ಶಕ್ತಿ ನೀಡಿದರು.

ದೇವೇಂದ್ರನಾಥರು 1839ರಲ್ಲಿ ಸ್ಥಾಪಿಸಿದ್ದ **'ತತ್ವ ಭೋಧಿನಿ ಸಭಾ'ದ** ಜೊತೆ 'ಬ್ರಹ್ಮ ಸಮಾಜ'ದ ಕೆಲಸಗಳೂ ಸೇರಿಸಿಕೊಂಡರು.

ಈ ಸಂದರ್ಭದಲ್ಲಿ ಈಶ್ವರಚಂದ್ರ ವಿದ್ವಾಸಾಗರರೂ ಬ್ರಹ್ಮಸಮಾಜ ಸೇರಿದರು. ವಿಧವಾ ವಿವಾಹ, ಸ್ತ್ರೀ ಶಿಕ್ಷಣ, ಬಹುಪತ್ನಿತ್ವದ ವಿರೋಧ ಇತ್ಯಾದಿ ಹೋರಾಟಗಳನ್ನೂ ಸಮಾಜ ಮುಂದುವರೆಸಿತು.

1840 ಮತ್ತು 1850ರ ದಶಕಗಳಲ್ಲಿ ಬಂಗಾಳದಲ್ಲಿ ಈಶ್ವರ ಚಂದ್ರ ವಿದ್ಯಾಸಾಗರರ ಚಟುವಟಿಕೆಗಳಿಂದ ಬಂಗಾಳದಲ್ಲಿ ಸ್ತ್ರೀ–ಶಿಕ್ಷಣ, ಬಾಲ್ಯವಿವಾಹ ವಿರೋಧ, ವಿಧವಾ ವಿವಾಹಗಳಿಗೆ–ಭಾರೀ ಚಾಲನೆ ದೊರೆಯಿತು. ಈಶ್ವರ ಚಂದ್ರರು ಸ್ಥಾಪಿಸಿದ ಬೆಥ್ಯೂನ್ ಶಾಲೆ ಬಾಲಕಿಯರ ಶಿಕ್ಷಣಕ್ಕಾಗಿ ಕ್ರಾಂತಿಕಾರಕ ಬುನಾದಿ ಹಾಕಿತು.

1858ರಲ್ಲಿ ಕೇಶವ್‌ಚಂದ್ರ ಸೇನ್ ಬ್ರಹ್ಮ ಸಮಾಜ ಸೇರಿದಾಗ ಅದರ ಶಕ್ತಿ ಮತ್ತಷ್ಟು ಹೆಚ್ಚಿತು. ದೇವೇಂದ್ರ ನಾಥರು ಅವರನ್ನು ಬ್ರಹ್ಮಸಮಾಜದ **ಆಚಾರ್ಯ**ರನ್ನಾಗಿ ಮಾಡಿದರು.

ಕೇಶವ ಚಂದ್ರ ಸೇನ್ ಕ್ರಾಂತಿಕಾರಕ ರೂಪವನ್ನು ಬ್ರಹ್ಮಸಮಾಜಕ್ಕೆ ನೀಡಿದರು. ಸಮಾಜದ ಸಭೆಗಳಲ್ಲಿ ಎಲ್ಲ ಧರ್ಮಗಳ ಪ್ರಾರ್ಥನೆಯನ್ನು ಅವರು ಅಳವಡಿಸಿದರು. ಅಂತರ್ಜಾತಿ ವಿವಾವಗಳನ್ನು ಅವರು ಪ್ರೋತ್ಸಾಹಿಸಿದರು.

ಆದರೆ ಸಾಂಪ್ರದಾಯಿಕ ಚೌಕಟ್ಟಿನೊಳಗಿದ್ದುಕೊಂಡೇ ಹಿಂದೂ ಧರ್ಮದ ಕೊಳೆಯನ್ನು ಶುಚಿಗೊಳಿಸುವತ್ತ ಹೆಚ್ಚು ಒಲವು ಹೊಂದಿದ್ದ ದೇವೇಂದ್ರನಾಥ್‌ರಿಗೆ ಕೇಶವ್‌ಚಂದ್ರ ಸೇನ್‌ರ 'ಕ್ರಾಂತಿಕಾರಿ' ನಿಲುವುಗಳು ಸರಿಕಂಡು ಬರಲಿಲ್ಲ.

1865ರಲ್ಲಿ ಕೇಶವ್‌ಚಂದ್ರ ಸೇನ್‌ರನ್ನು ದೇವೇಂದ್ರ ನಾಥ್ ಟಾಗೋರರು ಬ್ರಹ್ಮ ಸಮಾಜದ 'ಆಚಾರ್ಯ' ಪದವಿಯಂತೆ ಕಿತ್ತು ಹಾಕಿದರು.

ನಂತರ, ಕೇಶವ್ ಚಂದ್ರ ಸೇನ್ ಗುಂಪು **'ಬ್ರಹ್ಮ ಸಮಾಜ'** ಎಂದೂ, ದೇವೇಂದ್ರನಾಥ್‌ರ ಗುಂಪು **'ಆದಿ ಬ್ರಹ್ಮ ಸಮಾಜ'** ಎಂದೂ ಸಾಮಾಜಿಕ ಕೆಲಸಗಳನ್ನು ಮುಂದುವರೆಸಿದವು.

ಒಟ್ಟಾರೆ ಬ್ರಹ್ಮ ಸಮಾಜದ ಸಮಾಜ ಸೇವೆಯನ್ನು ಕೆಳಗಿನಂತೆ ಸಂಕ್ಷೇಪಿಸಬಹುದು

**ಧಾರ್ಮಿಕ ಚಳವಳಿ :**

ಅದು ವಿಗ್ರಹ ಪೂಜೆ ಹಾಗೂ ಹತ್ತಾರು ದೇವರನ್ನು ವಿರೋಧಿಸಿತು. ದೇವನೊಬ್ಬನೆ ಎಂದು ಪ್ರತಿಪಾದಿಸಿತು.

ದೇವರ ಅವತಾರಗಳನ್ನು ತಿರಸ್ಕರಿಸಿತು.

ಮನುಷ್ಯನ ಪ್ರಜ್ಞೆ ಹಾಗೂ ತರ್ಕಗಳನ್ನು ಮೀರಿದ ಪವಿತ್ರ ಗ್ರಂಥಗಳು ಯಾವುದೂ ಇಲ್ಲ ಎಂದು ಸಾರಿತು.

ಕರ್ಮ ಮತ್ತು ಆತ್ಮದ ರೂಪಾಂತರ ಕುರಿತಂತೆ ಯಾವ ನಿರ್ದಿಷ್ಟ ನಿಲುವನ್ನು ತೆಗೆದುಕೊಳ್ಳದೇ ಈ ವಿಷಯಗಳು ಅವರವರ ನಂಬಿಕೆಗೆ ಬಿಟ್ಟಿದ್ದು ಎಂದಿತು.

ಜಾತಿ ಪದ್ಧತಿ ನಿರ್ಮೂಲನೆಗಾಗಿ ಹೋರಾಡಿತು.

**ಸಾಮಾಜಿಕ ಚಳವಳಿ :**

ಸತಿಪದ್ಧತಿಯನ್ನು ವಿರೋಧಿಸಿತು, ಬಾಲ್ಯ ವಿವಾಹವನ್ನು ವಿರೋಧಿಸಿತು.

ಬಹುಪತ್ನಿತ್ವವನ್ನು ತಿರಸ್ಕರಿಸತು.

'ಪರದಾ' ಪದ್ಧತಿಯನ್ನು ವಿರೋಧಿಸಿತು.

ಸ್ತ್ರೀ ಶಿಕ್ಷಣ, ಸ್ತ್ರೀ–ಸಮಾನತೆಗಳಿಗೆ ಒತ್ತು ಕೊಟ್ಟಿತು.

**2. ಆರ್ಯ ಸಮಾಜ**

**ದಯಾನಂದ ಸರಸ್ವತಿ**ಯವರು 1875ರಲ್ಲಿ ಆರ್ಯ ಸಮಾಜವನ್ನು ಸ್ಥಾಪಿಸಿದರು ಕ್ಷೀಣಿಸುತ್ತಿದ್ದ ಸಾಮಾಜಿಕ ಮೌಲ್ಯಗಳಿಗೆ ಉತ್ತರವಾಗಿ ವೇದಗಳ ಮಾದರಿಯಲ್ಲಿ ಸಮಾಜವನ್ನು ಮತ್ತೆ ಕಟ್ಟಬೇಕೆಂಬ ಗುರುಯಿಂದ ದಯಾನಂದ ಸರಸ್ವತಿವರು **'ವೇದಗಳಿಗೆ ಹಿಂತಿರುಗಿ'** ಎಂದು ಕರೆ ನೀಡಿದರು.

ಪಾಶ್ಚಿಮಾತ್ಯರ ಪ್ರಭಾವದಿಂದ 'ನಮ್ಮ ಸಂಪ್ರದಾಯ' ಕುಸಿಯುತ್ತಿದೆ ಎಂಬ ಕಾರಣದಿಂದ ಅವರು ಅಂಥ ಕರೆ ನೀಡಿ ಕಾರ್ಯೋನ್ಮುಖರಾದರು.

ವೇದಗಳಿಗೆ ಮಹತ್ವವನ್ನು ಕೊಟ್ಟ ಅವರು ಪುರಾಣಗಳನ್ನು ತಿರಸ್ಕರಿಸಿದರಲ್ಲದೆ, ಪ್ರತಿಯೊಬ್ಬನೂ ದೇವರಿಗೆ ಹತ್ತಿರ ಎಂದು ಪ್ರತಿಪಾದಿಸಿದರು.

ಹಿಂದೂ ಧರ್ಮದಲ್ಲಿದ್ದ ಅಂಧಾನುಕರಣೆಗಳನ್ನೂ, ಜಾತಿ ನಿರ್ಬಂಧಗಳನ್ನು ಅಸ್ಪೃಶ್ಯತೆ, ವಿಗ್ರಹ ಪೂಜೆ, ಹಲವಾರು ದೇವರಲ್ಲಿ ನಂಬಿಕೆ, ಮಾಟ ಮಂತ್ರಗಳಲ್ಲಿ ನಂಬಿಕೆ. ಪ್ರಾಣಿಗಳ ಬಲಿ, ಸಮುದ್ರ ಪ್ರವಾಸ ಮಾಡಬಾರದೆಂಬ ಗೊಡ್ಡು ಕಟ್ಟಳೆಗಳನ್ನೂ ಆರ್ಯ ಸಮಾಜ ಬಲವಾಗಿ ವಿರೋಧಿಸಿತು.

ದಯಾನಂದ ಸರಸ್ವತಿಯವರು ವೇದೀಯ ಚತುರ್ವರ್ಣ ಪದ್ಧತಿಯಲ್ಲಿ ನಂಬಿಕೆ ಇಟ್ಟಿದ್ದರು. ಅವರ ಪ್ರಕಾರ ಹುಟ್ಟಿನಿಂದ ಯಾರೂ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರರಲ್ಲ, ಅದು ಅವರವರ ವೃತ್ತಿಯಿಂದ ಬರುವಂಥದ್ದು.

ಅಂತರ್ಜಾತೀಯ ವಿವಾಹ. ವಿಧವಾ ವಿವಾಹಗಳನ್ನೂ ಸಮಾಜ ಪ್ರೋತ್ಸಾಹಿಸಿತು. ದಯಾನಂದ ಸರಸ್ವತಿಯವರು, ತಮ್ಮ ದೃಷ್ಟಿಕೋನಗಳನ್ನು 'ಸತ್ಯಾರ್ಥ ಪ್ರಕಾಶ'ದಲ್ಲಿ ಪ್ರಕಟಿಸುತ್ತಿದ್ದರು. ಅವರ ಕನಸಿನ ಭಾರತ ವರ್ಗರಹಿತ, ಜಾತಿರಹಿತ ಸಮಾಜವಾಗಿತ್ತು.

### 3. ಪ್ರಾರ್ಥನಾ ಸಮಾಜ

ಕೇಶವ್ ಚಂದ್ರಸೇನ್‌ರು 1863ರಲ್ಲಿ ಮುಂಬೈಯಲ್ಲಿ ಪ್ರಾರ್ಥನಾ ಸಮಾಜವನ್ನು ಸ್ಥಾಪಿಸಲು ಸಹಾಯ ಮಾಡಿದರು. ಈ ಸಮಾಜದ ಪ್ರಮುಖ ಧುರೀಣರು ಮಹಾದೇವ ಗೋವಿಂದ ರಾನಡೆ (1842–1901).

ಈ ಸಮಾಜದ ಧುರೀಣರು ಕೆಳಗಿನ ಅಂಶಗಳಿಗೆ ಹೆಚ್ಚು ಮಹತ್ವ ಕೊಟ್ಟರು:

- ಜಾತಿ ಪದ್ಧತಿ ವಿರೋಧ
- ಸ್ತ್ರೀ ಶಿಕ್ಷಣ
- ವಿಧವಾ ವಿವಾಹ

ಹಿಂದೂ ಸಂಪ್ರದಾಯವನ್ನು ಎದುರು ಹಾಕಿಕೊಳ್ಳದೆ, ಶಿಕ್ಷಣ ಹಾಗೂ ಅರಿವಿನ ಮೂಲಕ ಸುಧಾರಣೆ ತರಲು ಪ್ರಾರ್ಥನಾ ಸಮಾಜ ಹೋರಾಡಿತು.

### 4. ಯುವ ಬಂಗಾಳಿ ಚಳವಳಿ ಮತ್ತು ಹೆನ್ರಿ ಡಿರೋಜಿಯೆ (1809–31)

1826 ರಿಂದ 1831ರ ವರೆಗೆ ಕಲ್ಕತ್ತದ ಹಿಂದೂ ಕಾಲೇಜಿನಲ್ಲಿ ಉಪನ್ಯಾಸಕರಾಗಿದ್ದ ಆಂಗ್ಲೋ–ಇಂಡಿಯನ್, ಹೆನ್ರಿ ವಿವಿಯನ್ ಡಿರೋಜಿಯೊ ಈ ಚಳವಳಿಯ ನೇತಾರ. ಯುವ ವಿದ್ಯಾರ್ಥಿಗಳು ಪ್ರಗತಿಪರವಾಗಿ, ಸ್ವತಂತ್ರವಾಗಿ, ಕ್ರಾಂತಿಕಾರಕ ವಿಚಾರಗಳನ್ನು ಬೆಳೆಸಿಕೊಳ್ಳುವಲ್ಲಿ ಡಿರೋಜಿಯೊ ಭಾರೀ ಪ್ರಭಾವ ಬೀರಿದ್ದ. ಇವರ ಪ್ರಭಾವಕ್ಕೆ ಬಂದ ವಿದ್ಯಾರ್ಥಿಗಳ ದೊಡ್ಡ ಗುಂಪನ್ನು ಡಿರೋಜಿಯನ್ ಗುಂಪೆಂದೂ, ಇವರ ವಿಚಾರ ಕ್ರಿಯೆಗಳು ಯುವ ಬಂಗಾಳಿ ಚಳವಳಿ ಎಂದೂ ಪ್ರಸಿದ್ಧಿಗೆ ಬಂದವು. ಗೊಡ್ಡು ಸಂಪ್ರದಾಯಗಳ ವಿರುದ್ಧ ಸ್ತ್ರೀಯರ ಹಕ್ಕು ಬಾಧ್ಯತೆಗಾಗಿ, ಸ್ತ್ರೀಯರ ಶಿಕ್ಷಣಕ್ಕಾಗಿ ಈ ಗುಂಪು ವೈಚಾರಿಕ ಹೋರಾಟ ನಡೆಯಿತು.

ಜನರೊಂದಿಗೆ ಹೆಚ್ಚು ಬೆರೆಯದ ಕಾರಣ ಈ ಚಳವಳಿ ಅಷ್ಟು ಜನಪ್ರಿಯವಾಗಲಿಲ್ಲ. ಡಿರೋಜಿಯನ್ ಬಂಗಾಳದ ಆಧುನಿಕ ನಾಗರಿಕತೆಯ ಹರಿಕಾರ ಎಂದು ಖ್ಯಾತನಾದ.

### 5. ಸತ್ಯಶೋಧಕ ಸಮಾಜ ಮತ್ತು ಜ್ಯೋತಿಬಾ ಫುಲೆ

ಮಾಲಿಗಳ ಕುಟುಂಬಕ್ಕೆ ಸೇರಿದ್ದ ಜ್ಯೋತಿಬಾ ಫುಲೆ ಮಹಾರಾಷ್ಟ್ರದಲ್ಲಿ 1873ರಲ್ಲಿ ಸತ್ಯ ಶೋಧಕ ಸಮಾಜ ಸ್ಥಾಪಿಸಿದರು. ಇದರ ಮೂಲಕ ಅವರು ಶೋಷಿತ ವರ್ಗದವರನ್ನು ಮೇಲೆತ್ತಲು ಹೋರಾಡಿದರು. 1815ರಷ್ಟು ಹಿಂದೆಯೇ ಪೂನಾದಲ್ಲಿ ಹೆಣ್ಣು ಮಕ್ಕಳ ಶಾಲೆಯನು ಆರಂಭಿಸಿದ್ದ. ಜ್ಯೋತಿಬಾ ಫುಲೆ ಸ್ತ್ರೀಯರ ಹಕ್ಕು ಬಾಧ್ಯತೆಗಳನ್ನು ರಕ್ಷಸಲು, ವಿಧವಾ ವಿವಾಹವನ್ನು ಪ್ರೋತ್ಸಾಹಿಸಲು ಪರಿಣಾಮಕಾರಿ ಹೋರಾಟ ಮಾಡಿದರು. ಸತ್ಯಶೋದಕ ಸಮಾಜದ ಮುಖ್ಯ ತತ್ವಗಳು

- ಸಾಮಾಜಿಕ ಸೇವೆ
- ಹಿಂದುಳಿದವರ ಉದ್ಧಾರ
- ಸ್ತ್ರೀಯರಲ್ಲಿ, ಕೆಳವರ್ಗದವರಲ್ಲಿ ಶಿಕ್ಷಣ ಆಂದೋಲನ.

**6. ರಾಮಕೃಷ್ಣ ಚಳವಳಿ ಮತ್ತು ವಿವೇಕಾನಂದ**

ಬ್ರಹ್ಮ ಸಮಾಜ ಮುಂದುವರೆದವರಲ್ಲಿ ಮಾತ್ರ ಕ್ರಾಂತಿಕಾರಕ ವಿಚಾರಗಳನನು ಬಿತ್ತಿತ್ತೇ ಹೊರತು ಸಾಮಾನ್ಯ ವರ್ಗದ ಬಂಗಾಳಿಗಳು ಭಕ್ತಿ ಮತ್ತು ಯೋಗಗಳ ಪಂಥದಲ್ಲಿಯೇ ಇನ್ನೂ ಮುಂದುವರೆದಿದ್ದರು. ಕಲ್ಕತ್ತದ ದಕ್ಷಿಣೇಶ್ವರದ ಕಾಲೀ ದೇವಸ್ಥಾನದಲ್ಲಿ ಆರಾಧಕರಾಗಿದ್ದ ರಾಮಕೃಷ್ಣ ಪರಮಹಂಸ (1834–86)ರ ಬೋಧನೆಗಳು ಸಾಮಾನ್ಯ ವರ್ಗದ ಬಂಗಾಳಿಗಳಲ್ಲೂ ಕ್ರಾಂತಿಕಾರಕ ವಿಚಾರಗಳನ್ನು ಬಿಂಬಿಸಲು ತೊಡಗಿದವು. ರಾಮಕೃಷ್ಣ ಪರಮಹಂಸರು ಭಕ್ತಿಯನ್ನೇ ತಮ್ಮ ಕ್ರಾಂತಿಕಾರಕ ಬೋಧನೆಗಳಿಗೆ ವೇದಿಕೆಯನ್ನಾಗಿ ಮಾಡಿಕೊಂಡರು. ರಾಮಕೃಷ್ಣ ಪರಮಹಂಸರ ಚಳವಳೀಯ ಗುರಿಗಳು **ಮುಖ್ಯವಾಗಿ ಈ ಎರಡಾಗಿದ್ದವು**.

- ವೈರಾಗ್ಯ ಹಾಗೂ ಆಧ್ಯಾತ್ಮಗಳನ್ನು ಮೈಗೂಡಿಸಿಕೊಂಡ ಸನ್ಯಾಸಿಗಳ ಒಂದು ತಂಡನ್ನೇ ನಿರ್ಮಿಸುವುದು ಮತ್ತು ಅವರ ಮೂಲಕ ವೇದಾಂತದ ವಿಶ್ವ ಸಂದೇಶವನ್ನು ಎಲ್ಲೆಡೆ ಹರಡುವುದು.
- ಮೇಲಿನದರ ಜೊತೆಗೆ ಆ ಸನ್ಯಾಸಿಗಳು ಜಾತಿ, ಧರ್ಮ, ಬಣ್ಣಗಳ ಮೇಲುಕೀಳಿಲ್ಲದ ಸಮಾಜ ನಿರ್ಮಿಸುವುದು ಮತ್ತು ಸ್ತ್ರೀಯರ, ಮಕ್ಕಳ ಸರ್ವತೋಮುಖ ಅಭಿವೃದ್ಧಿಗಾಗಿ ಶ್ರಮಿಸುವುದು.

ಆ ಎರಡನೇ ಗುರಿಯನ್ನು ವಿವೇಕಾನಂದರು (ಮೊದಲಿನ ಹೆಸರು ನರೇಂದ್ರ) ರಾಮಕೃಷ್ಣ ಪರಮಹಂಸರ ನಿಧನದ ನಂತರ, ಪರಿಣಾಮಕಾರಿಯಾಗಿ ಕೈಗೆತ್ತಿಕೊಂಡರು. ವಿವೇಕಾನಂದರು (1862–1902) 1897 ರಲ್ಲಿ ಕಲ್ಕತ್ತದಲ್ಲಿ 'ರಾಮಕೃಷ್ಣ ಆಂದೋಲನ'ವನ್ನು ಸ್ಥಾಪಿಸಿದರು. ಅವರು ಮಹಾನ್ ಮಾನವತಾದಿಯಾಗಿದ್ದರು. 'ಮನುಷ್ಯ ಸೇವೆ'ಯೇ (ಅಸಹಾಯಕರ, ಹಿಂದುಳಿದವರ, ಶೋಷಿತರ) ದೇವರ ಪೂಜೆ, ಜೀವವೇ ಧರ್ಮ ಎಂದು ಬೋದಿಸಿದ ವಿವೇಕಾನಂದರು ಹೊಸ ತಂತ್ರಜ್ಞಾನಗಳನ್ನೂ, ಆಧುನಿಕ ವಿಜ್ಞಾನವನ್ನೂ ಪ್ರೋತ್ಸಾಹಿಸಿದರು.

1893ರಲ್ಲಿ ಚಿಕಾಗೋದಲ್ಲಿ ನಡೆದ ವಿಶ್ವ ಧರ್ಮ ಸಮ್ಮೇಳನದಲ್ಲಿ ಪಾಲ್ಗೊಂಡು ವಿವೇಕಾನಂದರು ಭಾರತೀಯ ಸಂಸ್ಕೃತಿಯನ್ನು, ಆಧ್ಯಾತ್ಮವನ್ನೂ ಎತ್ತಿಹಿಡಿದರು. ಭಾರತದ ಪ್ರಚಂಡ ಆಧ್ಯಾತ್ಮಿಕತೆ ಮತ್ತು ಪಾಶ್ಚಿಮಾತ್ಯರ ಭೌತಿಕ ಸೌಲಭಗಳ ಆರೋಗ್ಯಕರ ಹೊಂದಾಣಿಕೆ ತಪ್ಪೇನಲ್ಲ ಎಂದು ಅವರು ಪ್ರತಿಪಾದಿಸಿದರು. ವಿವೇಕಾನಂದರು ಆಧುನಿಕ ರಾಷ್ಟ್ರೀಯತೆಯ ಆಧ್ಯಾತ್ಮಿಕ ಪಿತಾಮಹ. ಆತ್ಮದ ಮುಕ್ತಿಯ ಜೊತೆಗೇ ಸಾಮಾಜಿಕ ಒಳತಿಗಾಗಿ, ಸುಧಾರಣೆಗಾಗಿ ಒತ್ತು ಕೊಟ್ಟ ಆಧುನಿಕ ಋಷಿ.

**7. ಥಿಯೋಸಾಫಿಕಲ್ ಚಳವಳಿ :**

ದೇವರು ಮತ್ತು ಜ್ಞಾನ ಎಂಬ ಎರಡು ಗ್ರೀಕ್ ಪದಗಳಿಂದ 'ಥಿಯೋಸಾಫಿ' ಹುಟ್ಟಿದೆ. ರಷ್ಯದ ಮಹಿಳೆ ಎಚ್.ಪ. ಬ್ಲಾವಟ್‌ಸ್ಕಿ ಹಾಗೂ ಅಮೆರಿಕಾದ ಒಲ್ಕಾಟ್‌ರಿಂದ 1875ರಲ್ಲಿ ಅಮೆರಿಕಾದಲ್ಲಿ 'ಥಿಯೋಸಾಫಿಕಲ್ ಸೊಸೈಟಿ ಸ್ಥಾಪಿಸಲ್ಪಟ್ಟಿತು. ಈ ಚಳವಳಿ ನ್ಯಾಯ, ನೀತಿ, ದಯೆ ಮುಂತಾದ ಮಾನವೀಯ ಮೌಲ್ಯಗಳಿಗೆ ಒತ್ತು ನೀಡಿತು. ವಿಶ್ವ ಸೋದರತ್ವದ ಮೂಲಕ ತನ್ನ ತತ್ವಗಳನ್ನು ಹರಡಲು 1882ರಲ್ಲಿ ಬ್ಲಾವಟ್‌ಸ್ಕಿ ಮತ್ತು ಒಲ್ಕಾಟ್ ಮತ್ತು ಕೇಂದ್ರವನ್ನು ಭಾರತದ ಮದ್ರಾಸ್‌ನ ಆಡ್ಯಾರ್ ಆಶ್ರಮಕ್ಕೆ ವರ್ಗಾಯಿಸಿಕೊಂಡರು.
ಈ ಚಳವಳಿಯ ಮುಖ್ಯ ಬೋಧನೆ ಎಂದರೆ ಮೋಕ್ಷವನ್ನು ಬಯಸುವವರಿಗೆ ಕೇವಲ ಭಕ್ತಿ ಮತ್ತು ಜ್ಞಾನಗಳಿದ್ದರೆ ಸಾಲದು, ಅವರು ಉತ್ತಮವಾದ ಭಾವನೆಯನ್ನೂ ಬೆಳೆಸಿಕೊಂಡಿರಬೇಕು ಎನ್ನುವುದು. ಭಾರತದಲ್ಲಿ ಥಿಯೋಸಾಫಿಕಲ್ ಚಳವಳಿಯ ಯಶಸ್ಸಿಗೆ ಮುಖ್ಯ ಕಾರಣ ಆ್ಯನಿಬೆಸೆಂಟರು. 1893ರಲ್ಲಿ ಆ್ಯನಿಬೆಸೆಂಟ್ ಇಂಗ್ಲೆಂಡ್‌ನಿಂದ ಭಾರತಕ್ಕೆ ಬಂದು ಥಿಯೋಸಾಫಿಕಲ್ ಸಂಸ್ಥೆಯ ಧ್ಯೇಯಗಳನ್ನು ಧಾರ್ಮಿಕ ಹಾಗೂ ಸಾಮಾಜಿಕ ಕ್ಷೇತ್ರಗಳಲ್ಲಿ ಪ್ರಚಾರ ಪಡಿಸಿದರು. ಭಾರತದ ಸನಾತನ ಧರ್ಮದ ಪುನರುದ್ಧಾರ, ಪ್ರಾಚೀನ ಆದರ್ಶಗಳ ಪುರುಜ್ಜೀವನ, ಭಾರತದ ಪುನರ್ ನಿರ್ಮಾಣ ಅವರ ಗುರಿಯಾಗುತ್ತು. ಬನಾರಸ್‌ನಲ್ಲಿ ಹಿಂದೂ ಶಾಲೆಯನ್ನು ಆರಂಭಿಸಿದ ಆ್ಯನಿಬೆಸೆಂಟ್ ಬಾಲ್ಯ ವಿವಾಹವನ್ನು ಖಂಡಿಸಿ, ವಿಧವಾ ಪ್ರೋತ್ಸಾಹಿಸಿ, ಸ್ತ್ರೀ ಸಮಾನತೆ ಮತ್ತು ಶಿಕ್ಷಣಕ್ಕಾಗಿ ಹೋರಾಡಿ, ಸನಾತನ ಹಿಂದೂ ಧರ್ಮವನ್ನು ಪುನರುತ್ಥಾನಗೊಳಿಸುವುದರಲ್ಲಿ ಶ್ರಮಿಸಿದರು.

**8. ಆಲಿಘರ್ ಚಳವಳಿ ಮತ್ತು ಸರ್ ಸೈಯದ್ ಅಹ್ಮದ್ ಖಾನ್**

ಮುಸ್ಲಿಂರಲ್ಲಿ ಧಾರ್ಮಿಕ ಮತ್ತು ಸಾಮಾಜಿಕ ಸುಧಾರಣಾ ಚಳವಳಿಗಳು 1857ರ ಮಹಾದಂಗೆಯ ನಂತರ, ತಡವಾಗಿ, ಆರಂಭವಾದವು. ಗೌರಾವಾನ್ವಿತ ಮುಸ್ಲಿಂ ಕುಟುಂಬದಲ್ಲಿ 1817ರಲ್ಲಿ ಜನಿಸಿದ ಸೈಯದ್ ಅಹ್ಮದ್ ಖಾನ್ 1857ರಲ್ಲಿ ಆಲಿಘರ್‌ನಲ್ಲಿ ಮಹ್ಮದನ ಆಂಗ್ಲೋ–ಓರಿಯಂಟಲ್ ಕಾಲೇಜ್ ಸ್ಥಾಪಿಸಿ, ಅಲ್ಲಿಂದ ಪಾಶ್ಚಿಮಾತ್ಯ ವಿಜ್ಞಾನ ಮತ್ತು ಸಂಸ್ಕೃತಿಯನ್ನೂ ಹರಿಡಿದರು. ಮುಂದೆ ಈ ಕಾಲೇಜೇ ಆಲಿಘರ್ ಮುಸ್ಲಿಂ ವಿಶ್ವವಿದ್ಯಾಲಯವಾಗಿ ಬೆಳೆಯಿತು. ಮುಸ್ಲಿಂರು ಧಾರ್ಮಿಕವಾಗಿ, ಸಾಮಾಜಿಕವಾಗಿ ಬೆಳೆಯಬೇಕೆಂದರೆ ಪಾಶ್ಚಿಮಾತ್ಯ ವಿಜ್ಞಾನ ಮತ್ತು ಸಂಸ್ಕೃತಿಗಳನ್ನು ಅಳವಡಿಸಿಕೊಳ್ಳಬೇಕೆಂದು ಸೈಯದ್ ಅಹ್ಮದ್‌ಖಾನ್ ನಂಬಿದ್ದರು.

ಸ್ತ್ರೀ ಸ್ಥಾನಮಾನಕ್ಕಾಗಿ ಹಾಗೂ ಪರ್ದಾ ಪದ್ಧತಿ ವಿರುದ್ಧ ಹೋರಾಡಿದ ಸೈಯದ್ ಅಹ್ಮದ್ ಖಾನ್, ಮುಸ್ಲಿಂರಲ್ಲಿದ್ದ ಬಹುಪತ್ನಿತ್ವ ವಿವಾಹ ವಿಚ್ಛೇದನದ ಹುಳುಕುಗಳನ್ನು ತೀವ್ರವಾಗಿ ಖಂಡಿಸಿದರು. ಆದರೆ ಬ್ರಿಟಿಷ್ ಸರ್ಕಾರದ ಪರವಾಗಿ ಇದ್ದ ಸೈಯದ್ ಅಹ್ಮದ್ ಖಾನ್ ತಮ್ಮ ಅನುಯಾಯಿಗಳನ್ನು ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಳ್ಳದಂತೆ ತಡೆದರು. ಕೊನೆಗೆ ಧಾರ್ಮಿಕ ಸುಧಾರಣಾ ಚಳವಳಿಯನ್ನು ಕೈಬಿಟ್ಟು ಜಾತಿವಾದ, ಪ್ರತ್ಯೇಕತಾವಾದಕ್ಕೆ ಬೆಂಬಲ ನೀಡಿ ರಾಜಕೀಯ ತಪ್ಪು ಮಾಡಿದರು.

**9. ಕರ್ನಾಟಕದಲ್ಲಿ ಸಾಮಾಜಿಕ ಸುಧಾರಣೆ**

1. ಥಿಯೋಸಿಫಿಕಲ್ ಸೊಸೈಟಿ :

ಕರ್ನಾಟಕದಲ್ಲಿ ಮೊದಲು ಆರಂಭವಾದ ಚಳವಳಿ ಎಂದರೆ ಥಿಯಾಸಾಫಿಕಲ್ ಸೊಸೈಟಿಯದು. ಎಚ್. ಎಸ್. ಅಲ್ಕಾಟ್ ಮತ್ತು ಮ್ಯಾಡಮ್ ಎಚ್.ಪಿ. ಬ್ಲಾವಟ್‌ಸ್ಕಿ ಅವರ ಈ ಸೊಸೈಟಿ ಸತ್ಯಕ್ಕಿಂತ ಮಿಗಿಲಾದ ದೇವರಿಲ್ಲ ಎಂಬುದನ್ನು ಪ್ರತಿಪಾದಿಸಿತು. ಕರ್ನಾಟಕದಲ್ಲಿ ಮೊದಲ ಶಾಖೆಗಳು ಬೆಂಗಳೂರಿನಲ್ಲಿ 1899ರಲ್ಲಿ ಸ್ಥಾಪನೆಯಾದವು. ಮುಂದೆ ಮೈಸೂರು, ಮಂಗಳೂರು, ಧಾರವಾಡ, ತುಮಕೂರು ಮತ್ತು ಕೋಲಾರಗಳಲ್ಲಿ ಅದರ ಶಾಖೆಗಳು ಆರಂಭವಾದವು. 1908ರ ವೇಳೆಗೆ ಕರ್ನಾಟಕದಲ್ಲಿ 11 ಶಾಖೆಗಳಿದ್ದವು. ಈ ಸೊಸೈಟಿ ಸಭೆ ಸೇರಿ ಪ್ರಪಂಚದ ಎಲ್ಲಾ ಧರ್ಮಗಳಲ್ಲಿಂಯೂ ಅಡಗಿರುವ ಸಾಮಾನ್ಯ ಸತ್ಯದ ಬಗ್ಗೆ ಚರ್ಚಿಸುತ್ತಿತ್ತು. ಹೀಗೆ ಅದು ವಿವಿಧ ಧರ್ಮಗಳ ಜನರು ಒಂದೆಡೆ ಸೇರಿ ಮಾತನಾಡಲು ಒಂದು ವೇದಿಕೆಯಾಯಿತು.

ಮ್ಯಾಡಮ್ ಬ್ಲಾವಟ್‌ಸ್ಕಿಯವರ ಕೃತಿಗಳನ್ನು ಕನ್ನಡಕ್ಕೆ ಅನುವಾದಿಸಲಾಯಿತು ಮತ್ತು ಇನ್ನೂ ಕೆಲವು ಕೃತಿಗಳನ್ನು ರಚಿಸಲಯಿತು. ಸೊಸೈಟಿ 'ಸುಪಂಥ' –ಎಂಬ ಪತ್ರಿಕೆಯನ್ನು ಹೊರಡಿಸುತ್ತಿತ್ತು. ಸೊಸೈಟಿಯ ಒಬ್ಬ ಪ್ರಮುಖ ಸದಸ್ಯರೂ, ಬೊಂಬಾಯಿಯ ಕಾರ್ಮಿಕ ನಾಯಕರೂ ಆಗಿದ್ದ ಬಿ.ಪಿ.ವಾಡಿಯಾ, ಶ್ರೀಮತಿ ಆ್ಯನಿಬೆಸೆಂಟರೊಂದಿಗೆ ಉಂಟಾದ ಭಿನ್ನಾಭಿಪ್ರಾಯಗಳಿಂದಾಗಿ 1919ರಲ್ಲಿ ಸೊಸೈಟಿಯಿಂದ ಹೊರಬಂದು, ಯುನೈಟೆಎಡ್ ಲಾಡ್ಜ್ ಆಫ್ ಥಿಯಾಸಫಿಸ್ಟ್‌ಗಳ ಗುಂಪನ್ನು ಸೇರಿದರು. ಇದರ ಮೊದಲ ಶಾಖೆ 1919ರಲ್ಲಿ ಬೊಂಬಾಯಿಯಲ್ಲಿಯೂ, 1942ರಲ್ಲಿ ಬೆಂಗಳೂರಿನಲ್ಲಿಯೂ ಆರಂಭವಾಯಿತು.

ಇದು ಇತರ ಹಲವಾರು ಸಂಸ್ಥೆಗಳ ಉದಯಕ್ಕೆ ಕಾರಣವಾಯಿತು. ಅದರಲ್ಲಿ ಪ್ರಮುಖವಾದದ್ದು ಬೆಂಗಳೂರಿನ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್,

**2. ಶ್ರೀ ರಾಮಕೃಷ್ಣ ಆಶ್ರಮ :**

ವಿವೇಕಾನಂದರು 1893ರಲ್ಲಿ ಅಮೆರಿಕಾದ ಚಿಕಾಗೋದಲ್ಲಿ ನಡೆದ ಸರ್ವಧರ್ಮ ಸಮ್ಮೇಳನದಲ್ಲಿ ಭಾಗವಹಿಸಲು ಮೈಸೂರು ರಾಜರು ಸಹಾಯ ಮಾಡಿದರು.

ಕರ್ನಾಟಕದಲ್ಲಿ ರಾಮಕೃಷ್ಣ ಮಠದ ಶಾಖೆಯನ್ನು 1903ರಲ್ಲಿ ಶ್ರೀ ರಾಮಕೃಷ್ಣಾನಂದರು ಆರಂಭಿಸಿದರು. ಇವರು ಶ್ರೀ ರಾಮಕೃಷ್ಣ ಪರಮಹಂಸರ ಹದಿನೇಳೂ ಅಪ್ತಶಿಷ್ಯರಲ್ಲಿ ಒಬ್ಬರಾಗಿದ್ದರು. ಆರು ವರ್ಷಗಳ ನಂತರ ಅವರದೇ ಆದ ಕಟ್ಟಡ ಸಿದ್ಧವಾಯಿತು. ಮುಂದೆ ಕೊಡಗಿನ ಪೊನ್ನಂಪೇಟೆ, ಮಂಗಳೂರು ಮತ್ತು ಮೈಸೂರಿನಲ್ಲಿ ಶಾಖೆಗಳು ಆರಂಭವಾದವು. ಈ ಸಂಸ್ಥೆ ಶೈಕ್ಷಣಿಕ ಮತ್ತು ಸಾಮಾಜಿಕ ಅಭಿವೃದ್ಧಿ ಚಟುವಟಿಕೆಗಳಿಗೆ ಪ್ರಾಮುಖ್ಯತೆ ನೀಡುತ್ತದೆ.

**3. ಆರ್ಯ ಸಮಾಜ :**

ಸ್ವಾಮಿ ದಯಾನಂದ ಸರಸ್ವತಿಯವರು ಆರಂಭಿಸಿದ ಆರ್ಯ ಸಮಾಜ 1930ರಲ್ಲಿ ಬೆಂಗಳೂರಿನಲ್ಲಿ ಖಾಯಂ ಅಸ್ತಿತ್ವಕ್ಕೆ ಬಂತು. ಇದಕ್ಕೆ ಮೊದಲು 1881 ರಿಂದಲೇ ಸ್ವಾಮಿ ಸತ್ಯಾನಂದರು ಹೊಸಪೇಟೆಯನ್ನು ಕೇಂದ್ರ ಮಾಡಿಕೊಂಡು ಕಾರ್ಯನಿರತರಾಗಿದ್ದರು. 1921ರಲ್ಲಿ ಸಮಾಜವನ್ನು ಬೆಂಗಳೂರಿನಲ್ಲಿ ಆರಂಭಿಸಲಾಯಿತು. ಮುಂದೆ ಕರ್ನಾಟಕದ ಅನೇಕ ಭಾಗಗಳಲ್ಲಿ ಶಾಖೆಗಳನ್ನು ತೆರೆಯಲಾಯಿತು.

**4. ಇತರ ಸಂಸ್ಥೆಗಳು:**

ರಾಜಾರಾಮ್ ಮೋಹನ್‌ರಾಯ್ ಸ್ಥಾಪಿಸಿದ ಬ್ರಹ್ಮಸಮಾಜ ಮತ್ತು ಜಸ್ಟೀಸ್‌ರಾನಡೆ ಸ್ಥಾಪಿಸಿದ ಪ್ರರ್ಥನಾ ಸಮಾಜದ ಶಾಖೆಗಳು ಕರ್ನಾಟಕದಲ್ಲಿದೆ.

**10. 1857ರ ದಂಗೆ :**

**ವಿವಿಧ ಕಾರಣಗಳು :**

**ರಾಜಕೀಯ ಕಾರಣಗಳು :**

ಡಾಲ್‌ಹೌಸಿ ಜಾರಿಗೆ ತಂದಿದ್ದ ದತ್ತು ಮಕ್ಕಳಿಗೆ ಹಕ್ಕಿಲ್ಲ ನೀತಿಯಿಂದ ನಾನಾಸಾಹೇಬ್, ಝಾನ್ಸಿರಾಣಿ ಲಕ್ಷ್ಮೀಬಾಯಿ, ಮೊಗಲ್ ಚಕ್ರವರ್ತಿ ಬಹದ್ದೂರ್ ಷಾ, ಔದ್ ನವಾಬ್ ವಾಜಿದ್ ಅಲಿ ಷಾ ಮುಂತಾದವರು ತಮ್ಮ ಅಧಿಕಾರವನ್ನು ಕಳೆದುಕೊಂಡಿದ್ದರು. ವೆಲ್ಲೆಸ್ಲಿ ಜಾರಿಗೆ ತಂದಿದ್ದ ಸಹಾಯಕ ಸೈನ್ಯ ಪದ್ಧತಿಯಿಂದ ಹಲವಾರು ಭಾರತೀಯ ಸಂಸ್ಥಾನಗಳು ಸೈನಿಕ ವೆಚ್ಚವನ್ನು ಭರಿಸಲಾಗದೆ ಶೋಷಣೆಗೊಳಗಾಗಿದ್ದವು. ಎರಡನೇ ಬಾಜಿರಾಯನ ಮಗನಿಗೆ ನಿವೃತ್ತಿ ಭತ್ಯೆಯನ್ನು ನಿರಾಕರಿಸಲಾಗಿತ್ತು. ಕರ್ನಾಟಿಕ್ ಹಾಗೂ ತಂಜಾವೂರ್ ನವಾಬರಿಗೆ ಅಗೌರವ ತೋರಿಸಲಾಗಿತ್ತು. ಬಹುದ್ದೂರ್ ಷಾ ನಮತರ ಮೊಗಲ್ ರಾಜರು ತಮ್ಮ ಅರಮನೆಗಳನ್ನೂ ಹಾಗೂ ಬಿರುದುಗಳನ್ನೂ ತ್ಯಜಿಸಬೇಕೆಂದು ಕ್ಯಾನಿಂಗ್ ಘೋಷಿಸಿದ್ದ.

**ಆಡಳಿತಾತ್ಮಕ ಹಾಗೂ ಆರ್ಥಿಕ ಕಾರಣಗಳು :**

ಭಾರತೀಯ ಸಂಸ್ಥಾನಗಳೀಗೆ ಅಧಿಕಾರ ಹಾಗೂ ಸ್ಥಾನಮಾನಗಳನ್ನು ಕ್ರಮೇಣವಾಗಿ ತಿರಿಸ್ಕರಿಸಲಾಗಿತ್ತು. ಈಸ್ಟ್ ಇಂಡಿಯಾ ಕಂಪನಿ ಆಡಳಿತದಲ್ಲಿ ಅಸಮರ್ಥವಾಗಿತ್ತು. ಭೂಕಂದಾಯ ನೀತಿಗಳು ರೈತರನ್ನು ಶೋಷಣೆ ಗೊಳಪಡಿಸಿದ್ದವು. 1852ರ ಇನಾಂ ಆಯೋಗ 2000 ಎಸ್ಟೇಟ್‌ಗಳನ್ನು ಜಮೀನ್ದಾರರಿಂದ ಕತ್ತುಕೊಂಡಿತ್ತು. ಭಾರತದ ಕೈಗಾರಿಕೆಗಳು ಹಾಗೂ ವ್ಯಾಪಾರ ಕುಸಿದು ಬಿದ್ದಿದ್ದವು. ಇಂಗ್ಲೆಂಡ್‌ಗೆ ಭಾರತದ ಸಂಪತ್ತೆಲ್ಲ ಕೊಚ್ಚಿ ಹೋಗಿತ್ತು.

ಸಾಮಾಜಿಕ ಹಾಗೂ ಧಾರ್ಮಿಕ ಕಾರಣಗಳು :

ಬ್ರಿಟಿಷರು ಜನಾಂಗೀಯ ದರ್ಪ ಮಿತಿಮೀರಿತ್ತು. ಧಾರ್ಮಿಕ ಮತಾಂತರಗಳು ಸಾಂಪ್ರದಾಯಿಕ ಭಾರತೀಯ ಸಮಾಜವನ್ನು ಕೆಂಗೆಡಿಸಿತ್ತು. 1850ರ ಧಾರ್ಮಿಕ ನ್ಯೂನತೆ ಕಾಯ್ದೆ ಹಿಂದೂ ಪದ್ಧತಿಗಳನ್ನು ಪರಿಷ್ಕರಿಸಿತ್ತು. ಇದರ ಪ್ರಕಾರ ಧರ್ಮವನ್ನು ಬದಲಾಯಿಸುವ ಮಗ ತನ್ನ ತಂದೆಯ ಆಸ್ತಿಗೆ ವಾರಸುದಾರನಾಗಬಹುದಿತ್ತು.

**ಮಿಲಿಟರಿ ಕಾರಣಗಳು :**

ಬ್ರಿಟಿಷರು ಸೈನ್ಯದಲ್ಲಿ ಭಾರತೀಯ ಸೈನಿಕರಿಗೆ ತಾರತಮ್ಯ ಎಸಗಲಾಗಿತ್ತು. ಕಡಿಮೆ ಸಂಬಳ, ಭತ್ಯೆ ಹಾಗೂ ಬಡ್ತಿ ಇಲ್ಲದಿರುವಿಕೆಗಳಿಂದ ಭಾರತೀಯ ಸೈನಿಕರಿಗೆ ಅತೃಪ್ತರಾಗಿದ್ದರು. ಲಾರ್ಡ್ ಕ್ಯಾನಿಂಗ್ ಜಾರಿಗೆ ತಂದ ಸಾರ್ವತ್ರಿಕ ಸೇನಾ ಪಟ್ಟಿ ಕಾಯ್ದೆಯಿಂದ ಭಾರತೀಯ ಸೈನಿಕರು ಹೊಸ ಪ್ರಾಂತಗಳಿಗೆ ಹೋಗಿ ಪ್ರತಿಕೂಲ ವಾತಾವರಣದಲ್ಲಿ ಹೋರಾಡಬೇಕಿತ್ತು.

**ತತ್‌ಕ್ಷಣದ ಕಾರಣಗಳು :**

ಬ್ರಿಟಿಷರು ಸೈಸ್ಯದಲ್ಲಿ ಹೊಸ ಎನ್‌ಪೀಲ್ಡ್ ಬಂದೂಕುಗಳನ್ನು ಪರಿಚಯಿಸಿದರು. ಈ ಬಂದೂಕುಗಳ ಮದ್ದಿನ ತೋಟಿಯ (Cartidge) ಹೊದಿಕೆಗೆ ದನದ ಮತ್ತು ಹಂದಿಯ ಕೊಬ್ಬನ್ನು ಸವರಲಾಗಿತ್ತು.

ಇದು ಹಿಂದೂ ಹಾಗೂ ಮುಸ್ಲಿಂ ಸೈನಿಕರನ್ನು ಕೆರಳಿಸಿತು. ಏಕೆಂದರೆ ಬಂದೂಕುಗಳಿಗೆ ಮದ್ದಿನ ತೋಟ ತುಂಬುವ ಮೊದಲು ಅದರ ತುದಿಯನ್ನು ಬಾಯಿಯಿಂದ ಕಚ್ಚಿ ತೆಗೆಯಬೇಕಿತ್ತು. ಈ ಕಾರಣದಿಂದ ಮೀರತ್‌ನ 85 ಸೈನಿಕರು ಬಂದೂಕುಗಳನ್ನು ಉಪಯೋಗಿಸಲು ನಿರಾಕರಿಸಿ ಸೇಡು ತೀರಿಸಿಕೊಳ್ಳಲು ಮುಂದಾದರು.

**ದಂಗೆಯ ಹರಡುವಿಕೆ :**

1857ರ ಮಾರ್ಚ್ 29ರಂದು ಬಂಗಾಳದ ಬ್ಯಾರಕ್‌ಪೂರ್‌ನಲ್ಲಿ ಮಂಗಲಪಾಂಡೆ ಎಂಬ ಬ್ರಾಹ್ಮಣ ಸೈನಿಕ ಇಬ್ಬರು ಬ್ರಿಟಿಷ್ ಅಧಿಕಾರಗಳನ್ನು ಗುಂಡಿಕ್ಕಿ ಕೊಂದ. ಇದರಿಂದ ಕುಪಿತರಾದ ಬ್ರಿಟಿಷರು ಬ್ಯಾರಕ್‌ಪೂರ್‌ನ ಎರಡು ದಂಡು ಪ್ರದೇಶಗಳಲ್ಲಿದ್ದ ಸೈನಿಕರನ್ನು ಹೊರಹಾಕಿ ನಂತರ ಏಪ್ರಿಲ್ 8ರಂದು ಮಂಗಲಪಾಂಡೆಯನ್ನು ಗಲ್ಲಿಗೇರಿಸಿದರು. ಈ ಘಟನೆಗಳು ಉತ್ತರ ಭಾರತದಾದ್ಯಂತ ಕಾಳ್ಗಿಚ್ಚಿನಂತೆ ಹರಡಿ ದೆಹಲಿ, ಕಾನ್ಪುರ್, ಲಕ್ನೋ, ಮೀರತ್‌ಗಳಲಲಿ ತಾರಕಕ್ಕೇರಿತು. ಸೈನಿಕರು ದೆಹಲಿಯನ್ನು ವಶಪಡಿಸಿಕೊಂಡು ಬಹದ್ದೂರ್ ಷಾನನ್ನು ಭಾರತದ ಸಾಮ್ರಾಟ ಎಂದು ಘೋಷಿಸಿದರು. ಲಕ್ನೋದಲ್ಲಿ ಔದ್‌ನ ಬೇಗಂ ತನ್ನ ಮಗನನ್ನು ನವಾಬನೆಂದು ಘೋಷಿಸಿದಳು. ಕಾನ್ಪೂರ್‌ದಲ್ಲಿ ತಾತ್ಯಾಟೋಪಿ ನೇತೃತ್ವದಲ್ಲಿ ಸೈನಿಕರು ನಾನಾಸಾಹೇಬ್‌ನನ್ನು ಪೇಶ್ವೆ ಎಂದು ಘೋಷಿಸಿದರು. ಝಾನ್ಸಿಯಲ್ಲಿ ರಾಣಿ ಲಕ್ಷ್ಮೀಬಾಯಿ ನೇತೃತ್ವದ ಸೈನಿಕರು ಬ್ರಿಟಿಷ್‌ರ ವಿರುದ್ಧ ದಂಗೆಯನ್ನು ಗ್ವಾಲಿಯರ್ ಕೋಟೆಯನ್ನು ವಶಪಡಿಸಿಕೊಂಡರು.

**ದಂಗೆಯ ವೈಫಲ್ಯಕ್ಕೆ ಕಾರಣಗಳು :**

ಈ ದಂಗೆ ಉತ್ತರದಲ್ಲಿ ಪಂಜಾಬ್‌ವರೆಗೂ, ದಕ್ಷಿಣದಲ್ಲಿ ನರ್ಮದಾ ತೀರದವರೆಗೂ ಪೂರ್ವದಲ್ಲಿ ಬಿಹಾರದವರೆಗೂ, ಪಶ್ಚಿಮದಲ್ಲಿ ರಾಜಪೂತ ಸಂಸ್ಥಾನಗಳವರೆಗೂ ಹರಡಿದ್ದರೂ, ಸ್ಥಾನೀಯವಾಗಿತ್ತು ಮತ್ತು ಅಸಮರ್ಪಕವಾಗಿ ಸಂಘಟಿತವಾಗಿತ್ತು. ಹೋರಟಕ್ಕೆ ಒಂದು ನಿರ್ದಿಷ್ಟಗುರಿಯಿರದೆ, ದೂರದೃಷ್ಟಿಯ ಯೋಜನೆಗಳಿರದೆ, ಇದು ಕೇವಲ ಬ್ರಿಟಿಷ್ ವಿರೋಧಿ ದಂಗೆಯಾಯಿತು. ಬ್ರಿಟಿಷ್ ಸೈನ್ಯದ ಶಿಸ್ತು, ಆಧುನಿಕ ಯುದ್ಧೋಪಕರಣಗಳು ದಂಗೆಯೆದ್ದ ಸೈನಿಕರ ಬಳಿ ಇರಲಿಲ್ಲ. ಸಿಂಧ್ಯ ಹೋಳ್ಕರ್ ಮುಂತಾದ ಪ್ರಾಂತಗಳ ರಾಜಕುಮಾರರು ಬ್ರಿಟಿಷರಿಗೆ ನಿಷ್ಠೆ ತೋರಿಸಿ ದಂಗೆಯನ್ನು ಬೆಂಬಲಿಸಲಿಲ್ಲ.

**ದಂಗೆಯ ಪರಿಣಾಮಗಳು :**

ಈ ದಂಗೆಯ ಪರಿಣಾಮದಿಂದಾಗಿ 1858ರಕಾಯ್ದೆ ಜಾರಿಯಾಗಿ, ಈಸ್ಟ್ ಇಂಡಿಯಾ ಕಂಪನಿಯ ಆಡಳಿತ–ಕೊನೆಯಾಗಿ, ಭಾರತದ ಆಡಳಿತ ನಿರ್ವಹಣೆ ಬ್ರಿಟಿಷ್ ಚಕ್ರಾಧಿಪತ್ಯಕ್ಕೆ ಒಳಪಡುವಂತಾಯಿತು. ಭಾರತದ ಆಡಳಿತ ನೋಡಿಕೊಳ್ಳಲು 15 ಜನರನ್ನೊಳಗೊಂಡ ಸಮಿತಿಯನ್ನು ರಚಿಸಲಾಯಿತು. ಭಾರತದ ಗವರ್‌ನರ್ ಜನರಲ್ ಬ್ರಿಟಿಷ್ ಚಕ್ರಾಧಿಪತ್ಯದ ಪ್ರತಿನಿಧಿಯಾಗಿದ್ದು ಈ ಸಮಿತಿಯ ಅಧ್ಯಕ್ಷನಾದ. ಈತನನ್ನು ವೈಸ್‌ರಾಯ್ ಎಂದು ಕರೆಯಾಲಾಯಿತು. ಭಾರತದ ಸೈನ್ಯವನ್ನು ಭದ್ರತೆಯ ದೃಷ್ಟಿಯಿಂದ ಹೆಚ್ಚಿನ ಯೂರೋಪಿಯನ್ ಸೈನಿಕರನ್ನು ನೇಮಿಸಿಕೊಳ್ಳುವುದರ ಮೂಲಕ ಪರಿಷ್ಕರಿಸಲಾಯಿತು. ಭಾರತೀಯ ಸೈನಿಕರಿಗೂ ಧಾರ್ಮಿಕ ಸ್ವಾತಂತ್ರ್ಯ ನೀಡಲಾಯಿತು.

**11. ಭಾರತ ರಾಷ್ಟ್ರೀಯ ಕಾಂಗ್ರೆಸ್, ಮಂದಗಾಮಿಗಳು, ಬಂಗಾಳದ ವಿಭಜನೆ ಮತ್ತು ಸ್ವದೇಶಿ ಚಳವಳಿ :**

ಬ್ರಿಟಿಷ್ ಆಡಳಿತದ ವಿರುದ್ಧ ಎದ್ದಿದ್ದ ಭಾರತೀಯರ ಅತೃಪ್ತಿಯನ್ನು ತಡೆಯಲು ಮತ್ತು ಭಾರತೀಯ ವಿದ್ಯಾವಂತರು ಬ್ರಿಟಿಷ್ ವಿರೋಧಿ ಅಲೆಯಲ್ಲಿ ಪಾಲ್ಗೊಳ್ಳುವಂತೆ ಮಾಡಲು ನಿವೃತ್ತ ಬ್ರಿಟಿಷ್ ಅಧಿಕಾರಿ ಎ.ಓ.ಹ್ಯೂಂ 'ರಕ್ಷಾ ಕವಾಟ'ದಂತೆ ಭಾರತ ರಾಷ್ಟ್ರೀಯ ಕಾಂಗ್ರೆಸ್ ಸ್ಥಾಪನೆಗೆ ಮುಂದಾದ. ಈ 'ರಕ್ಷಾ' ಕವಾಟವನ್ನೇ ಬಳಸಿ ಬ್ರಿಟಿಷ್‌ರನ್ನು ದಾರಿಗೆ ತರಬಹುದೆಂದು ಭಾರತೀಯ ವಿದ್ಯಾವಂತರು ಭಾರತ ರಾಷ್ಟೀಯ ಕಾಂಗ್ರೆಸ್ ಸ್ಥಾಪನೆಗೆ ಸಹಕರಿಸಿದರು. ಇದರ ಮೊದಲ ಅಧಿವೇಶನ ಮುಂಬೈಯಲ್ಲಿ ನಡೆಯಿತು. ಡಬ್ಲ್ಯೂ.ಸಿ. ಬ್ಯಾನರ್ಜಿ ಮೊದಲ ಅಧ್ಯಕ್ಷರಾದರು. ಈ ಅಧಿವೇಶನದಲ್ಲಿ ತೆಗೆದುಕೊಂಡ ಪ್ರಮುಖ ನಿರ್ಣಯಗಳೆಂದರೆ

- ಭಾರತದ ಆಡಳಿತ ವ್ಯವಸ್ಥೆಯನ್ನು ಸುಧಾರಿಸಲು ಆಯೋಗ ರಚನೆ,
- ಪ್ರಾಂತಗಳಲ್ಲಿ ವಿಧಾನಮಂಡಲ ರಚನೆ, ಕೇಂದ್ರ ಹಾಗು ಪ್ರಾಂತ್ಯಗಳ ವಿಧಾನಮಂಡಲಗಳಲ್ಲಿ ಚುನಾಯಿತ ಸದಸ್ಯರಿಗೆ ಹೆಚ್ಚಿನ ಪ್ರಾತಿನಿಧ್ಯ.
- ಮಿಲಿಟರಿ ವೆಚ್ಚದಲ್ಲಿ ಇಳಿಕೆ ಇತ್ಯಾದಿ.

ಹೀಗೆ 1885–1905ರ 20 ವರ್ಷಗಳ ಅವಧಿಯಲ್ಲಿ ಕಾಂಗ್ರೆಸ್ ಹೋರಾಟ ಸ್ವಾತಂತ್ರ್ಯ ಗಳಿಸುವ ನೇರ ಉದ್ದೇಶ ಹೊಂದಿರದೆ ಸಾರ್ವಜನಿಕರಲಲಿ ರಾಷ್ಟ್ರೀಯತೆಯನ್ನು ಬೆಳೆಸುವುದು, ರಾಷ್ಟ್ರೀಯ ಚಳುವಳಿಯಲ್ಲಿ ಹೆಚ್ಚು ಹೆಚ್ಚು ಜನರನ್ನು ತೊಡಗಿಸುವುದಾಗಿತ್ತು.
ಈ ಹಿನ್ನೆಲೆಯಲ್ಲಿ ಇವರನ್ನು ಮಂದಗಾಮಿಗಳೆಂದು ಗುರುತಿಸಲಾಯಿತು. ಈ ಅವಧಿಯ ಪ್ರಮುಖ ನಾಯಕರೆಂದರೆ ದಾದಾಭಾಯಿ ನವರೋಜಿ, ಎಸ್,ಎನ್.ಬ್ಯಾನರ್ಜಿ, ಫಿರೋಜ್ ಷಾ ಮೆಹತಾ, ಮದನ್‌ಮೋಹನ್ ಮಾಳವೀಯ. ಗೋಪಾಲ್‌ಕೃಷ್ಣಗೋಖಲೆ ಮುಂತಾದವರು.

ಈ ಮಂದಗಾಮಿ ರಾಷ್ಟ್ರೀಯ ನಾಯಕರು ಬ್ರಿಟಿಷ್ ಸರ್ಕಾರ ಮತ್ತು ಬ್ರಿಟಿಷ್ ಸಾರ್ವಜನಿಕ ಅಭಿಪ್ರಾಯವನ್ನು ಬದಲಾಯಿಸುವುದರ ಮೂಲಕ ದೇಶದ ಆಡಳಿತದಲ್ಲಿ ಸುಧಾರಣೆ ತರಬಹುದೆಂದು ನಂಬಿದ್ದರು. ಮಂದಗಾಮಿ ನಾಯಕರ ಮನವಿಗಳಲ್ಲಿ ಕೇವಲ ಬ್ರಿಟಿಷ್‌ರಾಜಭಕ್ತಿತುಂಬಿದೆ ಎಂದು ಒಂದು ಗುಂಪು ಕ್ರಮೇಣವಾಗಿ ಅತೃಪ್ತಿಗೊಂಡಿತು. ಮಂದಗಾಮಿಗಳ ನಾಯಕ ಗೋಖಲೆಯವರು ಬ್ರಿಟಿಷ್‌ರ ಮನ ಒಲಿಸುವುದರತ್ತ ಗಮನ ತೋರಿಸಿದರು. ಬಂಗಾಳದ ವಿಭಜನೆಯ ಘಟನೆ ಈ ಅತೃಪ್ತ ಗುಂಪನ್ನು **ತೀವ್ರ ಗಾಮಿ**ಗಳಾಗುವಂತೆ ಪ್ರೇರೇಪಿಸಿತು.

**12. ಬಂಗಾಳದ ವಿಭಜನೆ :**

1905ರ ಜುಲೈ 20ರಂದು ಲಾರ್ಡ್‌ಕರ್ಜನ್ ಬಂಗಾಳ ಪ್ರಾಂತ್ಯವನ್ನು ಎರಡು ಭಾಗಗಳನ್ನಾಗಿ ವಿಭಜಿಸಿದ. ಒಂದು ಭಾಗವು 3.1 ಕೋಟಿ ಜನಸಂಖ್ಯೆಯ ಪೂರ್ವ ಬಂಗಾಳ ಹಾಗೂ ಅಸ್ಸಾಂನ ಭಾಗವಾಗಿತ್ತು. ಇನ್ನೊಂದು ಭಾಗವು 5.4 ಕೋಟಿ ಜನಸಂಖ್ಯೆಯ ಬಂಗಾಲದ ಉಳಿದ ಭಾಗವಾಗಿತ್ತು. ಬಂಗಾಳದ ಈ ಎರಡನೆ ಭಾಗದಲ್ಲಿ ಬಂಗಾಳಿಗಳೇ ಅಲ್ಪಸಂಖ್ಯಾತರಾದರು. ಹೀಗೆ ರಾಷ್ಟ್ರೀಯತೆಯ ಕೇಂದ್ರ ಸ್ಥಾನವಾಗಿದ್ದ ಬಂಗಾಳವನ್ನು ವಿಭಜಿಸುವುದರ ಮೂಲಕ ಭಾರತದ ರಾಷ್ಟ್ರೀಯ ಚಳವಳಿಯನ್ನು ಹತ್ತಿಕ್ಕಲು ಲಾರ್ಡ್ ಕರ್ಜನ್ ಮುಂದಾದ, ಪೂರ್ವ ಬಂಗಾಲದಲ್ಲಿ ಮುಸ್ಲಿಂರು ಬಹುಸಂಖ್ಯಾತರಾಗುವಂತೆ,

ಪಶ್ಚಿಮಬಂಗಾಳದಲ್ಲಿಬಂಗಾಳಿಗಳು ಅಲ್ಪಸಂಖ್ಯಾತರಾಗುವಂತೆ ದುರುದ್ದೇಶಪೂರಿತವಾಗಿ ಕರ್ಜನ್ ಬಂಗಾಳವನ್ನು ವಿಭಜಿಸಿದ್ದು ತೀವ್ರವಾದಿಗಳನ್ನು ಕೆರಳಿಸಿತು.

**13. ಸ್ವದೇಶಿ ಚಳವಳಿ :**

ಕೇವಲ ಸಾರ್ವಜನಿಕ ಸಭೆ ಮತ್ತು ಮನವಿಗಳಿಂದ ಬ್ರಿಟಿಷ್‌ರನ್ನು ತಟ್ಟುವುದು ಸಾಧ್ಯವಿಲ್ಲವೆಂದು ಅರಿತ ಬಂಗಾಳದ ನಾಯಕರು ಸ್ವದೇಶ ಮತ್ತು ಬಹಿಷ್ಕಾರ ಚಳವಳಿಗಳಿಗೆ ಮುಂದಾದರು. ಭಾರತೀಯ ವಸ್ತುಗಳನ್ನು ಬಳಸುವುದು ಮತ್ತು ಬ್ರಿಟಿಷ್ ವಸ್ತುಗಳನ್ನು ಬಹಿಷ್ಕರಿಸುವುದು ಈ ಚಳಿವಳಿಯ ಆತ್ಮಶಕ್ತಿಯಾಯಿತು. ಅನೇಕ ಸ್ವದೇಶಿ ಕೈಗಾರಿಕೆಗಳು, ರಾಷ್ಟ್ರೀಯ ಬ್ಯಾಂಕ್‌ಗಳು, ರಾಷ್ಟ್ರೀಯ ಶಿಕ್ಷಣ ಸಂಸ್ಥೆಗಳು ಸ್ಥಾಪಿತವಾದವು. ವಿದೇಶಿ ವಸ್ತುಗಳ ಮಳಿಗೆಗಳ ಮುಂದೆ ಪಿಕೆಟಿಂಗ್ ನಡೆದವು. ರವೀಂದ್ರನಾಥ್ ಠಾಗೂರ್, ರಜನಿಕಾಂತ್ ಸೇನ್ ಮುಂತಾದವರು ದೇಶಭಕ್ತಿಗೀತೆಗಳನ್ನು ರಚಿಸಿದರು. ಢಾಕಾದ ಸೋನಾರ್‌ರಂಗ್ ರಾಷ್ಟ್ರೀಯ ಶಾಲೆ ಕ್ರಾಂತಿಕಾರಿಗಳ ಕೇಂದ್ರವಾಯಿತು. ಬಂಗಾಳ ವಿಭಜನೆಯ ವಿರೋಧಿ ಚಳವಳಿ ತಿಲಕ್, ಬಿಪಿನ್‌ಚಂದ್ರಪಾಲ್, ಅರವಿಂದ ಘೋಷ್‌ರಂತಹ ತೀವ್ರಗಾಮಿಗಳ ನಾಯಕತ್ವ ಪಡೆಯಿತು. ಸನ್ಯಾಸಿ ದಂಗೆಯನ್ನಾಧರಿಸಿದ ಬಂಕಿಮ್ ಚಂದ್ರರ 'ಆನಂದ 'ಮನವಿ' ಹಂತವನ್ನು ಬರಿಯಲ್ಲಿನ 'ವಂದೇ ಮಾತರಂ' ರಾಷ್ಟ್ರೀಯ ಗೀತೆಯಾಗಿ ಹರಡಿತು. 1908ರಲ್ಲಿ ತಿಲಕ್ 8 ವರ್ಷಗಳ ಸೆರೆವಾಸಕ್ಕೆ ಹೋದರು. ಭಾರತದ ರಾಷ್ಟ್ರೀಯ ಚಳವಳಿಯ ಮಂದಗಾಮಿಗಳ 'ಮನವಿ' ಹಂತವನ್ನು ದಾಟಿ ಹೀಗೆ ಸಾಮೂಹಿಕ ಹೋರಾಟವಾಗಿ ಮಾರ್ಪಟ್ಟಿತು. ತೀವ್ರವಾದ ಈ ಪ್ರತಿಭಟನೆಗೆ ಬಾಗಿದ ಬ್ರಿಟಿಷ್ ಸರಕಾರ ಮುಂದೆ 1911ರಲ್ಲಿ ಬಂಗಾಳದ ವಿಭಜನೆಯನ್ನು ರದ್ದುಪಡಿಸಿತು.

**14. ಸೂರತ್ ಇಬ್ಭಾಗ, ಮಾರ್ಲೆಮಿಂಟೋ ಸುಧಾರಣೆ ಮತ್ತು ಹೋಮ್‌ರೊಲ್ ಚಳವಳಿ**

1906ರ ಕಲ್ಕತ್ತಾ ಕಾಂಗ್ರೆಸ್ ಅಧಿವೇಶನದಲ್ಲಿ ತೀವ್ರಗಾಮಿಗಳ ಗುಂಪು ಲಾಲಾಲಜಪತ್‌ರಾಯ್ ಅಥವಾ ತಿಲಕ್‌ರನ್ನು ಅಧ್ಯಕರನ್ನಾಗಿ ಮಾಡಲು ಒತ್ತಾಯಿಸಿತು. ಆದರೆ ಮಂದಗಾಮಿಗಳ ಗುಂಪು ದಾದಾಭಾಯಿ ನವರೋಜಿ ಅವರ ಹೆಸರನ್ನು ಅಧ್ಯಕ್ಷ ಸ್ಥಾನಕ್ಕೆ ಪ್ರಸ್ತಾಪಿಸಿ ತೀವ್ರಗಾಮಿಗಳನ್ನು ನಿಯಂತ್ರಿಸಿತು. ಬ್ರಿಟಿಷ್ ಸರಕಾರ ಮಂದಗಾಮಿಗಳನ್ನು ಓಲೈಸಲು ಹಲವು ಶಾಸಕಾಂಗ ಸುಧಾರಣೆಗಳನ್ನು ಘೋಷಿಸಿತು. ಇದರಿಂದ ಸ್ವದೇಶಿ ಚಳವಳಿಗೆ ಮಂದಗಾಮಿಗಳ ಕಾವು ಕಡಿಮೆಯಾಯಿತು. ಇದು ತೀವ್ರಗಾಮಿಗಳನ್ನು ಮತ್ತಷ್ಟು ಕೆರಳಿಸಿತು. 1907ರ ಕಾಂಗ್ರೆಸ್ ಅಧಿವೇಶನವನ್ನು ನಾಗ್ಪುರದಲ್ಲಿ ನಡೆಸಬೇಕೆಂದು ತೀವ್ರಗಾಮಿಗಳು ಒತ್ತಾಯಿಸಿದರು. ತಿಲಕ್ ಅಥವಾ ಲಜಪತ್‌ರಾಯರನ್ನು ಕಾಂಗ್ರೆಸ್ ಅಧ್ಯಕ್ಷರನ್ನಾಗಿ ಮಾಡುವ ಉದ್ದೇಶ ಇದಾಗಿತ್ತು.

ಆದರೆ ಮಂದಗಾಮಿಗಳು 1907ರ ಅಧಿವೇಶನವನ್ನು ಸೂರತ್‌ನಲ್ಲಿ ನಡೆಸಲು ನಿರ್ಧರಿಸಿದರು. ಸೂರತ್ ತಿಲಕ್‌ರ ಪ್ರಾಂತ್ಯವಾಗಿದ್ದರಿಂದ ಅವರು ಅಧ್ಯಕ್ಷರಾಗದಂತೆ ತಡೆಯಬಹುದೆಂದು ಮಂದಗಾಮಿಗಳ ಲೆಕ್ಕಾಚಾರವಾಗಿತ್ತು. (ಅಧಿವೇಶನ ನಡೆಸಲು ಅತಿಥೇಯ ಪ್ರಾಂತ್ಯದ ನಾಯಕರು ಅಧ್ಯಕ್ಷರಾಗುವಂತಿರಲಿಲ್ಲ.)

**ಹೀಗೆ 1907ರಲ್ಲಿ ಸೂರತ್‌ನಲ್ಲಿ ನಡೆದ ಕಾಂಗ್ರೆಸ್ ಅಧಿವೇಶನಕ್ಕೆ ಮಂದಾಗಮಿಗಳ ತಂತ್ರದಿಂದ ತಿಲಕ್‌ನ ಬದಲು ರಾಸ್ ಬಿಹಾರಿ ಘೋಷ್ ಅಧ್ಯಕ್ಷರಾದರು ಹಾಗೂ ತೀವ್ರಗಾಮಿಗಳು ಕಾಂಗ್ರೆಸ್‌ನಿಂದ ಹೊರ ನಡೆದು ಇಬ್ಭಾಗಕ್ಕೆ ಇದು ಕಾರಣವಾಯಿತು.**

1907–1911ರ ಅವಧಿಯಲ್ಲಿ ಬ್ರಿಟಿಷ್ ಸರಕಾರ ತೀವ್ರಗಾಮಿಗಳನ್ನು ನಿಯಂತ್ರಿಸಲು ಹಲವಾರು ಕಠಿಣ ಕಾಯ್ದೆಗಳನ್ನು ಜಾರಿಗೆ ತಂದಿತು. ಅರವಿಂದ ಘೋಷ್, ಬಿಪಿನ್ ಚಂದ್ರಪಾಲ್ ರಾಜಕೀಯ ಚಟುವಟಿಕೆಯಿಂದ ನಿವೃತ್ತಾರದರು.ತಿಲಕ್‌ರನ್ನು ಬ್ರಿಟಿಷ್ ಸರಕಾರ ಮಾಂಡ್ಲೆ ಜೈಲಿಗೆ ತಳ್ಳಿತು.

ಮಂದಗಾಮಿಗಳನ್ನು ಓಲೈಸಲು ಬ್ರಿಟಿಷ್ ಸರಕಾರ ಮಾರ್ಲೆಮಿಂಟೋ ಸುಧಾರಣೆಗಳನ್ನು ಘೋಷಿಸಿತು. ಈ ಸುಧಾರಣೆಗಳ ಮುಖ್ಯ ಉದ್ದೇಶಗಳು

- ಶಾಸಕಾಂಗ ಸಭೆಯ ಗಾತ್ರ ಹಾಗೂ ಕಾರ್ಯಗಳನ್ನುಹೆಚ್ಚಿಸುವುದು.
- ಚುನಾಯಿತ ಸದಸ್ಯರ ಸಂಖ್ಯೆಯನ್ನು ಹೆಚ್ಚಿಸುವುದು ಹಾಗೂ ಮಂದಗಾಮಿ ನಾಯಕರ ಬೆಂಬಲವನ್ನು ಗಳಿಸುವುದಾಗಿತ್ತು.
- 1914ರಲ್ಲಿ ತಿಲಕ್ ಜೈಲಿನಿಂದ ಬಿಡುಗಡೆಯಾಗಿ ಬರುವವರೆಗೂ ರಾಷ್ಟ್ರೀಯ ಚಳವಳಿ ಮಂದವಾಗಿತ್ತು.

**15. ಹೋಮ್‌ರೂಲ್ ಚಳವಳಿ :**

1914ರಲ್ಲಿ ತಿಲಕ್ ಬಿಡುಗಡೆಯಾಗಿಬಂದರು. 1916ರಲ್ಲಿ ಲಕ್ನೋದಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದಲ್ಲಿ ಆ್ಯನಿಬೆಸೆಂಟ್‌ರ ಪ್ರಯತ್ನದಿಂದ ತಿಲಕ್ ನೇತೃತ್ವದ ತೀವ್ರಗಾಮಿಗಳು ಕಾಂಗ್ರೆಸ್‌ಗೆ ಮತ್ತೆ ಸೇರಿದರು. ಬದಲಾದ ಸನ್ನಿವೇಶಕ್ಕೆ ಹೊಂದಿಕೊಂಡ ತಿಲಕ್ ಆ್ಯನಿಬೆಸೆಂಟ್ ಜೊತೆ ಸೇರಿ 1916ರಲ್ಲಿ ಹೋಮ್‌ರೂಲ್ ಚಳವಳಿಯನ್ನು ಆರಂಭಿಸಿದರು. ತಿಲಕ್ ತಮ್ಮ ಕಾರ್ಯಕ್ಷೇತ್ರವನ್ನು

ಮಹಾರಾಷ್ಟ್ರ ಹಾಗೂ ಕರ್ನಾಟಕಗಳಿಗೆ ಸೀಮಿತಗೊಳಿಸಿಕೊಂಡರೆ, ಆ್ಯನಿಬೆಸೆಂಟ್ ಮದ್ರಾಸ್ ಹಾಗೂ ಭಾರತದ ಇತರೆ ಪ್ರದೇಶಗಳಲ್ಲಿ ಚಳವಳಿಯನ್ನು ಆರಂಭಿಸಿದರು. ಹೋಮ್‌ರೂಲ್ ಎಂದರೆ ಸ್ವಯಂ ನಿರ್ಣಯಾಧಿಕಾರ. ಈ ಚಳವಳಿಯ ಮೂಲಕ ತಿಲಕ್ ಹಾಗೂ ಆ್ಯನಿಬೆಸೆಂಟ್ ರಾಜಕೀಯವಾಗಿ ಹಿಂದುಳಿದ ಪ್ರದೇಶಗಳಲ್ಲಿ ಜಾಗೃತಿ ಮೂಡಿಸಲು ಮುಂದಾದರು. ಈ ಚಳಿವಳಿಯನ್ನು ಹತ್ತಿಕ್ಕಲು ಸರ್ಕಾರ ತಿಲಕ್ ಮೇಲೆ ನಿರ್ಬಂಧ ಹೇರಿತು. ಆ್ಯನಿಬೆಸೆಂಟ್‌ರನ್ನು 1917ರಲ್ಲಿ ಜೈಲಿಗೆ ಹಾಕಲಾಯಿತು. ಈ ಚಳವಳಿ ಕ್ರಮೇಣವಾಗಿ ಕಳೆಗುಂದಿದರೂ, ರಾಷ್ಟ್ರೀಯ ಚಳವಳಿ ಕೇವಲ ವಿದ್ಯಾವಂತ ವರ್ಗಕ್ಕಷ್ಟೇ ಸೀಮಿತಗೊಳ್ಳದೆ ಹಳ್ಳಿಗಳ ಸಾಮನ್ಯರನ್ನೂ ತೊಡಗಿಸಿಕೊಳ್ಳುವಲ್ಲಿ ಸಫಲವಾಯಿತು. ಇದು ಮುಂದೆ ಗಾಂಧೀಯುಗಕ್ಕೆ ವೇದಿಕೆಯನ್ನು ನಿರ್ಮಿಸಿತು.

**16. ಕ್ರಾಂತಿಕಾರಿಗಳು**

ಭಾರತದ ರಾಷ್ಟ್ರೀಯ ಚಳವಳಿಯಲ್ಲಿ ಕ್ರಾಂತಿಕಾರಿಗಳ ಪಾತ್ರವನ್ನು ಕೆಳಗಿನ ಎರಡು ಹಂತಗಳಲ್ಲಿ ನೋಡಬಹುದು :

1. 1916ರ ವರೆಗಿನ ಮೊದಲ ಹಂತ :

**ಬಂಗಾಳದಲ್ಲಿ :**

1902–ಮಿಡ್ನಾಪುರದಲ್ಲಿ ಜ್ಞಾನೇಂದ್ರನಾಥ್ ಬಸು ಹಾಗೂ ಕಲ್ಕತ್ತದಲಿ ಪ್ರಮೋದ ಮಿತ್ತರ್, ಜಿತೀಂದ್ರನಾಥ್ ಬ್ಯಾನರ್ಜಿ, ಬರೀಂದ್ರಕುಮಾರ್ ಘೋಷ್ ಹಾಗೂ ಇತರರಿಂದ 'ಅನುಶೀಲನ ಸಮಿತಿ' ಮತ್ತಿತರ ರಹಸ್ಯ ಕೂಟಗಳು.

ಏಪ್ರಿಲ್ **1906–** 'ಅನುಶೀಲನೆ ಸಮಿತ'ಯ ಬರೀಂದ್ರ ಕುಮಾರ್ ಘೋಷ್ ಹಾಗೂ ಭೂಪೇಂದ್ರದತ್ತರಿಂದ 'ಯುಗಾಂತರ' ಕ್ರಾಂತಿಕಾರಿ ವಾರಪತ್ರಿಕೆ.

**1907–**ಪಶ್ಚಿಮ ಬಂಗಾಳ ಗವರ್ನರ್ ಫುಲ್ಲರ್ ಮೇಲೆ ಆಕ್ರಮಣ

**1908–** ಪ್ರಫುಲ್ಲ ಚೌಕಿ ಹಾಗೂ ಖುದಿರಾಮ್ ಬೋಸ್‌ರಿಂದ ಬಾಂಬ್ ಸ್ಫೋಟ (ಗುರಿ ಮುಜಾಫರ್ ನಗರದ ಕ್ರೂರ ನ್ಯಾಯಧೀಶ ಕಿಂಗ್ಸ್‌ಫೋರ್ಡ್ ಆಗಿದ್. ಆದರೆ ಬಾಂಬ್ ಇಬ್ಬರು ಅಮಾಯಕ ಇಂಗ್ಲಿಷ್ ಮಹಿಳೆಯರ ಮೇಲೆ ಬಿತ್ತು. ಪ್ರಫುಲ್ಲ ಚೌಕಿ ಗುಂಡಿ ಹಾರಿಸಿಕೊಂಡು ಸತ್ತರೆ, ಖುದಿರಾಮ್ ಬೋಸ್‌ಗೆ ಗಲ್ಲು ಶಿಕ್ಷೆಯಾಯಿತು)

1912– ರಾಸ್ ಬಿಹಾರಿ ಬೋಸ್ ಹಾಗೂ ಸಚಿನ್ ಸನ್ಯಾಲರಿಂದ ದೆಹಲಿಯ ಚಾಂದನಿ ಚೌಕ್ ಬಳಿ ವೈಸ್‌ರಾಯ್ ಹಾರ್ಡಿಂಜ್‌ನ ಮೆರವಣಿಗೆ ಮೇಲೆ ಬಾಂಬ್ ಸ್ಫೋಟ.

**ಮಹಾರಾಷ್ಟ್ರದಲ್ಲಿ :**

**1879–** ಭಾರತದ ಮೊದಲ ಕ್ರಾಂತಿಕಾರಿ ಚಟುವಟಿಕೆಗಳು– ವಾಸುದೇವ ಬಲವಂತ್ ಫಡ್ಕೆಯಿಂದ

**1890ರ** ದಶಕ –ಬಾಲ್ ಗಂಗಾಧರ್ ತಿಲಕ್‌ರಿಂದ ತೀವ್ರಗಾಮಿ ವಿಚಾರಗಳ ಪ್ರತಿಪಾದನೆ (ಕಚಿಜಚಿಟ, ಮರಾಠಾ ಪತ್ರಿಕೆಗಳ ಮೂಲಕ ಹಾಗೂ ಸಾರ್ವಜನಿಕ ಗಣೋಶೋತ್ಸವ, ಶಿವಾಜಿ ಉತ್ಸವಗಳ ಮೂಲಕ)

**1897** ಜೂನ್ 22–ತಿಲಕ್‌ರ ಶಿಷ್ಯರಾದ ಛಾಫೇಕರ್ (ದಾವೋದರ್ ಹಾಗೂ ಬಾಲಕೃಷ್ಣ) ಸಹೋದರರಿಂದ ಪೂನಾದ ಪ್ಲೇಗ್ ಆಯುಕ್ತ ರ‍್ಯಾಂಡ್ ಹಾಗೂ ಲೆಫ್ಟಿನಂಟ್ ಐಯರೆಸ್ಟ್‌ರ ಹತ್ಯೆ (ಮೊಟ್ಟ ಮೊದಲ ರಾಜಕೀಯ ಹತ್ಯೆ)

**1899–** ಸಾವರ್ಕರ್‌ರಿಂದ 'ಮಿತ್ರ ಮೇಳ'

**1904–** ಸಾವರ್ಕರ್‌ರಿಂದ 'ಯಂಗ್ ಇಟಲಿ' ಮಾದರಿಯಲ್ಲಿ 'ಅಭಿನವ ಭಾರತ' ಸ್ಥಾಪನೆ

**ಪಂಜಾಬ್‌ನಲ್ಲಿ :**

- ಲಾಲಾ ಲಜಪತ್‌ರಾಯ್ ಹಾಗೂಭಾಗತ್‌ಸಿಂಗ್‌ನ ದೊಡ್ಡಪ್ಪ ಅಜಿತ್‌ಸಿಂಗ್‌ರಿಂದ ಲಾಹೋರ್‌ನಲ್ಲಿ ಅಂಜುಮಾನ್–ಐ–ವತನ್ ಸ್ಥಾಪನೆ. 'ಭಾರತ್ ಮಾತಾ' ಪತ್ರಿಕೆ
- ಸೂಫಿ ಅಂಬಾ ಪ್ರಸಾದ್, ಲಾಲ್ ಚಂದ್, ಭಾಯಿ ಪರಮಾನಂದ್ ಹಾಗೂ ಲಾಲಾ ಹರ್‌ದಯಾಳ್ ಮುಂತಾದ ಕ್ರಾಂತಿಕಾರಿಗಳು

**ವಿದೇಶದಲ್ಲಿ :**

**1905–** ಲಂಡನ್‌ನಲ್ಲಿ ಶ್ಯಾಮ್‌ಜಿ ಕೃಷ್ಣವರ್ಮರಿಂದ ಹೋಮ್ ರೂಲ್ ಸೊಸೈಟಿ (ಇಂಡಿಯಾ ಹೌಸ್ ) ಸ್ಥಾಪನೆ, 'ದ ಸೋಷಿಯಾಲಾಜಿಸ್ಟ್ ' ಎಂಬ ಪತ್ರಿಕೆ. ಸಾವರ್ಕರ್, ಲಾಲಾಹರ್‌ದಯಾಳ್, ಮದನ್‌ಲಾಲ್ ಧಿಂಗ್ರ ಈ ರಹಸ್ಯ ಕೂಟದ ಪ್ರಮುಖರು.

**1909–** ಲಂಡನ್‌ನಲ್ಲಿ ಮದನ್ ಲಾಲ್ ಧಂಗ್ರನಿಂದ ಕರ್ಜನ್ ವಿಲ್ಲಿಹತ್ಯೆ

**1909–** ಪ್ಯಾರಿಸ್ ಹಾಗೂ ಜಿನೆವಾಗಳಿಂದ ಭಿಕಾಜಿ ಕಾಮಾ ಹಾಗೂ ಅಜಿತ್‌ಸಿಂಗ್‌ರ ಚಟುವಟಿಕೆ, 'ವಂದೇಮಾತರಂ' **ಪತ್ರಿಕೆ**

**1910–** 'ನಾಸಿಕ್ ಸಂಚಿ'ನ ಪ್ರಕರಣದಲ್ಲಿ ಸಾವರ್ಕರ್ ಲಂಡನ್‌ನಿಂದ ಭಾರತಕ್ಕೆ ಗಡಿಪಾರು, ಹಡಗಿನಿಂದ ಸಾವರ್ಕರ್ ನೆಗೆತ, ಏಡನ್‌ನಲಲಿ ಬಂಧಿ.

**1913–**ಸ್ಯಾನ್ ಫ್ರಾನ್ಸಿಸ್ಕೊದಲ್ಲಿ ಲಾಲಾ ಹರ್‌ದಯಾಳ್ ಹಾಗೂ ಸಂಗಡಿಗರಿಂದ 'ಗದ್ದರ್' ಸ್ಥಾಪನದ, ವಿಸ್ತರಣೆ (ಇದಕ್ಕೂ ಮೊದಲು ವ್ಯಾಂಕೋವರ್‌ನಲ್ಲಿ 'ಸ್ವದೇಶಿ ಸೇವಕ್ ಹೋಮ್ ' ಹಾಗೂ ಸಿಯಾಟಲ್‌ನಲ್ಲಿ 'ಯುನೈಟೆಡ್ ಇಂಡಿಯಾ ಹೌಸ್'ಗಳನ್ನು ರಾಮದಾಸ್ ಪುರಿ, ಜಿ.ಡಿ.ಕುಮಾರ್, ತಾರಕ್‌ನಾಥ ದಾಸ್, ಸೋಹನ್ ಸಿಂಘ್ ಭಾರ್‍ನಾ ಸ್ಥಾಪಿಸಿ ಕ್ರಾಂತಿಕಾರ್ ಚಟುವಟಿಕೆ ನಡೆಸಿದ್ದರು)

**1914–**ಕೊಮಾಗಾಟಾ ಮಾರು ಘಟನೆ : ಇದು ಒಂದು ಹಡಗಿನ ಹೆಸರು. ಸಿಂಗ್‌ಪೂರ್‌ನಲ್ಲಿ ಕೆನಡಾದ ವ್ಯಾಂಕೋವರ್‌ಗೆ ಈ ಹಡಗು 370 ಪ್ರಯಾಣಿಕರನ್ನು ಹೊತ್ತು ಹೊರಟಿತ್ತು. ಇದರಲ್ಲಿ ಬಹುತೇಕರು ಸಿಖ್ ಹಾಗೂ ಪಂಜಾಬಿ ಮುಸ್ಲಿಂರಾಗಿದ್ದರು. ಆದರೆ ಈ ಹಡುಗಿನ ಪ್ರಯಾಣವನ್ನು ಕೆನಡಾದ ಅಧಿಕಾರಗಳು ಬ್ರಿಟಿಷರ್ ಒತ್ತಡದಿಂದರದ್ದುಗೊಳಿಸಿದರು. ಹಡಗು ಕಲ್ಕತ್ತದಲ್ಲಿ **1914** ಸೆಪ್ಟೆಂಬರ್‌ನಲ್ಲಿ ಎರಡು ತಿಂಗಳ ಅನಿಶ್ಚಿತತೆಯ ನಂತರ ಬಂದು ನಿಂತಿತು. ಪ್ರಯಾಣಿಕರನ್ನು ಪಂಜಾಬ್‌ಗೆ ಕಳುಹಿಸಲು ರೈಲು ಬಂದಿತು. ಆದರೆ ಯಾರೂ ರೈಲನ್ನು ಹತ್ತಲಿಲ್ಲ. ಪೊಲೀಸ್‌ರೊಂದಿಗೆ ಆದ ತಿಕ್ಕಾಟದಲ್ಲಿ 22 ಜನ ಪ್ರಯಾಣಿಕರು ಕೊಲೆಯಾದರು. ಇದು ನಡೆದದ್ದು ಕಲ್ಕತ್ತದ ಬಡ್ಜ್ ಬಡ್ಜ ಬಳಿ.

ಈ ಘಟನೆಯಿಂದಾಗಿ 'ಗದ್ದರ್' ಕ್ರೋಧದಿಂದ ಬ್ರಟಿಷರ ಮೇಲೆ ಮತ್ತಷ್ಟು ಕೋಪದಿಂದ ಅಕ್ರಮಣ ಮಾಡಲು ಸಜ್ಜಾಯಿತು. ಒಂದನೆ ಮಹಾಯುದ್ಧ 'ಗದ್ದರ್ ' ಗೆ ಮತ್ತೆಷ್ಟು ಪ್ರಚೋದನೆ ನೀಡಿತು.

**1915–**ಜನವರಿ–ಫಬ್ರವರಿ–ಪಂಜಾಬ್‌ನಲಲಿ ಗದ್ದರ್‌ನಿಂದ ಹಲವಾರು ಸರ್ಕಾರ ಖಜಾನೆ 'ದರೋಡೆ'ಗಳು

**1915,** ಫ್ರೆಬ್ರವರಿ 21 ಫಿರೋಜ್‌ಪುರ, ಲಾಹೋರ್, ರಾವಲ್ಪಿಂಡಿಗಳಲ್ಲಿ ಸಶಸ್ತ್ರಕ್ರಾಂತಿಗೆ ಗದ್ದರ್ ಸಜ್ಜು, ಆದರೆ ಕೆಲವು ವಂಚಕರಿಂದ 'ಗದ್ದರ್' ಯೋಜನೆ ವಿಫಲವಾಯಿತು.

**1915–** **'ಜಮ್ಮರ್‌ಮನ್ ಯೋಜನೆ** 'ಯಲ್ಲಿ ಬರ್ಲಿನ್‌ನಲಲಿ ವೀರೇಂದ್ರ ಚಟ್ಟೋಪಾಧ್ಯಾಯ, ಭೂಪೇಂದ್ರನಾಥ್ ದತ್ತ, ಲಾಲಾಹರ್‌ದಯಾಳ್‌ರಿಂದ 'ಬರ್ಲಿನ್ ಸಮಿತ ಸ್ಥಾಪನೆ.

**2. 1920ರ ನಂತರ (ಎರಡನೆ ಹಂತ)**

**ಪಂಜಾಬ್, ಉತ್ತರ ಪ್ರದೇಶಗಳಲ್ಲಿ :**

**1924,** ಅಕ್ಟೋಬರ್ – ಕಾನ್ಪುರದಲ್ಲಿ ಅಖಿಲ ಭಾರತ ಕ್ರಾಂತಿಕಾರಿಗಳ ರಹಸ್ಯ ಸಭೆ (ರಾಮ್‌ಪ್ರಸಾದ್ ಬಿಸ್ಮಿಲ್ಲ, ಜೀಗೇಶ್‌ಚಂದ್ರ ಚಟರ್ಜಿ ಹಾಗೂ ಸಚಿನ್ ಸನ್ಯಾಲರಿಂದ 'ಹಿಂದೂಸ್ತಾನ್ ರಿಪಬ್ರಿಕನ್ ಆರ್ಮಿ ' ಎಚ್‌ಆರೆಎ, ಸ್ಥಾಪನೆ)

**1925,** ಆಗಸ್ಟ್–2 ಕಾಕೋರಿ ದರೋಡೆ. ಲಕ್ನೋ ಬಳಿಯ 8 ಡೌನ್ ರೈಲನ್ನು ತಡೆದು ಬಿಸ್ಮಿಲ್ಲ ನೇತೃತ್ವದ ಎಚ್‌ಆರೆ ತಂಡದಿಂದ ಸರ್ಕಾರಿ ಖಜಾನೆ ದರೋಡೆ.

ಈ ಪ್ರಕರಣದಲಲಿ ಬಿಸ್ಮಿಲ್ಲ, ಅಶ್ಫಾಖ್ ಉಲ್ಲಾಖಾನ್, ರೋಶನ್‌ಸಿಂಗ್ ಹಾಗೂ ಈ ಪ್ರಕರಣದಲ್ಲಿ ಬಿಸ್ಮಿಲ್ಲ. ಅಶ್ಫಾಖ್ ಉಲ್ಲಾಖಾನ್, ರೋಶನ್‌ಸಿಂಗ್ ಹಾಗೂ ರಾಜೇಮದ್ರ ಲಾಹಿರಿಗೆ ಗಲ್ಲು ಶಿಕ್ಷೆ. ಇತರ 17 ಕ್ರಾಂತಿಕಾರಿಗಳ ಬಂಧನ.

**1928,** ಸೆಪ್ಟೆಂಬರ್ – ದೆಹಲಿಯ ಫಿರೋಜ್ ಷಾ ಕೋಟ್ಲಾದ ಪಾಳು ಜಾಗದಲದಲಿ ಚಂದ್ರಶೇಖರ ಅಜಾದ್, ಭಗತ್‌ಸಿಂಗ್, ಸುಖದೇವ್, ಭಗವತಿಚರಣ್ ಮೆಹ್ರಾ ಮುಂತಾದವರಿಂದ **'ಹಿಂದೂಸ್ತಾನ್ ಸೋಷಿಯಲಿಸ್ಟ್ ರಿಪಬ್ಲಿಕ್ ಆರ್ಮಿ'** ಸ್ಥಾಪನೆ

**1928,** ಡಿಸೆಂಬರ್ : ಶೇರ್–ಐ–ಪಂಜಾಬ್ ಲಾಲಾ ಲಜಪತರಾಯ್ ಪೊಲೀಸ್ ಲಾಠಿಗೆ ಬಲಿಯಾದದ್ದನ್ನು ಪ್ರತಿಭಟನೆ ಲಾಹೋರ್‌ನಲ್ಲಿ ಎಚ್‌ಎಸ್‌ಆರ್‌ಎದಿಂದ ಪೊಲೀಸ್ ಅಧಿಕಾರಿ ಸ್ಯಾಂಡರ್ಸ್ ಹತ್ಯೆ (ಚಂದ್ರಶೇರ್ ಅಜಾದ್, ಭಗತ್‌ಸಿಂಗ್, ರಾಜಗುರು, ಸುಖದೇವ್ ಯೋಜನೆ)

**1929,** ಏಪ್ರಿಲ್ 8– ಲಾಹೋರ್‌ನ ಕ್ರೇಂದ್ರ ಶಾಸನ ಸಭಾಗೃಹದಲ್ಲಿ ಭಗರ್ ಸಿಂಗ್ ಹಾಗೂ ಬಟುಕೇಶ್ವರದತ್ತರಿಂದ ಬಾಂಬ್ ಸ್ಫೋಟ. ಈ ಪ್ರಕರನದಲ್ಲಿ ಭಗತ್‌ಸಿಂಗ್, ಸುಖದೇವ್ ಹಾಗೂ ರಾಜಗುರು ಇವರಿಗೆ ಗಲ್ಲು ಶಿಕ್ಷೆ.

**1929–** ಜೈಲಿನಲ್ಲಿ ಭೀಕರ ಸ್ಥಿತಿಗಳನ್ನು ಪ್ರತಿಭಾಟಿಸಿ ಅಮರಣ ಉಪವಾಸ ಮಾಡಿದ ಕ್ರಾಂತಿಕಾರಿ ಜತಿನ್‌ದಾಸ್ 64ನೇ ದಿನ ಪ್ರಾಣತ್ಯಾಗ

**1931** ಫ್ರೆಬ್ರವರಿ –+ಪೊಲಿಸರಿಂದ ಪಾರಾಗುವಾಗ ಅಜಾದ್ ಸಾವು, ಅಲಹಾಬಾದ್ ಪಾರ್ಕ್‌ನಲ್ಲಿ.

**1931,** ಮಾರ್ಚ್ 23– ಭಗತ್‌ಸಿಂಗ್, ಸುಖದೇವ್, ರಾಜಗುರುಗೆ ಗಲ್ಲು. **ಬಂಗಾಳದಲ್ಲಿ**

**1924–**ಗೋಪಿನಥ್ ಸಹಾನಿಂದ ಕಲ್ಕತ್ತದ ಪೊಲೀಸ್ ಆಯುಕ್ತ ಜಾಲ್ಸರ್ಸ್‌ಟೆಗಾರ್ಟ್ ಮೇಲೆ ಹಲ್ಲೆ (ಡೇ ಎಂಬುವವನ ಸಾವು) : ಸುಭಾಷ್‌ಚಂದ್ರಬೋಸ್ ಹಾಗೂ ಗೋಪಿನಾಥ್ ಸಹಾರ ಬಂಧನ. ಸಹಾಗೆ ಗಲ್ಲುಶಿಕ್ಷೆ.

**1930,** ಏಪ್ರಿಲ್ – ಚಿತ್ತಗಾಂಗ್ ಶಸ್ತ್ರಾಗಾರ ಮೇಲೆ ದಾಳಿ, 'ಇಂಡಿಯಾನ್ ರಿಪಬ್ಲಿಕ್ ಆರ್ಮಿ' ಎನ್ನುವ ಹೆಸರಿನಲ್ಲಿ ಸೂರ್ಯಸೇನ್, ಗಾಗೇರ್ ಘೋಷ್ ಹಾಗೂ ಲೋಕನಾಥ್‌ರಿಂದ ಸಂಘಟನೆ.
1933ರ ಫೆಬ್ರವರಿಯಲಲಿ ಸೂರ್ಯಸೇನನ ಬಂಧನ, 1934ರ ಜನವರಿಯಲಲಿ ಗಲ್ಲು.

**17. ಗಾಂಧಿ ಯುಗ ಮತ್ತು ಸ್ವಾತಂತ್ರ್ಯ**

ತಮ್ಮ ಕಕ್ಷಿದಾರ ದಾದಾ ಅಬ್ದುಲ್ಲಾನ ಪ್ರಕರನದ ವಕಾಲತ್ತಿಗಾಗಿ ದಕ್ಷಣ ಆಫ್ರಿಕಾಕ್ಕೆ ಹೋದ ಗಾಂಧಿ ಅಲ್ಲಿನ ಭಾರತೀಯ ಕೂಲಿ ಕಾರ್ಮಿಕರ ಶೋಷಣೆಯನ್ನು ಕಂಡು ಅವರ ಪರವಾಗಿ ಹಾಗೂ ವರ್ಣಭೇದ ನೀತಿಯ ವಿರುದ್ಧ ಹೋರಾಡಲು ಅಲ್ಲಿಯೇ ಉಳಿದುಕೊಂಡರು. 1894–1906ರ ಅವಧಿಯಲಲಿ ಗಾಂಧಿ ದಕ್ಷಿಣ ಆಫ್ರಿಕಾದ ಮೇಲಾಧಿಕಾರಿಗಳಿಗೆ ಹಾಗೂ ಬ್ರಿಟಿಷ್ ಸರಕಾರಕ್ಕೆ ಮನವಿಗಳನ್ನಿ ಸಲ್ಲಿಸುವುದರ ಮೂಲಕ ಭಾರತೀಯ ಕೂಲಿಕಾರರ ಶೋಷಣೆಯನ್ನು ನಿಲ್ಲಿಸಲು ಪ್ರಯತ್ರಿಸಿದರು.
ವಿವಿಧ ಭಾರತೀಯ ಕೂಲಿಗಾರರ ಗುಂಪುಗಳನ್ನು ಸಂಘಟಿಸಲು ಗಾಂಧಿ ನಟಾಲ್ ಇಂಡಿಯನ್ ಕಾಂಗ್ರೆಸ್ ಸ್ಥಾಪನೆ ಮಡಿದರು. **'ಇಂಡಿಯನ್ ಒಪಿನಿಯನ್'** ಎಂಬ ಪತ್ರಿಕೆಯನ್ನು ಹೊರತಂದರು. ನಂತರದ, 1906–1914ರವರೆಗಿನ ಅವಧಿ ಗಾಂಧಿ ದಕ್ಷಣ ಆಫ್ರಿಕಾದಲ್ಲಿ ಸತ್ಯಗ್ರಹವನ್ನು ಅಳವಡಿಸಿದ ಅವಧಿಯಾಗಿದೆ.

1906ರಲ್ಲಿ ಭಾರತೀಯ ತಮ್ಮೊಂದಿಗೆ ಯಾವಾಗಲೂ ಬೆರಳಚ್ಚು ಹೊಂದಿರುವ ನೊಂದಾವಣಿ ಪತ್ರವನ್ನು ಇಟ್ಟುಕೊಂಡಿರಬೇಕೆಂಬ ತಾರತಮ್ಯದ ಕಾಯ್ದೆ ವಿರುದ್ಧ ಗಾಂಧಿ ಕಾನೂನು ಭಂಗ ಚಳವಳಿ ಸಂಘಟಿಸಿ. ನೊಂದಾವಣೆ ಪತ್ರಗಳನ್ನೆಲ್ಲ ಸುಟುಹಾಕಿದರು. ಹಾಗೆಯೇ ಒಂದು ಪ್ರಾಂತ್ಯದಿಂದ ಇನ್ನೊಂದು ಪ್ರಾಂತ್ಯಕ್ಕೆ ದಕ್ಷಿಣ ಆಫ್ರಿಕಾದಲ್ಲಿ ಹೋಗುವಂತಿಲ್ಲವೆಂಬ ನಿರ್ಬಂಧದ ವಿರುದ್ಧವೂ ಪ್ರತಿಭಟಿಸಲಾಯಿತು. ಹೀಗೆ ಕಾವೇರಿದ ಪ್ರತಿಭಟನೆಯಿಂದ ಹೆಚ್ಚು ಹೆಚ್ಚು ಸತ್ಯಾಗ್ರಹಿಗಳು ಸಂಘಟಿತರಾದಾಗ ಅವರಿಗೆ ಆಶ್ರಯ ನೀಡುವುದಕ್ಕಾಗಿಯೇ ಗಾಂಧಿ ಟಾಲ್‌ಸ್ಟಾಯ್ ಫಾರ್ಮ್ ಅನ್ನು ಸ್ಥಾಪಿಸಿದರು. ಭಾರತೀಯರ ಮೇಲೆ ದಕ್ಷಿಣ ಆಫ್ರಿಕಾ ಸರಕಾರ ಹೇರಿದ ಮೂರು ಪೌಂಡ್‌ಗಳ ಭಾರೀ ತಲೆಗಂದಾಯದ ವಿರುದ್ಧ ಹಾಗು ಕ್ರಿಶ್ಚಿಯನ್ ವಿಧಿಯಂತೆ ನಡೆಯದ ಭಾರತೀಯರ ಮದುವೆಗಳನ್ನು ಕಾನೂನು ಬಾಹಿರ ಎಮದು ಘೋಷಿಸಿದ್ದ ಕಾನೂನಿನ ವಿರುದ್ಧವೂ ಹೋರಾಡಿ ಗಾಂಧಿ ದಕ್ಷಿಣ ಆಫ್ರಿಕಾದಲ್ಲಿ ತಮ್ಮ ಅಹಿಂಸಾತ್ಮಕ ಸತ್ಯಾಗ್ರಹ ಹೋರಾಟದಲ್ಲಿ ಯಶಸ್ಸು ಸಾಧಿಸಿದರು.

**18. ಭಾರತದಲ್ಲಿ ಗಾಂಧಿ**

ಗಾಂಧಿ 1915ರ ಜನವರಿ 9ರಂದು ಭಾರತಕ್ಕೆ ಬಂದ ನಂತರ ದೇಶಾದ್ಯಂತ ಓಡಾಡಿ ಪರಿಸ್ಥಿತಿಯನ್ನು ಅವಲೋಕಿಸಿದರು.

**1917 ಚಂಪಾರಣ್ ಸತ್ಯಾಗ್ರಹ "**

ಇದು ಗಾಂಧೀಜಿ ಭಾರತದಲ್ಲಿ ನಡೆಸಿದ ಮೊದಲ ಕಾನೂನು ಭಂಗ ಚಳವಳಿಯಾಗಿದೆ. ಬಿಹಾರದಲ್ಲಿನ ಚಂಪಾರಣ್‌ದಲ್ಲಿ ಯುರೋಪಿಯನ್ ಪ್ಲಾಂಟರ್‌ಗಳು ಸ್ಥಳೀಯ ರೈತರಲ್ಲಿ ಒಪ್ಪಂದ ಒಂದನ್ನು ಮಾಡಿಕೊಂಡು ಒಟ್ಟು ಹಿಡುವಳಿಯಲ್ಲಿ 20ನೆಯ 3 ಭಾಗವನ್ನು ಇಂಡಿಗೋ ಬೆಳೆಯುವಂತೆ ಒತ್ತಾಯ ಹೇರಿದ್ದರು.
19ನೆಯ ಶತಮಾನದ ಅಂತ್ಯಕ್ಕೆ ಜರ್ಮನ್ನರು ಕೃತಕ ನೀಲಯನ್ನು ಕಂಡುಹಿಡಿದದ್ದರಿಂದ ಭಾರತದ ಇಂಡಿಗೋ ಬೆಳೆಗೆ ಬೇಡಿಕೆ ಇಲ್ಲದಂತಾಯಿತು. ಆದರೂ ಬ್ರಿಟಿಷ್ ಪ್ಲಾಂಟರ್‌ಗಳೂ ಚಂಪಾರಣ್‌ದ ರೈತರಿಗೆ ಇಂಡಿಗೋ ಬೆಳೆಯಲು ಒತ್ತಡ ಹೇರಿದ್ದರು. ಗಾಂಧೀಜಿ ಅಲ್ಲಿಗೆ ಹೋಗಿ ಸತ್ಯಾಗ್ರಹ ನಡೆಸಿ ರೈತರಿಗೆ ನ್ಯಾಯ ದೊರಕಿಸಿಕೊಟ್ಟರು.

**1918– ಅಹಮದಾಬಾದ್ ಸತ್ಯಾಗ್ರಹ :**

ಇದು ಗಾಂಧೀಜಿ ನಡೆಸಿದ ಪ್ರಪ್ರಥಮ ಉಪವಾಸ ಸತ್ಯಾಗ್ರಹ ಗಿರಣಿ ಮಾಲೀಕರು ಕಾರ್ಮಿಕರಿಗೆ ಪ್ಲೇಗ್ ಬೋನಸ್ ಕೊಡದಂತೆ ನಿರ್ಧರಿಸಿದ್ದರು. ಗಾಂಧಿ ಮಧ್ಯ ಪ್ರವೇಶಿಸಿ, ಕಾರ್ಮಿಕರ ಪರವಾಗಿ ಉಪವಾಸ ಸತ್ಯಾಗ್ರಹ ಆರಂಭಿಸಿ ಕಾರ್ಮಿಕರ ದಿನಗೂಲಿಯಲ್ಲಿ ಶೇ. 25ರ ಹೆಚ್ಚಳ ತರಬೇಕೆಂದು ಒತ್ತಾಯಿಸಿ ಯಶಸ್ವಿಯಾದರು.

1918– ಖೇಡಾ ಸತ್ಯಾಗ್ರಹ :

ಇದು ಗಾಂಧಿ ನಡೆಸಿದ ಪ್ರಪ್ರಥಮ ಅಸಹಕಾರ ಸತ್ಯಾಗ್ರಹ. 1918ರಲ್ಲಿ ಉಂಟಾದ ಬರಗಾಲದಿಂದ ಗುಜರಾತ್‌ನ ಖೇಡಾ ಜಿಲ್ಲೆಯಲ್ಲಿ ಬೆಳೆಗಳು ವಿಫಲವಾಗಿದ್ದವು. ಕಂದಾಯ ನೀತಿಯಂತೆ ಬೆಳೆಗಳು ಸಾಮನ್ಯ ಇಳುವರಿಯ ನಾಲ್ಕನೇ ಒಂದರಷ್ಟು ಕಡಿಮೆಯಾದಾಗ ಕಂದಾಯ ಪಾವತಿಯಿಂದ ವಿನಾಯಿತಿ ನೀಡಲಾಗುತ್ತಿದರೂ, ಬ್ರಿಟಿಷ್ ಅಧಿಕಾರಿಗಳು ರೈತರಿಗೆ ಈ ಸೌಲಭ್ಯವನ್ನು ತಡೆಹಿಡಿದದ್ದು, ಗಾಂಧಿ ಪ್ರವೇಶಿಸಿ ರೈತರ ಪರವಾಗಿ ಅಸಹಕಾರ ಚಳವಳಿ ನಡೆಸಲು ಕಾರಣವಾಯಿತು. ಈ ಚಳವಳಿ ಯಶಸ್ವಿಯಾಯಿತು. ಸರದಾರ್ ವಲ್ಲಭ್‌ಭಾಯಿ ಪಟೇಲ್ ಈ ಚಳವಳಿಯಲ್ಲಿ ಭಾಗವಹಿಸಿದ ತರುಣ ಹೋರಾಟಗಾರರಾಹಿದ್ದರು.

**ಪರಿಣಾಮಗಳು :**

- ಗಾಂಧೀಜಿ ಮೇಲಿನ ಪ್ರಯೋಗಗಳಿಂದ ಸತ್ಯಾಗ್ರಹದ ಸಾಮಾರ್ಥ್ಯವನ್ನು ಜನರಿಗೆ ಮನದಟ್ಟು ಮಾಡಿಕೊಟ್ಟಂತಾಯಿತು.
- ಜನರ ಮನೋಭಿತ್ತಿಯಲ್ಲಿ ಗಾಂಧೀಜಿ ಬೇರೂರುವಂತಾಯಿತು. ಯುವ ಜನಾಂಗದ ಗೌರವವನ್ನು ಗಾಂಧೀಜಿ ಗಳಿಸಿದರು.
- ಈ ಮೂಲಕ ಅವರು ಭಾರತ ಸ್ವಾತಂತ್ರ್ಯ ಹೋರಾಟದಲ್ಲಿ ಪ್ರಭಾವ ಪೂರ್ಣ ನಾಯಕತ್ವ ವಹಿಸಿಕೊಳ್ಳಲು ಅವಕಾಶ ನಿರ್ಮಾಣವಾದಂತಾಯಿತು.

**19. ರೌಲತ್ ಮಸೂದೆ ಮತ್ತು ಜಲಿಯನ್ ವಾಲಾಬಾಗ್ ದುರಂತ**

1919ರ ಫೆಬ್ರವರೊ 6ರಂದು ಜಾರಿಗೆ ಬಮದ ರೌಲತ್ ಮಸೂದೆ ಕಾರ್ಯಾಂಗದ ಕೈಗೆ ಮಿತಿಮೀರಿದ ಅಧಿಕಾರವನ್ನು ಕೊಟ್ಟಿತು. ಇವರ ಮುಖ್ಯ ಉದ್ದೇಶ ಕ್ರಾಂತಿಕಾರಕ ಚಟುವಟಿಕೆಗಳನ್ನು ನಾಶ ಮಾಡುವುದಾಗಿತ್ತು. ಯಾವುದೇ ವಿಚಾರಣೆಯಿಲ್ಲದೆ ಕ್ರಾಂತಿಕಾರಿಗಳನ್ನು ಶಿಕ್ಷೆಗೆ ಒಳಪಡಿಸುವ ಅವಕಾಶ ಈ ಕಾಯ್ದೆಯಲ್ಲಿತ್ತು. ಹೆಚ್ಚಿನ ಸಂಖ್ಯೆಯಲ್ಲಿ ಜನರು ಸಾರ್ವಜಿನಿಕ ಸ್ಥಳದಲ್ಲಿ ಸೇರುವಂತಿರಲಿಲ್ಲ. ಜನರ ಸಾಮಾನ್ಯ ಹಕ್ಕು ಹಾಗೂ ಸೌಲಭ್ಯವನ್ನು ಈ ಕಾಯ್ದೆ ಕಸಿದುಕೊಂಡಿತು. ಇಂಥ ದಮನಕಾರಿ ಕಾಯ್ದೆ ವಿರುದ್ಧ ತೀವ್ರ ಪ್ರತಿಭಟನೆ ವ್ಯಕ್ತಗೊಂಡಿತು. ಗಾಂಧೀಜಿ ಈ ಕಾಯ್ದೆ ವಿರುದ್ಧ ಹೋರಾಟಕ್ಕಿಳಿದರು. 1919ರ ಏಪ್ರಿಲ್ 13ರ ವೈಶಾಲಿ ದಿನದಂದು ಅಮೃತಸರದ ಜಲಿಯನ್ ವಾಲಾಬಾಗ್‌ನಲ್ಲಿ ನಿಷೇಧಾಜ್ಞೆಯ ಅರಿವಿಲ್ಲದ ಜನರು ತಮ್ಮ ನಾಯಕರಾದ ಸೈಫುದ್ದೀನ್ ಕಿಚಲೇವ್ ಹಾಗೂ ಸತ್ಯಪಾಲ್‌ರ ಬಂಧನವನ್ನು ಪ್ರತಿಭಟಿಸಿ ಶಾಂತ ಸಭೆ ಸೇರಿದ್ದರು. ಜನರಲ್ ರೆಜಿನಾಲ್ಡ್ ಡಾಯರ್ ಸಭೆ ಸೇರಿದ ಜನರ ಮೇಲೆ ಗುಂಡು ಹಾರಿಸಲು ಅಜ್ಞೆ ಹೊರಡಿಸಿದ ಪರಿಣಾಮವಾಗಿ ಸಾವಿರಾರು ಜನರು ಹತರಾದರು.

**20. ಅಸಹಕಾರ ಚಳವಳಿ**

1920ರ ಅಗಸ್ಟ್ 1ರಂದು ಅರಂಭವಾದ ಇ ಪ್ರಪ್ರಥಮ ಚಳವಳಿಯ ಮುಖ್ಯ ಪ್ರೇರಕ ಅಂಶಗಳು – ಜಲಿಯನ್ ವಾಲಾಬಾಗ್ ಘಟನೆ, ಖಿಲಾಫತ್ ಘಟನೆ ಹಾಗೂ ಸ್ವರಾಜ್ಯ ಸಾಧನೆಯ ಗುರಿ. ಜಲಿಯನ್ ವಾಲಾಬಾಗ್ ದುರಂತರ ನಂತರ ವಿಚಾರಣೆಗಾಗಿ ನೇಮಿಸಲ್ಪಟ್ಟು ಹಂಟರ್ ಆಯೋಗ ನೀಡಿದ ಪಕ್ಷಪಾತ ವರದಿಯಿಂದಪಂಜಾಬ್ ಸೇರಿದಂತೆ ಉಳಿದೆಡೆಯ ಜನರು ಕೋಪಗೊಂಡಿದ್ದರು.

ಮೊದಲ ಜಾಗತಿಕ ಮಹಾಯುದ್ಧದಲ್ಲಿ ತುರ್ಕಿ ಪರಾಭಾವಗೊಂಡು ಆ ಸಾಮ್ರಾಜ್ಯ ಛಿನ್ನ ಭಿನ್ನವಾದದ್ದು ಹಾಗೂ ತುರ್ಕಿಯ ಸುಲ್ತಾನ ಖಲೀಫ್‌ನ ಸ್ಥಾನಕ್ಕೆ ಬ್ರಿಟಿಷ್ ಸರ್ಕಾರ ಅಗೌರವ ನೀಡಿದ್ದು ಭಾರತದ ಮುಸ್ಲಿಮರನ್ನು ಪ್ರತಿಭಟನೆಗೆ ಸಜ್ಜುಗೊಳಿಸಿತ್ತು. 1919ರ ನವೆಂಬರ್‌ನಲ್ಲಿ ಅಲಿ ಸಹೋದರರು ಹಾಗೂ ಮೌಲಾನಾ ಅಬುಲ್ ಕಲಂ ಆಜಾದ್ ಸೇರಿ ಬ್ರಿಟಿಷ್ ಸರ್ಕಾರಕ್ಕೆ ನೀಡುತ್ತಿದ್ದ ಸಹಕಾರವನ್ನೆಲ್ಲ ಹಿಂತೆಗೆದು ಕೊಂಡು, ಕಾಂಗ್ರೆಸ್ ರಾಜಕೀಯ ಚಳವಳಿಗೆ ಬೆಂಬಲ ಸೂಚಿಸಿತ್ತು. ಆ ಅವಕಾಶವನ್ನು ಗಾಂಧೀಜಿ ಹಿಂದು– ಮುಸ್ಲಿಂರನ್ನು ಒಂದು ಗೂಡಿಸುವ ಹಾಗೂ ಸಮಗ್ರ ಚಳವಳಿಯನ್ನು ಆರಂಭಿಸುವ ಅವಕಾಶವನ್ನು ಬಳಸಿಕೊಂಡರು.
ಅದೇ ಸಮಯಕ್ಕೆ 1919ರಲ್ಲಿ ಅಮೃತಸರದ ಕಾಂಗ್ರೆಸ್ ಅಧಿವೇಶನ ಮೂತಿಲಾಲ್ ನೆಹರು ಅವರ ಅಧ್ಯಕ್ಷತೆಯಲ್ಲಿ ನಡೆದು ಬ್ರಿಟಿಷ್ ಸರ್ಕಾರ ಭಾರತದಲ್ಲಿ ಜವಾಬ್ದಾರಿ ಸರ್ಕಾರವನ್ನು ಸ್ಥಾಪಿಸಲು ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿತು. ಈ ಎಲ್ಲವುಗಳ ಒಟ್ಟು ಪರಿಣಾಮವೇ ಅಸಹಕಾರ ಚಳವಳಿಯಾಗಿ ದೇಶಾದ್ಯಂತ ಸ್ಫೋಟಗೊಂಡಿತು. ಕೌನ್ಸಿಲ್‌ಗಳ ಚುನಾವಣೆಯಲ್ಲಿ ಮತ ದಾರರು ಪಾಲ್ಗೊಳ್ಳಲಿಲ್ಲ.ಸುಮಾರು ಒಂದು ಲಕ್ಷ ವಿದ್ಯಾಥಿಗಳು ಶಾಲೆ–ಕಾಲೇಜುಗಳನ್ನು ಬಿಟ್ಟು ಹೊರಬಂದರು. ನ್ಯಾಯವಾದಿಗಳು ತಮ್ಮ ವೃತ್ತಿಯನ್ನುತ್ಯಜಿಸಿದರು. ಗಾಂಧೀಜಿ ಖಿಲಾಫತ್ ನಾಯಕರಾದ ಅಲಿ ಸಹೋದರರೊಂದಿಗೆ ದೇಶಾದ್ಯಂತ ಪ್ರವಾಸ ಮಾಡಿ ಚಳವಳಿಯನ್ನು ತೀವ್ರಗೊಳಿಸಿದರು.

ತಿಲಕ್ ಅವರ ನಿಧನಕ್ಕೆ ಶ್ರದ್ಧಾಂಜಲಿಯ ಸಂಕೇತವಾಗಹಿ 'ತಿಲಕ್ ಸ್ವರಾಜ್' ನಿಧಿಯನನು ಸ್ಥಾಪಿಸಿ ಆರು ತಿಂಗಳಲ್ಲೇ ಕೋಟಿಟ್ಟಲೆ ಹಣವನ್ನು ಸಂಗ್ರಹಿಸಿ ಅಸಹಕಾರ ಚಳವಳಿಗೆ ಬಳಸಲಾಯಿತು. ಅಸಹಕಾರ ಚಳವಳಿಯೊಳಗೇ ಕೈಗೊಳ್ಳಲಾದ ವಿದೇಶಿ ವಸ್ತುಗಳ ಬಹಿಷ್ಕಾರ ಚಳವಳಿ ಕೂಡ ಯಶಸ್ವಿಯಾಯಿತು. ಹಾಗೇ ಸಾರಾಯಿ ಅಂಗಡಿಗಳ ಮುಂದೆ ಪಿಕೆಟಿಂಗ್ ಕಾರ್ಯಕ್ರಮವನ್ನೂ ಸ್ಥಾನೀಯ ನಾಯಕರು ಸಂಘಟಿಸಿದರು. ಖಾದಿ ಸ್ವಾತಂತ್ರ್ಯಕ್ಕೆ ಗುರುತು ಎಂಬ ಭಾವನೆ ಈ ಅವಧಿಯಲ್ಲಿಯೇ ಬೆಳೆಯಿತು. ಬ್ರಿಟಿಷರು ಹಿಂದು ಮುಸ್ಲಿಂಮರ ಏಕತೆಯನ್ನು ಮುರಿಯಲು ಪ್ರಯತ್ನಿಸಿದರು. ಪ್ರಮುಖ ನಾಯಕರನ್ನೆಲ್ಲ ಜೈಲಿಗೆ ತಳ್ಳಲಾಯಿತು.

**21. ಚೌರಿ ಚೌರಿ ಘಟನೆ**

1922ರ ಫೆಬ್ರವರಿ 5ರಂದು ಉತ್ತರ ಪ್ರದೇಶ ಚೌರಿಚೌರಾದಲ್ಲಿ ಪೊಲೀಸರ ದಮನಕಾರಿ ನೀತಿಯನ್ನು ಪ್ರತಿಭಟಿಸಿ ಚಳವಳಿಕಾರರು ಪೊಲೀಸ್ ಠಾಣೆಯೊಳಗೆ ಪೊಲೀಸರನ್ನು ಕೂಡಿಹಾಕಿ ಬೆಂಕಿ ಇಟ್ಟರು. ಈ ಹಿಂಸಾಕೃತ್ಯದಲ್ಲಿ 22 ಪೊಲೀಸರು ಸುಟ್ಟುಹೋದರು.
ಈ ಘಟನೆಯಿಂದ ನೊಂದ ಗಾಂಧೀಜಿ ಅಸಹಕಾರ ಚಳವಳಿ ಹಿಂಸೆಯ ದಾರಿಯನ್ನು ಹಿಡಿಯುವುದು ಬೇಡ ಎಂದು ಘೋಷಿಸಿ 1922ರ ಫೆಬ್ರವರಿ 12ರಂದು ಚಳವಳಿಯನ್ನು ಹಿಂತೆಗೆದುಕೊಂಡರು. ಗಾಂಧೀಜಿಯನ್ನು ಬಂಧಿಸಲಾಯಿತು. ನೆಹರು ಮತ್ತಿತರ ಯುವ ನಾಯಕರಿಗೆ ಗಾಂಧೀಜಿಯವರ ನಿರ್ಧಾರ ಸರಿಕಾಣಲಿಲ್ಲ. ಅಸಹಕಾರ ಚಳವಳಿಯ ನಿಲುಗಡೆಯಿಂದ ಖಿಲಾಫತ್ ಚಳವಳಿ ತನ್ನ ಪ್ರಾಮುಖ್ಯತೆ ಕಳೆದುಕೊಂಡಿತು. ಗಾಂಧಿ ಸಾಧಿಸಿದ್ದ ಹಿಂದೂ– ಮುಸ್ಲಿಂ ಐಕ್ಯತೆ ಮುಂದಿನ ದಿನಗಳಲ್ಲಿ ಮುರಿದುಬಿದ್ದಿರು. ಗಾಂಧೀಜಿಯ ಬೆಂಬಲ ಪಡೆದಿದ್ದ ಅಲಿ ಸಹೋದರರು ಈ ಚಳವಳಿಯ ನಂತರ ಗಾಂಧೀಜಿಯ ವಿರೋಧಿಗಳಾಗಿ ಬೆಳೆದರು.

**22. ಸ್ವರಾಜ್ ಪಾರ್ಟಿ**

ಅಸಹಕಾರ ಚಳವಳಿಯನ್ನು ಗಾಂಧೀಜಿ ಹಿಂತೆಗೆದುಕೊಂಡ ನಂತರ 1922ರ ಮಾರ್ಚ್ 28ರಂದು ಬ್ರಿಟಿಷ್ ಸರಕಾರ ಅವರನ್ನು ಬಂಧಿಸಿ 6 ವರ್ಷಗಳ ಶಿಕ್ಷೆ ವಿಧಿಸಿತು. ಗಾಂಧೀಜಿ ಇಲ್ಲದಾಗ ಕಾಂಗ್ರೆಸ್ ನಾಯಕರಲ್ಲಿ ಭಿನ್ನಾಭಿಪ್ರಾಯ ಉಂಟಾಗಿ ಒಂದು ಗುಂಪು ಚುನಾವಣೆಯನ್ನು ಬಹಿಷ್ಕರಿಸುವ ಬದಲು ಶಾಸಕಾಂಗಕ್ಕೆ ಪ್ರವೇಶಿಸಿ ಅಲ್ಲಿಂದಲೆ ಹೋರಾಟ ನಡೆಸಬೇಕೆಂದು ಹೇಳಿತು. ಇನ್ನೊಂದು ಗುಂಪು ಚುನಾವಣೆಯಲಲಿ ಭಾಗವಹಿಸಬಾರದೆಂದು ಅಭಿಪ್ರಾಯಪಟ್ಟಿತು. ಶಾಸಕಾಂಗವನ್ನು ಪ್ರವೇಶಿಸಲು ಬಯಸಿದ ಸಿ.ಆರ್.ದಾಸ್ ಹಾಗೂ ಮೋತಿಲಾಲ್ ನೆಹರು ಶಾಸಕಾಂಗವನ್ನು ಪ್ರವೇಶಿಸುವ 'ಬದಲಾವಣೆ ಪರ'ಗಾಗಿ ಕಾಂಗ್ರೆಸ್‌ನಿಂದ ಹೊರಬಂದು ಸ್ವರಾಜ್ ಪಾರ್ಟಿಯನನು ಕಟ್ಟಿದರು. ರಾಜೇಂದ್ರ ಪ್ರಸಾದ, ವಲ್ಲಭಾಯಿ ಪಟೇಲ್, ರಾಜಗೋಪಾಲಾಚಾರಿ ಮುಂತಾದರು 'ಬದಲಾವಣೆ ವಿರೋಧಿ' ಗುಂಪಾಗಿ ಕಾಂಗ್ರೆಸ್‌ನಲ್ಲಿ ಉಳಿದರು.

ಸ್ವರಾಜ್ ಪಕ್ಷದ ಸ್ಥಾಪನೆಯಿಂದ ಕಾಂಗ್ರೆಸ್‌ನಲ್ಲಿ ಭಾರಿ ಬಿರುಕೇನೂ ಉಂಟಾಗಲಿಲ್ಲ. ಸ್ವರಾಜ್ ಪಕ್ಷವು ತಾನು ಕಾಂಗ್ರೆಸ್ ಒಳಗಿನದೇ ಒಂದು ಪಕ್ಷವೇ ಹೊರತು ವಿರೋಧಿ ಪಕ್ಷವೇನಲಲ್ ಎಂದು ಹೇಳಿತು.
**1923ರ ಸಪ್ಟೆಂಬರ್‌ನಲ್ಲಿ ದೆಹಲಿಯಲ್ಲಿ ನಡೆದ ಮೊದಲ ಕಾಂಗ್ರೆಸ್ ಅಧಿವೇಶನದಲ್ಲಿ ಎರಡು ಗುಂಪುಗಳು ಮತ್ತೆ ರಾಜಿಯಾದವು.**
ಗಾಂಧೀಜಿ 1924ರ ಫೆಬ್ರವರಿ 5ರಂದು ಬಿಡುಗಡೆಯಾಗಿ ಬಂದಾಗ ಶಾಸಕಾಂಗ ಪ್ರವೇಶವನ್ನು ಮೊದಲು ವಿರೋಧಿಸಿ ನಂತರ ಸ್ವರಾಜ್ ಪಕ್ಷದವರು ಶಾಸಕಾಂಗದಲ್ಲಿ ಹೋರಾಡಬೇಕೆಂದು ಹೇಳಿದರು.
ಸ್ವಾಯತ್ತತೆ ಹೊಂದಿದ ಸ್ವಸರಕಾರ ಸ್ಥಾಪನೆಯ ಬೇಡಿಕೆಯನ್ನು ಬ್ರಿಟಿಷ್ ಸರಕಾರ ಈಡೇರಿಸದ ಕಾರಣ ಸ್ವರಾಜ್ ಪಕ್ಷದವರು 1925ರ ಮಾರ್ಚ್‌ನಲ್ಲಿ ಕೌನ್ಸಿಲ್‌ನಿಂದ ಹೊರಬಂದರು.
ನಂತರ ಸಮೂಹಿಕ ಕಾನೂನುಭಂಗ ಚಳವಳಿಯಲ್ಲಿ ನಂಬಿಕೆ ವ್ಯಕ್ತಪಡಿಸಿ ಕೌನ್ಸಿಲ್ ಪ್ರವೇಶವನ್ನು ಸ್ವರಾಜ್ ಪಕ್ಷ 1926ರಲ್ಲಿ ಹಿಂತೆಗೆದುಕೊಂಡಿತು.

**23. ಸೈಮನ್ ಆಯೋಗ**

1919ರ ಭಾರತ ಸರಕಾರ ಕಾಯ್ದೆಯಲ್ಲಿ. ಆ ಕಾಯ್ದೆ ಜಾರಿಗೆ ಬಂದ 10 ವರ್ಷಗಳ ನಂತರ ಭಾರತದಲ್ಲಿನ ರಾಜಕೀಯ ಬೆಳವಣಿಗೆ, ಸ್ವಯಂ ಆಡಳಿತ ಮತ್ತು ಪ್ರಾತಿನಿಧ್ಯವಿರಲಿಲ್ಲ. ಈ ಕಾರಣದಿಂದ ಕಾಂಗ್ರೆಸ್ ಸೇರಿದಂತೆ ಎಲ್ಲ ರಾಝುಕೀಯ ಸಂಘಟನೆಗಳು ಸೈಮನ್ ಆಯೋಗವನ್ನು ಪ್ರಬಲವಾಗಿ ವಿರೋಧಿಸಿದವು. ಆ ಪ್ರಕಾರ ಬ್ರಿಟೀಷ್ ಸರಕಾರ 1927ರಲ್ಲಿಯೇ ಸೈಮನ್ ಆಯೋಗವನ್ನು ರಚಿಸಿತು. ಈ ಆಯೋಗದಲ್ಲಿ ಇದ್ದ ಸದಸ್ಯರೆಲ್ಲ ಬ್ರಿಟಿಷ್‌ರಾಗಿದ್ದರು. ಭಾರತೀಯರಿಗೆ ಪ್ರಾತಿನಿಧ್ಯವಿರಲಿಲ್ಲ. ಈ ಕಾರಣದಿಂದ ಕಾಂಗ್ರೆಸ್ ಸೇರಿದಂತೆ ಎಲ್ಲ ರಾಝುಕೀಯ ಸಂಘಟನೆಗಳು ಸೈಮನ್ ಆಯೋಗವನ್ನು ಪ್ರಬಲವಾಗಿ ವಿರೋಧಿಸಿದವು. 1928ರ ಅಕ್ಟೋಬರ್ 30ರಂದು ಸೈಮನ್ ಲಾಹೋರ್‌ಗೆ ಬಂದಿಳಿದಾಗ 'ಸೈಮನ್ ವಾಪಸ್ಸಾಗು' ಎಂದು ಘೋಷಣೆಗಳೊಂದಿಗೆ ಭಾರಿ ಪ್ರತಿಭಟನೆ ನಡೆಯಿತು. ಆ ದಿನ ಪೊಲೀಸ್ ಲಾಟಿ ಏಟು ತಿಂದ ಲಾಲಾಬಜಪತ್‌ರಾಯ್ ನಿಧನರಾದರಯ.

**ಸೈಮನ್ ಆಯೋಗ ಕೆಳಗಿನಶಿಫಾರಸ್ಸು ಮಾಡಿತ್ತು.**

1. ದ್ವಿ ಪ್ರಭುತ್ವ ರದ್ದು ಪಡಿಸಿ ಪ್ರಾಂತ್ಯಗಳಿಗೆ ಸ್ವಯತ್ತತೆ ನೀಡಬೇಕು.
2. ಮತ ಚಲಾಯಿಸುವ ಅಧಿಕಾರವನ್ನು ಶೇ. 10–15ರಷ್ಟು ಜನರಿಗೆ ನೀಡಬೇಕು.
3. ಕೋಮುವಾರು ಚುನಾವಣಾ ಕ್ಷೇತ್ರಗಳು ಮುಂದುವರಿಯಬೇಕು.
4. ಕೇಂದ್ರ ಶಾಸಕಾಂಗ ಸಭೆಯನ್ನು ಫೆಡರಲ್ ಸಭೆಯನ್ನಾಗಿ ಪುನರ್ ರಚಿಸಬೇಕು.
5. ಭಾರತದಿಂದ ಬರ್ಮಾವನ್ನು, ಬಾಂಬೆ ಪ್ರಾಂತ್ಯದಿಂದ ಸಿಂಧ್ ಪ್ರಾಂತ್ಯವನ್ನು ಬೇರ್ಪಡಿಸಬೇಕು.
6. ಪ್ರಾಂತೀಯ ಶಾಸನ ಸಭೆಯನ್ನು ವಿಸ್ತರಿಸಿ, ಕನಷ್ಠ 200 ಹಾಗೂ ಗರಿಷ್ಟ 250 ಜನ ಪ್ರತಿನಿಧಿಗಳನ್ನು ನೇಮಿಸಬೇಕು.

7. ಭಾರತದ ಸಂವಿಧಾನ ಫಡರಲ್ ಸಂವಿಧಾನವಾಗಿರಬೇಕು.

8. ಗವರ್ನರ್‌ಮತ್ತು ಗವರ್ನರ್ ಜನರಲ್‌ಗಳಿಗೆ ಇರುವ ಅಧಿಕಾರ ಮುಂದುವರಿಯಬೇಕು.

ಸೈಮನ್ ಆಯೋಗದ ಈ ಶಿಫಾರಸ್ಸುಗಳು 'ಜವಾಬ್ದಾರಿ ಸರಕಾರ'ದ ಬಗ್ಗೆ ಪ್ರಸ್ತಾಪವನ್ನೇ ಮಾಡಲಿಲ್ಲವಾದ್ದರಿಂದ ಈ ವರದಿ ಭಾರತೀಯರಿಂದ ಬಹಿಷ್ಕರಿಸಲ್ಪಟಿತು.

**24. ನೆಹರೂ ವರದಿ**

ಹಾಗಿದ್ದರೆ ಎಲ್ಲ ಪಕ್ಷಗಳಿಗು ಒಪ್ಪುವಂಥ ಸಂವಿಧಾನವನ್ನು ರಚಿಸ ಬೇಕೆಂದು ಭಾರತ ಕಾರ್ಯದರ್ಶಿ ಸವಾಲು ಹಾಕಿದ. ಈ ಸವಾಲನು ಸ್ವೀಕರಿಸಿ ಎಲ್ಲಾ ರಾಜಕೀಯ ಪಕ್ಷಗಳ ಸಮಾವೇಶ ಡಾ. ಅನ್ಸರಿ ಅವರ ಅಧ್ಯಕ್ಷತೆಯಲ್ಲಿ ನಡೆದು, ಮೋತಿಲಾಲ್ ನೆಹರೂರವರ ನೇತೃತ್ವದಲ್ಲಿ ಸಮಿತಿಯೊಂದು ರಚಿತವಾಯಿತು. ಈ ಸಮಿತಿ 1928ರ ಆಗಸ್ಟ್ 10ರಂದು ತನ್ನ ವರದಿಯನ್ನು ಸಲ್ಲಿಸಿತು. **'ನೆಹರೂ ವರದಿ'** ಎಂದೇ ಜನಪ್ರಿಯವಾದ ಈ ಸಮಿತಿಯ ಶಿಫಾರಸ್ಸುಗಳು ಕೆಳಗಿನಂತಿವೆ.

1. 19 ಮೂಲಭೂತ ಹಕ್ಕುಗಳನ್ನು ಸಂವಿಧಾನದಲ್ಲಿ ಸೇರಿಸಬೇಕು.

2.ಗವರ್‌ನರ್ ಜನರಲ್‌ನನ್ನು ಬ್ರಿಟಿಷ್ ಸರಕಾರ ನೇಮಿಸಬೇಕು.

3.ಕ್ರೇಂದ್ರದಲ್ಲಿ ಸಂಪೂರ್ಣವಾಗಿ ಜವಾಬ್ದಾರಿ ಸರಕಾರ ರಚನೆಯಾಗಿ, ಕಾರ್ಯಾಂಗದ ಸಂಪೂರ್ಣ ಅಧಿಕಾರವನ್ನು ಗವರ್ನರ್ ಜನರಲ್ ಹೊಂದಿರಬೇಕು ಮತ್ತು ಪ್ರಧಾನ ಮಂತ್ರಿಯನ್ನು ಈತನೇ ನೇಮಿಸಬೇಕು.

4.ಕ್ರೇಂದ್ರ ಶಾಸಕಾಂಗವು 2 ಸದನಗಳಿಂದ ಕೂಡಿರಬೇಕು. ಒಂದು ಸೆನೆಟ್ ಸದನ ಮತ್ತೊಂದು ಪ್ರತಿನಿಧಿ ಸಭೆ. ಸೆನೆಟ್ ಸದನಕ್ಕೆ ಪ್ರಾಂತೀಯ ಕೌನ್ಸಿಲ್‌ಗಳಿಂದ 200 ಸದಸ್ಯರು ಆಯ್ಕೆಯಾಗಬೇಕು ಹಾಗೂ ಪ್ರತಿನಿಧಿ ಸಭೆ ಮತದಾನದ ಮೂಲಕ ಆಯ್ಕೆಯಾದ 500 ಪ್ರತಿನಿಧಿಗಳನ್ನು ಹೊಂದಿರಬೇಕು. ಸೆನೆಟ್ ಸದನದ ಅವಧಿ 7 ವರ್ಷ ಹಾಗು ಪ್ರತಿನಿಧಿ ಸಭೆಯ ಅವಧಿ 5 ವರ್ಷ ಇರಬೇಕು.

5. ಕೋಮುವಾರು ಚುನಾವಣಾ ಕ್ಷೇತ್ರಗಳಿರಬಾರದು.

6. ಪ್ರಾಂತೀಯ ಚುನಾವಣಾ ಕ್ಷೇತ್ರಗಳಿರಬಾರದು.

7. ಹೈಕಮಿಷನರ್‌ಗಳನನು ಭಾರತೀಯ ಮಂತ್ರಿಯ ಅಧೀನಕ್ಕೆ ವಹಿಸಬೇಕು.

8. ಭಾರತದ ಸೈನ್ಯವನು ಭಾರತೀಯ ಮಂತ್ರಿಯ ಅಧೀನಕ್ಕೆ ವಹಿಸಬೇಕು.

9. ಸಾರ್ವಜನಿಕ ಸೇವೆಗಳನ್ನು ಕೇಂದ್ರ ಶಾಸನಸಭೆಯ ನಿಯಂತ್ರಣಕ್ಕೆ ಒಪ್ಪಿಸಬೇಕು.

10. ಕೇಂದ್ರ ಹಾಗೂ ಪ್ರಾಂತ್ಯಗಳ ಮಧ್ಯೆ ಅಧಿಕಾರ ಹಂಚಿಕೆಯಾಗಬೇಕು.

11. ಸರ್ವೋಚ್ಛ ನ್ಯಾಯಾಲಯ ಸ್ಥಾಪನೆಯಾಗಿ ದೇಶದ ಕೆಳ ನ್ಯಾಯಲಯಗಳಿಂದ ಮನವಿಗಳನ್ನು ಅದು ಸ್ವೀಕರಿಸಬೇಕು.

**1928ರ ಕಲ್ಕತ್ತಾ ಕಾಂಗ್ರೆಸ್ ಅಧಿವೇಶದಲ್ಲಿ ನೆಹರೂ ವರದಿಯನ್ನು ಅಂಗೀಕರಿಸಲಾಯಿತು.**

ಮುಸ್ಲಿಂ ಲೀಗ್‌ನ ಮೌಲಾನಾ ಅಜಾದ, ಅಜ್ಮಲ್ ಖಾನ್ ಮತ್ತು ಡಾ. ಅನ್ಸರಿ ಮುಂತಾದವರು ಈ ವರದಿಯನ್ನುಉ ಒಪ್ಪಿಕೊಂಡರೆ, ಮಹಮದ್ ಷಫೀ ಇದನ್ನು ತಿರಸ್ಕರಿಸಿದರು. ಮಹಮದ್ ಅಲಿ ಜಿನ್ನಾ ಎರಡು ತಿದ್ದುಪಡಿಗಳನನು ಸೂಚಿಸಿದ್ದನ್ನು ಸರ್ವಪಕ್ಷಗಳ ಸಭೆ ತಿರಸ್ಕರಿಸಿತು. ಮುಸ್ಲಿಂ ಲೀಗ್ ಇಬ್ಭಾಗವಾಯಿತು. ಜವಾಹರ್‌ಲಾಲ್ ನೆಹರೂ, ಸುಭಾಷ್‌ಚಂದ್ರಬೋಸ್ ಮುಂತಾದ ಯುವ ವಿಚಾರವಾದಿಗಳು ನೆಹರೂ ವರದಿಯಲ್ಲಿದ್ದ ಅಧಿಪತ್ಯಕ್ಕೊಳಪಟ್ಟ ಜವಾಬ್ದಾರಿ ಸರಕಾರದ ಅಂಶವನ್ನು ವಿರೋಧಿಸಿ 'ಪೂರ್ಣ ಸ್ವರಾಜ್ಯ'ವೇ ಕಾಂಗ್ರೇಸ್ ಗುರಿಯಾಗಬೇಕೆಂದು ಒತ್ತಾಯಿಸಿದರು. 1929ರ ಡಿಸೆಂಬರ್‌ನಲ್ಲಿ ಲಾಹೋರ್‌ನಲ್ಲಿ ನಡೆದ ಅಧಿವೇಶನದಲ್ಲಿ ಕಾಂಗ್ರೆಸ್ 'ಪೂರ್ಣ ಸ್ವರಾಜ್ಯ' ತನ್ನ ಗುರಿಯೆಂದು ಘೋಷಿಸಿ, ಇದರ ಸಾಧನೆಗಾಗಿ ಕಾನೂನು ಭಂಗ ಚಳವಳಿಯನ್ನು ನಡೆಸಲು ತೀರ್ಮಾನಿಸಿತು. ಡಿಸೆಂಬರ್ 31ರ ಮಧ್ಯ ರಾತ್ರಿ ಅಧಿವೇಶನದ ಅಧ್ಯಕ್ಷ ಜವಾಹರಲಾಲ್ ನೆಹರು ರಾವಿ ನದಿ ದಂಡೆಯ ಮೇಲೆ ತ್ರಿವರ್ಣ ರಾಷ್ಟ್ರ ಧ್ವಜವನ್ನು ಹಾರಿಸಿದರು.

**25. ಕಾನೂನು ಭಂಗ ಚಳವಳಿ**

ಜನವರಿ 26ರನ್ನು ಪ್ರತಿವರ್ಷ ಸ್ವಾತಂತ್ರ್ಯ ದಿನವೆಂದು ಅಚರಿಸಲು ನಿರ್ಧರಿಸಲಾಯಿತು. ಕಾಂಗ್ರೆಸ್ ಕಾರ್ಯ ಕರ್ತನು ಸರಕಾರ ನಡೆಸುವ ಮುಂದಿನ ಚುನಾವಣೆಯಲಲಿ ಭಾಗವಹಿಸಬಾರದೆಂದು ನಿರ್ಧರಿಸಲಾಯಿತು. ಕರ ನಿರಾಕರಣ ಚಳವಳಿಯನ್ನು ಹಮ್ಮಿಕೊಳ್ಳಲಾಯಿತು. ಕಾನೂನು ಭಂಗ ಚಳವಳಿಯ ನೇತೃತ್ವವನ್ನು ವಹಿಸಿಕೊಳ್ಳಲು ಗಾಂಧೀಜಿಯವರಿಗೆ ಕಾಂಗ್ರೆಸ್ ಅಧಿಕಾರ ನೀಡಿತು. 1930ರ ಮಾರ್ಚ್ 12ರಂದು ಸಾಬರಮತಿ ಆಶ್ರಮದಿಂದ 78 ಅನುಯಾಯಿಗಳೊಂದಿಗೆ ದಂಡಿಗೆ ಪಾದಯಾತ್ರೆ ಮಾಡಿ. ಅಲ್ಲಿ ಸಾಂಕೇತಿಕವಾಗಿ ಉಪ್ಪು ತಯಾರಿಸಿ, ಉಪ್ಪಿನ ಮೇಲಿನ ಕಾನೂನನ್ನು ಉಲ್ಲಂಘಿಸುವುದರ ಮೂಲಕ ಗಾಂಧೀಜಿ ಕಾನೂನು ಭಂಗ ಚಳವಳಿಗೆ ದೇಶಾದ್ಯಂತ ಚಾಲನೆ ನೀಡಿದರು. ಮೇ 5ರಂದು ಗಾಂಧೀಜಿಯವರ ಬಂಧನವಾಯಿತು.

ಈ ಚಳವಳಿಯುದ್ದಕ್ಕೂ ಸುಮಾರು ಒಂದು ಲಕ್ಷ ಜನರ ಬಂಧನವಾದದ್ದು ಪ್ರತಿಭಟನೆಯ ತೀವ್ರತೆಗೆ ಸಾಕ್ಷಿ.

**26. ಮೊದಲ ದುಂಡು ಮೇಜು ಪರಿಷತ್ತು**

ಇದೇ ವೇಳೆಯಲ್ಲಿ1930ರ ನವೆಂಬರ್ 12ರಂದು ಲಂಡನ್‌ನಲ್ಲಿ ಮೊದಲ ದುಂಡು ಮೇಜಿನ ಪರಿಷತ್ ನಡೆಯಿತು. ಇದನ್ನು ಕಾಂಗ್ರೆಸ್ ಬಹಿಷ್ಕರಿಸಿತು. ಬ್ರಿಟಿಷ್ ಸರಕಾರ ವಿವಿಧ ಪಕ್ಷಗಳ, ಅಪಾಯಕಾರಿಯಲ್ಲದ ಮುಖಂಡರುಗಳನ್ನು ಈ ಸಭೆಗೆ ಅಹ್ವಾನಿಸಿತ್ತು.

ಪ್ರಧಾನಿ ರ್‍ಯಾಮ್‌ಸೆ ಮೆಕ್‌ಡೊನಾಲ್ಡ್ ನೇತೃತ್ವದಲ್ಲಿ ನಡೆದ ಈ ಸಭೆ ಭಾರತವು ಒಕ್ಕೂಟ ರಾಜ್ಯವಾಗಿರಬೇಕು, ಇದು ಭಾರತೀಯ ರಾಜ್ಯಗಳುಹಾಗೂ ಬ್ರಿಟಿಷ್ ಭಾರತದ ಪ್ರಾಂತ್ಯಗಳನ್ನು ಒಳಗೊಂಡಿರಬೇಕು. ಕೇಂದ್ರದಲ್ಲಿ ಸಂಯುಕ್ತ ಮಾದರಿಯ ಸರ್ಕಾರವಿರಬೇಕು ಹಾಗು ಪ್ರಾಂತ್ಯಗಳಿಗೆ ಸ್ವಾಯತ್ತತೆ ನೀಡಬೇಕೆಂದು ತೀರ್ಮಾನಿಸಿತು.

ಈ ಸಭೆಗೆ ಮಿರ್ಜಾ ಇಸ್ಮಾಯಿಲ್, ಡಾ ಅಂಬೇಡ್ಕರ್, ಮಹಮ್ಮದ್ ಅಲಿ ಜಿನ್ನಾ ಮುಂತಾದವರು ಹಾಜರಾಗಿದ್ದರು.

ಮುಸ್ಲಿಮ್ ಪ್ರತಿನಿಧಿಗಳು ಮುಸ್ಲಿಮರಿಗೆ ಪ್ರತ್ಯೇಕ ಪ್ರಾತಿನಿಧ್ಯ ಕೊಡಬೇಕೆಂದು ಒತ್ತಾಯಿಸಿದರೆ, ಅಂಬೇಡ್ಕರ್ ಹರಿಜನರಿಗೆ ಪ್ರತ್ಯೇಕ ಕ್ಷೇತ್ರಗಳು ಮೀಸಲಿಡಬೇಕೆಂದು ವಾದಿಸಿದರು. ಆದರೆ ಇತರ ಪ್ರತಿನಿಧಿಗಳು ಇದನ್ನು ಸಮ್ಮತಿಸಲಿಲ್ಲ. ಹಾಗೆಯೇ ಕಾಂಗ್ರೆಸ್ ಪಾಲ್ಗೊಳ್ಳದ ಈ ಚರ್ಚೆಗೆ ಅರ್ಥವೇ ಇಲ್ಲ ಎಂದು ಈ ಪ್ರತಿನಿಧಿಗಳು ಅಭಿಪ್ರಯಪಟ್ಟರು. ಈ ಭಿನ್ನಾಭಿಪ್ರಾಯದಿಂದಾಗಿ ಸಭೆಯನ್ನು ಅನಿರ್ದಿಷ್ಟ ಕಾಲದವರೆಗೆ ಮುಂದೂಡಲಾಯಿತು.

**27. ಗಾಂಧಿ ಇರ್ವಿನ್ ಒಪ್ಪಂದ**

1931ರ ಜನವರಿ 25ರಂದು ಗಾಂಧಿ ಹಾಗೂ ಇತರ ಧುರೀಣರ ಬಿಡುಗಡೆಯಾಯಿತು. ಸಂವಿಧಾನದ ಬಿಕ್ಕಟ್ಟನ್ನು ಪರಿಹಿರಿಸಬೇಕೆಂದರೆ ಕಾಂಗ್ರೆಸ್ ಜೊತೆ ಉತ್ತಮ್ಮ ಸಂಬಂಧ ಬೆಳೆಸಿಕೊಳ್ಳಬೇಕೆಂಬ ಅರಿವು ಬ್ರಿಟಿಷ್ ಸರ್ಕಾರಕ್ಕುಂಟಾಯಿತು. ಕಾಂಗ್ರೆಸ್ ಮೇಲೆ ಹೇರಿದ್ದ ನಿರ್ಬಂಧಗಳನ್ನೆಲ್ಲ ಸಡಿಲಗೊಳಿಸಲಾಯಿತು. ಈ ಮಧ್ಯೆ ಗಾಂಧಿ ಇರ್ವಿನ್‌ರ ನಡುವಿನ ಇರ್ವಿನ್ ಭೇಟಿಯಾಗಿ ಒಪ್ಪಂದವೊಂದಕ್ಕೆ ಬರಲು ನಿರ್ಧರಿಸಿದರು.

ಈ ಒಪ್ಪಂದ ಅಂಶಗಳನ್ನು ಜಾರಿಗೆ ತರಲು ಬ್ರಿಟಿಷ್ ಸರ್ಕಾರ ಒಪ್ಪಿಕೊಂಡಿತು.

**ಒಪ್ಪಂದದ ಮುಖ್ಯ ಅಂಶಗಳು:**

1. ಭಾರತದ ರಾಜಕೀಯ ಧುರೀಣರ ಮೇಲಿನ ಮೊಕದ್ದಮೆಗಳನ್ನು ಹಾಗೂ ದಮನಕಾರಿ ಕಾಯ್ದೆಗಳನ್ನು ಹಿಂತೆಗೆದುಕೊಳ್ಳುವುದು.
2. ರಾಜಕೀಯ ಖೈದಿಗಳ ಬಿಡುಗಡೆ ಮಾಡುವುದು.
3. ಉಪ್ಪಿನ ತಯಾರಿಕೆಗೆ ಸ್ವಾತಂತ್ರ್ಯ ನೀಡುವುದು.
4.ಮಧ್ಯದಂಗಡಿಗಳ ಮುಂದೆ ಮತ್ತು ವಿದೇಶ ವಸ್ತು ಅಫೀಮುಗಳನ್ನು ಮಾರುವ ಅಂಗಡಿಗಳ ಮುಂದೆ ಪಿಕೆಟಿಂಗ್ ನಡೆಸಲು ಅವಕಾಶ ಕೊಡುವುದು.
5.ಕಾನೂನು ಭಂಗ ಚಳವಳಿಯ ಸಮಯದಲ್ಲಿ ಮುಟ್ಟುಗೋಲು ಹಾಕಿದ್ದ ಆಸ್ತಿ–ಪಾಸ್ತಿಗಳನ್ನು ಹಿಂತಿರುಗಿಸುವುದು.

ಮೇಲಿನವುಗಳಿಗೆ ಪ್ರತಿಯಗಿ ಗಾಂಧಿ ಕಾನೂನು ಭಂಗ ಚಳವಳಿಯನ್ನು ಹಿಂತೆಗೆದುಕೊಂಡು ಎರಡನೇ ದುಂಡು ಮೇಜಿನ ಪರಿಷತ್ತಿನಲ್ಲಿ ಭಾಗವಹಿಸಲು ಒಪ್ಪಿಕೊಂಡರು.

ಇರ್ವಿನ್ ಜೊತೆಗಿನ ಒಪ್ಪಂದ ಸಂದರ್ಭದಲ್ಲಿ ಭಗತ್‌ಸಿಂಗ್ ಹಾಗೂ ಆತನ ಸ್ನೇಹಿತರಿಗೆ ವಿಧಿಸಲಾಗಿದ್ದ ಗಲ್ಲು ಶಿಕ್ಷೆಯನ್ನು ರದ್ದು ಪಡಿಸುವ ಬಗ್ಗೆ ಗಾಂಧೀಜಿ ಒತ್ತಾಯಿಸದಿದ್ದರು ಜವಾಹರ್‌ಲಾಲ್ ನೆಹರು, ಸುಭಾಸ್‌ಚಂದ್ರ ಬೋಸ್ ಮುಂತಾದ ಯುವ ಧುರೀಣರಿಗೆ ಅಸಮಾಧಾನ ತಂದಿತು.

ಭಗತ್‌ಸಿಂಗ್‌ರನ್ನು ಗಲ್ಲಿಗೇರಿಸಿದ ಎರಡು ದಿನಗಳ ನಂತರ ನಡೆದ ಕರಾಚಿ ಕಾಂಗ್ರೆಸ್ ಅಧಿವೇಶನದಲ್ಲಿ ಗಾಂಧೀಜಿಯವರಿಗೆ ಕಪ್ಪು ಬಾವುಟ ತೋರಿಸಿ ಕೆಲವರು ಪ್ರತಿಭಟಿಸಿದರು.

**28. ಎರಡನೇ ದುಂಡು ಮೇಜು ಪರಿಷತ್ತು**

1931ರ ಡಿಸೆಂಬರ್‌ನಲ್ಲಿ ಲಂಡನ್‌ನಲ್ಲಿ ನಡೆದ ಈ ಸಭೆಗೆ ಗಾಂಧೀಜಿ ಕಾಂಗ್ರೆಸ್ ಪ್ರತಿನಿಧಿಸುವ ಸಂಸ್ಥೆ, 'ಪೂರ್ಣ ಸ್ವರಾಜ್ಯ' ಇದರ ಗುರಿ ಎಂದು ಗಾಂಧೀಜಿ ಎಷ್ಟೇ ಹೇಳಿದರೂ, ಅಲ್ಪಸಂಖ್ಯಾತರ (ಮುಸ್ಲಿಂ, ಧೋಷಿತರು, ಕ್ರಿಶ್ಚಿಯನ್‌ರು, ಆಂಗ್ಲೋ ಇಂಡಿಯನ್‌ರು ಇತ್ಯಾದಿ) ಭಿನ್ನಬೇಡಿಕೆಗಳಿಂದ ಈ ಸಭೆಯೂ ವಿಫಲವಾಯಿತು.

ಬ್ರಿಟಿಷ್ ಸರ್ಕಾರ 'ಜವಾಬ್ದಾರಿ ಸರ್ಕಾರ'ದ 'ಪೂರ್ಣ ಸ್ವರಾಜ್ಯ'ಕ್ಕೆ ಒಪ್ಪದೆ, 'ಅರೆ ಸರ್ಕಾರ' ಕೊಡಲು ಒಪ್ಪಿತು. ಗಾಂಧೀಜಿ ಬರಿಗೈಯಿಂದ ಭಾರತಕ್ಕೆ ವಾಪಸ್ಸಾದರು.

**29. 'ಮತೀಯ ಕೊಡುಗೆ' ಮತ್ತು ಪೂನಾ ಒಪ್ಪಂದ**

ಬ್ರಿಟಿಷ್ ಪ್ರಧಾನಿ ರ್‍ಯಾಮ್ಸೆಮೆಕಡೊನಾಲ್ಡ್ ಎರಡನೆ ದುಂಡು ಮೇಜಿನ ಸಭೆಯಲ್ಲಿ ಭಾರತದ ಅಲ್ಪ ಸಂಖ್ಯಾತರು ಇಟ್ಟಿದ್ದ ಬೇಡಿಕೆಗಳನ್ನು ಮನ್ನಿಸಿ ನೀಡಿದ ತೀರ್ಪೇ 'ಮತೀಯ ಕೊಡುಗೆ' (Communal Award) ಎಂದು ಖ್ಯಾತವಾಗಿದೆ.

**ಈ ತೀರ್ಪಿನ ಪ್ರಮುಖ ಅಂಶಗಳು :**

1. ಮುಸ್ಲಿಂ, ಸಿಖ್ ಭಾರತೀಯ ಕ್ರೈಸ್ತರು ಆಂಗ್ಲೋ– ಇಂಡಿಯನ್‌ರು ಮತ್ತು ಸ್ತ್ರೀಯರಿಗೆ ಪ್ರತ್ಯೇಕ ಚುನಾವಣಾ ಕ್ಷೇತ್ರ
2. ಪ್ರಾಂತೀಯ ಶಾಸನ ಸಭೆಗಳಲ್ಲಿ ಮತೀಯ ಆಧಾರದ ಮೇಲೆ ಪ್ರಾತಿನಿಧ್ಯ
3. ಕಾರ್ಮಿಕ ವರ್ಗ, ಕೈಗಾರಿಕೆ, ಜಮೀನ್ದಾರರು ಇತ್ಯಾದಿ ಕ್ಷೇತ್ರಗಳಿಗೆ ಪ್ರತ್ಯೇಕ ಚುನಾವಣಾ ಕ್ಷೇತ್ರ
4. ಹರಿಜನರನ್ನು ಅಲ್ಪಸಂಖ್ಯಾತರೆಂದು ಪರಿಗಣಿಸಿ, ಪ್ರತ್ಯೇಕ ಚುನಾವಣಾ ಕ್ಷೇತ್ರ
5. ಬಹುಸಂಖ್ಯಾತ ಹಿಂದೂ ಪ್ರದೇಶಗಳಲ್ಲಿ ಅಲ್ಪಸಂಖ್ಯಾತ ಮುಸ್ಲಿಮರಿಗೆ ವಿಶೇಷ ಸೌಲಭ್ಯಗಳು
6. ಪ್ರಾಂತೀಯ ಶಾಸನ ಸಭೆಗಳಲ್ಲಿ ಹಿಂದೂಗಳಿಗೆ ಕಡಿಮೆ ಪ್ರಾತಿನಿಧ್ಯ.

ಹೀಗೆ ಈ 'ಮತೀಯ ಕೊಡುಗೆ'ಯ ಅಂಶಗಳು ಮುಸ್ಲಿಂ ಪರವಾಗಿ ಹಿಂದೂಗಳಿಗೆ ಅನ್ಯಾಯ ಮಾಡಿ, ಹರಿಜನರನ್ನು ಹಿಂದೂ ಸಮಾಸದಿಂದ ಬೇರ್ಪಡಿಸಿತು. ಮುಸ್ಲಿಂ ಪ್ರಾಂತ್ಯಗಳಲ್ಲಿ ಅಲ್ಪ ಸಂಖ್ಯಾತರಾಗಿದ್ದ ಹಿಂದೂಗಳಿಗೆ ಯಾವ ಸವಲತ್ತನ್ನೂ ನೀಡಲಿಲ್ಲ ಹಾಗೂ ಶೇ. 0.1 ರಷ್ಟು ಮಾತ್ರವಿದ್ದ ಯುರೋಪಿಯನ್ನರಿಗೆ ಶೇ. 10ರಷ್ಟು ಪ್ರಾತಿನಿಧ್ಯ ನೀಡಲಾಗಿತ್ತು.

ಹಿಂದೂ ಸಮಾಜವನ್ನೂ ಒಡೆಯುವಂತಿದ್ದ ಈ 'ಮತೀಯ ಕೊಡುಗೆ'ಯ ವಿರುದ್ಧ ಗಾಂಧೀಜಿ ಉಪವಾಸದ ಮೂಲಕ ಪ್ರತಿಭಟನೆ ಆರಂಭಿಸಿದರು.

ಅಂಬೇಡ್ಕರ್ ಅವರು ಗಾಂಧೀಜಿಯವರ ಉಪವಾಸವನ್ನು 'ಒಂದು ಪ್ರದರ್ಶನ' ಎಂದು ಟೀಕಿಸಿದರು.

ಗಾಂಧೀಜಿಯವರ ದೇಹ ಸ್ಥಿತಿ ಹದಗೆಟ್ಟಿತು. ಅವರ ಉಪವಾಸದ ಐದನೇ ದಿನ ಒಪ್ಪಂದವೊಂದಕ್ಕೆ ಬರಲು ಬ್ರಿಟಿಷ್ ಸರ್ಕಾರ ನಿರ್ಧರಿಸಿತು.

**1932 ಸೆಪ್ಟೆಂಬರ್ 26ರಂದು ಪೂನಾದಲ್ಲಿ ಈ ಒಪ್ಪಂದ ನಡೆಯಿತು.** ಅಂಬೇಡ್ಕರ್ ಅವರು ಹಿಂದುಳಿದ ವರ್ಗಗಳ ಪರವಾಗಿ ಒಪ್ಪಂದಕ್ಕೆ ಸಹಿ ಹಾಕಿದರು.

**ಈ 'ಪೂನಾ ಒಪ್ಪಂದ'ದ ಮುಖ್ಯ ಅಂಶಗಳು:**

1. ದಲಿತರಿಗೆ ಪ್ರತ್ಯೇಕ ಚುನಾವಣಾ ಕ್ಷೇತ್ರದ ಬದಲು ಹೆಚ್ಚಿನ ಕ್ಷೇತ್ರಗಳು 'ಮತೀಯ ಕೊಡುಗೆ'ಯಲ್ಲಿದ್ದ 71 ಸದಸ್ಯರ ಬದಲು 148ರ ಸದಸ್ಯರ ಆಯ್ಕೆಗೆ ಅವಕಾಶ.
2. ಕೇಂದ್ರ ಶಾಸಕಾಂಗದಲ್ಲಿ ಶೇ. 18ರಷ್ಟು ಸ್ಥಾನ ದಲಿತ ವರ್ಗಕ್ಕೆ ಮಿಸಲು.
3. ಸ್ಥಳೀಯ ಸಂಸ್ಥೆಗಳಲ್ಲಿ ಹಾಗೂ ಸಾರ್ವಜನಿಕ ಸೇವೆಗಳಲ್ಲಿ ದಲಿತರಿಗೆ ಅಗತ್ಯ ಪ್ರಾತಿನಿಧ್ಯ.
4. ದಲಿತರ ವಿದ್ಯಾಭ್ಯಾಸಕ್ಕಾಗಿ ಆರ್ಥಿಕ ನೆರವು

ಮೇಲಿನ ಅಂಶಗಳುರ್‍ಯಾಮ್ಸೆಮೆಕ್ ಡೊನಾಲ್ಡ್ ನೀಡಿದ್ದ 'ಮತೀಯ ಕೊಡುಗೆ'ಗೆ ತಿದ್ದುಪಡಿಗಳಾಗಿ ಸೇರ್ಪಡೆಯಾದವು. ಹಿಂದೂ ಸಮಾಜವನ್ನು ಒಡೆಯುವ ಮೆಕ್‌ಡೊನಾಲ್ಡ್‌ರ ಉದ್ದೇಶ ವಿಫಲವಾಯಿತು.

**30. ಮೂರನೇ ದುಂಡು ಮೇಜು ಪರಿಷತ್ತು**

1932ರ ನವೆಂಬರ್ 17ರಂದು ಲಂಡನ್‌ನಲ್ಲಿ ಆರಂಭವಾದ ಈ ಸಭೆಯನ್ನು ಎರಡನೇ ದುಂಡುಮೇಜು ಪರಿಷತ್ತಿನಲ್ಲಿ ಯಾವುದೇ ಫಲ ಕಾಣದ ಹಿನ್ನೆಲೆಯಲ್ಲಿ ಕರೆಯಾಲಾಗಿತ್ತು. ಭಾರತ ರಾಷ್ಟ್ರೀಯ ಕಾಂಗ್ರೆಸ್ ಹಾಗೂ ಬ್ರಿಟಿಷ್‌ನ ಲೇಬರ್ ಪಕ್ಷದ ಪ್ರತಿನಿಧಿಗಳು ಇದರಲ್ಲಿ ಭಾಗವಹಿಸಲಿಲ್ಲ.

ಬ್ರಿಟಿಷ್ ಅಧಿಕಾರಿವನ್ನು ಒಪ್ಪಕೊಂಡವರಿಗೆ ಮಾತ್ರ ಈ ಸಭೆಗೆ ಆಹ್ವಾನ ನೀಡಲಾಗಿತ್ತು. ಭಾರತದ ಸಂವಿಧಾನತ್ಮಕ ಸುಧಾರಣೆಗಳನ್ನು ಮುಖ್ಯ ಗುರಿಯನ್ನಾಗಿ ಇಟ್ಟುಕೊಂಡಿದ್ದ. ಈ ಸಭೆ ಹಿಂದಿನ ಪ್ರಧಾನಿ ಮೆಕ್‌ಡೊನಾಲ್ ನೀಡಿದ್ದ 'ಮತೀಯ ಕೊಡುಗೆ'ಯ ಬಗ್ಗೆ ಅದಕ್ಕೆ ತರಲಾದ ಕೆಲವು ತಿದ್ದುಪಡಿಗಳ ಬಗ್ಗೆ ಚರ್ಚಿಸಿತು.

ಪ್ರಧಾನಿ ಚರ್ಚಿಲ್ ಭಾರತದ ಸ್ವಾತಂತ್ರಕ್ಕೆ ಸಂಬಂಧಿಸಿದ ಯಾವ ಮಹತ್ತರ ನಿರ್ಣಯವನ್ನು ನೀಡಲಿಲ್ಲ.

**31. 1937ರ ಚುನಾವಣೆ**

1935ರ ಗವರ್ನ್‌ಮೆಂಟ್ ಆಫ್ ಇಂಡಿಯಾ ಆ್ಯಕ್ಟ್‌ನಲ್ಲಿ ಭಾರತದಲ್ಲಿಸಾರ್ವತ್ರಿಕ ಚುನಾವಣೆ ನಡೆಸಿ ಜವಾಬ್ದಾರಿ ಸರ್ಕಾರಕ್ಕೆ ಅವಕಾಶ ಮಾಡಿಕೊಡುವ ಅಂಶವಿತ್ತು. ಆದರೆ ಅದು'ಅಧಿಕಾರ ಇಲ್ಲದ ಜವಾಬ್ದಾರಿ ಸರ್ಕಾರ'ದ ರಚನೆಯಾಗಿತ್ತು. ಹೀಗಾಗಿ ಇದನ್ನು

ಜವಾಹರಲಾಲ್ ನೆಹರೂ, ಸುಭಾಸ್‌ಚಂದ್ರ ಬೋಸ್ ಇತ್ಯಾದಿ ಯುವ ನಾಯಕರು ವಿರೋಧಿಸಿದರು. ಇವರ ಅಭಿಪ್ರಾಯವನ್ನು ಹಳೆಯ ಸ್ವರಾಜ್ಯ ವಾದಿಗಳು ವಿರೋಧಿಸಿದರು. ಶಾಸನ ಸಭೆಗೆ ಪ್ರವೇಶಿಸಿ ಸರ್ಕಾರದ ಆಡಳಿತದಲ್ಲಿ ಭಂಗ ತರುವ ಉದ್ದೇಶವನ್ನು ಈ ಸ್ವರಾಜ್ಯವಾದಿಗಳು ಹೊಂದಿದ್ದರು. ಚುನಾವಣೆಯ ನಂತರ ನೋಡಿದರಾಯಿತೆಂದು ನೆಹರು ಚುನಾವಣೆಗೆ ಸಮ್ಮತಿಸಿದರು. ದೇಶಾದ್ಯಂತ ಪ್ರವಾಸ ಮಾಡಿದ ನೆಹರು 1936ರ ಜೈಪುರ್ ಕಾಂಗ್ರೆಸ್ ಅಧಿವೇಶನದಲ್ಲಿ 'ಸಮಾಜವಾದವೇ ಭಾರತದ ಎಲ್ಲ ಸಮಸ್ಯೆಗಳಿಗೆ ಪರಿಹಾರ' ಎಂದು ಘೋಷಿಸಿದರು. 1935ರ ಕಾಯಿದೆಯನ್ನುವಿರೋಧಿಸುವುದು, ನಾಗರಿಕ ಸ್ವಾತಂತ್ರ್ಯ ರಕ್ಷಿಸುವುದು, ಲಿಂಗ–ಜಾತಿ ಆಧಾರದ ಮೇಲಿನ ಅಸಮಾನತೆಯನನು ವಿರೋಧಿಸುವುದು, ಕೃಷಿಯಲ್ಲಿ ಕ್ರಾಂತಿಕಾರಿ ಬದಲಾವಣೆ ತರುವುದು ಇತ್ಯಾದಿಗಳು ಕಾಂಗ್ರೆಸ್‌ನ ಪ್ರಣಾಳಿಕೆಯ ಮುಖ್ಯಅಂಶಗಳಾಗಿದ್ದವು. 1161 ಸ್ಥಾನಗಳಲ್ಲಿ ಕಾಂಗ್ರೆಸ್ 716 ಸ್ಥಾನಗೆದ್ದು ಜಯಭೇರಿ ಬಾರಿಸಿತು. ಮುಸ್ಲಿಂ ಲೀಗ್ ಮುಸ್ಲಿಂ ಮತಕ್ಷೇತ್ರಗಳಲ್ಲೂ ಹಿನ್ನಡೆ ಅನುಭವಿಸಿ ಹೆಚ್ಚಿನ ಯಶಸ್ಸನ್ನೇನೂಗಳಿಸಲಿಲ್ಲ. ಏಳು ಪ್ರಾಂತ್ಯಗಳಲಲಿ ಅಧಿಕಾರ ವಹಿಸಿಕೊಂಡ ಕಾಂಗ್ರೆಸ್ ತನ್ನ ಅಪಾರ ಜನಬೆಂಬಲವನ್ನು ಬ್ರಿಟಿಷ್ ಸರ್ಕಾರಕ್ಕೆ ಮನದಟ್ಟು ಮಾಡಿತು. 1939ರಲಲಿ ಆರಂಭವಾದ ಎರಡನೇ ಮಹಾಯುದ್ಧದಲ್ಲಿ ಭಾರತ ಭಾಗವಹಿಸಬಾರದು ಎಂಬ ಬೇಡಿಕೆಯಡಿ ಕಾಂಗ್ರೆಸ್ ಪ್ರಾಂತೀಯ ಸರ್ಕಾರಗಳೆಲ್ಲ ರಾಜೀನಾಮೆ ನೀಡಿದವು.

**32. ಸುಭಾಸ್ ಚಂದ್ರ ಬೋಸ್ ಮತ್ತು ಫಾರ್ವರ್ಡ್ ಬ್ಲಾಕ್**

1938ರ ಫಬ್ರವರಿಯಲಲಿ ಗುಜರಾತ್‌ನ ಹರಿಪುರದಲ್ಲಿ ನಡೆದ 51ನೇ ಕಾಂಗ್ರೆಸ್ ಅಧಿವೇಶನದಲ್ಲಿ ಸುಭಾಸ್‌ಚಂದ್ರಬೋಸ್ ಅವಿರೋಧವಾಗಿ ಅಧ್ಯಕ್ಷರಾದರು. ಎರಡನೇ ಜಾಗತಿಕ ಮಹಾ ಯುದ್ಧದಲ್ಲಿ ಬ್ರಿಟಿಷರ ಸಾಮ್ರಾಜ್ಯಶಾಹಿ ಯುದ್ಧಕ್ಕೆ ಕಾಂಗ್ರೆಸ್ ಬೆಂಬಲಿಸುವುದಿಲ್ಲವೆಂದು ಬೋಸ್ ಘೋಷಿಸಿ. ರಾಷ್ಟ್ರೀಯ ಚಳವಳಿಯನ್ನು ಚುರುಕುಗೊಳಿಸಲು ಕರೆ ನೀಡಿದರು. ಆದ ಗಾಂಧೀಜಿಯವರಿಗೆ ಸರಿ ಕಾಣಲಿಲ್ಲ. ಬ್ರಿಟಿಷ್ ಸರ್ಕಾರ ಯುದ್ಧದ ಕಷ್ಟದಲ್ಲಿರುವಾಗ ರಾಷ್ಟ್ರೀಯ ಚಳವಳಿಯನ್ನು ತೀವ್ರಗೊಳಿಸುವುದು ಬೇಡ ಎಂದು ಅವರು ಹೇಳಿದರು. ಇದರಿಂದ ಬಿರುಕುಗಳು ಉಂಟಾದವು. 1939ರಲ್ಲಿ ತ್ರಿಪುರಿಯಲ್ಲಿ ನಡೆದ 52ನೇ ಕಾಂಗ್ರೆಸ್ ಅಧಿವೇಶನದಲ್ಲಿ ಸುಭಾಷ್‌ಚಂದ್ರ ಬೋಸ್ ಹೆಚ್ಚಿನ ಮತಗಳೊಂದಿಗೆ ಅಧ್ಯಕ್ಷ ಸ್ಥಾನಕ್ಕೆ ಆಯ್ಕೆಯಾಗಿ ಗಾಂಧೀಜಿಯವರ ಅಭ್ಯರ್ಥಿ ಪಟ್ಟಾಭಿ ಸೀತಾರಾಮಯ್ಯನವರನ್ನು 1580–1377 ಮತಗಳ ಅಂತರದಿಂದ ಸೋಲಿಸಿದರು.

ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ 15 ಸದಸ್ಯರಲ್ಲಿ 12 ಜನ ಗಾಂಧೀಜಿಯವರ ಪರ ಇದ್ದುದರಿಂದ ರಾಜೀನಾಮೆ ನೀಡಿದರು. ಗಾಂಧೀಜಿಯವರ ಇಚ್ಛೆಯಂತೆಯೇ ಸುಭಾಸ್‌ಚಂದ್ರ ಬೋಸ್ ಹೊಸ ಕಾರ್ಯಕಾರಿ ಸಮಿತಿಯನ್ನು ನೇಮಕ ಮಾಡಬೇಕೆಂದೂ ಮತ್ತು ಗಾಂಧೀಜಿಯವರ ರಾಷ್ಟ್ರೀಯ ಚಳವಳಿ ನಾಯಕತ್ವದಲ್ಲಿ ನಂಬಿಕೆ ಇಡಬೇಕೆಂದು ಗೋವಿಂದ್‌ವಲ್ಲಭ್‌ಪಂತ್ ಠರಾವೊಂದನ್ನು ತ್ರಿಪುರಿ ಅಧಿವೇಶನದಲ್ಲಿ ಹೊರಡಿಸಿದರು. ಪಂಥರ ಈ ಠರಾವು 218–133 ಮತಗಳ ಅಂತರದಿಂದ ಜಯಿಸಿತು. ಇದು ತಮ್ಮ ಅಧ್ಯಕ್ಷ ಸ್ಥಾನಕ್ಕೇ ಅಪಮಾನ ಎಂದು ಬಗೆದ ಸುಭಾಸ್ ಚಂದ್ರಬೋಸ್ '1939ರ ಏಪ್ರಿಲ್‌ನಲ್ಲಿ ಕಾಂಗ್ರೆಸ್ ಅಧ್ಯಕ್ಷಗಿರಿಗೆ ರಾಜೀನಾಮೆ' ನೀಡಿ 'ಫಾರ್ವರ್ಡ್ ಬ್ಲಾಕ್' ಪಕ್ಷ ಸ್ಥಾಪಿಸಿದರು. ಈ ಪಕ್ಷ ಕಾಂಗ್ರೆಸ್‌ನೊಳಗೇ 'ಕ್ರಾಂತಿಕಾರಿ' ಪಕ್ಷ ಎಂದು ಗುರುತಿಸಿಕೊಂಡರೂ, ನಂತರ ಗಾಂಧೀಜಿಯವರೊಂದಿಗೆ ಹೆಚ್ಚಿದ ಭಿನ್ನಾಭಿಪ್ರಾಯಗಳಿಂದ ಪ್ರತ್ಯೇಕ ಪಕ್ಷವಾಗಿ ಹೊರಬಂದಿತು. 1939ರ ಜೂನ್‌ನಲ್ಲಿ ಈ ಪಕ್ಷದ ಮೊದಲ ಅಧಿವೇಶನ ಬೊಂಬಾಯಿಯಲ್ಲಿ ನಡೆಯಿತು. ಬ್ರಿಟಿಷ್ ಸರ್ಕಾರಕ್ಕೆ ಪರ್ಯಾಯವಾದ ರಾಷ್ಟ್ರೀಯ ಸರ್ಕಾರವನ್ನು ರಚಿಸಲು ನಿರ್ಧರಿಸಲಾಯಿತು.

**33. ಜಿನ್ನಾ ಮತ್ತು 'ಪಾಕಿಸ್ತಾನ'**

1939ರಲ್ಲಿ ಕಾಂಗ್ರೆಸ್ ಪ್ರಾಂತೀಯ ಮಂತ್ರಿ ಮಂಡಲಗಳಿಗೆ ರಾಜೀನಾಮೆ ನೀಡಿದಾಗ, ಡಿಸೆಂಬರ್ 22, 1939ನ್ನೂ ಕಾಂಗ್ರೆಸ್ ಆಡಳಿತದಿಂದ ಮುಲ್ತಗೊಂಡ ದಿವವೆಂದು ಆಚರಿಸಲು ಮುಸ್ಲಿಂರಿಗೆ ಕರೆ ನೀಡಿದ್ದರು. ಬ್ರಿಟಿಷ್ ಸರ್ಕಾರ ಈ ಅವಕಾಶವನ್ನು ಮುಸ್ಲಿಂ ಲೀಗ್ ಜೊತೆ ಸೇರಿ ಕಾಂಗ್ರೆಸ್‌ನ ರಾಷ್ಟ್ರೀಯ ಚಳವಳಿಯನ್ನು ದಮನ ಮಾಡಲು ಬಳಸಿತು. ಮುಸ್ಲಿಂ ಲೀಗ್ 1940ರ ಅಧಿವೇಶನದಲ್ಲಿ 'ಪಾಕಿಸ್ತಾನ' ನಿರ್ಣಯವನ್ನು ಅಂಗೀಕರಿಸಿತು. ಜಿನ್ನಾ 'ಭಾರತ ಒಂದೇ ದೇಶವಲ್ಲ. ಮುಸ್ಲಿಂರೂ ಒಂದು ದೇಶ' ಎಂದು ಹೇಳಿ 'ದ್ವಿರಾಷ್ಟ್ರ' ಸಿದ್ಧಾಂತವನ್ನು ಪ್ರತಿಪಾದಿಸಿದರು. 'ಮುಸ್ಲಿಂರು ಬಹುಸಂಖ್ಯಾತರಾಗಿರುವ ವಾಯುವ್ಯ ಮತ್ತು ಪೂರ್ವ ವಲಯಗಳನ್ನು ಸ್ವತಂತ್ರ ಹಾಗೂ ಸಾರ್ವಭೌಮ ರಾಜ್ಯಗಳನ್ನಾಗಿ ರಚಿಸಬೇಕು' ಎಂಬ ಮುಸ್ಲಿಂ ಲೀಗ್‌ನ ನಿರ್ಣಯವೇ 'ಪಾಕಿಸ್ತಾನ ನಿರ್ಣಯ'ವಾಗಿ ಪ್ರಚಾರ ಪಡಿಯಿತು. ಆ ನಿರ್ಣಯನ್ನು ಅಹಿಂಸೆಯ ಮೂಲಕ ತಡೆಯುತ್ತೇನೆ. ಬ್ರಿಟಿಷರು ಒಂದೊಮ್ಮೆ ಭಾರತ ಬಿಟ್ಟು ಹೋದ ನಂತರ ಹಿಂದೂ– ಮುಸ್ಲಿಂ ಐಕ್ಯತೆ ಸಾಧಿಸುತ್ತೇನೆ ಎಂದು ಗಾಂಧೀಜಿ ಹೇಳಿದರು.

**34. 1940ರ ಆಗಸ್ಟ್ ಕಾಣಿಕೆ**

1939ರ ಎರಡನೇ ಮಹಾಯುದ್ಧದಲ್ಲಿ ಜರ್ಮನಿ ಇಂಗ್ಲೆಂಡ್ ಮೇಲೆ ಎರಗಿತು. ಬ್ರಿಟಿಷ್ ಸಾಮ್ರಾಜ್ಯ ಶಾಹಿಗೆ ತಮ್ಮ ಒಪ್ಪಿಗೆ ಇಲ್ಲದೆ ಭಾರತವನ್ನು ಯುದ್ಧದಲ್ಲಿ ತೊಡಗಿಸಬಾರದೆಂದು ಕಾಂಗ್ರೆಸ್ ವಿರೋಧಿಸಿತು. 'ಪೂರ್ಣ ಸ್ವರಾಜ್ಯ'ದ ತನ್ನ ಬೇಡಿಕೆಯನ್ನು ಈಡೇರಿಸಿದರೆ ಮಾತ್ರ ತಾನು ಯುದ್ಧದಲ್ಲಿ ಸಹಕಾರ ನೀಡುವುದಾಗಿ ಕಾಂಗ್ರೆಸ್ ಹೇಳಿತು. ಕಾಂಗ್ರೆಸ್ ರಾಷ್ಟ್ರೀಯ ಚಳವಳಿ ಆ ಕ್ಲಿಷ್ಟ ಸನ್ನಿವೇಶದಲ್ಲಿ ತನಗೆ ಮಾರಕ ಎಂದು ಬ್ರಿಟಿಷ್ ಸರ್ಕಾರ ಅರಿಯಿತು. ಹಾಗಾಗಿ ಕಾಂಗ್ರೆಸ್ ಬೇಡಿಕೆಗೆ ಒಪ್ಪಿ ಯುದ್ಧದ ನಮತರ ಭಾರತಕ್ಕೆ ಡೊಮಿನಿಯನ್ ಸ್ಥಾನಮಾನ ಕೊಡುವುದಾಗಿ ವೈಸ್‌ರಾಯ್ ಲಿನ್‌ಲಿತ್‌ಗೊ ಮೂಲಕ ಬ್ರಿಟಿಷ್ ಸರ್ಕಾರ 1840ರ ಆಗಸ್ಟ್ 8ರಂದು ಪ್ರಸ್ತಾಪವನ್ನು ಹೊರಡಿಸಿತು.

**ಈ ಪ್ರಸ್ತಾವನೇ "ಆಗಸ್ಟ್ ಕಾಣಿಕೆ "**

**ಆಗಸ್ಟ್ ಕಾಣಿಕೆಯ ಮುಖ್ಯ ಅಂಶಗಳು:**

1.ಯುದ್ಧ ಮುಗಿದ ನಂತರ ಭಾರತಕ್ಕೆ ಹೊಸ ಸಂವಿಧಾನ

2.ಗವರ್ನರ್ ಜನರಲ್‌ನ ಕಾರ್ಯಕಾರಿ ಸಮಿತಿಯನ್ನು ವಿಸ್ತರಿಸಿ ಅದಕ್ಕೆ ಭಾರತೀಯರಿಗೆ ಹೆಚ್ಚಿನ ಪ್ರಾತಿನಿಧ್ಯ.

3.ಡಾಮಿನಿಯನ್ ಮಾದರಿ ಮೇಲೆ ಜವಾಬ್ದಾರಿ ಸರ್ಕಾರ

4.ಬ್ರಿಟಿಷ್ ಭಾರತ ಹಾಗೂ ರಾಜ್ಯಗಳ ಪ್ರತಿನಿಧಿಗಳ 'ಯುದ್ಧ ಸಲಹಾ ಸಮಿತಿ'ಯ ನೇಮಕ

**35. 1940 ಅಕ್ಟೋಬರ್**

**ವೈಯಕ್ತಿಕ ಕಾನೂನು ಭಂಗ ಚಳವಳಿ**

'ಆಗಸ್ಟ್ ಕಾಣಿಕೆ'ಯ ಪ್ರಸ್ತಾಪವು ಭಾರತೀಯ ಅಶೋತ್ತರಗಳನ್ನು ಪೂರ್ತಿಯಾಗಿ ಈಡೇರಿಸುವುದಿಲ್ಲ ಎಂದು ಕಾಂಗ್ರೆಸ್ ವಿರೋಧಿಸಿತು. ಆದರೂ ಗಾಂಧೀಜಿ ಬ್ರಿಟಿಷರು ಜರ್ಮನಿ ವಿರುದ್ಧ ಯುದ್ಧದಲ್ಲಿ ತೊಡಗಿರುವಾಗ ಸಾಮೂಹಿಕ ಅಸಹಕಾರ ಚಳವಳಿ ಹೂಡುವುದು 'ಮಾನವೀಯತೆ' ಅಲ್ಲ ಎಂದು ತಿಳಿದು **'ವೈಯಕ್ತಿಕ ಕಾನೂನು ಭಂಗ ಚಳವಳಿಗೆ** ಮುಂದಾದರು. **ಈ ವೈಯಕ್ತಿಕ ಕಾನೂನು ಭಂಗ ಚಳವಳಿಯ ಮೊದಲ ಸತ್ಯಾಗ್ರಾಹಿಯನ್ನಾಗಿ ವಿನೋಬಾ ಭಾವನೆಯವರನ್ನು ಗಾಂಧೀಜಿ ಆಯ್ಕೆ ಮಾಡಿದರು . ಎರಡನೇ ಸತ್ಯಾಗ್ರಹಿಯಾಗಿ ಜವಾಹರಲಾಲ್ ನೆಹರೂ ಆಯ್ಕೆಯಾದರು.** 1941ರ ನವೆಂಬರ್‌ನಲಲಿ ಜರ್ಮನಿ ಕೂಟದ ಜಪಾನ್ ದೇಶ ಅಸ್ಸಾಂ, ಬಂಗಾಳದವರೆಗೂ ದಂಡೆತ್ತಿ ಬಂದಿದ್ದರಿಂದ ಗಾಂಧೀಜಿ ಆ ವೈಯಕ್ತಿಕ ಕಾನೂನು ಭಂಗ ಚಳವಳಿಯನ್ನು ಕೈ ಬಿಟ್ಟರು.

**36. 1942ರ ಮಾರ್ಚ್ 22– ಕ್ರಿಪ್ಸ್ ಆಯೋಗ**

ಅಗ್ನೇಯ ಏಷ್ಯದಲ್ಲಿ ಜಪಾನ್‌ನಿಂದ ತಾನು ಹಿನ್ನಡೆ ಅನುಭವಿಸಿದಾಗ, ಕಾಂಗ್ರೆಸ್ ರಾಷ್ಟ್ರೀಯ ಚಳವಳಿಯನ್ನು ತೀವ್ರಗೊಳಿಸಿ ತನ್ನ ಸ್ಥಿತಿಯನ್ನು ಮತ್ತಷ್ಟು ಪೇಚಿಗೆ ಸಿಲುಕಿಸಬಾರದೆಂಬ ಉದ್ದೇಶದಿಂದ ಬ್ರಿಟಿಷ್ ಸರ್ಕಾರ ಕಾಂಗ್ರೆಸ್ ಮನವೊಲಿಸಲು ಹಲವಾರು ಸಂವಿಧಾನಕ್ಕೆ ಶಿಫಾರಸ್ಸುಗಳೊಂದಿಗೆ ಕ್ರಿಪ್ಸ್ ಆಯೋಗವನ್ನು ಭಾರತಕ್ಕೆ ಕಳುಹಿಸಿತು.

**37. ಕ್ರಿಪ್ಸ್ ಆಯೋಗದ ಮುಖ್ಯ ಶಿಫಾರಸ್ಸುಗಳು :**

1.ಯುದ್ಧನಿಂತ ಮೇಲೆ ಬ್ರಿಟಿಷ್ ಕಾಮನ್‌ವೆಲ್ತ್‌ನಲ್ಲಿ ಡಾಮಿನಿಯನ್ ಸ್ಥಾನಮಾನದೊಂದಿಗೆ ಭಾರತ ಒಕ್ಕೂಟ ರಚನೆ,

2. ಯುದ್ಧನಿಂದ ಕೂಡಲೇ ಭಾರತೀಯರಿಗೆ ಸಂವಿಧಾನ ರಚಿಸುವ ಹೊಣೆ.

3. ಹಾಗೆ ರಚನೆಯಾದ ಸಂವಿಧಾನಕ್ಕೆ ಒಪ್ಪದಿರುವ ಪ್ರಾಂತ್ಯಗಳಿಗೆ ಪ್ರತ್ಯೇಕ ಒಕ್ಕೊಟದ ಸ್ಥಾನಮಾನ

4. ಅಲ್ಪಸಂಖ್ಯಾತರಿಗೆ ರಕ್ಷಣೆ

5. ಭಾರತದ ರಕ್ಷಣೆಯ ಜವಾಬ್ದಾರಿ ಬ್ರಿಟಿಷ್ ಸರ್ಕಾರದ್ದು ಹಾಗು ಗವರ್ನರ್ ಜನರಲ್‌ನ ಅಧಿಕಾರಗಳ ಮುಂದುವರಿಕೆ.

**38. 1942, 'ಭಾರತ ಬಿಟ್ಟು ತೊಲಗಿ – ಆಗಸ್ಟ್ ಘೋಷಣೆ**

'ಸಂಪೂರ್ಣ ಸ್ವರಾಜ್ಯ'ದ ಬದಲು ಕೇವಲ 'ಡಾಮಿನಿಯನ್ ಸ್ಥಾನಮಾನ'ದ ಮಾತನ್ನೇ ಕ್ರಿಪ್ಸ್ ಆಯೋಗವೂ ಮುಂದುವರೆಸಿತ್ತು. ಹಾಗೆಯೇ ಆ ಶಿಫಾರಸ್ಸುಗಳು ದೇಶದ ವಿಭಜನೆಗೆ ಅವಕಾಶ ಮಾಡುವಂತಿದ್ದವು. 1942ರಜುಲೈ 14ರಂದು ಕಾಂಗ್ರೆಸ್ ಕಾರ್ಯಕಾರಿಣಿ ಸಮಿತಿ ವಾರ್ಧಾದಲ್ಲಿ ಗಾಂಧೀಜಿ ನೇತೃತ್ವದಲ್ಲಿ ಸಭೆ ಸೇರಿ ಕ್ರಿಪ್ಸ್ ಆಯೋಗದ ಶಿಫಾರಸ್ಸುಗಳನ್ನು ತಿರಸ್ಕರಿಸಿತು. 1942ರ ಆಗಸ್ಟ್ 8ರಂದು ಬೊಂಬಾಯಿಯಲ್ಲಿ ಗೋವಳಿ ಮೈದಾನದಲ್ಲಿ ನಡೆದ ಅಧಿವೇಶನದಲ್ಲಿ ಕಾಂಗ್ರೆಸ್ ಜವಾಹರಲಾಲ್ ನೇತೃತ್ವದಲ್ಲಿ ಬ್ರಿಟಿಷರಿಗೆ 'ಭಾರತ ಬಿಟ್ಟು ತೊಲಗಿ' ಎಂದು ಘೋಷಿಸಿ, ಭಾರತೀಯರಿಗೆ ಚಳವಳಿಗೆ ಕರೆ ನೀಡಿದರು. ಇದೇ 'ಆಗಸ್ಟ್ ಘೋಷಣೆ.

ಈ ಸಂದರ್ಭದಲ್ಲಿ ಗಾಂಧೀಜಿ **'ಮಾಡು ಇಲ್ಲವೇ ಮಡಿ'** ಮಂತ್ರವನ್ನು ಭಾರತೀಯರಿಗೆ ಬೋಧಿಸಿದರು. ಗಾಂಧೀಜಿ ಸೇರಿದಂತೆ ಪ್ರಮುಖ ಧುರೀಣರೆಲ್ಲ ಬಂಧಿತರಾದರು. ದೇಶಾದ್ಯಂತ ಚಳವಳಿಯ ಕಾವು ತೀವ್ರವಾಯಿತು. ಇನ್ನೊಂದೆಡೆ ಮುಸ್ಲಿಂಲೀಗ್ ಬ್ರಿಟಿಷರಿಗೆ 'ದೇಶವನ್ನು ವಿಭಜಿಸಿ ನಂತರ ತೊಲಗಿ' ಎಂದು ಹೇಳಿ ತನ್ನ ಸಂಕುಚಿತತೆಯನ್ನು ಪ್ರದರ್ಶಿಸಿತು.

**39. ಸುಭಾಸ್‌ಚಂದ್ರ ಬೋಸ್ ಮತ್ತು INA**

ಎರಡನೇ ಮಹಾಯುದ್ಧದ ಸನ್ನಿವೇಶ ಬ್ರಿಟಿಷರ್ನನು ಭಾರತದಿಂದ ಹೊರದೂಡಲು ತಕ್ಕ ಸಮಯ ಎಂದು ಭಾವಿಸಿದ್ದ ಸುಭಾಷ್ ಚಂದ್ರಬೋಸ್ ಸಲಹೆಗಾಗಿ ಸಾವರ್ಕರ್‌ರನ್ನು 1940ರ ಜೂನ್ 22ರಂದು ಭೇಟಿಯಾದರು. ಭಾರತದಿಂದ ಹೊರ ಹೋಗಿ ಯುರೋಪ್, ಏಷ್ಯ ಮತ್ತಿತರ ಕಡೆ ಇರುವ ಬ್ರಿಟಿಷ್ ವಿರೋಧಿಗಳನ್ನು ಸಂಘಟಿಸಿ, ಬ್ರಿಟಿಷ್ ಭಾರತದ ಮೇಲೆ ದಾಳಿ ಮಾಡಬೇಕೆಂದು ಸಾವರ್ಕಲ್ ಹೇಳಿದ್ದರು. 1941ರ ಜನವರಿ 26ರಂದು ಗೃಹಬಂಧನದಿಂದ ಪಾರಾಗಿ, ಪೊಲೀಸರ ಬಿಗಿ ಕಾವಲನ್ನು ತಪ್ಪಿಸಿಕೊಂಡು ಸುಭಾಷ್‌ಚಂದ್ರ ಬೋಸ್ ಬರ್ಲಿನ್ ತಲುಪಿದರು. ಬರ್ಲಿನ್ ರೇಡಿಯೊದಿಂದ ಅವರು ಬ್ರಿಟಿಷ್ ವಿರುದ್ಧ ಭಾರತೀಯರು ಸಶಸ್ತ್ರ ಹೋರಾಟಕ್ಕೆ ಸಜ್ಜಾಗಬೇಕೆಂದು 'ದಿಲ್ಲಿ ಚಲೋ' ಎಂಬ ಕರೆ ನೀಡಲು ಆರಂಭಿಸಿದರು. ಅವರ ಕರೆಗೆ ಓಗೊಟ್ಟು ಜಪಾನ್‌ನಲ್ಲಿದ್ದ ಕ್ರಾಂತಿಕಾರಿ ರಾಸ್ ಬಿಹಾರಿ ಬೋಸ್ ಬ್ಯಾಂಕಾಕ್‌ನಲ್ಲಿ ಸಮಾವೇಶವೊಂದನ್ನು ನಡೆಸಿ ಭಾರತ ರಾಷ್ಟ್ರೀಯ ಸೈನ್ಯ (INA) ವನ್ನು ಸ್ಥಾಪಿಸಿ ಬ್ರಿಟಿಷರ ವಿರುದ್ಧ ಹೋರಾಡುವ ಗುರಿ ಇಟ್ಟುಕೊಳ್ಳಲಾಯಿತು.

ಮಲಯದಲ್ಲಿ ಭಾರತದ ಬ್ರಿಟಿಷ್ ಸೈನ್ಯಾಧಿಕಾರಿಯಾಗಿದ್ದ ಮೋಹನ್‌ಸಿಂಗ್ ಜಪಾನ್ ಕಡೆ ವಾಲಿ, INA ಯ ಮೊದಲ ತುಕುಡಿಯನ್ನು ಸ್ಥಾಪಿಸಿದ. ಬ್ರಿಟಿಷ್ ವಶದಲ್ಲಿದ್ದ ಸಿಂಗಾಪೂರ್ ಜಪಾನ್ ಕೈಗೆ ಬಂದಾಗ, ಸುಮಾರು 45 ಸಾವಿರ ಭಾರತೀಯ ಸೈನಿಕರು INA ಸೇರಿದರು. ಅದೇ ವೇಳೆಗೆ ಭಾರತದಲ್ಲಿ ಬ್ರಿಟಿಷ್ ವಿರುದ್ಧ 'ಭಾರತ ಬಿಟ್ಟು ತೊಲಗಿ' ಚಳವಳಿ ಆರಂಭವಾಗಿತ್ತು. 1943ರ ಜೂನ್‌ನಲ್ಲಿ ನೇತಾಜಿ ಟೋಕಿಯೋಕ್ಕೆ ಬೇಟಿ ಕೊಟ್ಟು ನಂತರ ಸಿಂಗ್‌ಪೂರ್‌ಗೆ ಹೋಗಿ ಅಲ್ಲಿ ರಾಸ್ ಬಿಹಾರಿ ಬೋಸ್ ಸ್ಥಾಪಿಸದ್ದ 'ಇಂಡಿಯನ್ **ಇಂಡಿಪೆಂಡೆನ್ಸ್ ಲೀಗ್‌ನ** ಅಧ್ಯಕ್ಷತೆ ವಹಿಸಿಕೊಂಡರು. 1943ರ ಅಕ್ಟೋಬರ್ 21ರಂದು ನೇತಾಜಿ 'ಸ್ವತಂತ್ರ ಭಾರತದ ಹಂಗಾಮಿ ಸರ್ಕಾರ'ವನ್ನು ರಚಿಸಿ **'ಅಜಾದ್ ಹಿಂದ್'** ಎಂದು ಕರೆದುಕೊಂಡರು. ಜಪಾನಿನ ಪ್ರಧಾನಿ ಟೋಜೊ 'ನೇತಾಜಿ' ನೇತೃತ್ವದ ಹಂಗಾಮಿ ಸರ್ಕಾರಕ್ಕೆ ಅಂಡಮಾನ್ ಹಾಗೂ ನಿಕೋಬಾರ್ ದ್ವೀಪಗಳ ಆಡಳಿತವನನು ವಹಿಸಿಕೊಟ್ಟರು.

ನೇತಾಜಿ ಸಿಂಗ್‌ಪೂರ್ ಹಾಗೂ ರಂಗೂನ್‌ಗಳಲ್ಲಿ INA ಯ ಎರಡು ಕೇಂದ್ರಗಳನ್ನು ಸ್ಥಾಪಿಸಿದರಲ್ಲವೆ ಝೂನ್ಸಿರಾಣಿ ರೆಜಿಮೆಂಟ್ ಎಂಬ ಸ್ತ್ರೀ ತುಕಡಿಯನ್ನೂ ರಚಿಸಿದರು. ಅಂಡಮಾನ್‌ಗೆ 'ಶಹೀದ್ ' ಎಂದೂ ನಿಕೋಬಾರ್‌ಗೆ 'ಸ್ವರಾಜ್ ' ಎಂದೂ ಕರೆದು ಅಲ್ಲಿ ಸುಭಾಷ್ ಚಂದ್ರ ಬೋಸ್ ಭಾರತದ ರಾಷ್ಟ್ರೀಯ ಧ್ವಜವನ್ನು ಹಾರಿಸಿದರು. ಸುಭಾಷ್ ಚಂದ್ರರ 'ಅಜಾದ್ ಹಿಂದ್ ' ಸರ್ಕಾರದ ಆದೇಶದಂತೆ INA 1944ರಫೆಬ್ರವರಿಯಲ್ಲಿ ಬ್ರಿಟಿಷ್ ಭಾರತದ ಮೇಲೆ ಆಕ್ರಮಣ ಮಾಡಿ ಕೊಹಿಮಾವನ್ನು ವಶಪಡಿಸಿಕೊಂಡಿತು.

ಈ ಮಧ್ಯೆ ಜಪಾನಿಯರು INA ಸೈನಿಕರಿಗೆ ಕಿರುಕುಳ ನೀಡಲು ಆರಂಭಿಸಿದ್ದರು. ತಾವು ಹೇಲಿದಂತೆ ಕೇಳಬೇಕೆಂದು ಜಪನ್ ಸೈನಿಕರು ಪ್ರತಿಷ್ಠೆ ಮರೆಯಲು ತೊಡಗಿದ್ದರು. ಜಪಾನ್ ಕ್ರಮೇಣವಾಗಿ ಬ್ರಿಟಿಷ್ ಸೈನಿಕರಿಂದ ಸೋಲತೊಡಗಿತ್ತು. 1945ರ ಮೇನಲ್ಲಿ ರಂಗೂನ್ ಬ್ರಿಟಿಷರ ವಶವಾಯಿತು. INAಸೈನಿಕರು ನಷ್ಟ ಅನುಭವಿಸಿ, ತಮ್ಮ ದೇಶ ಭಾರತಕ್ಕೆ ಸ್ವಾತಂತ್ರ್ಯ ತರಬೇಕೆಂಬ ಮಹತ್ವಾಕಾಂಕ್ಷೆಯಲ್ಲಿ ನಂಬಿಕೆ ಕಳೆದುಕೊಳ್ಳಲಾರಂಭಿಸಿದರು. ಜಪಾನ್ ಬ್ರಿಟಿಷರಿಗೆ ಶರಣಾಯಿತು. 1945ರ ಆಗಸ್ಟ್‌ನಲಿ ನಡೆದ ವಿಮಾನ ಅಪಘಾತದಲ್ಲಿ ನೇತಾಜಿಸಾವಿಗೀಡಾದರೆಂಬ ದಾರುಣ ಸುದ್ದಿಯೂ ಬಂದಿತು.

ಬ್ರಿಟಿಷರು 20 ಸಾವಿರ INA ಸೈನಿಕರನ್ನು ಬಂಧಿಸಿದರು. 7 ಸಾವಿರ ಸೈನಿಕರನ್ನು ವಿಚಾರಣೆಗೆ ಒಳಪಡಿಸದೆ ಬಂಧನದಲ್ಲಿಟ್ಟರು.

1945ರ ನವೆಂಬರ್‌ನಲ್ಲಿ ದೆಹಲಿ ಕೆಂಪು ಕೋಟೆಯಲ್ಲಿ ಮೊದಲ INA ಸೈನಿಕರ ವಿಚಾರಣೆ ನಡೆಯಿತು. ಪಿ.ಕೆ ಸೆಹಗಲ್ (ಹಿಂದೂ), ಷಾನವಾಜ್ (ಮುಸ್ಲಿಂ), ಗುರುಭಕ್ಷ ಸಿಂಗ್ ಧಿಲನ್ (ಸಿಖ್ ) ಕೈದಿಗಳ ಪರ ವಾದಿಸಲು ಕ್ರಮವಾಗಿ ನೆಹರೂ, ಭುಲಭಾಯಿ ದೇಸಾಯಿ ಹಾಗೂ ತೇಜ್ ಸಾಪ್ರು ನೇಮಕವಾದರು.

**40. 1944– ರಾಜಾಜಿ ಸೂತ್ರಗಳು**

1943ರ ಮಾರ್ಚ್ 23ನ್ನು ಮುಸ್ಲಿಂ ಲೀಗ್ 'ಪಾಕ್ತಿಸ್ತಾನ ದಿನ' ಎಂದು ಘೋಷಿಸಿತು.

1944 ಮೇ 6ರಂದು ಬಿಡುಗಡೆಯಾಗಿ ಬಂದ ಗಾಂಧೀಜಿ ಕೋಮು ಸೌಹಾರ್ದಕ್ಕಾಗಿ ಸತ್ಯಾಗ್ರಹ ಆರಂಭಿಸಿದರು.

ಭಾರತ ರಾಷ್ಟ್ರೀಯ ಕಾಂಗ್ರೆಸ್ ಹಾಗೂ ಮುಸ್ಲಿಂ ಲೀಗ್ ಮಧ್ಯೆ ಬ್ರಿಟಿಷ್ ಸರ್ಕಾರ ಶಾಶ್ವತ ಒಡಕನ್ನು ಮೂಡಿಸುವಲ್ಲಿ ಯಶಸ್ವಿಯಾಗಿತ್ತು.

**ಕಾಂಗ್ರೆಸ್ ಮತ್ತು ಮುಸ್ಲಿಂ ಲೀಗ್ ಮಧ್ಯೆ ಸಹಮತ ತರಲು ಸಿ. ರಾಜ ಗೋಪಾಲಾಚಾರಿ ಕೆಳಗಿನ ಸೂತ್ರಗಳನ್ನು ಪ್ರಸ್ತಾಪಿಸಿದರು:**

1.ಮುಸ್ಲಿಂ ಲೀಗ್ ಭಾರತದ ಸ್ವಾತಂತ್ರ್ಯಕ್ಕೆ ಒಪ್ಪಿಕೊಳ್ಳಬೇಕು.

2. ಮುಸ್ಲಿಂ ಲೀಗ್ ಭಾರತದ ರಾಷ್ಟ್ರೀಯ ಕಾಂಗ್ರೆಸ್‌ನೊಂದಿಗೆ ಸಹಕರಿಸಿ ಮಧ್ಯಂತರ ಸರಕಾರ ರಚಿಸಬೇಕು.

3.ಮುಸ್ಲಿಂರು ಹೆಚ್ಚು ಇರುವ ಕಡೆಗಳಲ್ಲಿ ಜನಾಭಿಪ್ರಾಯವನ್ನು ಮತದಾನದ ಮೂಲಕ ಸಂಗ್ರಹಿಸಿ ನಂತರ ವಿಭಜನೆಯ ನಿರ್ಧಾರ.

ಜಿನ್ನಾ ಈ ಸೂತ್ರಗಳನ್ನು ಒಪ್ಪಲಿಲ್ಲ.

**41. 1945 ದೇಸಾಯಿ–ಲಿಯಾಕತ್ ಒಪ್ಪಂದ**

ಕಾಂಗ್ರೆಸ್ ಧುರೀಣರು ಭಾರತದ ವರ್ಗೀಕರನ (ವಿಭಜನೆ) ಬ್ರಿಟಿಷರು ಭಾರತ ಬಿಟ್ಟ ನಂತರ ಮಾತುಕತೆ ಮೂಲಕ ಆಗಬೇಕೆಂದರೆ, ಜಿನ್ನಾ ಬ್ರಿಟಿಷರು ಬಿಡುವ ಮೊದಲೇ ವಿಭಜನೆ ಆಗಬೇಕೆಂದರು. ಈ ಬಿಕ್ಕಟ್ಟನ್ನು ಪರಿಹರಿಸಲು ಕಾಂಗ್ರೆಸ್‌ನ ಭುಲಬಾಯ್‌ದೇಸಾಯಿ ಹಾಗು ಮುಸ್ಲಿಂ ಲೀಗ್‌ನ ಲಿಯಾಕತ್ ಖಾನ್ ಒಪ್ಪಂದವೊಂದಕ್ಕೆ ಬಂದರು. ಇದರ ಪ್ರಕಾರ :

1. ಕಾಂಗ್ರೆಸ್ ಹಾಗೂ ಮುಸ್ಲಿಂ ಲೀಗ್‌ನಿಂದ ಕೇಂದ್ರ ಶಾಸನ ಸಭೆಗೆ ಸಮಾನ ಸದಸ್ಯರನ್ನು ನೇಮಕ ಮಾಡುವುದು ಹಾಗೂ
2. ಶೇಕಡೆ 20ರಷ್ಟು ಸ್ಥಾನಗಳನನು ಅಲ್ಪಸಂಖ್ಯಾತರಿಗೆ ಮೀಸಲಿಡುವುದು ಎಂದಾಯಿತು. ಜಿನ್ನಾ ಇದನ್ನು ಒಪ್ಪಲಿಲ್ಲ.

**42. 1945, ವೇವೆಲ್ ಯೋಜನೆ**

ಯೂರೋಪ್‌ನಲ್ಲಿ 1945ರ ವೇಳೆಗೆ ಯುದ್ಧ ಮುಗಿಯಲು ಬಂದಿದ್ದರೂ ಜಪಾನಿಯರ ಆಕ್ರಮಣ ಭೀತಿ ಇನ್ನೂ ಇತ್ತು. ಚರ್ಚಿಲ್ ಭಾರತೀಯ ಸಂವಿಧಾನದ ಅಚಿತಿಮ ಪರಿಹಾರಕ್ಕೆ ಒಲವು ತೋರಿದರು. ಕಾಂಗ್ರೆಸ್ ಧುರೀಣರನ್ನು ಜೂನ್‌ನಲ್ಲಿ ಬಿಡುಗಡೆ ಮಾಡಿದರು. ಜುಲೈ– ಆಗಸ್ಟ್‌ನಲ್ಲಿ ಇಂಗ್ಲೆಂಡ್‌ನಲ್ಲಿ ಚುನಾವಣೆ ಆಗಬೇಕಿತ್ತು. ಚರ್ಚಿಲ್‌ರಿಗೆ ಸೋಲುವ ಮತ್ತು ಪ್ರಧಾನಿ ಪಟ್ಟ ಕಳೆದುಕೊಳ್ಳುವ ಭೀತಿಯೂ ಇತ್ತು. ವಿರೋಧಿ ಧುರೀಣ ಕ್ಲೆಮಂಟ್ ಆಟ್ಲಿ ಭಾರತದ ಸ್ವಾತಂತ್ರ್ಯದ ಪರವಾಗಿದ್ದರು. ಹೀಗಾಗಿ ಚರ್ಚಿಲ್ ಭಾರತೀಯರ ಮನ ಗೆಲ್ಲಲು ವೈಸ್‌ರಾಯ್ ಲಾರ್ಡ್ ವೇವೆಲ್‌ರಿಗೆ ಯೋಜನೆ ರೂಪಿಸಲು ಹೇಳಿದರು. 1945ರ ಜೂನ್ 29ರಂದು ಸಿಮ್ಲಾದಲ್ಲಿ ಸಮ್ಮೇಳನ ನಡೆಯಿತು. ವೇವೆಲ್ ಪ್ರಸ್ತಾಪಿಸಿದ ಯೋಜನೆಗಳಲ್ಲಿ – ವೈಸ್‌ರಾಯ್ ಕಾರ್ಯಕಾರಿ ಸಮಿತಿ ಅಧ್ಯಕ್ಷ. ದಂಡನಾಯಕ, ವಿದೇಶಾಂಗ ಖಾತೆಗಳನ್ನು ಭಾರತೀಯರಿಗೆ ಕೊಡುವುದು, ಹಿಂದೂ ಮುಸ್ಲಿಂ ಇಬ್ಬರಿಗೂ ಸಮಾನ ಪ್ರಾತಿನಿಧ್ಯ ಇವು ಮುಖ್ಯ ಜಿನ್ನಾ ಮುಸ್ಲಿಂ ಲೀಗ್‌ಗೆ ಸದಸ್ಯರಲ್ಲದವರನ್ನು ಮುಸ್ಲಿಂ ಸಮುದಾಯದ ಪ್ರತಿನಿಧಿಗಳನ್ನಾಗಿ ಪರಿಗಣಿಸಬಾರದೆಂದು ಹಟ ಹಿಡಿದರು. ವೇವೆಲ್ ಯೋಜನೆ ಕುಸಿದು ಬಿತ್ತು.

**43. 1945–45ರ ಚುನಾವಣೆಗಳು:**

ಕ್ರೇಂದ್ರ ಮತ್ತು ಪ್ರಾಂತೀಯ ಶಾಸನ ಸಭೆಗೆ ನಡೆದ ಚುನಾವಣೆಗಳಲ್ಲಿ ಕಾಂಗ್ರೆಸ್ 'ಒಂದೇ ಭಾರತ'ಕ್ಕೆ ಬೆಂಬಲ ಕೋರಿ ಶೇಕಡಾ 91.3 ಮತ ಪಡೆದು ಗೆದ್ದಿತು. ಕಾಂಗ್ರೆಸ್ ಪರವಾಗಿ ಸ್ಪರ್ಧಿಸಿದ್ದ ರಾಷ್ಟ್ರೀಯ ಮುಸ್ಲಿಮರಲ್ಲಿ ಅನೇಕರು ಠೇವಣಿ ಕಳೆದುಕೊಂಡುರ. ಮುಸ್ಲಿಂ ಲೀಗ್ ಎಲ್ಲ ಮುಸ್ಲಿಮ್ ಮೀಸಲು ಸ್ಥಾನಗಳನ್ನು ಗೆದ್ದುಕೊಂಡಿತು. ಪಾಕಿಸ್ತಾನಕ್ಕೆ ಸೇರಬೇಕೆಂದು ಮುಸ್ಲಿಂಲೀಗ್‌ಹೆಸರಿಸಿದ್ದ ಪಂಜಾಬ್, ಗಡಿನಾಡು ಪ್ರಾಂತ್ಯ ಬಲೂಚಿಸ್ತಾನ್, ಬಂಗಾಳ ಹಾಗು ಸಿಂಧ್ ಈ ಐದು ಪ್ರಾಂತ್ಯಗಳಲ್ಲಿ ಮುಸ್ಲಿಂ ಲೀಗ್ ಬಂಗಾಲ ಮತ್ತು ಸಿಂಧ್‌ಗಳಲ್ಲಿ ಮಾತ್ರ ಅಧಿಕಾರಕ್ಕೆ ಬಂದಿತು.

**44. 1946 ಫೆಬ್ರವರಿ, ರಾಯಲ್ ನೌಕಾಪಡೆ (ಆರ್‌ಐಎನ್)ಯ ಬಂಡಾಯ**

ಬಾಂಬೆಯ ರಾಯಲ್ ನೌಕಾಪಡೆಯ 3000 ಸೈನಿಕರು ಅಪಮಾನಕರ ವರ್ಣಭೇದ ನೀತಿ ಹಾಗೂ ಸಂಬಳ, ಊಟ, ಉಡುಗೆ ಸರಿಯಾಗಿ ದೊರೆಯದ ಕಾರನ 1946ರ ಫೆಬ್ರವರಿ 18ರಂದು ಪ್ರತಿಭಟನೆಗಿಳಿದರು. ಇವರೊಡನೆ ನಾಗರಿಕರೂ ಸೇರಿದರು. ಫೆಬ್ರವರಿ 22ರ ವೇಳೆಗೆ ಬಂಡಾಯಕ್ಕಿಳಿದ ಸೈನಿಕರ ಸಂಖ್ಯೆ 22 ಸಾವಿರಕ್ಕೇರಿತು. ಇವರ ಬೇಡಿಕೆಗಳಲ್ಲಿ ಐಎನ್‌ಎ ಖೈದಿಗಳ ಬಿಡುಗಡೆ, ಇಂಡೋನೇಷ್ಯದಲ್ಲಿರುವ ಭಾರತದ ಸೈನ್ಯವನ್ನು ವಾಪಸ್ಸು ಕರೆಸುವುದು, ಭಾರತೀಯ ಅಧಿಕಾರಿಗಳನ್ನು ಉನ್ನತ ಸ್ಥಾನಕ್ಕೇರಿಸುವುದು ಸೇರಿದ್ದವು. ಭಾರತೀಯ ಸೈನಿಕರು 20 ಹಡಗುಗಳನ್ನು ತಮ್ಮ ವಶದಲ್ಲಿಟ್ಟುಕೊಂಡುರ. ನೌಕಾದಳದ ಬ್ರಿಟಿಷ್ ಮುಖ್ಯಸ್ಥ ಗಾಡ್ ಫ್ರೀಯ ಸೈನಿಕರಿಗೆ ಶರಣಾಗತನಾಗಲು ಸೂಚಿಸಿದ. ಗಲಭೆಯಲ್ಲಿ 200 ಜನ ಸಾವಿಗೀಡಾದರು. ಗಾಂಧಿ ಹಾಗು ವಲ್ಲಬಾಯಿ ಪಟೇಲ್ ಮಧ್ಯಸ್ಥಿಕೆಯ ನಾವಿಕರು ಫಬ್ರವರೊ 26ರಂದು ಶರಣಾದರು.

**45. 1946 ಮಾರ್ಚ್, ಕ್ಯಾಬಿನೆಟ್ ಮಿಷನ್**

ಎರಡನೆ ಮಹಾಯುದ್ಧ ಮುಗಿದು, ಬ್ರಿಟನ್‌ನಲ್ಲಿ ಲೇಬರ್ ಪಕ್ಷ ಅಧಿಕಾರಕ್ಕೆ ಬಂದು ಕ್ಲೆಮೆಂಟ್ ಅಟ್ಲಿ ಪ್ರಧಾನಿಯಾದರು. ಭಾರತೀಯ ಸ್ವಯಂ ನಿರ್ಣಯಾಧಿಕಾರದ ಬಗ್ಗೆ ಆಟ್ಲಿಯವರಿಗೆ ವಿಶ್ವಾಸ ಇತ್ತು. ಲಾರ್ಡ್ ಪೆಥಿಕ್ ಲಾರೆನ್ಸ್, ಸರ್ ಸ್ಟಾಫರ್ಡ್ ಕ್ರಿಪ್ಸ್ ಹಾಗೂ ಎ.ವಿ. ಅಲೆಕ್ಸಾಂಡರ್ ನೇತೃತ್ವದ ಬ್ರಿಟನ್‌ನ ಕ್ಯಾಬಿನೆಟ್ ಆಯೋಗವನ್ನು ಭಾರತಕ್ಕೆ ಆಟ್ಲಿ ಕಳುಹಿಸಿದರು. ಭಾರತವನ್ನು ವಿಭಜಿಸುವ ಪಾಕಿಸ್ತಾನದ ಪ್ರಸ್ತಾಪವನ್ನು ಪರಿಶೀಲನೆ ಮಾಡುವುದು ಮತ್ತು ಮಧ್ಯಂತರ ಸರ್ಕಾರದ ರಚನೆ ಇವು ಆಯೋಗದ ಶಿಫಾರಸ್ಸುಗಳ ಮುಖ್ಯ ವಿಷಯಗಳಾಗಿದ್ದವು.

**46. 1946 ಜುಲೈ 22, ಮುಸ್ಲಿಂ ಲೀಗ್‌ನ 'ನೇರಕ್ರಮ'**

ಬಾಂಬೆಯಲ್ಲಿ ಸೇರಿದ ಮುಸ್ಲಿಂ ಲೀಗ್ ಸಭೆ 1946ರ ಆಗಸ್ಟ್ 16ನ್ನು 'ನೇರ ಕ್ರಮ'ದ ದಿನವನ್ನಾಗಿ ಆಚರಿಸಲು ಮುಸ್ಲಿಮರಿಗೆ ಕರೆ ನೀಡಿತು. ಭಾರತದ ಮುಸ್ಲಿಮರು ಸ್ವತಂತ್ರ ಪಾಕಿಸ್ತಾನದ ಬದಲು ಯಾವ ಯೋಜನೆಗೂ ಒಪ್ಪುವುದಿಲ್ಲ ಎಂದು ಘೋಷಿಸಿ ಆಗಸ್ಟ್ 16ರಂದು ನೇರವಾಗಿ ಪ್ರತಿಭಟನೆಗೆ ಇಳಿಯಲು ಲೀಗ್ ಸಜ್ಜಾಯಿತು.

**47. 1946, ಹಂಗಾಮಿ ಸರ್ಕಾರ :**

ಕ್ಯಾಬಿನೆಟ್ ಆಯೋಗದ ಯೋಜನೆಯಂತೆ 12 ಸದಸ್ಯರ ಹಂಗಾಮಿ ಸರ್ಕಾರದ 1946ರ ಸೆಪ್ಟೆಂಬರ್ 2 ರಂದು ಅಸ್ತಿತ್ವಕ್ಕೆ ಬಂದಿತು. ಮೊದಲು ಸರ್ಕಾರದಲ್ಲಿ ಸೇರಲು ಬಯಸದ ಜಿನ್ನಾ, ನಂತರ ಪಾಕಿಸ್ತಾನ ರಚನೆಗೆ ಸಹಾಯವಾಗಲು ಹಾಗೂ ಕಾಂಗ್ರೆಸ್ ನೇತೃತ್ವದಲ್ಲಿ ಹಂಗಾಮಿ ಸರ್ಕಾರ ಸರಿಯಾಗಿ ನಡೆಯದಂತೆ ನೋಡಿಕೊಳ್ಳಲು ಮುಸ್ಲಿಂ ಲೀಗ್ ಸರ್ಕಾರದಲ್ಲಿ ಸೇರಲು ಒಪ್ಪದರು. ಲೀಗ್‌ನ ಐದು ಸದಸ್ಯರು ಸರ್ಕಾರದಲ್ಲಿ ಸೇರಿದರು. ಜವಾಹರಲಾಲ್ ನೆಹರೂ ಈ ಹಂಗಾಮಿ ಸರ್ಕಾರಕ್ಕೆ ಉಪಾಧ್ಯಕ್ಷರಾದರು. ಮುಸ್ಲಿಂ ಲೀಗ್‌ನ ಅಲಿಖಾನ್, ಜಿನ್ನಾ ಅಜ್ಞೆಯಂತೆ ಮಧ್ಯಾವಧಿ ಸರ್ಕಾರದಲ್ಲಿದ್ದೇ ಪಾಕಿಸ್ತಾನದ ರಚನೆಯ ಭಾಷಣ ಮಾಡಿದರು. ಅರ್ಥ ಖಾತೆ ಹೊಂದಿದ್ದ ಲಿಯಾಕತ್ ಅಲಿಖಾನ್ ಲೀಗ್ ಮಂತ್ರಿಗಳ ಪ್ರತ್ಯೇಕ ಸಭೆಯನ್ನೇ ಮಾಡುತ್ತಿದ್ದ. ಒಟ್ಟಾರೆ ಮಧ್ಯಾವಧೀ ಸರ್ಕಾರದೊಳಗೆ ಅರಾಜಕತೆ ಉಂಟಾಯಿತು. ಜಿನ್ನಾರ ಮುಸ್ಲಿಂ ಲೀಗ್‌ಗೆ ಇದೇ ಬೇಕಿತ್ತು.

**48. 1947, ಆಟ್ಲಿ ಘೋಷಣೆ :**

ಫೆಬ್ರವರಿ 20ರಂದು 1948ರ ಜೂನ್ ವೇಳೆಗೆ ಬ್ರಿಟಿಷ್ ಸಂಸತ್ತಿನ ಜವಾಬ್ದಾರಿ ಹೊಂದಿದ ಭಾರತೀಯರಿಗೆ ಅಧಿಕಾರ ವರ್ಗಾವಣೆ ಮಡುವುದಾಗಿ ಘೋಷಿಸಿದರು. ಲಾರ್ಡ್ ವೇವೆಲ್‌ರ ಉತ್ತರಾಧಿಕಾರಿಯಾಗಿ ಲಾರ್ಡ್ ಮೌಂಟ್ ಬ್ಯಾಟನ್‌ರನ್ನು ನೇಮಕ ಮಾಡಲಾಯಿತು.

**49. 1947– ಮೌಂಟ್‌ಬ್ಯಾಟನ್ ಯೋಜನೆ :**

ಮಾರ್ಚ್ 24, 1947ರಂದು ವೈಸ್‌ರಾಯ್ ಆಗಿ ಭಾರತಕ್ಕೆ ಬಂದಾಗ ಇಲ್ಲಿ ಕೋಮು ಜ್ವಾಲೆ ಹರಡಿತ್ತು. ಜೂನ್ 3ರಂದು ಘೋಷಿತವಾದ ಮೌಂಟ್ ಬ್ಯಾಟನ್‌ನ ಯೋಜನೆಯ ಪ್ರಮುಖ ಅಂಶಗಳು:

1. ದೇಶದ ವಿಭಜನೆ ಅನಿವಾರ್ಯ

2.ಬಂಗಾಳ ಮತ್ತು ಪಂಜಾಬ್‌ನ ಹಿಂದು ಮತ್ತು ಮುಸ್ಲಿಂರು ಹೆಚ್ಚನ ಸಂಖ್ಯೆಯಲ್ಲಿ ಇರುವ ಪ್ರದೇಶದ ಪ್ರತಿನಿಧಿಗಳು ವಿಭಜನೆಗೆ ಒಪ್ಪಿದರೆ ಈ ಪ್ರಾಂತ್ಯಗಳನ್ನು ಅಲ್ಪಸಂಖ್ಯಾತರ ಆಧಾರದ ಮೇಲೆ ವಿಭಜಿಸಬೇಕೇ ಅಥವಾ ಬೇಡವೇ ಎಂದು ನಿರ್ಧರಿಸುವುದು.

3.ಮುಸ್ಲಿಂ ಬಹುಸಂಖ್ಯಾತರಾಗಿರುವ ಅಸ್ಸಾಂ ಹಾಗೂ ಸಿಲ್ಹಾಟ್‌ಗಳಲ್ಲಿ ಜನಾಭಿಪ್ರಾಯ

4.ಬಂಗಾಳ ಮತ್ತು ಪಂಜಾಬ್‌ಗಳಲಲಿ ಹಿಂದು ಹಾಗೂ ಮುಸ್ಲಿಂ ಪ್ರಾಂತ್ಯಗಳ ಗಡಿ ನಿರ್ಧರಿಸಲು ಗಡಿ ಆಯೋಗದ ರಚನೆ

5.1947ರ ಆಗಸ್ಟ್ 15ರಂದು ಸ್ವಾತಂತ್ರ್ಯ ಘೋಷಿಸುವುದು.

**50. 1947, ಜುಲೈ 18– ಭಾರತ ಸ್ವಾತಂತ್ರ್ಯದ ಅಧಿನಿಯಮ**

ಮೌಂಟ್ ಬ್ಯಾಟನ್‌ರ ಯೋಜನೆಯ ಕಾರ್ಯರೂಪಕ್ಕೆ ಬ್ರಿಟಿಷ್ ಸಂಸತ್ತಿನ ಸದನಗಳು ಅಂಗೀಕಾರ ನೀಡಿ ಜುಲೈ 18ರಂದು ರಾಜನ ಒಪ್ಪಿಗೆ ಪಡೆದು , ಈ ಅಧಿನಿಮ ಘೋಷಿತವಾಯಿತು.

**ಮುಖ್ಯ ಅಂಶಗಳು :**

1.ಭಾರತ ವಿಭಜನೆ

2. ಬ್ರಿಟಿಷ್ ಸರ್ಕಾರಕ್ಕೆ ಆಗಸ್ಟ್ 15, 1947ರ ನಂತರ ಈ ಸ್ವತಂತ್ರ ದೇಶಗಳ ಮೇಲೆ ಯಾವುದೇ ನಿಯಂತ್ರಣದ ಹಕ್ಕಿಲ್ಲ

3. ಹೊಸ ಸಂವಿಧಾನ ರಚಿಸಲು ಸಂವಿಧಾನ ರಚನಾ ಸಮಿತಿಗಳ ನೇಮಕ 1947 ಆಗಸ್ಟ್ 15ರ ಮಧ್ಯರಾತ್ರಿ ಮೌಂಟ್ ಬ್ಯಾಟನ್ ಭಾರತ ರಾಜ್ಯವನ್ನು ಉದ್ಘಾಟಿಸಿದರು ಜವಾಹರ್‌ಲಾಲ್ ನೆಹರೂ 'ಟ್ರಿಸ್ಟ್ ವಿಶ್ ಡೆಸ್ಟಿನಿ' ಭಾಷಣ ಮಾಡಿದರು.

**ಕರ್ನಾಟಕದಲ್ಲಿ ಸ್ವಾತಂತ್ರ್ಯ ಹೋರಾಟ**

**1. ಬ್ರಿಟಿಷ್ ವಿರೋಧಿ ಬಂಡುಗಳು**

ಬ್ರಿಟಿಷ್ ಅಧಿಪತ್ಯವನ್ನುಕರ್ನಾಟಕದ ಜನ ತಪ್ಪಗೆ ಒಪ್ಪಿಕೊಳ್ಳಲಿಲ್ಲ. 1800ರ ಆರಂಭದಿಂದ 1867ರ ವರೆಗಿನ ಅವಧಿಯಲ್ಲಿ ಕರ್ನಾಟಕದಲ್ಲಿ ಅನೇಕ ಬಂಡುಗಳೆದ್ದವು. ಅವುಗಳಲ್ಲಿ ಹಲವು ನೇರವಾಗಿ ಬ್ರಿಟಿಷರ ವಿರುದ್ಧವೇ ಆಗಿದ್ದರೆ ಮತ್ತೆ ಕೆಲವು ಜನವಿರೋಧಿಯಾಗಿದ್ದ ಅರಸರ ವಿರುದ್ಧ ಆಗಿದ್ದವು.

**ಧೋಂಡಜಿ ವಾಘ್ :**

ಪ್ರಪ್ರಥಮಪ್ರತಿಭಟನೆ ವ್ಯಕ್ತವಾದುದು ಸಾಹಿಸಿಗ ಧೋಂಡಜಿ ವಾಘನ ನೇತೃತ್ವದಲ್ಲಿ ನಡೆದ ಹಿಂಸಾತ್ಮಕ ಬಂಡಿನ ರೂಪದಲ್ಲಿ. ಚೆನ್ನಗಿರಿಯಲ್ಲಿ ಪವಾರ ಎಂಬ ಮರಾಠ ಕುಟುಂಬದಲ್ಲಿ ಜನಿಸಿದ ಧೋಂಡಜಿ ಚರಿತ್ರೆಯಲ್ಲಿ 'ವಾಘ್ ' ಮರಾಠಿಯಲ್ಲಿ ಹುಲಿ) ಎಂದೇ ಹೆಸರಾಗಿದ್ದಾನೆ. ಮೊದಲು ಆತ ಟಿಪ್ಪುವಿನ ಸೇವೆಯಲ್ಲಿದ್ದ. ನಂತರ ಅವನ ಬಗ್ಗೆ ಟಿಪ್ಪು ಅಸಂತುಷ್ಟನಾದ್ದರಿಂದ ಸೆರೆಯಲ್ಲಿಟ್ಟನು. ಟಿಪ್ಪುವಿನ ಪತನದನಂತರ ಬಿಡುಗಡೆ ಹೊಂದಿದ ಧೋಂಡಜಿ ಮಲೆನಾಡಿಗೆ ಹೋಗಿ ಶಿವಮೊಗ್ಗೆಯನ್ನು ತನ್ನ ಕೇಂದ್ರವಾಗಿಸಿಕೊಂಡನು. ಬಿದನೂರು ಹಾಗೂ ಶಿಕಾರಿಪುರ ಪ್ರದೇಶಗಳಲ್ಲಿ ಅವನು ತನ್ನದೇ ಆದ ಪಾಳಯವನ್ನು ಕಟ್ಟಿಕೊಂಡನು.

ಬಲಂನ ಕೃಷ್ಣಪ್ಪನಾಯಕ, ರಾಯದುರ್ಗದ ಹೀರಾನಾಯಕ, ಆನೆಗುಂದಿಯ ಅರಸ ಮತ್ತು ತಮಿಳುನಾಡಿನ (ಪೆರಿಂತುರೈ, ದಿಂಡಿಗಲ್, ಶಿವಗಂಗಾ ಮತ್ತು ವಿರುಪಾಕ್ಷಿಯ) ರಾಜರುಗಳು ಹಾಗೂ ಮಲಬಾರಿನ ಕೇರಳವರ್ಮ ಇವರೊಡನೆ ಸಂಪರ್ಕ ಬೆಳೆಸಿದರು.

ಮಾಹೆಯಲ್ಲಿದ್ದ ಫ್ರೆಂಚರೂ ಅವನನ್ನು ಪ್ರೋತ್ಸಾಹಿಸಿದರು. ಅವನ ಬಂಡು ಆರಂಭವಾದದ್ದು 1800ರಲ್ಲಿ ಅವನು ದಕ್ಷಿಣ ಕನ್ನಡದಲ್ಲಿಯ ಜಮಾಲಾಬಾದ್ ಕೋಟೆಯನ್ನು ವಶಪಡಿಸಿ ಕೊಂಡನು. ವಿಟ್ಲದ ಡೊಂಬ ಹೆಗಡೆ ಅವನನ್ನು ಕೂಡಿಕೊಂಡನು.

ಉತ್ತರ ಕನ್ನಡದಲ್ಲಿಯ ಸೋಂದ, ಧಾರವಾಡ ಜಿಲ್ಲೆಯಲ್ಲಿರುವ ಸವಣೂರು, ರಾಣೆಬೆನ್ನೂರು, ಹಾನಗಲ್ಲು, ಡಂಬಳ, ಮತ್ತು ಬಳ್ಳಾರಿ ಜಿಲ್ಲೆಯ ಹರಪ್ಪನಹಳ್ಳಿ ಸಹ ಅವನ ವಶವಾದವು.

ಅವನು ತಾನು ಘಟ್ಟದ ಕೆಳಗೂ ಹಾಗೂ ಮೇಲೆಯೂ ಹೀಗೆ ಎರಡೂ ಬದಿಯ ಪ್ರದೇಶಗಳ ಅಧಿಪತಿಯೆಂಬುದನ್ನು ಸಾರುವಂತೆ 'ಉಭಯ ಲೋಕಾಧೀಶ್ವರ' ನೆಂಬ ಬಿರುದನ್ನು ಧರಿಸಿದನು. ಅವನನ್ನು ಸೋಲಿಸುವುದಕ್ಕೋಸ್ಕರ ಬ್ರಿಟಿಷರು ಪೇಶ್ವೆ ಮತ್ತು ನಿಜಾಮರ ಸಹಾಯ ಕೇಳಬೇಕಾಯಿತಲ್ಲದೆ ದಕ್ಷಿಣದಲ್ಲಿ ಬಹುದೊಡ್ಡ ಪ್ರಮಾಣದ್ಲಲಿ ತಮ್ಮ ಸೈನ್ಯವನ್ನು ತೊಡಗಿಸಬೇಕಾಯಿತು.

ಅವನ ಚಟುವಟಿಕೆಗಳ ವ್ಯಾಪ್ತಿ ಇಡೀ ಬೆಳಗಾವಿ ಜಿಲ್ಲೆಯನ್ನು ಆವರಿಸಿ ಕೊಲ್ಲಾಪುರದ ಗಡಿಯವರೆಗೆ ಹಬ್ಬಿತಲ್ಲದೆ, ನಿಜಾಮ್ ಅಧಿಪತ್ಯವನ್ನು ಆಳವಾಗಿ ಭೇದಿಸಿದ್ದಿತು. ಅವನ ಆಡಳಿತ ಒಳ್ಳೆಯದಾಗಿತ್ತಲ್ಲದೆ, ಜನತೆಯ ಬೆಂಬಲವನನೂ ಸಂಪಾದಿಸತೊಡಗಿತ್ತೆಂದು ಬ್ರಿಟಿಷ್ ದಾಖಲೆಗಳಿಂದ ತಿಳಿದು ಬರುತ್ತವೆ. ಕೊನೆಗೆ ಆರ್ಥರ್ ವೆಲ್ಲೆಸ್ಲಿಯ ನೇತೃತ್ವದ ಬೃಹತ್ಪ್ರಮಾಣದ ಸೈನ್ಯವನ್ನು ಬಳಸಿ ಅವನನ್ನು ಹತ್ತಿಕ್ಕಬೇಕಾಯಿತು. ಸೆಪ್ಟೆಂಬರ್ 1800ರಲ್ಲಿ ರಾಯಚೂರಿನ ಕೋಣಗಲ್‌ನಲ್ಲಿ ಅವನನ್ನು ಕೊಲ್ಲಲಾಯಿತು.

**ಕೊಪ್ಪಳ ದಂಗೆ :**

ಆಗಿನ ಬಂಡುಗಳಲ್ಲಿ ನಂತರದ ಮಹತ್ವದ ಸ್ಥಾನವಿರುವುದು ನಿಜಾಮ್ ರಾಜ್ಯದಲ್ಲಿ ಕೊಪ್ಪಳದ ದಂಗೆಗೆ. ವೀರಪ್ಪನೆಂಬ ಜಮೀನ್ದಾರ ಇದರ ನಾಯಕ, ಅವನು ಕೊಪ್ಪಳ ಮತ್ತು ಬಹದ್ದೂರು ಬಂಡಾದ ಕೋಟೆಗಳನ್ನು ವಶಪಡಿಸಿಕೊಂಡು ಬಹಳಕಾಲ ಹಿಡಿದುಕೊಂಡಿದ್ದರು.

ಮೇ 1819ರಲಲಿ ಬ್ರಿಟಿಷ್ ಸೈನ್ಯದ ಮೇಜರ್ ಪ್ರಿಸ್ಲ್ಲರನು ಕೋಟೆಯನ್ನು ವಶಪಡಿಸಿಕೊಂಡನು. ಆಕಾಳಗದಲಿ ಎನ್‌ಸೈನ್ ಎಲಿಯಟ್ ಹಾಗೂ ಕ್ಯಾಪ್ಟನ್ ಡನ್‌ನನ್ನೂಳಗೊಂಡ ಆನೇಕರು ಹತರಾದರು. ಮರುವರ್ಷವೇ ನಿಜಾಮನ ರಾಜ್ಯದಲ್ಲಿ ಎರಡನೆಯ ದಂಗೆಯಾಯಿತು. ಬೀದರ್ ಜಿಲ್ಲೆಯ ಸುಳಿಯಳ್ಳಿ ಅದರ ಕೇಂದ್ರ ಸ್ಥಾನ: ಅಲ್ಲಿಯ ಶಿವಲಿಂಗಯ್ಯ ದೇಶಮುಖನೆಂಬುವನು ಕೃಷ್ಣಾಪುರದ ತಿರುಮಲರಾವ್ ದೇಶಮುಖ ಹಾಗೂ ಮೇಘಶ್ಯಾಮ ಎಂಬ ಇನ್ನೊಬ್ಬನ ಸಹಾಯದಿಂದ ಡಿಸೆಂಬರ್ 1820ರಲ್ಲಿ ನಿಜಾಮನ ವಿರುದ್ಧ ಬಂಡೆದ್ದನು.

ಆಗ ನಿಜಾಮನು ಬ್ರಿಟಿಷ್ ನೆರವು ಯಾಚಿಸಿದರು. ಲೆಫ್ಟಿನೆಂಟ್ ಸದರ್ ಲ್ಯಾಂಡನ್ ನೇತೃತ್ವದಲ್ಲಿ ಬ್ರಿಟಿಷ್ ಸೈನ್ಯವು ದೀರ್ಘಕಾಲ ಸೆಣಸಿ 1821ರಲ್ಲಿ ಕೊನೆಗೊಮ್ಮೆ ಬಂಡುಕೋರರನ್ನು ಸೆರೆ ಹಿಡಿಯಿತು. ಬ್ರಿಟಿಷ್ ಇಲಾಖೆಯಲ್ಲಿದ್ದ ಸಿಂದಗಿ (ವಿಜಾಪುರ ಜಿಲ್ಲೆ) ಮುಂದಿನ ದಂಗೆಯ ಸ್ಥಳ : ದಿವಾಕರ ದೀಕ್ಷಿತ, ರಾವಜಿರಸ್ತೆ, ಬಾಳಾಜಿ ದೇಶಪಾಂಡೆ ಮತ್ತು ಶೆಟ್ಟಪ್ಪ ತುಕ್ಕಳ್ಳಿ ಅದರ ನಾಯಕರು. 1824ರಲ್ಲಿ ಈ ಬಂಡುಕೋರರು ತಮ್ಮದೇ ಆಡಳಿತವನ್ನು ಪ್ರಾರಂಭಿಸಿದರಲ್ಲದೆ ಸುತ್ತಮುತ್ತಲಿನ ಭಾಗಗಳಲ್ಲಿ ಕಂದಾಯ ವಸೂಲಿಯನ್ನು ಪ್ರಾರಂಭಿಸಿದರು. ಆಗ ಧಾರವಾಡದ ಕಲೆಕ್ಟರನಾಗಿದ್ದ ಸ್ಟಿವೆನ್‌ಸನ್ ಈ ದಂಗೆಯನ್ನಡಗಿಸಲು ಸಮರ್ಥನಾದನು.

**ಕಿತ್ತೂರು ದಂಗೆಗಳು :**

ಕಿತ್ತೂರು (ಬೆಳಗಾವಿ ಜಿಲ್ಲೆ) ಹಲವಾರು ದಂಗೆಗಳ ತಾಣವಾಯಿತು. ಬೆಳಗಾವಿ. ಧಾರವಾಡ ಜಿಲ್ಲೆಗಳ ಕೆಲ ಭಾಗಗಳನ್ನು ಆಳುತ್ತಿದ್ದ ಕಿತ್ತೂರು ದೇಸಾಯಿ ಶಿವಲಿಂಗ ಸರ್ಜನು 1824ರಲ್ಲಿ ನಿಸ್ಸಂತಾನವಾಗಿ ತೀರಿಕೊಂಡನು. ಮರಣ ಹೊಂದುವುದಕ್ಕೆ ಮುನ್ನ ಉತ್ತರಾಧಿಕಾರಿಯಾಗಿ ಅವನು ಒಬ್ಬನನ್ನು ದತ್ತಕ ಮಾಡಿಕೊಂಡನನು. ಅವನ ವಿಧವೆ ರಾಜಪ್ರತಿನಿಧಿಯಾಗಿ ಸಂಸ್ಥಾನದ ಆಡಳಿತ ನಡೆಸತೊಡಗಿದಳು. ಧಾರವಾಡದ ಕಲೆಕ್ಟರ್ ಥ್ಯಾಕರೆ ಈ ದತ್ತಕವನ್ನು ಅಕ್ಷೇಪಿಸಿದನು. ಕಿತ್ತೂರಿನ ಆಡಳಿತವನ್ನು ವಹಿಸಿಕೊಳ್ಳವಂತೆ ಸೂಚಿಸಿ ಅವನು ಮುಂಬಯಿ ಸರ್ಕಾರಕ್ಕೆ ಬರೆದನು.

ಇದರಿಂದ ಕುಪಿತಳಾದ ರಾಣಿ ಚೆನ್ನಮ್ಮ ಬ್ರಿಟಿಷರ ಹಸ್ತಕ್ಷೇಪವನ್ನು ತಡೆಗಟ್ಟಿಸಲು ಸಿದ್ಧಳಾಗತೊಡಗಿದಳು. ಆಕೆ ಕೊಲ್ಲಾಪುರದ ಛತ್ರಪತಿಯ ನೆರವನ್ನು ಕೋರಿದಳು. ಅಕ್ಟೋಬರ್ 1824ರಲ್ಲಿ ಥ್ಯಾಕರೆ ಸೈನ್ಯದೊಂದಿಗೆ ಕಿತ್ತೂರಿಗೆ ತೆರಳಿ ದಾಳಿಯಿಟ್ಟನು. ಆದರೆ ಯುದ್ಧದಲ್ಲಿ ಅವನು ಹತನಾದನು. ಡಿಸೆಂಬರ್ 1824ರಲ್ಲಿ ದಕ್ಷಿಣ ಪ್ರಾಂತದ ಕಮೀಷ್‌ನರ್‌ನಾಗಿದ್ದ ಚಾಪ್ಲಿನ್ ಭಾರೀ ದಂಡಿನೊಂದಿಗೆ ಬಂದು ಕಿತ್ತೂರಿಗೆ ಮುತ್ತಿಗೆ ಹಾಕಿದನು. ರಾಣಿಯನ್ನು ಕೈದು ಮಾಡಲಾಯಿತು. ಅವಳು 1829ರಲ್ಲಿ ಬೈಲಹೊಂಗಲ ಸೆರೆಮನೆಯಲ್ಲಿ ನಿಧನ ಹೊಂದಿದಳು. ಕಿತ್ತೂರನ್ನು ಮುಂಬಯಿ ಇಲಾಖೆಯಲ್ಲಿ ಸೇರಿಸಲಾಯಿತು.

ಶೂರು ರಾಣಿ ಚೆನ್ನಮ್ಮ ಹೊತ್ತಿಸಿದ ಕಿಡಿ ಸುಲಭದಲ್ಲಿ ಅರಲಿಲ್ಲ. ಸಂಗೊಳ್ಳಿಯ ರಾಯಣ್ಣನೆಂಬೊಬ್ಬ ಓಲೆಕಾರ 1829ರಲ್ಲಿ ಎರಡನೆಯ ದಂಗೆಯನ್ನು ಸಂಘಟಿಸಿದನು. ಅವನು ಕಿತ್ತೂರ ಸೈನ್ಯದಲ್ಲಿ ದುಡಿದಿದ್ದನು. ಶಿವಲಿಂಗ ಸರ್ಜನ ದತ್ತಕ ಮಗ ಶಿವಲಿಂಗಪ್ಪನಿಗೆ ಕಿತ್ತೂರು ಸಿಂಹಾಸನಕ್ಕೇರುವ ಹಕ್ಕನ್ನು ಪ್ರತಿಷ್ಠಾಪಿಸಲು ಅವನು ಬಯಸಿದ್ದನು. ಸುರಪುರದ (ಈಗಿನ ಕಲ್ಬುರ್ಗಿ ಜಿಲ್ಲೆಯಲ್ಲಿದೆ) ನಾಯಕನ ನೆರವನ್ನು ಅವನು ಕೋರಿದನು. ಅವನು ಗೆರಿಲ್ಲಾ ಯುದ್ಧಕ್ಕಿಳಿದು ಮಾಮಲೇದಾರ ಕಚೇರಿಯನ್ನು ಸುಟ್ಟನು. ಅದರೆ ಮುಂದೆ ಅವನ ಸ್ನೇಹಿತರೇ ವಿಶ್ವಾಸದ್ರೋಹ ಮಾಡಿ ಬ್ರಿಟಿಷರಿಗೆ ನೆರವಾದದ್ದರಿಂದ ಅವನು ಸೆರೆ ಸಿಕ್ಕನು. ಅನಂತರ ನಂದಗಡದಲ್ಲೇ ಅವನನ್ನು ಗಲ್ಲಿಗೇರಿಸಲಾಯಿತು. ಮುಂದೆ ಕಿತ್ತೂರಿನ ನಿಷ್ಠ ಸೇವಕ ಸರದಾರ ಗುರುಸಿದ್ದಪ್ಪನು ಶಿವಲಿಂಗಪ್ಪನನ್ನು ಬೆಂಬಲಿಸಿ ಬಂಡೆದ್ದರು. ಬ್ರಿಟಿಷರು ಅವನನ್ನು ಬಂಧಿಸಿ ದೊಡ್ಡವಾಡದಲ್ಲಿ ಸೆರೆಮನೆಯಲ್ಲಿಟ್ಟರು. 1833ರಲ್ಲಿ ಕಿತ್ತೂರಲ್ಲಿ ಶಂಕರಣ್ಣನೆಂಬುವನು ದಂಗೆಯೆದ್ದನಾದರೂ ಅದನ್ನು ಹತ್ತಿಕ್ಕಲಾಯಿತು.
1826ರಲ್ಲಿ ನಾರಪ್ಪ ಗಜಪತಿ, ಸವಾಯಿ ಶೆಟ್ಟಿ ಮತ್ತು ರುದ್ರಪ್ಪ ಕೊಟಗಿ ಕಿತ್ತೂರಲ್ಲಿ ಮತ್ತೊಮ್ಮೆ ಬಂಡೆದ್ದರು. ಅವರು ಗೋವೆಯಿಂದ ಪೋರ್ಚುಗೀಸರ ಸಹಾಯ ಪಡೆಯಲೂ ಯತ್ತಿಸಿದರು. ಆದರೆ ಅವರ ಯತ್ನವನ್ನು ಹತ್ತಿಕ್ಕಲಾಯಿತು. 1837–38ರಲ್ಲಿ ರಾಜಮನೆತನದ ಕೆಲವು ನಿಷ್ಠರು 1829ರಲ್ಲಿ ರಾಯಣ್ಣನನ್ನು ಹಿಡಿಯಲು ಬ್ರಿಟಿಷರಿಗೆ ಸಹಾಯ ಮಾಡಿದ್ದ ಖೋದಾನಪುರ ಲಿಂಗನಗೌಡನನ್ನು ಕೊಂದು ದಂಗೆಯೆದ್ದರು. ಈ ಯತ್ನವೂ ನಿಷ್ಫಲವಾಗಿ ಪರಿಣಮಿಸಿತು.

**ನಗರ ದಂಗೆ :**

ಉತ್ತರ ಕರ್ನಾಟಕದಲ್ಲಿ ಇಷ್ಟೆಲ್ಲನಡೆಯುತ್ತಿರುವಂತೆಯೇ 1830–31ರಲ್ಲಿ ಶಿವಮೊಗ್ಗ ಜಿಲ್ಲೆಯಲ್ಲೂ ದಂಗೆ ಸಂಭವಿಸಿತು.
ಕುಮಸಿಯ ಸಾದರಮಲ್ಲನೆಂಬುವನು ತಾನು ಕೆಳದಿಯ ರಾಜವಂಶದ ಬೂದಿ ಬಸಪ್ಪನೆಂದು ಹೇಳಿಕೊಂಡು 1830ರಲ್ಲಿ ಮೈಸೂರು ರಾಜರ ವಿರುದ್ಧ ಎದ್ದ ಬಂಡಿನ ನಾಯಕತ್ವ ವಹಿಸಿದನು. ಮೈಸೂರು ಆಡಳಿತ ವಸೂಲು ಮಾಡುತ್ತಿದ್ದ ಕಂದಾಯ ವಿಪರೀತವಾಗಿತ್ತೆಂದೂ ಅಧಿಕಾರಿಗಳು ಅತಿಲೋಭಿಗಳಾಗಿದ್ದರೆಂದೂ ಮಲೆನಾಡಿನ ಜನರು ಭಾವಿಸಿದ್ದರು. ಅವರು ಹೊನ್ನಾಳಿಯನ್ನು ಕೇಂದ್ರ ವಾಗಿರಿಸಿಕೊಂಡು ಆಡಳಿತದ ವಿರುದ್ಧ ಬಂಡೆದ್ದರು. ತರೀಕೆರೆ ಪಾಳೇಗಾರರ ವಂಶದ ಸರ್ಜಾರಂಗಪ್ಪನಾಯಕನು ಅವರನ್ನು ಸೇರಿಕೊಂಡರು. ಅವರ ಚಟುವಟಿಕೆಗಳ ಪ್ರತಿಧ್ವನಿ ಚಿಕ್ಕಮಗಳೂರು, ಕಡೂರು, ಹಿರಿಯೂರುಗಳಂಥ ದೂರದ ಊರುಗಳಲ್ಲೂ ಕೇಳಿಸತೊಡಗಿತು.

ಫೆಬ್ರವರಿ 1831ರಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರು ಸೈನ್ಯದೊಂದಿಗೆ ಶಿವಮೊಗ್ಗಗೆ ಬರಬೇಕಾಯಿತು. ಕ್ಯಾಪ್ಟನ್ ರಾಕ್‌ಪೋರ್ಟಿನ ನೇತೃತ್ವದಲ್ಲಿ ಬ್ರಿಟಿಷ್ ಸೈನ್ಯ ಹರಿಹರ ಮಾರ್ಗವಾಗಿ ಬಂದು ಮೊದಲು ಮಾರ್ಚ್ ತಿಂಗಳಲ್ಲಿ ಕಾಮನದುರ್ಗವನ್ನು ಏಪ್ರಿಲ್‌ನಲ್ಲಿ ಚಂದ್ರಗುತ್ತಿಯನ್ನು ಮತ್ತು ಜೂನ್‌ನಲ್ಲಿ ನಗರವನ್ನು ವಶಪಡಿಸಿಕೊಂಡಿತು. 1834ರಲ್ಲಿ ಬೂದಿ ಬಸಪ್ಪನನ್ನು ಸೆರೆಹಿಡಿದು ಗಲ್ಲಿಗೇರಿಸಲಾಯಿತು. ಅದರ ಪರಿಣಾಮವೆಂದರೆ ಮುಮ್ಮಡಿ ಕೃಷ್ಣರಾಜ ಒಡೆಯರ ಪದಚ್ಯುತಿಯಾಯಿತಲ್ಲದೆ, ಅವರ ಅಸಾಮರ್ಥ್ಯವು ಬೆಳಕಿಗೆ ಬಂತು. ಈಗಿನ ದಕ್ಷಿಣ ಮತ್ತು ಉತ್ತರ ಕನ್ನಡ ಜಿಲ್ಲೆಗಳು ಸೇರಿ ಒಂದೇ ಆಗಿದ್ದ ಕನ್ನಡ ಜಿಲ್ಲೆಯ ಕೃಷಿಕರು ಕೂಡ ಇದೇ ಕಾಲದಲ್ಲಿ (1813೦) ಬ್ರಿಟಿಷರ ವಿರುದ್ಧ ಬಂಡೆದ್ದರು. ಅದು ಭೂಕಂದಾಯದ ಭಾರವನ್ನುತಾಳಲಾರದೆ,

ಅದಕ್ಕೆ ಪ್ರತಿಭಟನೆಯೆಂದು ಎದ್ದ ಬಂಡಾಯವಾಗಿದ್ದತು. ಜನರು ಬ್ರಿಟಿಷರಿಗೆ ಭೂಕಂದಾಯ ಕೊಡಲು ನಿರಾಕರಿಸಿ ದಂಗೆಕೋರ ಕೂಟಗಳಲ್ಲಿ ತಮ್ಮನ್ನು ಸಂಘಟಿಸಿಕೊಂಡರು.

**ಕೊಡಗಿನ ಬಂಡು :**

1835–1837ರ ಕೊಡಗಿನ ದಂಗೆ ಇನ್ನೊಂದು ಗಂಭೀರ ಘಟನೆ . ಬ್ರಿಟಿಷರು ಚಿಕ್ಕವೀರ ರಾಜನನ್ನು ಪದುಚ್ಯುತಗೊಳಿಸಿ ಕೊಡಗನ್ನು ವಶಪಡಿಸಿಕೊಂಡರು. ಇದು ಕೆಲವು ವರ್ಗಗಳಲ್ಲಿ ಅಸಂತುಷ್ಟಿಗೆ ಕಾರಣವಾಯಿತು. ಸ್ವಾಮಿ ಅಪರಂಪಾರನೆಂಬೊಬ್ಬ ಜಂಗಮ 1835ರಲ್ಲಿ ಬಂಡಿನ ನಾಯಕತ್ವ ವಹಿಸಲು ಯತ್ತಿಸಿದರು. ಅವನು ತಾನು ಪದಚ್ಯುತ ರಾಜವಂಶದವನೆಂದು ಹೇಳಿಕೊಳ್ಳುತ್ತಿದ್ದನು. ಅವನನು ಸೆರೆ ಹಿಡಿಯಲಾಯಿತು. ತಾನು ಕೊಡಗಿನ ರಾಜವಂಶದವನೆಂದು ವಾದಿಸುತ್ತ ಕಲ್ಯಾಣ ಸ್ವಾಮಿಯೆಂಬುವನು ಈ ಬಂಡನ್ನು ಮುಂದುವರಿಸಿಕೊಂಡು ಹೋಗಲು ಯತ್ತಿಸಿದನು. ಅವನನ್ನು 1837ರಲ್ಲಿ ಬಂಧಿಸಲಾಯಿತು. ಈ ಬಂಡಾಯವು ಮುಖ್ಯವಾಗಿ ಘಟ್ಟದ ಕೆಳಗಿನ ಪ್ರದೇಶಗಳಲ್ಲಿ ಪಸರಿಸಿತು. ಅದಕ್ಕೆ ಕಾರಣ ಕಂದಾಯವನ್ನು ನಗದು ಹಣದ ರೂಪದಲ್ಲಿ ಕೊಡಬೇಕೆಂದು ಬ್ರಿಟಿಷ್ ಸರ್ಕಾರ ವಿಧಿಸಿದ್ದಕ್ಕೆ ಅಲ್ಲಿಯ ರೈತರು ಕುಪಿತರಾದದ್ದು. ಬೆಳ್ಳಾರೆ, ಸುಳ್ಯ, ಪುತ್ತೂರು, ಬಂಟವಾಳ, ಮಂಗಳೂರು ಮತ್ತು ಕೇರಳದಲ್ಲಿರುವ ಕಾಸರಗೋಡು ದಂಗೆಕೋರರ ಬಲವಾದ ನೆಲೆಗಳಾಗಿದ್ದವು.

ಅವರು ಮಂಗಳೂರಿನ ಬಾವಟೆಗುಡ್ಡೆ ಸ್ತಂಭದ ಮೇಲೆ ತಮ್ಮ ಪತಾಕೆಯನ್ನು ಹಾರಿಸಿದರು. ಬೆಳ್ಳಾರೆಯ ಖಜಾನೆಯನ್ನು ವಶಪಡಿಸಿಕೊಂಡರು: ನಂತರ ಬಂಟವಾಳ, ಕಾಸರಗೋಡುಗಳ ಖಜಾನೆಗಳನ್ನು ಸ್ವಾಧೀನ ಮಾಡಿಕೊಂಡರು. ಚೆಟ್ಟಿ ಬಸಪ್ಪನನನ್ನು ಬ್ರಿಟಿಷ್ ಸೈನ್ಯವು ಹಿಡಿದು ಅವನನ್ನು ಮೇ ತಿಂಗಳಲ್ಲಿ ಮಂಗಳೂರಿನಲ್ಲಿ ಗಲ್ಲಿಗೇರಿಸಿತು. ಬಂಗಾಡಿಯ (ಬೆಳತಂಗಡಿ ತಾಲ್ಲೂಕು) ಬಂಗ ರಾಜಕುಮಾರನೂ ಬಂಡುಕೋರರೊಂದಿಗೆ ಸೇರಿದ್ದಕ್ಕಾಗಿ ಅವನನ್ನೂ ಗಲ್ಲಿಗೇರಿಸಲಾಯಿತು. ಬಂಡುಕೋರರೊಂದಿಗೆ ಕೈಗೂಡಿಸಿದ ಕೊಡಗಿನ ಗುಡ್ಡಮನೆ ಅಪ್ಪಯ್ಯನನ್ನು ಮಡಿಕೇರಿಯಲ್ಲಿ ಶೂಲಕ್ಕೇರಿಸಲಾಯಿತು. ಸಾತಾರೆಯ ನರಸಪ್ಪ ಪೇಟಕರ್ ನೆಂಬುವನು ಛತ್ರಪತಿಯ ಅಧಿಕಾರಯಾಗಿದ್ದನು. ಅವನು ಸುರಪುರದ ನಾಯಕನ ಸೇವೆಯಲ್ಲಿದ್ದ ಕೋಹಿರಾನ ಎಂಬ ಜಮಾದಾರನ ಸಹಾಯದಿಂದ ಬಾದಾಮಿ ಕೋಟೆಯಲ್ಲಿ ಮೇ 1841ರಲಲಿ ಬಂಡೆದ್ದನು.

ಆದರೆ ಬಂಡುಗಾರರನ್ನು ಜೂನ್ ತಿಂಗಳಲ್ಲಿ ಸೋಲಿಸಿ ಬ್ರಿಟಿಷರು ನರಸಪ್ಪನನ್ನು ಬಂಧಿಸಿದರು. ಬಿದರೆ ಜಿಲ್ಲೆಯಲ್ಲಿ ಮಾರ್ಚ್ 1852ರಲ್ಲಿ ನಿಜಾಮ ಹಾಗೂ ಬ್ರಿಟಿಷರ ವಿರುದ್ಧ ದಂಗೆ ನಡೆಯಿತು. ಲಿಂಗಪ್ಪನೆಂಬುವನ ನಾಯಕತ್ವದಲ್ಲಿ ನಡೆದ ಈ ದಂಗೆಯನ್ನು ತೀವ್ರವಾಗಿ ಹತ್ತಿಕ್ಕಲಾಯಿತು.

**2. ಕರ್ನಾಟಕದಲ್ಲಿ 1857ರ ಬಂಡಾಯ**

1857ರ ರಾಷ್ಟ್ರವ್ಯಾಪೀ ಬಂಡಾಯ ಕರ್ನಾಟಕದಲ್ಲು ಪ್ರತಿಧ್ವನಿಸಿತು. ಸುರಪುರ ನರಗುಂದದ ರಾಜರು. ಹಲಗಲಿಯ ಬೇಡರು ಹಾಗೂ ಮುಂಡರಗಿ ಭೀಮರಾಯನ ನೇತೃತ್ವದಲ್ಲಿ ಧಾರವಾಡ ಜಿಲ್ಲೆಯ ಅನೇಕ ದೇಸಾಯರು 1857 58ರಲ್ಲಿ ಬ್ರಿಟಿಷರ ವಿರುದ್ಧ ಬಂಡೆದ್ದರು. ಕರ್ನಾಟಕದಲ್ಲಿಯರಾಜರುಗಳಿಗೆ ನಾನಾ ಸಾಹೇಬ ಪೇಶ್ವೆಯ ಕಾನ್‌ಪುರದಿಂದ ಬರೆದಿದ್ದ ಪತ್ರಗಳನನು ಬ್ರಿಟಿಷರು ಪತ್ತೆ ಹಚ್ಚಿದರು. ಇಂಥ ಕೆಲವು ಪತ್ರಗಳು ಭೀಮರಾಯನ ಬಳಿ ಇದ್ದವು.

**ಹಲಗಲಿ ಬಂಡಾಯ**

1857ರ ಶ್ರೇಣಿಯಲ್ಲಿಯ ದಂಗೆಗಳಲ್ಲಿ ಕರ್ನಾಟಕದಲ್ಲಿ ಈ ಮೊದಲು ಸಂಭವಿಸಿದ್ದು ನವೆಂಬರ್‌ನಲ್ಲಿ ಮುಧೋಳ ಸಮೀಪದ ಹಲಗಲಿಯಲ್ಲಿ. ಬ್ರಿಟಿಷ್ ಸರಕಾರದ ಶಸ್ತ್ರಾಸ್ತ್ರ ಅಧಿನಿಯಮವನ್ನು ಅಲ್ಲಿಯ ಬೇಡರು ಪ್ರತಿಭಟಿಸುತ್ತಿದ್ದರು. ಯಾಕೆಂದರೆ, ಅದರನ್ವಯ ಅವರು ತಮ್ಮ ಶಸ್ತ್ರಾಸ್ತ್ರಗಳನ್ನೆಲ್ಲ ಸರಕಾರಕ್ಕೆ ಒಪ್ಪಿಸಬೇಕಿತ್ತು. ಮರಾಠಾ ಸೈನಿಕ ಬಾಬಾಜಿ ನಿಂಬಾಳಕರನು ಅವರನ್ನು ಬಂಡೇಳುವಂತೆ ಪ್ರೋತ್ಸಾಹಿಸುತ್ತಿದ್ದನು. ಜಡಗ್ಯಾ ಮತ್ತು ಬಾಳ್ಯಾ ಎಂಬುವವರು ಅವರ ನಾಯಕರಾಗಿದ್ದರು. ಶಸ್ತ್ರಾಸ್ತ್ರಗಳನ್ನು ತಂದೊಪ್ಪಿಸಬೇಕೆಂಬ ಸರಕಾರಿ ಅಜ್ಞೆಯನ್ನು ಪ್ರತಿಭಟಿಸುತ್ತಿದ್ದರು ಸುಮಾರು 500 ಬೇಡರು ಮುಧೋಳಕ್ಕೆ ಬಂದರು. ಅಲ್ಲಿ ಬ್ರಿಟಿಷ್ ಸೈನ್ಯ ಮತ್ತು ಬೇಡರ ನಡುವೆ ನಡೆದ ಘರ್ಷಣೆಯಲ್ಲಿ ನಿಂಬಾಳಕರನು ಹತನಾದನು. ಆನಂತರರ ಬ್ರಿಟಿಷರು ಕೋಟೆಯನ್ನು ವಶಪಡಿಸಿ ಕೊಂಡರು. ಈ ಕಾರ್ಯದಲ್ಲಿ ನಾಯಕನ ಕೆಲವು ಸಂಬಂಧಿಕರು ಅವರಿಗೆ ನೆರವಾದರು. ತಪ್ಪಿಸಿಕೊಂಡು. ಹೈದರಾಬಾದಿಗೆ ಹೋದ ವೆಂಕಟಪ್ಪನನ್ನು ಅಲ್ಲಿಯೇ ಬಂಧಿಸಲಾಯಿತು. ಮುಂದೆ ಅವನಿಗೆ ನಾಲ್ಕು ವರ್ಷ ಕಾರಾಗೃಹವಾಸದ ಶಿಕ್ಷೆಯಾಯಿತು. ಆದರೆ ಅವನು ಆತ್ಮಹತ್ಯೆ ಮಾಡಿಕೊಂಡನು. ಅವನ ಸಂಸ್ಥಾನವನ್ನೆಲ್ಲ ಬ್ರಿಟಿಷರು ವಶಪಡಿಸಿಕೊಂಡು ನಂತರ ಅದನ್ನು ನಿಜಾಮನಿಗೆ ಒಪ್ಪಿಸಿದರು.

**ನರಗುಂದ ಬಂಡಾಯ :**

ನರಗುಂದ ಬಾಬಾ ಸಾಹೇಬ ಎಂದೇ ಖ್ಯಾತನಾದ ಭಾಸ್ಕರ್‌ರಾವ್ ಭಾವೆ ಬ್ರಿಟಿಷರ ವಿರುದ್ಧ ಸಿಡೆದೆದ್ದ ಇನ್ನೊಬ್ಬ ರಾಜ. ಮುಂಡರಗಿಯ ಭೀಮರಾವ್ ಹಾಗೂ ಹಮ್ಮಿಗೆ, ಡಂಬಳ. ಸೊರಟೂರ ಮತ್ತು ಗೋವನ ಕೊಪ್ಪದ ದೇಸಾಯರ ಸಹಕಾರವು ಅವನಿಗಿದ್ದವು. ತೋರಗಲ್ಲು ಮತ್ತು ಆನೆಗುಂದಿಯ ಅರಸರು ಅವನ ಸಹಭಾಗಿಗಳಾಗಿದ್ದರು. 1846ರಲ್ಲಿ ಅವನ ಪುತ್ರನೊಬ್ಬನನ್ನು ದತ್ತು ತೆಗೆದುಕೊಳ್ಳಲು ಬ್ರಿಟಿಷರು ಅನುಮತಿ ನಿರಾಕರಿಸಿದರು. 1857ರಲ್ಲಿ ಶಸ್ತ್ರಾಸ್ತ್ರ ಅಧಿನಿಯಮದನ್ವಯ ಅವನ ಬಳಿ ಇದ್ದ ಶಸ್ತ್ರಾಸ್ತ್ರಗಳನ್ನೆಲ್ಲ ತಮಗೆ ಅಧಿನಿಯಮದನ್ವಯ ಅವನ ಬಳಿ ಇದ್ದ ಶಸ್ತ್ರಾಸ್ತ್ರಗಳನ್ನುಧಾರವಾಡಕ್ಕೆ ಕಳುಹಿಸಿ. ನಂತರ ದಾರಿಯಲ್ಲಿ ಅವುಗಳನ್ನು ಲೂಟಿ ಮಾಡಿಸಿ ಮರಳಿ ತರುವಂತೆ ವ್ಯವಸ್ಥೆ ಮಾಡಿದನು. ಬ್ರಿಟಿಷರು ಮಾನ್‌ಸನ್ ಎಂಬ ಸೇನಾಪತಿಯನ್ನು ನರಗುಂದಕ್ಕೆ ಕಳುಹಿಸಿದರು. ಆದರೆ ನರಗುಂದಕ್ಕೆ ಹೋಗುವ ದಾರಿಯಲಲಿ. ಅವನು ರಾಮದುರ್ಗದ ಬಳಿ ಸುರೇಬಾನದಲ್ಲಿ ತಂಗಿದ್ದಾಗ ಬಾಬಾಸಾಹೇಬನ ಅನುಯಾಯಿಗಳು ಅವನನ್ನು ಹಿಡಿದು ಕೊಂದು ಬಿಟ್ಟರು. ಇದರಿಂದ ಕುಪಿತರಾದ ಬ್ರಿಟಿಷರು ನರಗುಂದಕ್ಕೆ ಮುತ್ತಿಗೆ ಹಾಕಿದಾಗ ಬಾಬಾಸಾಹೇಬ ತಲೆಮರೆಸಿ ಕೊಂಡನಾದರೂ ನಂತರ ಅವನನ್ನು ಹಿಡಿದು. ಜೂನ್ 1858ರಲ್ಲಿ ಬೆಳಗಾವಿಯಲಲಿಗಲ್ಲಿಗೇರಿಸಲಾಯಿತು.

ಬಾಬಾ ಸಾಹೇಬನ ಸಹಕಾರಿಯಾಗಿದ್ದ ಇನ್ನೊಬ್ಬ ವ್ಯಕ್ತಿ ಮುಂಡರಗಿ ಭೀಮರಾವ್, ಇಂಗ್ಲಿಷ್ ಶಿಕ್ಷಣ ಪಡೆದಿದ್ದ ಆತನು ಬ್ರಿಟಿಷ್ ಸರಕಾರದ ಸೇವೆಯಲ್ಲಿದವನು. ಆದರೆ ಅವನು ಹೆಮ್ಮೆ ಸ್ವಾಭಿಮಾನಗಳಿಂದಾಗಿ ಅವನು ತನ್ನ ನೌಕರಿಗೆ ಎರವಗಬೇಕಾಯಿತು.
ಅನೇಕ ನೆರೆಹೊರೆಯ ದೇಸಾಯಿಗಳ ಸಹಕಾರದಿಂದ ಅವನು ಬ್ರಿಟಿಷರ ವಿರುದ್ಧ ಬಂಡೆದ್ದನಲ್ಲದೆ ಹಮ್ಮಿಗೆ ದೇಸಾಯಿಯ ಸಹಾಯ ಪಡೆದು ಗದುಗಿನ ಖಜಾನೆಯನ್ನು ಲುಟು ಮಾಡಿದನು. ಅವನು ಕೊಪ್ಪಳದ ಬೆಟ್ಟದ ಕೋಟೆಯನ್ನು ಪ್ರವೇಶಿಸಿ ಅಲ್ಲಿ ಶಿಬಿರ ಹೂಡಿದನು. ಆದರೆ ಮೇ 1858ರಲ್ಲಿ ಬ್ರಿಟಿಷರು ಆ ಕೋಟೆಯನ್ನು ವಶಪಡಿಸಿಕೊಂಡು ಭೀಮರಾಯನನ್ನು , ಹಮ್ಮಿಗೆಯ ದೇಸಾಯಿ ಕೆಂಚನ ಗೌಡನನ್ನು ಅಲ್ಲಿಯೇ ಕೊಂದರು. ಬ್ರಿಟಿಷರು ನರಗುಂದ ಮತ್ತು ಕೊಪ್ಪಳ ಬಂಡುಗಳನ್ನು ಒಂದಾದ ನಂತರ ಇನ್ನೊಂದರಂತೆ ಪೂರ್ತಿ ಹತ್ತಿಕ್ಕಿ ಬಿಟ್ಟರು.

**ಸೂಪಾ ದಂಗೆ :**

ಇದೇ ಶ್ರೇಣಿಯಲ್ಲಿಯೆ ಬಂಡೆದ್ದ 1858–59ರ ಸೂಪಾ ದಂಗೆ, ರತ್ನಾಗಿರಿ ಜಿಲ್ಲೆಯ ಸಾವಂತವಾಡಿಯ ಫೋಂಡ ಸಾವಂತನ ಮೂವರು ಪುತ್ರರು (ನಾನಾ, ಬಾಬಾ ಮತ್ತು ಹನುಮಂತ ) ಗೋವಾದಲ್ಲ ಸೆರೆಯಲ್ಲಿದ್ದರು. ಅವರು ಅಲ್ಲಿಂದ ತಪ್ಪಿಸಿಕೊಂಡು ಉತ್ತರ ಕನ್ನಡಕ್ಕೆ ಓಡಿಬಂದರು. ಸೂಪಾ ತಾಲ್ಲೂಕಿನಲ್ಲಿ ಬಂಡಾಯದ ಕಹಳೆಯನ್ನು ಊದಿದರು. ಅಲ್ಲಿ ಫಡ್ನಿಸ್ ಸೋದರರ (ರಾಘೋಬಾ, ಚಿಂತೋಬಾ ಮತ್ತು ಶಾಂತ) ನಾಯಕತ್ವದಲ್ಲಿ ಸ್ಥಳೀಯ ಯುವಕರ ನೆರವು ಅವರಿಗೆ ದೊರೆಯಿತು. ಸೂಪಾ ತಾಲ್ಲೂಕಿನ ದರ್ಶನೀಗುಟ್ಟ ಅವರ ಕೇಂದ್ರವಾಗಿತ್ತು.
ಅವರು ಪೊಲೀಸ್ ಠಾಣೆಗಳನ್ನು ಸುಂಕದ ಕಟ್ಟೆಗಳನ್ನು ಸುಟ್ಟು ಹಾಕಿದರು. ಅವರ ಈ ಬಗೆಯ ಚಟುವಟಿಕೆಗಳು ಫೆಬ್ರವರಿ 1858ರಿಂದ ಡಿಸೆಂಬರ್ 1859ರ ವರೆಗೆ ಮುಂದುವರಿದವು. ಮುಂಬಯಿಯಿಂದ ಕ್ಯಾಪ್ಟನ್ ಷ್ನಿಡರ್ ಸಾವಂತ ಸೋದರರನ್ನು ಗೋವೆಗೆ ಓಡಿಸಿದನಾದರೂ ಫಡ್ನಿಸ್ ಬಂಧುಗಳು ತಮ್ಮ ಚಟುವಟಿಕೆಗಳನನು ನಿಲ್ಲಸದೆ ಮುಂದುವರಿಸಿದರು. ಲೆಫ್ಟನೆಂಟ್ ಗಿರ್ಜ್‌ಜನ್ ಮತ್ತು ಡ್ರೈವರ್‌ರ ದಾಳಿಯನ್ನು ಎದುರಿಸುತ್ತಿದ್ದಾಗ ಅವರಲ್ಲೋಬ್ಬನಾದ ಚಿಂತೋಟ ಹತನಾದರು. ಇತರರನ್ನು ಚದುರಿಸಲು ಡಿಸೆಂಬರ್ 1859ರ ವೇಳೆಗೆ ಸಾಧ್ಯವಾಯಿತು.

**ಭಾಲ್ಕಿ ಸಂಚು :**

ಹೆಸರಿಸಬಹುದಾದ ಕೊನೆಯ ಬಂಡು 1867ರಲ್ಲಿ ನಡೆದ ಭಾಲ್ಕಿಯ ಸಂಚು. ರಾಮರಾಯನೆಂಬುವನು ಭಾಲ್ಕಿಯ ಅನೇಕ ಅನುಯಾಯಿಗಳೊಂದಿಗೆ ಅಷ್ಟಿಯಲ್ಲಿ ಬಂಡಾಯದ ಧ್ವಜ ಹಾರಿಸಿದನು. ಸತಾರೆಯ ಛತ್ರಪತಿಗೆ ನ್ಯಾಯ ಸಿಗಬೇಕೆಂದು ತಾನು ಸಿಡಿದೆದ್ದಿರುವುದಾಗಿ ಆತ ಹೇಳಿಕೊಂಡನು. ಅವನನ್ನು ಅವನ ಅನುಯಾಯಿಗಳನ್ನೂ ನಂತರ ಬಂಧಿಸಿ ವಿಚಾರಣೆಗೆ ಗುರುತುಪಡಿಸಲಾಯಿತು. ಬಿಡಿಬಿಡಿಯಾಗಿ ಸಂಘಟಿತ ರೂಪದಲ್ಲಿಯೇ ನಡೆದ ಈ ಬಂಡುಗಳು ಬ್ರಿಟಿಷರಿಗೆ ತುಂಬಾ ಸಹಾಯಕಾರಿಯಾಗಿಯೇ ಪರಿಣಮಿಸಿದವು. ಇದರಿಂದ ಅನೇಕ ಆಡಳಿತ ವಿಷಯ ಹಾಗೂ ಯುದ್ಧ ತಂತ್ರ ವಿಷಯ ಸಮಸ್ಯೆಗಳನ್ನು ಅರ್ಥ ಮಾಡಿಕೊಳ್ಳಲು ಅವರಿಗೆ ಶಕ್ಯವಾಯಿತು. ಕಿತ್ತೂರು ಚನ್ನಮ್ಮನ, ನರಗುಂದ ಬಾಬಾಸಾಹೇಬನ ಕಲಿತನವು ಇಪ್ಪತ್ತನೇ ಶತಮಾನದಲ್ಲಿ ಸ್ವಾತಂತ್ರ್ಯ ಯೋಧರಿಗೆ ಸ್ಫೂರ್ತಿಯ ಸೆಲೆಯಾಗಿ ಪರಿಣಮಿಸಿತು.

**3. ಜವಾಬುದಾರಿ ಸರಕಾರಕ್ಕಾಗಿ ಚಳವಳಿ**

ಸರಕಾರದಲ್ಲಿ ಜನತೆಯ ಸಹಭಾಗಿತ್ವದ ಬೆಳವಣಿಗೆಯಲ್ಲಿ ಮೈಸೂರು ಅತ್ಯಂತ ಉತ್ತಮವಾದ ಸಂಪ್ರದಾಯಗಳನ್ನು ಸ್ಥಾಪಿಸಿದ್ದಿತು.

1881ರಲ್ಲಿ ರಾಜರಿಗೆ ಅಧಿಕಾರದ ಪ್ರಧಾನವಾದ ಕೂಡಲೇ ದಿವಾನ ರಂಗಾಚಾರ್ಲು ಪ್ರಜಾಪ್ರತಿನಿಧಿ ಸಭೆಯನ್ನು ಪ್ರಾರಂಭಿಸಿದ್ದರು. ದಸಾರದ ಸಮಯದಲ್ಲಿ ಪ್ರತಿ ವರುಷವೂ ಅದು ಸೇರುತ್ತಿತ್ತು. ನಿವೃತ್ತ ಮೇಲಾಧಿಕಾರಿಗಳು, ರಾಜಮನೆತನದ ಸದಸ್ಯರು ಮತ್ತು ಜನತೆಯ ಪ್ರತಿನಿಧಿಗಳು ಇವರನ್ನೆಲ್ಲ ಅದು ಒಳಗೊಂಡಿದ್ದಿತು. ಮೊದಲ ಸಭೆಯಲ್ಲಿ 144 ಸದಸ್ಯರು ಉಪಸ್ಥಿತರಿದ್ದರು. 1887ರಿಂದ ಸದಸ್ಯರ ಹೆಸರುಗಳನ್ನು ರಾಜ್ಯ ಪತ್ರದಲಲಿ ಪ್ರಕಟಿಸುತ್ತ ಬಂದರು. ಪ್ರಾರಂಭದ ವರುಷಗಳಲ್ಲಿ ಸದಸ್ಯರನ್ನು ನೇಮಿಸಲಾಗುತ್ತಿತ್ತು. ಆದರೆ 1891ರಲ್ಲಿ ವಾರ್ಷಿಕ ಚುನಾವಣೆಯ ಪದ್ಧತಿಯನ್ನು ಜಾರಿಗೆ ತರಲಾಯಿತು. ಪದವೀಧರರು ಹಾಗೂ ಹೆಚ್ಚು ಆಸ್ತಿಯುಳ್ಳ ಜನರು (ಭೂಕಂದಾಯವೆಂದು ಕನಿಷ್ಠ ರೂ. 100 ಮತ್ತು ಮನೆಯ ತೆರಿಗೆ ರೂ. 13 ಕೊಡುವವರು) ಮತದಾನಕ್ಕೆ ಅರ್ಹರೆಂದು ಮಾಡಲಾಗಿದ್ದಿತು.

ಬ್ರಿಟಿಷ್ ಪ್ರಾಂತಗಳಲ್ಲಿ ಚುನಾವಣಾ ಪದ್ಧತಿಯನ್ನು ಪ್ರಾರಂಭಿಸುವ 1882ರಲ್ಲಿ ಒಂದು ವರುಷ ಮೊದಲು ಇದಾಗಿದ್ದಿತು.
1894ರಲ್ಲಿ ಸದಸ್ಯರ ಅವಧಿ ಮೂರು ವರುಷ ಎಂದು ನಿರ್ಧರಿಸಲಾಗಿದ್ದಿತು. ಭೂಕಂದಾಯ ನಿರ್ಣಯ, ಆಯುಧ ಕಾನೂನು, ಶೈಕ್ಷಣಿಕ ಅನುಕೂಲತೆಗಳ ವಿತರಣೆ ಮತ್ತು ಉದ್ಯಮಗಳ ಬೆಳವಣಿಗೆ ಈ ಮೊದಲಾದ ವಿವಿಧ ಸಾರ್ವಜನಿಕ ಲೋಪದೋಷಗಳನ್ನುಪ್ರಜಾ ಪ್ರತಿನಿಧಿ ಸಭೆಯಲ್ಲಿ ಎತ್ತಲು ಅವಕಾಶವಿತ್ತು. ಸಾರ್ವಜನಿಕ ಬೇಡಿಕೆಗಳನ್ನು ಅದು ಯಶಸ್ವಿಯಾಗಿ ಬಹಿರಂಗ ಪಡಿಸುತ್ತಿತ್ತು. ಕೆಲವೊಂದು ಪ್ರಮಾನದಲ್ಲಿ ಚುನಾಯಿತ ಸದಸ್ಯರನ್ನು ಒಳಗೊಂಡು 1903ರಲ್ಲಿ ಜಿಲ್ಲಾ ಮಂಡಲಗಳು ಹಾಗೂ ತಾಲ್ಲೂಕು ಮಂಡಲಗಳು ರಚಿತವಾದವು.

1907ರಲ್ಲಿ ನ್ಯಾಯ ವಿಧಾಯಕ್ಕೆ ಸಭೆ (Legislative Council ) ಸ್ಥಾಪಿತವಾಯಿತು. ಅದು ಚಿಕ್ಕದಾಗಿದ್ದಿತು. ಈ ದಿವಾನರ ಸಲಹಾ ಪರಿಷತ್ತಿಗೆ 10ರಿಂದ 15ರವರೆಗೆ ಸದಸ್ಯರನ್ನು ಜೋಡಿಸಿ ಆ ಸಭೆಯನ್ನು ವಿಸ್ತರಿಸಲಾಗಿದ್ದಿತು. ಇವರಲ್ಲಿ 3/5 ಸದಸ್ಯರು ಅಧಿಕಾರೇತರರಾಗಿದ್ದರು. ಪ್ರಜಾಪ್ರತಿನಿಧಿ ಸಭೆಯಿಂದ ಈ ಸಭೆಗೆ ಇಬ್ಬರು ಸದಸ್ಯರನ್ನು ಚುನಾಯಿಸಿಕೊಡುವುದಕ್ಕೆ ಆಸ್ಪದ ಮಾಡಿಕೊಟ್ಟಿತು. 1914ರಲ್ಲಿ ಸದಸ್ಯರ ಸಂಖ್ಯೆ 24ಕ್ಕೆ ಏರಿತು. ಇದರಲ್ಲಿ ಎಂಟು ಸದಸ್ಯರು ಚುನಾಯಿತರು 1919ರಲಲಿ ನ್ಯಾಯ ವಿಧಾಯಕ ಸಭೆಯ ಸದಸ್ಯರ ಸಂಖ್ಯೆ 30ಕ್ಕೆ ಏರಿತು. 1917ರಿಂದ ಪ್ರಜಾಪ್ರತಿನಿಧಿ ಸಭೆಯ ವರ್ಷಕ್ಕೆ ಎರಡು ಬಾರಿ ಸೇರಲು ಪ್ರಾರಂಭವಾಯಿತು. ಇದರ ಒಂದು ಅಧಿವೇಶನವು ಮುಂಗಡಪತ್ರ ಚರ್ಚೆಗಾಗಿ ಇರುತ್ತಿದ್ದಿತು.

ಭಾರತದಲ್ಲಿ ನಡೆದ ಹೋಂ ರೂಲ್ ಚಳವಳಿಯ ಮೈಸೂರಿನಲ್ಲಿ ಜವಾಬುದಾರಿ ಸರಕಾರದ ಶಕ್ತಿಯುತವಾದ ಬೇಡಿಕೆಗೆ ಚಾಲನೆ ನೀಡಿತು. ಮೈಸೂರಿನ **'ಸತ್ಯವಾದಿ'** ಎಂಬ ಪತ್ರಿಕೆಯ ಇಂಥ ಬೇಡಿಕೆಯನ್ನು ಮೊದಲ ಸಲ ಮಾರ್ಚ್ 1918ರಲ್ಲಿ ಪ್ರಕಟಿಸಿತು.
1921ರಿಂದ ಮೈಸೂರಲ್ಲಿ ತನ್ನ ಚಟುವಟಿಕೆಗಳನ್ನು ಆರಂಭಿಸಿದ ಭಾರತ ರಾಷ್ಟ್ರೀಯ ಕಾಂಗ್ರೆಸ್ ಶಕ್ತಿಯುತವಾದ ರೀತಿಯಲ್ಲಿ ಜವಾಬುದಾರಿ ಸರಕಾರವನ್ನು ಕೇಳಹತ್ತಿತ್ತು.
1923ರಲ್ಲಿ ಸೀಲ್ ಸಮಿತಿಯು ನೇಮಕಗೊಂಡಿತು. ಶಾಸನಬದ್ಧವಾಗಿ ಪ್ರಜಾ ಪ್ರತಿನಿಧಿ ಸಭೆಯನ್ನು ರಚಿಸಬೇಕೆಂದು ಅದರ ವರದಿಯ ಸೂಚಿಸಿತು. ಕಾನೂನು ಹಾಗೂ ಹಣಕಾಸಿನ ಎಲ್ಲ ವಿಷಯಗಳ ಬಗ್ಗೆ ಸಭೆಯನ್ನು ಕೇಳಲೇಬೇಕೆಂದು ಮತ್ತೊಂದು ಸೂಚನೆಯನ್ನು ಮಾಡಿತು. 250–275ಕ್ಕೆ ಸಂಖ್ಯೆಯನ್ನು ಏರಿಸಬೇಕಾಯಿತು. ರೂ.50 ಭೂಕಂದಾಯ ಅಥವಾ ರೂ.10 ನಗರಸಭೆ ತೆರಿಗೆ ಕೊಡುವವರು ಮತದಾರರಾಗಲು ಅರ್ಹರೆಂದು ನಿಶ್ಚಯ ಮಾಡಲಾಯಿತು. ಮೊದಲ ಸಲ ಮಹಿಳೆಯರಿಗೆ ಮತದಾನದ ಹಕ್ಕನ್ನು ಕೊಡಲಾಯಿತು. ಅಧಿಕಾರೇತರರು ಬಹುಸಂಖ್ಯಾತರಗಿರುವಂತೆ ನ್ಯಾಯ ವಿಧಾಯಕಸಭೆಯ ಸದಸ್ಯರ ಬಲವನ್ನು 50ಕ್ಕೆ ಏರಿಸಲಾಯಿತು. ಅದರೂ ಅದು ಜವಾಬುದಾರಿ ಸರಕಾರವನ್ನು ಸ್ಥಾಪಿಸಲಿಲ್ಲ.

ಹಲವು ಕಾಂಗ್ರೆಸ್ಸಿಗರು ಹರಿಹರಪುರದಲ್ಲಿ (ಚಿಕ್ಕಮಗಳೂರು ಜಿಲ್ಲೆ) ಹೊಸಕೊಪ್ಪ ಕೃಷ್ಣರಾವ್ ಇವರ ಧುರೀಣತ್ವದಲ್ಲಿ ಒಂದು ಅಖಿಲ ಮೈಸೂರು ಸಮ್ಮೇಳನವನ್ನು ಏರ್ಪಾಟು ಮಾಡಿದರು. ಮತ್ತು ಜವಾಬುದಾರಿ ಸರಕಾರವನ್ನು ಸ್ಥಾಪಿಸಬೇಕೆಂದು ಶಕ್ತಿಯುತವಾದ ರೀತಿಯಲ್ಲಿ ಕೇಳಿದರು (1924), ಅನೇಕ ಕನ್ನಡ ವರ್ತಮಾನ ಪತ್ರಿಕೆಗಳು ಈ ಬೇಡಿಕೆಯನ್ನು ಬೆಂಬಲಿಸಿದವು.
ಸುಲ್ತಾನ ಪೇಟೆ ಗಣಪತಿ ಗಲಭೆಗಳು (1928–29) ಜವಾಬಾದಾರಿ ಸರಕಾರದ ಬೇಡಿಕೆಯನ್ನು ಪುಷ್ಟೀಕರಿಸಿದವು. ಗಲಭೆಗಳ ಅನಂತರ ನಿಯಮಿಸಲ್ಪಟ್ಟ 'ವಿಶ್ವೇಶ್ವರಯ್ಯ ಸಮಿತಿ'ಯು ಈ ಬೇಡಿಕೆಯನ್ನು ಅನುಮೋದಿಸಿತು. 1917ರಲ್ಲಿ ಸ್ಥಾಪಿತವಾದ ಪ್ರಜಾಮಿತ್ರ ಮಂಡಳಿಯು ಜವಾಬ್ದಾರಿ ಸರಕಾರ ಬೇಡಿಕೆಗೆ ಅನುಕೂಲವಾಗಿರಲಿಲ್ಲ. ಕೆ.ಸಿ. ರೆಡ್ಡಿ ಹಾಗು ವಿ. ವೆಂಕಟಪ್ಪ ಅವರ ಧುರೀಣತ್ವದಲ್ಲಿ ಹಲವು ಯುವಕರು **1930ರಲ್ಲಿ 'ಪ್ರಜಾಪಕ್ಷ'** ಎಂಬ ಹೊಸ ಪಕ್ಷವನ್ನು ಸ್ಥಾಪಿಸಿ, ಜವಾಬ್ದಾರಿ ಸರಕಾರದ ಬೇಡಿಕೆಯನ್ನು ಮುಂದೆ ಮಾಡಿದರು.

ಇವೆರಡೂ ಪಂಗಡಗಳು ಒಂದಾಗಿ 'ಪ್ರಜಾ ಸಂಯುಕ್ತ ಪಕ್ಷ' ಎಂಬುದು 1934ರಲ್ಲಿ ರಚಿತವಾಯಿತು. ಆದರೆ ಈ ಪಂಗಡವು ಕಾಂಗ್ರೆಸ್ಸಿನಿಂದ ದೂರ ಉಳಿಯಿತಲ್ಲದೆ ರಾಷ್ಟ್ರೀಯ ಸಂಸ್ಥೆಯು ಕೇವಲ 'ಬ್ರಾಹ್ಮಣರ ಪ್ರಾಬಲ್ಯದ ಪಕ್ಷವಾಗಿದೆ' ಎಂದೂ ಹೇಳಲಾಗುತ್ತಿತ್ತು. 1935ರ ಭಾರತ ಸರಕಾರದ ಕಾನೂನಿನಿಂದ ನೆರೆ ಹೊರೆಯ ಬ್ರಿಟಿಷ್ ಸರಕಾರದ ಮದ್ರಾಸ್ ಮತ್ತು ಮುಂಬೈ ಪ್ರಾಂತ್ಯಗಳಲ್ಲಿ 1937ರಲ್ಲಿ ಜನತಾ ಮಂತ್ರಿಗಳು ಬರುವಂತಾಯಿತು. ಕಾಂಗ್ರೆಸ್ ಪಕ್ಷವೇ ಈ ಮಂತ್ರಿ ಮಂಡಲವನ್ನು ರಚಿಸಿದ್ದಿತು.
ಆದರೆ ಮೈಸೂರಿನಲ್ಲಿ ಮಾತ್ರ ರಾಜಕೀಯ ಪರಿಸ್ಥಿತಿಯಲ್ಲಿ ಯಾವ ಬದಲಾವಣೆಗಳೂ ಆಗಿರಲಿಲ್ಲ. ಇದರಿಂದ ಪ್ರಜ ಸಂಯುಕ್ತ ಪಕ್ಷದ ಧುರೀಣರ ನೀತಿ ಬದಲಾಗಬೇಕಾಯಿತು.

1937 ಅಕ್ಟೋಬರ್‌ನಲಲಿ ಸ್ಥಾನಿಕ ಕಾಂಗ್ರೆಸ್ ಸಮಿತಿಯ ಜೊತೆಗೆಕೂಡಿಕೊಂಡು, ಭಾರತ ರಾಷ್ಟ್ರೀಯ ಕಾಂಗ್ರೆಸ್‌ನ ನೀತಿಗಳಿಗೆ ಅಂಟಿಕೊಂಡು. 'ಮೈಸೂರು ಕಾಂಗ್ರೆಸ್' ಎಂಬುದನ್ನು ರಚಿಸಲು ನಿರ್ಣಯಿಸಿತು.
ಇದೇ ಅವಧಿಯಲ್ಲಿ ಘಟನಾತ್ಮಕ ಸುಧಾರಣೆಗಳ ಬೇಡಿಕೆಯನ್ನು ಪರಿಶೀಲಿಸಲು ಕೆ.ಆರ್. ಶ್ರೀನಿವಾಸ ಅಯ್ಯಂಗಾರ್ ಸಮಿತಿಯ 1938 ಮಾರ್ಚ್‌ನಲ್ಲಿ ನೇಮಿಸಲ್ಪಟ್ಟಿತು.

**ಮೊದಲನೆಯ ಮೈಸೂರು ಕಾಂಗ್ರೆಸ್ ಅಧೀವೇಶನು ಮದ್ದೂರಿನ ಸಮೀಪದಲ್ಲಿ ಶಿವಪುರದಲ್ಲಿ ಟಿ.ಸಿದ್ದಲಿಂಗಯ್ಯ ಅವರ ಅಧ್ಯಕ್ಷತೆಯಲ್ಲಿ ಏಪ್ರಿಲ್ 1938ರಲ್ಲಿ ಸೇರಿತು.** ಅದು ಮೈಸೂರು ಸಂಸ್ಥಾನದಲ್ಲಿ ಅಭೂತಪೂರ್ವ ರಾಜಕೀಯ ಸಮ್ಮೇಳನವಾಯಿತು. ಜವಾಬ್ದಾರಿ ಸರಕಾರಕ್ಕಾಗಿ ಒತ್ತಾಯದ ಬೇಡಿಕೆಯನ್ನು ಅದು ಮುಂದಿಟ್ಟಿತು. ಇದರನಂತರ **'ವಿದುರಾಶ್ವತ್ಥ ದುರಂತ'** (25 ಏಪ್ರಿಲ್ 1938) ಸಂಭವಿಸಿ, ಕಾಂಗ್ರೆಸ್ಸಿನ ಕೈಗಳನ್ನು ಬಲಪಡಿಸಿತು.

ಎಚ್. ಸಿ. ದಾಸಪ್ಪನವರ ಅಧ್ಯಕ್ಷತೆಯಲಲಿ ಕಾಂಗ್ರೆಸ್ಸಿನ ಎರಡನೆಯ ಅಧಿವೇಶನ ವಿದುರಾಶ್ವತ್ಥದಲ್ಲಿ ನಡೆದು (1939), ಮತ್ತೆ ಜವಾಬ್ದಾರಿ ಸರಕಾರದ ಬೇಡಿಕೆಯನ್ನು ಮುಂದೆ ಮಾಡಿತು. ಇದೇ ಬೇಡಿಕೆಗಾಗಿ ಒತ್ತಾಯ ತರಲು ಕಾಂಗ್ರೆಸ್ 1939ನಲ್ಲಿ **ಅರಣ್ಯ ಸತ್ಯಾಗ್ರಹ**ವನ್ನು ಹೂಡಿತು. ಇದರಲ್ಲಿ ನೂರಾರು ಜನರು ತಾವಾಗಿಯೇ ಬಂಧಿತರಾದರು. ಈ ಚಳವಳಿಯು ಚಿತ್ರದುರ್ಗ, ತುಮಕೂರು, ಹಾಸನ ಮತ್ತು ಶಿವಮೊಗ್ಗ ಜಿಲ್ಲೆಗಳಲ್ಲಿ ತೀವ್ರತರವಾಗಿದ್ದಿತು. ಅಯ್ಯಂಗರ್ ಸಮಿತಿಯ ಶಿಫಾರಸ್ಸುಗಳು 1940ರ ಕಾನೂನು ಅಂತಶಃ ಒಪ್ಪಿಕೊಂಡಿತು. 68 ಸದಸ್ಯರ ನ್ಯಾಯವಿಧಾಯಕ ಸಭೆ ಹಾಗೂ 310 ಸದಸ್ಯರ ಪ್ರಜಾಪ್ರತಿನಿಧಿ ಸಭೆ ಇವು ಸ್ಥಾಪಿತವಾದವು. ಮುಸ್ಲಿಂರು ಕ್ರೈಸ್ತರು ಹಾಗೂ ಮಹಿಳೆಯರು ಇವರಿಗೆ ಮೀಸಲಾತಿ ಸ್ಥಳಗಳೀದ್ದವು. ಹೊಸದಾಗಿ ನಿಯಮಿತವಾದ ಸಚಿವ ಸಂಪುಟದಲ್ಲಿ ಅಧಿಕಾರೇತರ ಮಂತ್ರಿಗಳು ನಿಜವಾಹಿಯೂ ಶಾಸನ ಸಭೆಗೆ ಜವಾಬ್ದಾರರಾಗಿರಲಿಲ್ಲ.

ಹೊಸ ವ್ಯವಸ್ಥೆಗಳ ವಿರುದ್ಧ ಕಾಂಗ್ರೆಸ್ ತನ್ನ ಚಳವಳಿಯನ್ನು ಮುಂದುವರಿಸಿತು. 1941ರಲ್ಲಿ ಪ್ರಜಾಪ್ರತಿನಿಧಿ ಸಭೆಯ ಚುನಾವಣೆಯಲ್ಲಿ ಅದುಭಾಗವಹಿಸಿ, ಸಾಕಷ್ಟು ಸ್ಥಾನಗಳನ್ನು ಗೆದ್ದಿತು. ಅಷ್ಟರಲ್ಲಿ 'ಭಾರತ ಬಿಟ್ಟು ತೊಲಗಿ' ಚಳುವಳಿಯು ಎಲ್ಲಕಾಂಗ್ರೆಸ್ ಮುಖಂಡರನ್ನು ಸೆರೆಮನೆಗೆ ಅಟ್ಟಿತು.

**4. ನವೋದಯ ಹಾಗೂ ರಾಷ್ಟ್ರೀಯತೆಯ ಉದಯ**

ಬ್ರಿಟಿಷರ ಅಡಳಿತವು ಭಾರತೀಯ ಜೀವನದಲ್ಲಿ ಅನೇಕ ಬದಲಾವಣೆಗಳನ್ನುಂಟು ಮಾಡಲು ಕಾರಣವಾಗಿದೆ. ಹತ್ತೊಂಬತ್ತನೆಯ ಶತಮಾನದ ಉತ್ತರಾರ್ಧದಿಂದ ಪಾಶ್ವಿಮಾತ್ಯ ಪ್ರಭಾವಕ್ಕೆ ಕರ್ನಾಟಕವು ತೀವ್ರತರವಾದ ಪ್ರತಿಕ್ರೆಯೆ ತೋರಿಸಿತು.
ಪಾಶ್ವಿಮಾತ್ಯ ಹಾಗೂ ಇಂಗ್ಲಿಷ್ ಶಿಕ್ಷಣವು ಹರಡಿತು. ಔದ್ಯಮಿಕ ಕ್ರಾಂತಿಯ ಕಂಡು ಬಂದಿತು. ಸಾರಿಗೆ ಮತ್ತು ವಾರ್ತಾ ಸೌಕರ್ಯಗಳು ವಿಸ್ತಾರಗೊಂಡವು. ನಗರೀಕರಣ ಅತ್ಯಮತ ಹೆಚ್ಚಾಗಿ. ಹೊಸದಾಗಿ ಮಧ್ಯಮ ವರ್ಗವೊಂದು ನಿರ್ಮಾಣವಾಯಿತು.

ಇದೇ ಮಧ್ಯಮ ವರ್ಗವು ಆಧುನೀಕರಣ ಮತ್ತು ನವೋದಯ (Renaissance)ಕ್ಕೆ ಕಾರನವಾಯಿತು. ಸಾಕ್ಷರತೆಯ ವಿಸ್ತರನೆ ಹಾಗು ಮುದ್ರಣಗಳ ಪ್ರಾರಂಭ ಇವು ತಮ್ಮದೇ ಆದ ರೀಯಲ್ಲಿ ಸಾಹಿತ್ಯವನ್ನು ಒಳಗೊಂಡು ಎಲ್ಲ ಬೌದ್ಧಿಕ ಚಟುವಟಿಕೆಗಳ ಕ್ಷೇತ್ರಗಳಲ್ಲಿ, ಎಲ್ಲ ರೀತಿಯ ವಾರ್ತಾ ಸೌಕರ್ಯಗಳು ವಿಸ್ತಾರಗೊಂಡವು. ನಗರೀಕರಣ ಅತ್ಯಂತ ಹೆಚ್ಚಾಗಿ, ಹೊಸದಾಗಿ ಮಧ್ಯಮ ವರ್ಗವೊಂದು ನಿರ್ಮಾಣವಾಯಿತು. ಪ್ರಾರಂಭದಲ್ಲಿ ನವೋದಯವು ಬೌದ್ಧಿಕ ಚಳವಳಿಯಾಗಿತ್ತು ಎಂಬುದರಲ್ಲಿ ಸಂಶಯವಿಲ್ಲ. ಅದು ಪಾಶ್ಚಿಮಾತ್ಯಕ್ಕೆ ಕರ್ನಾಟಕದ ಪ್ರತಿಕ್ರಿಯೆಯ ಪರಿಣಾಮ. ಜ್ಞಾನದ ಚೈತನ್ಯ, ಉದಾರವಾದ ಮತ್ತು ಪ್ರಜಾಪ್ರಭುತ್ವಗಳ ವಿಚಾರಗಲನ್ನೆಲ್ಲ ಹೊಸ ಬುದೀಜೀವಿಗಳ ವರ್ಗ ಸ್ವಾಗತಿಸಿತು.

ಕ್ರೈಸ್ತ ಮಿಶನರಿಗಳ ಚಟುವಟಿಕ ಮತ್ತು ಹಿಂದೂ ಸಾಮಾಜಿಕ ರೂಢಿಗಳ ಬಗ್ಗೆ ಅವರ ಕಟುಟೀಕೆ, ಇವೂ ಸಹ ಎಷ್ಟೋ ಸಾಮಾಜಿಕ ಬದಲಾವಣೆಗಳಿಗೆ ಕಾರಣವಾದವು. ಅಖಿಲ ಭಾರತ ಸಾಮಾಜಿಕ ಸುಧಾರಣೆಗಳ ಚಳವಳಿಗಳನ್ನು ಕರ್ನಾಟಕವು ಸ್ವಾಗತಿಸಿತು. ಇದೇ ಅವಧಿಯಲ್ಲಿ ಕರ್ನಾಟಕದ ಇತಿಹಾದವು ರಚಿಸಲ್ಪಟ್ಟಿತು. ಒಟ್ಟಾರೆ ಇದೆಲ್ಲದರ ಪ್ರತಿಫಲವೆಂದರೆರಾಷ್ಟ್ರೀಯತೆಯ ಉದಯ.

ಬ್ರಿಟಿಷರು ಇಂಗ್ಲಿಷ್ ಶಿಕ್ಷನದೆ ವಿಸ್ತರಣೆಗೂ ನೆರವಾದರು. ಆಯುಕ್ತರ ಕಾಲದಲ್ಲಿ ಮೈಸೂರಿನಲ್ಲಿ ಇಂಗ್ಲಿಷ್ ಶಾಲೆಗಳು ಪ್ರಾರಂಭವಾದವು. ಬಾಸೆಲ್ ಮಿಶನ್, ಲಂಡನ್ ಮಿಶನ್ ಹಾಗೂ ವಿವಿಧ ರೋಮನ್ ಕ್ಯಾಥೋಲಿಕ್ ಮಿಶನರಿ ಸಂಸ್ಥೆಗಳು ಈ ದಿಶೆಯಲಲಿ ತಮ್ಮ ಶಕ್ತಿಯದ್ದಷ್ಟು ಸೇವೆ ಸಲ್ಲಿಸಿವೆ.

ಹಡ್ಸನ್‌ನ ಪ್ರೇರಣೆಯಂತೆ ವೆಸ್ಲಿಯನ್ ಮಿಶನ್ 1938ರಲ್ಲಿ ಬೆಂಗಳೂರು ದಂಡು ಪ್ರದೇಶದಲ್ಲಿ ಒಂದು ಇಂಗ್ಲಿಷ್ ಶಾಲೆಯನ್ನು ತೆರೆಯಿತು. 1833ರಲ್ಲಿ ಮೈಸೂರಲ್ಲಿ ಪ್ರಾರಂಭವಾದ 'ರಾಜಾಶಾಲೆ'ಯನ್ನು ಸಹ ಹಡ್ಸನ್ ಆಡಳಿತಕ್ಕೆ ಹಸ್ತಾಂತರಿಸಲಾಯಿತು.
ಲಂಡನ್ ಮಿಶನ್ 1840ರಲ್ಲಿ ಬೆಂಗಳೂರಿನಲ್ಲಿ ಒಂದು ಶಾಲೆಯನ್ನು 1842ರಲ್ಲಿ ಮಂಗಳುರು ಹಾಗೂ ಉಡುಪಿಯಲ್ಲಿ ಸ್ಥಾಪಿಸಿತು.

ಮಾಗ್ಲಿಂಗ್‌ನ ಪ್ರೇರಣೆಯಿಂದ 1837ರಲ್ಲಿ ಧಾರವಾಡದಲ್ಲಿಯೂ ಶಾಲೆ ಆರಂಭವಾಯಿತು. ಬೆಳಗಾವಿ (1832), ಬಳ್ಳಾರಿ (1836) ಮಡಿಕೇರಿಯಲಲಿ (1834) ಇದೇ ರೀತಿ ಇಂಗ್ಲಿಷ್ ಶಾಲೆಗಳು ಪ್ರಾರಂಭವಾದವು, ಮೈಸೂರು ಸಂಸ್ಥಾನದಲ್ಲಿ 1854ರ ಹೊತ್ತಿಗೆ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲೂ ಇಂಥ ಶಾಲೆಗಳಿದ್ದವು. 1876ರಲ್ಲಿ ಕಲ್ಬುರ್ಗಿಯಲ್ಲಿ ಒಂದು ಶಾಲೆ ಮಾತ್ರ ಇದ್ದಿತು. 1883ರ ಹೊತ್ತಿಗೆ ಬಾಸೆಲ್ ಮಿಶನ್ ಒಂದೇ ಎಂಟು ಪ್ರೌಢ ಶಾಲೆಗಳನ್ನು ನಡೆಸುತ್ತಿತ್ತು. ಇಂಗ್ಲಿಷ್ ಶಿಕ್ಷಣ ಪಡೆದವರಿಗೆ ಸರಕಾರಿ ಸೇವೆಯಲ್ಲಿ ನೌಕರಿ ಸೌಲಭ್ಯವಾಗುತ್ತಿದ್ದುದರಿಂದ, ಈ ಶಾಲೆಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಏರುತ್ತ ಹೋಯಿತು.

ಸಾಮಾನ್ಯ ಸಾಕ್ಷರತೆ ಹಬ್ಬುತ್ತಾ ಹೋಯಿತು. 1881ರ ಹೊತ್ತಿಗೆ ಮೈಸೂರು ಸಂಸ್ಥಾನದಲ್ಲಿ 2087 ಪ್ರಾಥಮಿಕ ಶಾಲೆಗಳು, ಮುಂಬೈ ಕರ್ನಾಟಕದ ಬೆಳಗಾವಿ, ಧಾರವಾಡ, ವಿಜಾಪುರ ಜಿಲ್ಲೆಗಳಲ್ಲಿ 668 ಶಾಲೆಗಳು ಇದವು. ಮುಂಬೈ ಪ್ರಾಂತದಲ್ಲಿ ಶಿಕ್ಷಣ ಮಾಧ್ಯಮವಾದ ಮರಾಠಿಯ ಈ ಶಾಲೆಗಳಲ್ಲಿದ್ದರೂ, ಮುಂಬೈ ಸರಕಾರವು 1835ರಲ್ಲಿ ಈ 'ದಕ್ಷಿಣ ಮರಾಠಾ' ದೇಶದ ಆಡಳಿತ ಹಾಗು ಶಿಕ್ಷಣ ಕನ್ನಡದಲ್ಲಿ ನಡೆಯಬೇಕೆಂದು ನಿರ್ಣಯ ತೆಗೆದುಕೊಂಡಿತು.

ಅದರೆ ಕನ್ನಡ ಪಠ್ಯಪುಸ್ತಕಗಳು ಸಾವಧಾನವಾಗಿ ಪ್ರಕಟವಾಗುತ್ತಿದ್ದವು. ಡಬ್ಲ್ಯೂ.ಎ.ರಸೆಲ್, ವೆಂಕಟರಂಗೋ ಕಟ್ಟಿ, ಗಂಗಾಧರೇಶ್ವರ ತುರಮರಿ ಹಾಗೂ ಇನ್ನಿತರರ ಮಾರ್ಗದರ್ಶನದಲ್ಲಿ 1864ರ ನಂತರ ಕನ್ನಡ ಪಠ್ಯಗಳು ಮುದ್ರಣಗೊಂಡವು.

ಶಿಕ್ಷಣ ಇಲಾಖೆಗಳಲ್ಲಿ ಅಧಿಕಾರಿಗಳಾದ ಡೆಪ್ಯುಟಿ ಚೆನ್ನಬಸಪ್ಪ ಅವರ ಯತ್ನಗಳಿಂದ, 1866ರಿಂದ ಕನ್ನಡ ಮಾಧ್ಯಮ ಜಾರಿಗೆ ಬಂತು. ಸುಮರು ಇದೇ ಸಮಯಕ್ಕೆ ಮೈಸೂರು ಸಂಸ್ಥಾನದಲ್ಲಿಯೂ ಸಹ ಕನ್ನಡ ಪಠ್ಯಗಳನ್ನು ಪ್ರಚಾರಪಡಿಸಲಾಯಿತು.
ಹೈದರಾಬಾದ್ ಕರ್ನಾಟಕದ ಭಾಗದಲ್ಲಿ 1878ರಿಂದ ಮರಾಠಿಯ ಬದಲು ಕನ್ನಡವು ಬಂದಿತು. ಉಚ್ಚ ಶಿಕ್ಷಣಕ್ಕಾಗಿಯೂ ಅವಕಾಶಗಳು ಹೆಚ್ಚಾದವು. ಮುಂಬೈ, ಪುಣೆ ಹಾಗೂ ಮದ್ರಾಸ್‌ಗಳಲ್ಲಿ ಇದ್ದ ಅನುಕೂಲತೆಗಳ ಜೊತೆಗೆ, ಬೆಂಗಳೂರಿನಲ್ಲಿ ಸೆಂಟ್ರಲ್ ಕಾಲೇಜ್ (1864), ಮೈಸೂರಿನ ಮಹಾರಾಜಾ ಕಾಲೇಜ್ (1852), ಮಂಗಳೂರಿನ ಸರಕಾರಿ ಆರ್ಟ್ಸ್ ಕಾಲೇಜ್ (1869), ಮಂಗಳೂರಿನ ಸೆಂಟ್ ಅಲೋಸಿಯನ್ ಕಾಲೇಜ್ (1879), ಬೆಂಗಳೂರಿನ ಸೇಂಟ್ ಜೋಸೆಫ್ ಕಾಲೇಜ್ (1882) ಈ ಸಂಸ್ಥೆಗಳೂ ಇದ್ದವು.

ಇದೇ ಸಮಯದಲ್ಲಿ ಕನ್ನಡದಲ್ಲಿ ಮುದ್ರಣ ಯಂತ್ರಗಳೂ ಬಂದವು. ಮೊದಲ ಕನ್ನಡ ಮುದ್ರಣವುಮಿಶನರಿಗಳ ಸಾಧನೆ: ವಿಲಿಯಂ ಕ್ಯಾರಿಯ ಪ್ರಯತ್ನದಿಂದ ಅವರ **'ಎ ಗ್ರಾಮರ್ ಆಫ್‌ಕರ್ನಾಟಾಲಾಂಗ್ವೇಜ್'ವು** ಬಹು ದೂರ ಕಲ್ಕತ್ತೆಯ ಸಮೀಪದ ಶ್ರೀರಾಮಪುರದಲ್ಲಿ 1817ರಲ್ಲಿ ಮುದ್ರಣಗೊಂಡಿತು. 19ನೆಯ ಶತಮಾನದ ಕೊನೆಗೆ 86 ಕನ್ನಡ ಮುದ್ರಣಾಲಯಗಳು ಇದ್ದವು.
ಮಿಶನರಿಗಳು 'ಗಾಸ್ಪೆಲ್'ದಂಥ ಧಾರ್ಮಿಕ ಗ್ರಂಥಗಳನ್ನು ಹಾಗೂ ವರ್ತಮಾನ ಪತ್ರಿಕೆಗಳನ್ನು ಮುದ್ರಿಸಹತ್ತಿದರು. 'ಮಂಗಳೂರು ಸಮಾಚಾರ' (1843) ಹಾಗೂ 'ಕನ್ನಡ ಸಮಾಚಾರ' (ಬಳ್ಳಾರಿ , 1844) ಇವು ಅವರು ಪ್ರಕಟಿಸಿದ ಮೊದಲ ಪತ್ರಿಕೆಗಳು.

'ಸುಬುದ್ಧಿ ಪ್ರಕಾಶ' (ಬೆಳಗಾವಿ, 1849) ಮತ್ತು 'ಕನ್ನಡ ವಾರ್ತಿಕೆ' (ಮಂಗಳೂರು, 1857) ಇವೂ ಸಹ ಮೊದಲ ಪ್ರಯತ್ನಗಳೇ.

ಹಿಂದೂ ಧರ್ಮವನ್ನು ತಿಳಿದುಕೊಳ್ಳುವ ಕುತೂಗಲದಿಂದ ಮಿಶನರಿಗಳು 'ಅನುಭವಾಮೃತ' (1840) ಮತ್ತು 'ಜೈಮಿನಿ ಭಾರತ' (1848) ಇಂಥ ಅನೇಕ ಧಾರ್ಮಿಕ ಕೃತಿಗಳನ್ನು ಪ್ರಸಿದ್ಧಿಸಿದರು. ಕನ್ನಡವನ್ನು ಕಲಿಯಬೇಕೆಂದು ರೆ.ರೀವ್ 1835, ಸಾಂಡರ್‌ಸನ್ 1858 ಮತ್ತು ರೆ. ಕಿಟಲ್ 1894 ಇವರು ಬರೆದ ನಿಘಂಟುಗಳನ್ನು ಪ್ರಕಟಿಸಿದರು.

ಇವೆಲ್ಲವೂ ಕನ್ನಡ ಸಾಹಿತ್ಯದ ನವಮನ್ವಂತರದ ಪ್ರಾತಂಭಕ್ಕೆ ನೆರವಾದವು. ಸಾಹಿತ್ಯವು ಲೌಕಿಕವಾಗಿ, ಗದ್ಯವು ಜನಪ್ರಿಯವಾಯಿತು. ಭಾವಗೀತೆ, ಸಣ್ಣಕಥೆ, ಕಾದಂಬರಿ ಇವೆಲ್ಲ ಆರಂಭವಾದವು. ಮರಾಠಿ, ಬಂಗಾಳಿ ಹಾಗೂ ಇಂಗ್ಲಿಷ್ ಭಾಷೆಗಳಲ್ಲಿದ್ದ ಇಂಥ ಕೃತಿಗಳು ಕನ್ನಡದಲ್ಲಿ ಅನುವಾದಗೊಂಡವು. ಅವುಗಳಲ್ಲಿ ಬಹಳಷ್ಟು ಐತಿಹಾಸಿಕ ಕಾದಂಬರಗಳಿದ್ದವು. ಈ ಕಾಲದಲ್ಲಿ ಪ್ರಾಚೀನ ಸಾಹಿತ್ಯದ ಪುನರುತ್ಥಾನವಾಯಿತು. ಇಂಥ ಅನೇಕ ಕನ್ನಡ ಕೃತಿಗಳನ್ನು ಮುದ್ರಣ ರೂಪದಲ್ಲಿ ಹೊರತಂದವರು ಮಿಶನರಿಗಳೇ, ಮೈಸೂರು ಸಂಸ್ಥಾನವು 'ಬಿಬ್ಲೋಥಿಕಾ ಕರ್ನಾಟಕ' 1891ರಿಂದ ಮಾಲಿಕೆ ಪ್ರಕಟಿಸಲು ಪ್ರಾರಂಭಿಸಿತು.

ಇಂಥವೇ ಸ್ಫೂರ್ತಿ ಹಿನ್ನೆಲೆಯಲ್ಲಿ ಅನೇಕ ಸಂಸ್ಕೃತ ಕೃತಿಗಳೂ ಭಾಷಾಂತರ ಗೊಂಡವು. ಇವುಗಳಲ್ಲಿ ಕಾಳಿದಾಸ ಹಾಗೂ ಹರ್ಷನ ನಾಟಕಗಳು ಮುಖ್ಯ ವಿಶಾಖದತ್ತನ ನಾಟಕವನ್ನು ಗದ್ಯ ಕಥಾರೂಪದಲ್ಲಿ ಅನುವಾದಿಸಿದ ಕೆಂಪು ನಾರಾಯಣನ' ಮುದ್ರಾಮಂಜೂಷ, 1823, ಹೊಸ ಕಾಲದ ಚೈತನ್ಯವನ್ನು ಪ್ರತಿನಿಧಿಸುತ್ತದೆ: ಏಕೆಂದರೆ ವಿಶಾಖದತ್ತನ ಸಂಸ್ಕೃತ ನಾಟಕ ಗದ್ಯದಲ್ಲಿ ಕಾದಂಬರಿ ಪ್ರಕಾರದಲ್ಲಿ ಭಾಷಾಂತರಗೊಂಡಿದೆ. ಈ ಗ್ರಂಥ ಕರ್ತನು ಇದ್ದ ಮುಮ್ಮಡಿ ಕೃಷ್ಣರಾಜ ಒಡೆಯರ ಅಸ್ಥಾನವು ನವೋದಯಕ್ಕೆ ಸಾಕಷ್ಟು ಪ್ರೊತ್ಸಾಹ ನೀಡಿತು.

19ನೇ ಶತಮಾನದಲ್ಲಿ ಲಲಿತಕಲೆಗಳಲ್ಲಿಯೂ ನವೋದಯ ಕಂಡು ಬಂದಿತು. ಮೈಸೂರು ಸದಾಶಿವರಾವ್, ವೀಣೆ ವೆಂಕಟಸುಬ್ಬಯ್ಯ, ಚಿಕ್ಕರಾಮಪ್ಪ ಮತ್ತು ಸುಬ್ಬ ಯ್ಯ ಇಂಥ ಸಂಗೀತ ಕಲಾವಿದರುಳ್ಳ ಹೊಸ ಪದ್ಧತಿಯ ಅಭಿವೃದ್ಧಿಗೆ ಮೈಸೂರು ಆಸ್ಥಾನವು ನೆರವಾಯಿತು. ವೀಣೆ ಶೇಷಣ್ಣ (1859–1926) ಚಿಕ್ಕ ರಾಮಪ್ಪನವರ ಪುತ್ರರು. ಮೈಸೂರು ಆಸ್ಥಾನದಲ್ಲಿಯ ತಂಜಾವೂರು ಕೊಂಡಯ್ಯ ಮತ್ತು ಅಲಸಿಂಗ್ರಯ್ಯ ಇವರ ಕೃತಿಗಳನ್ನು ಪರೀಕ್ಷಿಸಿದರೆ ಚಿತ್ರಕಲೆಯ ತಂತ್ರಗಳಲ್ಲಿಯೂ ಸಹ ಬದಲಾವಣಿಯಾದುದನ್ನು ಕಾಣಬಹುದು.

ಇದೇ ಹಿನ್ನೆಲೆಯಲ್ಲಿ ಬೆಳೆದು ಬಂದವರು ಕೆ.ವೆಂಕಟಪ್ಪ ಮತ್ತು ಪಾವಂಚೆ. ರಂಗಭೂಮಿಯ ತಂತ್ರಗಳಲ್ಲಿಯೂ ಸಾಕಷ್ಟು ಬದಲಾವಣೆಗಳಾದವು. ಕರ್ನಾಟಕ ನಾಟಕ ಮಂಡಳಿ, ಗದಗ 1872–73, ಅರಮನೆ ಮಂಡಲಿ 1881, ರಾಜಧಾನಿ ನಾಟಕ ಮಂಡಳಿ, 1881, ಗುಬ್ಬಿ ಕಂಪನಿ 1884 ಮತ್ತು ತಂತುಮರುಷ ನಾಟಕ ಮಂಡಳಿ, ಧಾರವಾಡ 1885 ಇಂಥ ಅನೇಕ ನಾಟಕ ಕಂಪನಿಗಳು ನಾಟ್ಯ ಶಾಸ್ತ್ರದ ರಂಗಭೂಮಿಯಲ್ಲಿ ಈ ಬದಲಾವಣೆ ತಂದವು. 1876ರಲ್ಲಿ ಬೆಂಗಳೂರಿಗೆ ಬಂದ ವಿಕ್ಟೋರಿಯಾ ಪಾರ್ಸಿ ಕಂಪನಿ, 1878ರಲ್ಲಿ ಮೈಸೂರಿಗೆ ಬಂದಸಾಂಗಲಿಯ ಮರಾಠಿ ನಾಟಕ ಕಂಪನಿ ಇವುಗಳ ರಂಗಭೂಮಿಯ ತಂತ್ರಗಳು ನಮ್ಮ ನಾಟಕ ಕಂಪನಿಗಳ ಮೇಲೆ ಪ್ರಭಾವ ಬೀರಿದವು. ವಾಸ್ತು ಶಿಲ್ಪದಲ್ಲಿಯೂ ಸಹ ನವಮನ್ವಂತರ ಕಂಡು ಬಂದಿತು. ಪಾಶ್ವಿಮಾತ್ಯ ಶೈಲಿಯನ್ನು ಸೆಂಟ್ರಲ್ ಕಾಲೇಜ್ ಕಟ್ಟಡ (ಗಾಥಿಕ್, 1860), ಅಠಾರಾ ಕಚೇರಿ (ಉಚ್ಚನ್ಯಾಯಾಲಯ ಕಟ್ಟಡ, ಅಯೋನಿಕ್, 1867) ಮತ್ತು ಬೆಂಗಳೂರು ವಸ್ತು ಸಂಗ್ರಹಾಲಯ ಕಟ್ಟಡ (ಕಾರಿಂಥಿಯ, 1877) ಇವುಗಳಲ್ಲಿ ಅಳವಡಿಸಲಾಯಿತು.

ಸ್ವತಂತ್ರ ವಿಚಾರ ಹಾಗೂ ಕ್ರೈಸ್ತ ಮಿಶನರಿಗಳ ಟೀಕೆಗಳು ಸಮಾಜದ ಮೇಲೆ ಪರಿಣಾಮ ಬೀರಿದವು. ಸಮಾಜ ಸುಧಾರಣೆಯ ಚಳವಳಿಗಳು, ಸ್ತ್ರೀಯರ ಸ್ವಾತಂತ್ರ್ಯ, ಅಸ್ಪೃಶ್ಯತೆ ಹಾಗೂ ಇನ್ನಿತರ ಸಾಮಾಜಿಕ ಕೆಡುಕುಗಳನ್ನು ನಿವಾರಿಸುವ ಗುರಿಯಿಟ್ಟುಕೊಂಡು ಪ್ರಾರಂಭವಾದವು.
ಬ್ರಹ್ಮ ಸಮಾಜ (1870ರಲ್ಲಿ ಮಂಗಳೂರಿನಲ್ಲಿ ಮೊದಲ ಶಾಖೆಯ ಆರಂಭ) ಮತ್ತು ಥಿಯೋಸೊಫಿ ಸಮಾಜ (ಬೆಂಗಳೂರು, 1886) ಇವು ತಮ್ಮ ಕಾರ್ಯಗಳನ್ನು ಕರ್ನಾಟಕದಲ್ಲಿ ಆರಂಭಿಸಿದವು.
ಈ ಚಟುವಟಿಕೆಗಳು ಭಾರತದ ಧಾರ್ಮಿಕ ಪರಂಪರೆ ಮತ್ತು ಸಾಮಾಜಿಕ ಕೆಡಕುಗಳು ಬಗ್ಗೆ, ಜಾಗೃತಿಯನ್ನುಂಟು ಮಾಡಿದವು.
ಜೆ.ಎಫ್. ಫ್ಲೀಟ್ 1882, ಬಿ.ಎಲ್.ರೈಸ್, ಆರ್ . ಜಿ ಭಂಡಾರಕರ 1884 ಮತ್ತು ರಾಬರ್ಟ್ ಸ್ಯುಯೆಲ್ (ಮರೆತು ಹೋದ ಸಾಮ್ರಾಜ್ಯ, ವಿಜಯನಗರ, 1901), ಮಿಥಿಕ್ ಸೊಸಾಯಿಟಿ (ಬೆಂಗಳೂರು 1909) ಇಂಥ ವ್ಯಕ್ತಿ– ಸಂಸ್ಥೆಗಳಿಂದ ಕರ್ನಾಟಕದ ಇತಿಹಾಸವು ಪುನರುಜ್ಜೀವನಗೊಂಡಿತು ಮತ್ತು ಅದು ಕರ್ನಾಟಕದ ಇತಿಹಾಸ, ಸಂಸ್ಕೃತಿ ಹಾಗೂ ಸಾಹಿತ್ಯಗಳಿಗೆ ನೆರವಾಯಿರು.
ನವಮನ್ವಂತರವು ಗತವೈಭವವನ್ನು ಪುನಃ ರಚಿಸಿಕೊಳ್ಳಬೇಕೆಂಬ ಭಾವನೆಯ ಬೆಳವಣಿಗೆಗೆ ನೆರವಾಯಿತು. ಇದರ ಹಿನ್ನೆಲೆಯಲ್ಲಿರುವ ಕರ್ನಾಟಕವು ರಾಷ್ಟ್ರೀಯತೆಯ ಉದಯವನ್ನು 'ಕರ್ನಾಟಕತ್ವ'ದ ಅಥವಾ ಪ್ರಾಂತೀಯತೆಯ ಅಭಿಮಾನದ ಜಾಗೃತಿಯನ್ನು ಹಾಗೂ ದೇಶಪ್ರೇಮವನ್ನು ಕಂಡಿತು. ಹೀಗೆ ಸ್ವಾತಂತ್ರ್ಯದ ಚಳುವಳಿಯೂ ಸಹ ರೂಪುಗೊಂಡಿತು. ಆಧುನಿಕ

ಶಿಕ್ಷಣವನ್ನು ಪಡೆದ ಹಾಗೂ ಔದ್ಯಮಶೀಲವಾದ ಮಧ್ಯಮ ವರ್ಗ ನಿರ್ಮಾಣಗೊಂಡು ನಗರ ಕೇಂದ್ರಗಳಲ್ಲಿ ಈ ಹೊಸ ವಿಚಾರಗಳು ಊರ್ಜಿತಗೊಂಡವು. ಕರ್ನಾಟಕದಲ್ಲಿ ಔದ್ಯೋಗೀಕರಣ ಕ್ರಾಂತಿಯೂ ಕಂಡು ಬಂದಿತು. 1865ರಲ್ಲಿ ಬಾಸೆಲ್ ಮಿಷನ್ ಹಂಚಿನ ಕಾರ್ಖಾನೆ ಸ್ಥಾಪನೆಯಾದ ನಂತರ ಮಂಗಳೂರು ಔದ್ಯಮದ ದೊಡ್ಡ ಕೇಂದ್ರವಾಯಿತು.

**5. ಕರ್ನಾಟಕದಲ್ಲಿ ಸ್ವಾತಂತ್ರ್ಯ ಹೋರಾಟ**

ಎ.ಓ.ಹ್ಯೂಂ ಧಾರವಾಡ ಹಾಗೂ ಬೆಳಗಾವಿಗಳಿಗೆ 1893ರಲ್ಲಿ ಬೇಟಿಕೊಟ್ಟು ಕಾಂಗ್ರೆಸ್‌ನ ಆದರ್ಶವನ್ನು ಪ್ರಚಾರ ಮಾಡಿದ್ದ. ದಿನ್ ಷಾ ವಾಚಾರ ಅಧ್ಯಕ್ಷತೆಯಲಲಿ ಮುಂಬೈ ಪ್ರಾಂತ್ಯದ ರಾಜಕೀಯ ಸಮ್ಮೇಳನವು ಬೆಳಗಾವಿಯಲ್ಲಿ 1895ರಲ್ಲಿ ಸೇರಿತು. ಕರ್ನಾಟಕದಲ್ಲಿ ಮುಖ್ಯವಾಗಿ ಮುಂಬೈ ಪ್ರಾಂತ್ಯದ ಕ್ಷೇತ್ರದಲ್ಲಿ ಆಧುನಿಕ ರಾಷ್ಟ್ರೀಯತೆಯ ನಿಜವಾದ ಹರಿಕಾರರು ಲೋಕಮಾನ್ಯ ತಿಲಕ್ ಹಾಗೂ ಅವರ 'ಕೇಸರಿ' ಪತ್ರಿಕೆ.

20ನೇ ಶತಮಾನದಲ್ಲಿ ರಾಷ್ಟ್ರೀಯ ಚಳುವಳಿಯ ಸಂಸ್ಥಾನದಲ್ಲಿ ಎಲ್ಲಡೆಗೂ ಹರಡಿತು. ಮುಂಬೈ ರಾಜ್ಯದ ರಾಜಕೀಯ ಸಮ್ಮೇಳನವು ಎರಡನೇ ಸಲ 1903ರಲ್ಲಿ ಕರ್ನಾಟಕದ ಧಾರವಾಡದಲ್ಲಿ ಸೇರಿದಾಗ ತಿಲಕ್ ಹಾಗೂ ಫಿರೋಜ್ ಷಾ ಅವರೂಬಂದಿದ್ದರು. ಮೆಹತಾ ಅದಕ್ಕೆ ಅಧ್ಯಕ್ಷರಾಗಿದ್ದರು. ಬಂಗಾಳ ವಿಭಜನೆಯ (1905) ಅಶಾಂತಿಯ ಕರ್ನಾಟಕದಲ್ಲಿಯೂ ಪರಿಣಾಮ ಬೀರಿತು. ವಂಗಭಂಗವನ್ನು ವಿರೋಧಿಸಲು ಧಾರವಾಡ, ಬೆಳಗಾವಿ, ಅಳ್ನಾವರ,ಗದಗ, ಬಾಗಲಕೋಟೆ, ಕಿತ್ತೂರು ಮುಂತಾದ ಕಡೆಗಳಲ್ಲಿ ಸಾರ್ವಜನಿಕ ಸಭೆ ಸೇರಿದವು. 1907ರಲ್ಲಿ ಸೇರೆ ಅಂಗಡಿಗಳ ವಿರುದ್ಧಮತ ಪ್ರದರ್ಶಿಸಿ ಗೋವಿಂದ ರಾವ್ ಯಾಳಗಿ ಹಾಗೂ 20ಕ್ಕಿಂತ ಹೆಚ್ಚು ಜನ ಸೆರೆಯಾಳುಗಳಾದರು.

ಗಂಗಾಧರರಾವ್ ದೇಶಪಾಂಡೆ ರಾಷ್ಟ್ರೀಯ ಶಾಲೆಯನ್ನು ಪ್ರಾರಂಭಿಸಿದರು. ಇಂಥವೇ ಶಾಲೆಗಳನ್ನು ಧಾರವಾಡ, ಬಿಜಾಪುರ ಜಿಲ್ಲೆಗಳಲ್ಲೂ ತೆರೆಯಲಾಯಿತು. ಅವು 1910ವರೆಗೂ ಇದ್ದವು. 1907ರ ಸೂರತ್ ಕಾಂಗ್ರೆಸ್‌ಗೆ ಆಲೂರ ವೆಂಕಟರಾವ್ ಹಾಗೂ ಅಣ್ಣಾ ಚಾರ್ಯ ಹೊಸಕೇರಿ (ಧಾರವಾಡ), ಶ್ರೀನಿವಾಸರಾವ್ ಕೌಜಲಗಿ (ವಿಜಾಪುರ), ಗೋವಿಂದರಾವಯಾಳಗಿ ಹಾಗೂ ಗಂಗಾಧರ್ ರಾವ್ ದೇಶಪಾಂಡೆ (ಬೆಳಗಾವಿ) ಇವರಂಥ ಕರ್ನಾಟಕದ ಧುರೀಣರು ತಿಲಕ್ ಹಾಗೂ ಇನ್ನಿತರ ತೀವ್ರಗಾಮಿಗಳ ಪಕ್ಷವನ್ನು ಬೆಂಬಲಿಸಿದರು.

ಮ್ಯಾಜಿನಿ ಕ್ಲಬ್ ಎಂಬ ಕ್ರಾಂತಿಕಾರರ ರಹಸ್ಯ ಸಂಸ್ಥೆಯನ್ನು ಯಾಳಗಿ ಹಾಗೂ ಹನುಮಂತರಾವ್ ದೇಶಪಾಂಡೆ 1907ರಲ್ಲಿ ಬೆಳಗಾವಿಯಲಲಿ ಸ್ಥಾಪಿಸಿದರು. 1906ರಲ್ಲಿ ಹುಬ್ಬಳ್ಳಿಯಲ್ಲಿ ಎನ್.ಎಸ್.ಹರಡಿಕರ್ ಆರ್ಯಬಾಲ ಸಭಾ ಎಂಬ ಸಂಸ್ಥೆಯನ್ನು ಸ್ಥಾಪಿಸಿದರು. ಮೈಸೂರಿನಿಂದ ಕರ್ನಾಟಕ ಪ್ರಕಾಶಿಕ (1865), ವೃತ್ತಾಂಶ ಚಿಂತಾಮಣಿ, ಧಾರವಾಡದಿಂದ ರಾಜಹಂಸ (1881) ಹಾಗೂ ಕರ್ನಾಟಕ ವೃತ್ತ (1890) ಮಂಗಳೂರಿನಿಂದ ಸುಹಾಸಿನಿ (1901) ಹಾಗೂ ಸ್ವದೇಶಾಭಿಮಾನಿ, (1907) ಇಂಥ ಕನ್ನಡ ವೃತ್ತ ಪತ್ರಿಕೆಗಳು ಹಾಗೂ ಇವುಗಳ ಜೊತೆಗೆ ತಿಲಕರ ಕಚಿಜಚಿಟಿ ಮತ್ತು ಮರಾಠಾ ಪತ್ರಿಕಗಳು ರಾಷ್ಟ್ರೀಯತೆಯ ಹೊಸ ಸ್ಫೂರ್ತಿಯನ್ನು ಉಪದೇಶಿಸಲು ಪ್ರಾರಂಭಿಸಿದ್ದವು. ತಿಲಕ್‌ರು ಮೇಲಿಂದ ಮೇಲೆ ಉತ್ತರ ಕರ್ನಾಟಕ ಪ್ರವಾಸ ಕೈಗೊಂಡರು . 1905ರಲ್ಲಿ ಬಳ್ಳಾರಿ 1906ರಲ್ಲಿ ಬೆಳಗಾವಿ ಹಾಗೂ ಗುರ್ಲ ಹೊಸೂರುಗಳಿಗೆ ಭೇಟಿಕೊಟ್ಟರು.

ಅವರು 1916ರಲ್ಲಿ ಹೋಂ ರೂಲ್ ಲೀಗ್ ಅನ್ನು ಪ್ರಾರಂಭಿಸಿದಾಗ ಇದರ ಉದ್ದೇಶಕ್ಕಾಗಿಯೇ ಬೆಳಗಾವಿ, ಸಂಕೇಶ್ವರ ಮತ್ತು ಇನ್ನಿತರ ಸ್ಥಳಗಳಿಗೆ ಭೇಟಿಕೊಟ್ಟು ಅಲ್ಲಿ ಲೀಗ್‌ನ ಶಾಖೆಗಳನ್ನು ಪ್ರಾರಂಭಿಸಿದರು. ಲೀಗ್‌ನ ಶಾಖೆಗಳು ಧಾರವಾಡ ಹುಬ್ಬಳ್ಳಿ ಬಳ್ಳಾರಿ ಸಿದ್ದಾಪುರ (ಉತ್ತರ ಕನ್ನಡ ಜಿಲ್ಲೆ) ಮತ್ತು ಮುಲ್ಕಿ (ದಕ್ಷಿಣ ಕನ್ನಡ ಜಿಲ್ಲೆ)ಯಲ್ಲಿ ಇದ್ದವು. ಮುಂದೆ ಮುಂಬೈ ರಾಜ್ಯದ ರಾಜಕೀಯ ಸಮ್ಮೇಳನವು 1916ರಲ್ಲಿ ಬೆಳಗಾವಿಯಲ್ಲಿ ನಂತರ 1918ರಲ್ಲಿ ಬಿಜಾಪುರದಲ್ಲಿ ನಡೆದವು. ಇವೆರಡೂ ಅಧಿವೇಶಗಳಲ್ಲಿ ಗಾಂಧೀಜಿ ಉಪಸ್ಥಿತರಿದ್ದರು. ಗಾಂಧೀಜಿ 1920ರಲ್ಲಿ ಮಂಗಳೂರು ಹಾಗೂ ಬೆಂಗಳೂರಿಗು ಬಂದು ಹೋದರು.

ಹೈದರಾಬಾದ್ ಕರ್ನಾಟಕದಲ್ಲಿ ರಾಷ್ಟ್ರೀಯ ಜಾಗೃತಿ ಉಂಟಾಗಲು ಆರ್ಯ ಸಮಾಜವೇ ಬಹು ಮುಖ್ಯವಾಗಿವೆ. ರಾಷ್ಟ್ರೀಯ ಶಾಲೆಗಳನ್ನು ಕಲ್ಬುರ್ಗಿ (1908), ರಾಯಚೂರು (1920) ಹಾಗು ಕಾನೂನು (1922)ಗಳಲ್ಲಿ ಆರಂಭಿಸಲಾಯಿತು.
**ರಾಯಚೂರಿನಲ್ಲಿ ಪಂಡಿತ ತಾರಾನಾಥರು ಹಮ್‌ದರ್ದ್ ಶಾಲೆಯನ್ನು** ಆರಂಭಿಸಿದ್ದಕ್ಕಾಗಿ ಅವರನ್ನು ಹೈದರಾಬಾದ್ ಸಂಸ್ಥೆಯು ಮೈಸೂರಿನಲ್ಲಿ ರಾಷ್ಟ್ರೀಯ ವಿಚಾರ ಜನಪ್ರಿಯಗೊಳಿಸಿತು. ಇದರಿಂದ 1917 ಬೆಂಗಳೂರಲ್ಲಿ ದೇಶೀಯ ವಿದ್ಯಾ ಶಾಲೆ ಸ್ಥಾಪಿತವಾಯಿತು.

1920ರಲ್ಲಿ ಧಾರವಾಡದಲ್ಲಿ ವಿ.ಪಿ ಮಾಧವರಾವ್ (ಮೈಸೂರಿನ ಹಿಂದಿನ ದಿವಾನರು)ಅವರ ಅಧ್ಯಕತೆಯಲ್ಲಿ ಕೂಡಿದ ಕರ್ನಾಟಕ ಪ್ರಾಂತೀಯ ರಾಜಕೀಯ ಸಮ್ಮೇಳನವು ಕರ್ನಾಟಕದಿಂದ ನಾಗಪುರ ಕಾಂಗ್ರೆಸ್ ಅಧಿವೇಶನಕ್ಕೆ ಬಹು ಸಂಖ್ಯೆ ಪ್ರತಿನಿಧಿಗಳನ್ನು ಕಳುಹಿಸೇಕೆಂದು ನಿರ್ಣಯಿಸಿತು. ಅದರಂತೆ 1920ರಲ್ಲಿ ನಾಗಪುರಕ್ಕೆ ಸುಮರು 800 ಪ್ರತಿನಿಧಿಗಳು ಹೋದರು. **ಕರ್ನಾಟಕಕ್ಕೆ ಪ್ರತ್ಯೇಕವಾದ ಪ್ರಾದೇಶಿಕ ಸಮಿತಿ ಇರಲು ಒಪ್ಪಿಗೆ ದೊರೆತದ್ದು ನಾಗಪುರದಲ್ಲಿಯೇ, ಕರ್ನಾಟಕ ಸಿಂಹ ಗಂಗಾಧರರಾವ್ ದೇಶಪಾಂಡೆ ಪ್ರಾದೇಶಿಕ ಕಾಂಗ್ರೆಸ್ ಸಮಿತಿಯ ಪ್ರಥಮ ಅಧ್ಯಕ್ಷರಾದರು. ಗದಗು ಅದರ ಕೇಂದ್ರ ಸ್ಥಳವಾಯಿತು.**

ಅರಸರಾಳುತ್ತಿದ್ದ ಮೈಸೂರು ಸಂಸ್ಥಾನದಲ್ಲಿ 1921–22ರಲ್ಲಿ ತುಮಕೂರು, ಬೆಂಗಳೂರು, ಮೈಸೂರು ಹಾಗೂ ಕಡೂರುಗಳಲ್ಲಿ ಕಾಂಗ್ರೆಸ್ ಸಮಿತಿಗಳು ಸ್ಥಾಪಿತವಾದವು. ಮೈಸೂರು 'ಜಿಲ್ಲಾ'ಝು (ರಾಜ್ಯ) ವಿಭಾಗಕ್ಕೆ ನ್ಯಾಯಮೂರ್ತಿ ಸಟ್ಲೂರ್‌ರವರು ಮೊದಲ ಅಧ್ಯಕ್ಷರಾದರು. ಆದರೆ ಸಂಸ್ಥಾನದಲ್ಲಿಯ ಕಾಂಗ್ರೆಸ್ ರಚನಾತ್ಮಕ ಕಾರ್ಯಗಳಿಗೆ ಮಾತ್ರ ಕೇಂದ್ರೀಕೃತವಾಗಿದ್ದಿತ್ತು. ಕಾಂಗ್ರೆಸ್ ಧೋರಣೆಯಂತೆ ಚಳುವಳಿಗಳಲ್ಲಿ ಧುಮುಕುವುದು ಆಗುತ್ತಿರಲಿಲ್ಲ.

**6. ಅಸಹಕಾರ ಚಳವಳಿ**

ಗಾಂಧೀಜಿ 1920 ಹಾಗೂ 1921ರಲ್ಲಿ ಕರ್ನಾಟಕದಲ್ಲಿ ಪ್ರವಾಸ ಮಾಡಿದರು. ಅವರ ಜೊತೆಗೆ ಅಲಿ ಬಂಧುಗಳಿದ್ದರು. ಖಿಲಾಫತ್ ಚಳವಳಿಯಿಂದ ಮುಸ್ಲಿಂರು ಬಹು ಸಂಖ್ಯೆಯಲ್ಲಿ ಕಾಂಗ್ರೆಸ್‌ನ್ನು ಸೇರಿದರು. ಕರ್ನಾಟಕದಲ್ಲಿ ಅಸಹಕಾರ ಚಳವಳಿಯ ಸ್ವಾತಂತ್ರ್ಯದ ಬೇಡಿಕೆಯನ್ನು ಎಲ್ಲೆಡೆಗೂ ಹರಡಿತ್ತು. ನ್ಯಾಯಾಲಯ, ಶಾಲೆ, ಕಾಲೇಜು, ಕಚೇರಿಗಳನ್ನು ಬಿಟ್ಟು ಬಿಡಲು ಗಾಂಧೀಜಿಯವರು ಕೊಟ್ಟ ಕರೆ ಯಶಸ್ವಿಯಾಯಿತು. ಅನೇಕ ವಕೀಲರು ತಮ್ಮ ವೃತ್ತಿಯನ್ನು ಬಹಿಷ್ಕರಿಸಿದರು.

1921–23ರಲ್ಲಿ ಅಸಂಖ್ಯ ಮೆರವಣಿಗೆ, ಸಭೆ, ವಿದೇಶ ಸರಕುಗಳ ಹೋಳಿ ನಡೆದವು. ಇದೇ ಅವಧಿಯಲ್ಲಿ ಕರ್ನಾಟಕದಲ್ಲಿ ಸುಮಾರು 70 ಜನರು ಸೆರೆಮನೆ ಕಂಡರು. ಧಾರವಾಡದಲ್ಲಿ ಸೆರೆ ಅಂಗಡಿಯ ಎದುರಿಗೆ ತಡೆ ಕಾವಲು (ಪಿಕೆಟಿಂಗ್) ನಡೆಸುತ್ತಿದ್ದ ಗುಂಪಿನ ಮೇಲೆ ಪೊಲೀಸರು ಗುಂಡು ಹಾರಿಸಿದ್ದರಿಂದ ಜುಲೈ 1, 1921ರಂದು ಮೂವರು ಸತ್ತರು. ಆರ್.ಆರ್. ದಿವಾಕರ್, ಕೃಷ್ಣರಾವ್ ಮುದವೀಡಕರ ಅವರನ್ನು ಒಳಗೊಂಡು 29 ಜನರನ್ನು ಸೆರೆಹಿಡಿದರು, ಇವರಲಲಿ 23 ಜನರಿಗೆ ಬೇರೆ ಬೇರೆ ಅವಿಧಿಯ ಸೆರೆಮನೆ ಶಿಕ್ಷೆ ಆಯಿತು. ನವಲಗುಂದದಲ್ಲಿ ಒಂದು ಭಾಷಣ ಮಾಡಿದ್ದಕ್ಕಾಗಿ 1921ರಲ್ಲಿ ಗಂಗಾಧರ್ ರಾವ್ ದೇಶಪಾಂಡೆಯವರ ಬಂದನವಾಯಿತು. ಪ್ರಚೋದನಾತ್ಮಕ ಲೇಖನ ಹಾಗೂ ಭಾಷಣಗಳಿಗಾಗಿ ವಿಜಾಪುರ ಜಿಲ್ಲೆಯಲ್ಲಿ ಜೈರಾಮ್ ದೇಶಪಾಂಡೆ ಹನುಮಂತ ರಾವ್ ಕೌಜಲಗಿ, ಹನುಮಂತರಾವ್ ಮೊಹರೆ ಯವರನ್ನು ಜೈಲಿಗೆ ಕಳಿಸಲಾಯಿತು.

ಉತ್ತರಕನ್ನಡದಲ್ಲಿ ಬೇಡಕಣಿಯ (ಸಿದ್ದಾಪುರ ತಾಲ್ಲೂಕು) ಒಬ್ಬ ಬೇಸಾಯಗಾರ ಚೌಡನಾಯಕ ಮೊದಲನೆಯ ರಾಜಕೀಯ ಬಂಧಿಯಾದರು. ಇವರ ತುರುವಾಯು ಪುಡ್ಡಿ ಸಾಹೇಬ ಹಾಗೂ ತಿಮ್ಮಪ್ಪ ನಾಯಕ (ಸಿರಸಿ ಶಾಲೆಯೊಂದರಲ್ಲಿ ಮುಖ್ಯೋಪಾಧ್ಯಾಪಕ ವೃತ್ತಿಯನ್ನು ಬಿಟ್ಟು ಸಿರಸಿಯಲ್ಲಿ ರಾಷ್ಟ್ರೀಯ ಶಾಲೆಯಲ್ಲಿ ಸೇವೆ ಸಲ್ಲಿಸುತ್ತಿದ್ದರು.) ಇವರಿಗೂ ಸೆರೆಮನೆ ಶಿಕ್ಷೆಯಾಯಿತು.

1921ರಲ್ಲಿರಾಷ್ಟ್ರೀಯ ಶಾಲೆಯನ್ನು ಕಾರ್ನಾಡ್ ಸದಾಶಿವ ರಾಯರು ಮಂಗಳೂರಿನಲ್ಲಿ ಆರಂಭಿಸಿದರು, ಕರ್ನಾಟಕದಲ್ಲಿ ಇಂಥ ಶಾಲೆಗಳು ಒಟ್ಟು 50 ಇದ್ದವು. ಇವುಗಳಲ್ಲಿ ಧಾರವಾಡದಲ್ಲಿ ಆಲೂರು ವೆಂಕಟರಾಯರು ನಡೆಸುತ್ತಿದ್ದ ರಾಷ್ಟ್ರೀಯ ಶಾಲೆಯಲ್ಲಿ ಡಾ. ದ ರಾ ಬೇಂದ್ರೆ, ಡಾ.ಶಂ.ಬಾ ಜೋಶಿ, ಡಾ. ದಿವಾಕರ ಇವರು ಶಿಕ್ಷಕರಾಗಿದ್ದರು.

ಪ್ರತಿಬಂಧಕ ಅಜ್ಞೆಯನ್ನು ಮುರಿದಿದ್ದರಿಂದ ಬಳ್ಳಾರಿಯಲ್ಲಿ ಟೀಕೂರು ನಾರಾಯಣಶಾಸ್ತ್ರಿ, ಕೊಲ್ಲೂರು ಸುಬ್ರಾವ್ ಮತ್ತು ಲ್ಯಾಂಗಲಿ ಭೀಮಸೇನರಾವ್ ಇವರಿಗೆ ತಲಾ ಆರು ತಿಂಗಳ ಸೆರೆಮನೆ ಶಿಕ್ಷೆಯಾಯಿತು.
17 ನವೆಂಬರ್ 1921ರಂದು ಪ್ರಿನ್ಸ್ ಆಫ್ ವೇಲ್ಸ್ ಭಾರತಕ್ಕೆ ಭೇಟಿಕೊಟ್ಟಾಗ, ಬೆಂಗಳೂರುನ್ನು ಒಳಗೊಂಡು ಕರ್ನಾಟಕದ ಮಹತ್ವವಾದ ಸ್ಥಳಗಳಲ್ಲಿ ಹರತಳವು ಅಚರಿಸಲ್ಪಟ್ಟಿತು. ಬೆಂಗಳೂರು ದಂಡಿನಲ್ಲಿ ಪೊಲೀಸರು ಗುಂಡು ಹಾರಿಸಿದ್ದರಿಂದ, ಇಬ್ಬರು ಖಿಲಾಫತ್ ಕೆಲಸಗಾರರು ಸತ್ತರು.

ಚೌರಿಚೌರಾದ 1922ರ ನಂತರ ದೇಶದಲ್ಲಿ ಎಲ್ಲೆಡೆ ಸ್ತಬ್ಧತೆ ಇದ್ದರೂ, ಕರ್ನಾಟಕವು ಮಾತ್ರ ಹಾಗೆ ಇರಲಿಲ್ಲ. ಕಾರ್ನಾಡ ಸದಾಶಿವರಾಯರು ಮಂಗಳೂರಿನಲ್ಲಿ ಸರೋಜಿನಿ ನಾಯ್ಡು ಅವರ ಅಧ್ಯಕ್ಷತೆಯಲ್ಲಿ 1922ರಲಲಿ ಎರಡನೆಯ ಕರ್ನಾಟಕ ರಾಜಕೀಯ ಅಧಿವೇಶನವನ್ನು ವ್ಯವಸ್ಥೆಗೊಳಸಿದ್ದರು: ಮೂರನೆಯದನ್ನು ಗೋಕರ್ಣದಲ್ಲಿ ದ್ವಾರಕಾಪೀಠದ ಶಂಕರಾಚಾರ್ಯರ ಅಧ್ಯಕ್ಷತೆಯಲ್ಲಿ 1924ರಲ್ಲಿ ಸಮಾವೇಶಗೊಳಿಸಿದರು.

ನಾಗಪುರದ ಧ್ವಜ ಸತ್ಯಾಗ್ರಹದಲ್ಲಿ (1923) ಕರ್ನಾಟಕದ ಸಾಕಷ್ಟು ಸ್ವಯಂ ಸೇವಕರು ಬಂಧಿತರಾದರು. ನಾಗಪುರ ಸೆರೆಮನೆಯಲ್ಲಿರುವಾಗ ಕರ್ನಾಟಕದ ಡಾ.ಎನ್.ಎಸ್. ಹರ್ಡೀಕರ್ ಅವರು ಹಿಂದೂಸ್ತಾನಿ ಸೇವಾದಳವನನು ಪ್ರಾರಂಭಿಸಲು ನಿರ್ಣಯಿಸಿದರು. ದಳದ ಅಖಿಲ ಭಾರತ ಪ್ರಧಾನ ಕಚೇರಿಯ ಸ್ಥಳ ಹುಬ್ಬಳ್ಳಿ ಆಯಿತು. ಭಾರತದ ಎಲ್ಲೆಡಗಳಿಂದಲೂ ಸ್ವಯಂ ಸೇವಕರು, ಡಾ. ಹರ್ಡೀಕರ್ ಹಾಗೂ ಅವರ ಶಿಸ್ತನ ಅನುಯಾಯಿಗಳ ಕೈಕೆಳಗೆ ತರಬೇತಿ ಪಡೆಯಲು ಅಲ್ಲಿಗೆ ಬಂದರು.

1924ರಲ್ಲಿ ಕಾಂಗ್ರೆಸ್ ಅಧಿವೇಶನ ಬೆಳಗಾವಿಯಲ್ಲಿ ಸೇರುವ ಸಮಯಕ್ಕೆ ಡಾ. ಹರ್ಡೀಕರ್ ಅವರು ಕರ್ನಾಟಕ ಒಂದರಲ್ಲಿಯೇ 1,700 ಸ್ವಯಂ ಸೇವಕರಿಗೆ ತರಬೇತಿ ನೀಡಿದರು. ದೇಶದ ಎಲ್ಲೆಡೆಯಿಂದಲೂ ಆಗಮಿಸಿದ ಮುಖಂಡರು ಈ ಸ್ವಯಂ ಸೇವಕರ ಅರ್ಪಣಾಭಾವವನ್ನೂ, ಶಿಸ್ತನ್ನೂ, ದೇಶಾಭಿಮಾನದ ಉತ್ಸಾಹವನ್ನೂ ಮುಕ್ತ ಕಂಠದಿಂದ ಪ್ರಶಂಸಿಸಿದರು. ಅಖಿಲ ಭಾರತದ ನಾಯಕರ ಮಟ್ಟದಲ್ಲಿ ಡಾ. ಹರ್ಡೀಕರ್ ಅವರಂಥ ವ್ಯಕ್ತಿಯನ್ನು ಕರ್ನಾಟಕ ಒದಗಿಸಿತು.

ಅಖಿಲ ಭಾರತ ಕಾಂಗ್ರೆಸ್‌ಅಧಿವೇಶನವು ಸ್ವಾತಂತ್ರ್ಯ ಪೂರ್ವದ ದಿನಗಳಲ್ಲಿ 1924ರಲ್ಲಿ ಬೆಳಗಾವಿಯಲ್ಲಿ ಸೇರಿತು. ಗಾಂಧೀಜಿ ಅಧ್ಯಕ್ಷರಾಗಿದ್ದರು. ಇದು ಕರ್ನಾಟಕದ ಸ್ವಾತಂತ್ರ್ಯ ಹೋರಾಗಾರರಲ್ಲಿ ಹೊಸ ಶಕ್ತಿ ಮೂಡಿಸಿತು. 1927ರಲ್ಲಿ ಗಾಂಧೀಜಿ ಅನಾರೋಗ್ಯದ ನಿಮಿತ್ತ ನಂದಿ ಬೆಟ್ಟದಲ್ಲಿ ಉಳಿದರು. ಅನಂತರ ಅವರು ಮೈಸೂರು ಸಂಸ್ಥಾನದಲ್ಲಿ ಪ್ರವಾಸ ಮಾಡಿದರು. ಮೈಸೂರು, ಮಂಡ್ಯ ಶಿವಮೊಗ್ಗ, ಹಾಸನ, ಚಿಕ್ಕಮಗಳೂರು ಹಾಗೂ ಬೆಂಗಳೂರು ಜಿಲ್ಲೆಗಳಲ್ಲಿಯ ಅವರ ಭೇಟಿಯ ತೀವ್ರ ಪರಿಣಾಮ ಬೀರಿತು. ಸುಲ್ತಾನ ಪೇಟೆಯ ಗಣಪತಿ ಗಲಭೆಗಳು (1928–29) ಮತ್ತು ಮೈಸೂರು ಸರಕಾರದ ದಬ್ಬಾಳಿಕೆಯ ನೀತಿ ಇವು ಮೈಸೂರಲ್ಲಿ ಕಾಂಗ್ರೆಸ್‌ನ್ನು ಮತ್ತೆ ಬಲಪಡಿಸುವಂತಾಯಿತು.

1917ರಲ್ಲಿ ಬೆಂಗಳೂರಿನಲ್ಲಿ ಸ್ಥಾಪಿತವಾದ ದೇಶಿಯ ವಿದ್ಯಾಶಾಲೆಯ ರಾಷ್ಟ್ರೀಯ ಚಟುವಟಿಕೆಗಳ ದೊಡ್ಡ ಕೇಂದ್ರವಾಗಿದ್ದಿತು. ಪ್ರೊ.ಕೆ. ಸಂಪದ್ಗಿರಿರಾವ್ ಪ್ರಾಂಶುಪಾಲರಿರುವಾಗ, ರಾಷ್ಟ್ರೀಯ ಸ್ಫೂರ್ತಿಯನ್ನು ಪಡೆದ ಸಮರ್ಪಣೆಯ ಭಾವದ ನೂರಾರು ಯುವಕರಿಗೆ ಅಲ್ಲಿ ತರಬೇತಿ ಕೊಡಲಾಯಿತು. ಕಾಂಗ್ರೆಸ್ಸು ಬ್ರಾಹ್ಮಣರ ಸಂಸ್ಥೆಯೆಂದು ಬಹಳ ದಿನಗಳವರೆಗೂ ಹೆಸರಿಸಲಾಗಿದ್ದಿತು. ಮುಂಬೈ ಪ್ರಾಂತ್ರದಲ್ಲಿ ಬ್ರಾಹ್ಮಣೇತರರ ಪರಿಷತ್ತು ತನ್ನ ಸಭೆಗಳಲ್ಲಿ ಹಾಗು ಅಧಿವೇಶನಗಳಲ್ಲಿ ಇಂಥ ಕಾಂಗ್ರೆಸ್ ಸಂಸ್ಥೆಯಿಂದ ದೂರವಿರಲು ತನ್ನ ಸದಸ್ಯರಿಗೆ ಉಪದೇಶಿಸಿತು.

ಆದರೂ ಹಳ್ಳಿಕೇರಿ ಗುದ್ಲೆಪ್ಪ ಅವರ ನೇತೃತ್ವದಲ್ಲಿ ಹಲವು ಬ್ರಾಹ್ಮಣೇತರಯುವಕರು ಧಾರವಾಡದಲ್ಲಿ ಭಾರತೀಯ ಯುವಕ ಸಂಘವನ್ನು ಸ್ಥಾಪಿಸಿದ್ದರು (1927). ಹಳ್ಳಿಗಳಲ್ಲಿ ಕೃಷಿಕರನ್ನು ಸಂಘಟಿಸಿ. ಬೆಂಗಳೂರಿನಂಥ ನಗರಗಳಲ್ಲಿ ಕಾರ್ಮಿಕ ವರ್ಗದವರನ್ನು ಸಂಘಟಿಸಿ ಕಾಂಗ್ರೆಸ್ಸು ಬಹುಸಂಖ್ಯರ ಚಳುವಳಿಯಾಗಬೇಕೆಂದು ಪ್ರಯತ್ನಿಸಿತು.

1930 ಮೇ 30ರಲ್ಲಿ ಬೆಳಗಾವಿಯಲ್ಲಿ ವಾರ್ಷಿಕ ಅಧಿವೇಶನವನ್ನು ಸೇರಿಸಿದ ಬ್ರಾಹ್ಮಣೇತರ ಪರಿಷತ್ತು ತನ್ನ ಸದಸ್ಯರಿಗೆಲ್ಲ ಕಾಂಗ್ರೆಸ್ ಸೇರಲು ಕರೆ ಕೊಟ್ಟಿತು ಹರ್ಡೇಕರ್ ಮಂಜಪ್ಪನವರ ಅಧ್ಯಕ್ಷತೆಯಲ್ಲಿ 1930ರ ಆಗಸ್ಟ್‌ನಲ್ಲಿ ಹಾವೇರಿಯಲ್ಲಿ ಸೇರಿದ ವೀರಶೈವ ಪರಿಷತ್ತು ಸಹ ಇಂಥದ್ದೇ ನಿರ್ಣಯವನ್ನು ಕೈಕೊಂಡಿತು. ಬಹುಸಂಖ್ಯಾತ ಜನರನ್ನು ಆಕರ್ಷಿಸುವಲ್ಲಿ ಕಾಂಗ್ರೆಸ್ ಯಶಸ್ವಿಯಾಯಿತು.

**7. ಕಾನೂನು ಭಂಗ ಚಳುವಳಿ :**

1930ರಲ್ಲಿ ಗಾಂಧೀಜಿಯವರಿಂದ ಪ್ರಾರಂಭಿಸಲ್ಪಟ್ಟ 'ಕಾನೂನು ಭಂಗ ಚಳುವಳಿ'ಯು ಕರ್ನಾಟಕದಲ್ಲಿಯ ಕಾಂಗ್ರೆಸ್ ಕಾರ್ಯಕರ್ತರನ್ನು ಯಾವುದಾದರೊಂದು ಪ್ರತಿಭಟನೆಯಲ್ಲಿ ತೊಡಗಿಸಿ ಕ್ರಿಯಾಶೀಲರನ್ನಾಗಿ ಮಾಡಿತು. ಗಾಂಧೀಜಿ ಐತಿಹಾಸಿಕ ದಂಡಿಯಾತ್ರೆ ಕೈಕೊಂಡಾಗ, 13–4–1930ರಂದು ಅಂಕೋಲೆಯಲ್ಲಿ 10 ಸಾವಿರ ಜನರ ಸಮ್ಮುಖದಲ್ಲಿ ಉಪ್ಪಿನ ಸತ್ಯಾಗ್ರಹ ಎಂ.ಪಿ. ನಾಡಕರ್ಣಿ ಹಾಗೂ ಇತರರಿಂದ ನಡೆಯಿತು. ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ, ಸತ್ಯಾಗ್ರಹವು ಯಶಸ್ವಿಯಾಗಬೇಕೆಂದು ಸಾವಿರಾರು ಜನರ ಸೇರುವ ಅಂಕೋಲೆಯಲ್ಲಿ ತನ್ನ ಸರ್ವ ಸಾಮಥ್ಯವನ್ನು ಕೇಂದ್ರೀಕರಿಸಿತು.

ಉಪ್ಪಿನ ಸತ್ಯಾಗ್ರಹ ಮಂಗಳೂರು, ಕುಂದಾಪುರ, ಪಡುಬಿದ್ರೆ, ಉಡುಪಿ, ಕಾರ್ಕಳ, ಪುತ್ತೂರು, ಮಲ್ಪೆ ಮತ್ತು ಕಾಪು (ಇವೆಲ್ಲವೂ ದಕ್ಷಿಣ ಕನ್ನಡ ಜಿಲ್ಲೆಯವು), ಬಿಸನಾಳ (ವಿಜಾಪುರ ಜಿಲ್ಲೆ), ಕಿರೇಸೂರು ಹಾಗೂ ಯಾವಗಲ್ಲ (ಧಾರವಾಡ ಜಿಲ್ಲೆ) ಹೀಗೆ ಕರ್ನಾಟಕದ ಸುಮಾರು 30 ಸ್ಥಳಗಳಲ್ಲಿನಡೆಯಿತು.

ಅಬಕಾರಿ ನಿಯಮಗಳನ್ನು ಉಲ್ಲಂಘಿಸಿ ಕೆಲವು ಸತ್ಯಾಗ್ರಹಿಗಳ ಗುಂಪು ಗೋವೆಯಿಂದ ಉಪ್ಪನ್ನು ತಂದು ಕಾರವಾರದಲ್ಲಿ ಮಾರಿತು. ಸಾಣೆಕಟ್ಟಾದಲ್ಲಿಯ ಉಪ್ಪಿನ ಕಟ್ಟೆಗಳ ಮೇಲೆ ಜೂನ್ 1ರಂದು ಸತ್ಯಾಗ್ರಹಿಗಳು ದಾಳಿ ಮಾಡಿದರು. ಅಂಕೋಲೆಯಲ್ಲಿ

ಉಪ್ಪಿನ ಸಂತೆಗಳನ್ನು ಏಪ್ರಿಲ್ ತಿಂಗಳ 20,25,27 ಹಾಗೂ ಮೇ 3ರಂದು ಏರ್ಪಡಿಸಲಾಯಿತು. ಇಂಥದೊಂದು ಸಾಮೂಹಿಕ ಚಳುವಳಿಯಿಂದ ಅಬಕಾರಿ ನಿಯಮಗಳೆಲ್ಲ ಅದೃಶ್ಯವಾಗುವಂತೆ ಕಂಡು ಬಂದಿತು.

ಉಪ್ಪಿನ ಸತ್ಯಾಗ್ರಹದ ನಂತರ ಅರಣ್ಯ ಸತ್ಯಾಗ್ರಹ ಮತ್ತು ಸೇಂದಿಯ ಉತ್ಪಾದನೆ ಮಾರಾಟದ ವಿರುದ್ಧ ಚಳುವಳಿ ಪ್ರಾರಂಭವಾಯಿತು. ಕಾಯ್ದಿಟ್ಟ ಅರಣ್ಯಗಳ ಕಾನೂನನ್ನು ಮುರಿದು, ಉರುವಲು ಕಟ್ಟಿಗೆ ಹಾಗೂ ಹುಲ್ಲನ್ನು ತಂದರು. ಇದರಿಂದ ಅವರು ಬಂಧಿತರಾದರು. ಹೆಂಡದ ಅಂಗಡಿಗಳ ತಡೆಕಾವಲು, ಈಚಲು ಮರಗಳನ್ನು ಕಡಿಯುವುದು, ಮದ್ಯದ ಅಂಗಡಿಗಳ ಲಿಲಾವಿಗೆ ತಡೆಕಾವಲು ಇವುಗಳು ಸಹ ನಡೆದವು.

ಧಾರವಾಡ ಜಿಲ್ಲೆಯ ಸಿಗ್ಗಾವಿಯಲಲಿ ನಡೆದ ಈಚಲು ಮರಗಳನ್ನು ಕಡಿದು ಉರುಳಿಸುವ ಸತ್ಯಾಗ್ರಹ ಯಶಸ್ಸು ಅಪೂರ್ವವಾದುದು. ಆದರೆ, ಗುಜರಾತ್‌ದ ಬರ್ಡೋಲಿಯಲ್ಲಿಯ ಅನುಭವದ ನಂತರ ಕೈಗೊಂಡ ಕರ ನಿರಾಕರಣೆ ಚಳುವಳಿ ಎಲ್ಲಿಕಿಂತಲೂ ಗಂಭೀರವಾಗಿದ್ದಿತು.

ಧಾರವಾಡ ಜಿಲ್ಲೆಯಲ್ಲಿ ಹಿರೇಕೆರೂರು, ಉತ್ತರ ಕನ್ನಡ ಜಿಲ್ಲೆಯಲ್ಲಿ ಅಂಕೋಲಾ, ಸಿರಸಿಹಾಗೂ ಸಿದ್ಧಾಪುರ ಹೀಗೆ ಕರ್ನಾಟಕದಲ್ಲಿ ನಾಲ್ಕು ತಾಲ್ಲೂಕುಗಳನ್ನು ಕರನಿರಾಕರಣೆ ಚಳುವಳಿಗೆ ಆಯ್ಕೆ ಮಾಡಲಾಯಿತು.

ವೀರನಗೌಡ ಪಾಟೀಲ್, ಟಿ.ಆರ್.ನೆಸ್ವಿ, ಕೆ.ಎಫ್. ಪಾಟೀಲ್ ಹಾಗೂ ಹಳ್ಳಿಕೇರಿಯವರ ಧುರೀಣತ್ವದಲ್ಲಿ ಹಿರೇಕೆರೂರಲ್ಲಿನ ಚಳವಳಿಯು ಸಂಪೂರ್ಣ ಯಶಸ್ಸು ಆಯಿತು. ಸಿರಸಿಯಲ್ಲಿ ಅಂಶತಃ ಯಶಸ್ಸು ಲಭಿಸಿತು. ಅಂಕೋಲಾ ಸಿದ್ಧಾಪುರಗಳಲ್ಲಿ ಅತ್ಯಂತ ಯಶಸ್ಸು ಕಂಡಿತು. ಸಾವಿರಾರು ಜನರು 1930–1931ರ ಸತ್ಯಗ್ರಹದಲ್ಲಿ ವಿವಿಧ ಅವಧಿಯ ಸೆರೆವಾಸಕ್ಕೆ ಒಳಗಾದರು. ಮೈಸೂರು ಸಂಸ್ಥಾನದಿಂದ ಸಹಸ್ರಾರು ಸ್ವಯಂ ಸೇವಕರು ಈ ಭಾಗಗಳಲ್ಲಿಯ ಸತ್ಯಾಗ್ರಹದಲ್ಲಿ ಭಾಗವಹಿಸಲು ಬಂದರು ಹಾಗೂ ಸೆರೆಯಾಳುಗಳಾದರು.

ಸಭೆಗಳಲ್ಲಿ, ಮೆರವಣಿಗೆಗಳಲ್ಲಿ ಭಾಗವಹಿಸುವುದು. ಈಚಲು ಮರಗಳನ್ನು ಕಡಿಯುವುದು, ಮದ್ಯ ಅಂಗಡಿಗಳನ್ನು ನಾಶಪಡಿಸುವುದು. ವಿದೇಶಿ ಬಟ್ಟೆಗಳನ್ನು ಮಾರುವ ಅಂಗಡಿಗಳಿಗೆ ತಡೆಕಾವಲು ಮಾಡುವುದು ಹುಲುಬನ್ನಿಯನ್ನು ಕೊಡದಿರುವದು. ಗಂಧದ ಮರವನ್ನು ಕಡಿಯುವದು ಅಥವಾ ಉರುವಲು ಕಟ್ಟಿಗೆಯಂಥ ಅರಣ್ಯದ ವಸ್ತುಗಳನ್ನು ತರುವುದು ಮತ್ತು ಭೂಕಂದಾಯದಂಥ ತೆರಿಗೆ ಕೊಡದಿರುವುದು – ಹೀಗೆ ವಿವಿಧ ಕಾರಣಗಳಿಗಾಗಿ ಈ ಸತ್ಯಾಗ್ರಹಿಗಳನ್ನು ಬಂಧಿಸಲಾಯಿತು.

1931ರಲ್ಲಿ ಗಾಂಧಿ ಇರ್ವಿನ್ ಒಪ್ಪಂದದ ಅನಂತರ ಶಾಂತ ಪರಿಸ್ಥಿತಿ ಸ್ವಲ್ಪ ಕಾಲವಿದ್ದಿತು. 1932ರಲ್ಲಿ ಕರನಿರಾಕರಣೆ ಚಳವಳಿ ಮತ್ತೆ ಪ್ರಾರಂಭವಾಯಿತು. ಈ ವರ್ಷಗಳಲ್ಲಿ ಸಿದ್ದಾಪುರ, ಅಂಕೋಲಾ ತಾಲ್ಲೂಕುಗಳಲ್ಲಿಯ ಜನರ ಸ್ವಾರ್ಥತ್ಯಾಗಗಳು ಸುವರ್ಣಾಕ್ಷರಗಳಲ್ಲಿ ಬರೆದಿಡಲು ಅರ್ಹವಾಗಿವೆ.

ಭಾರತದ ಸ್ವಾತಂತ್ರ್ಯ ಚಳುವಳಿಯ ಇತಿಹಾಸದಲ್ಲಿ ಉತ್ತರ ಕನ್ನಡ ಜಿಲ್ಲೆಯು ಸ್ಮರಣೀಯವಾಗಿದೆ, ಸರದಾರ ಪಟೇಲ್ ಹಾಗೂ ಗಾಂಧೀಜಿಯವರಂಥ ಮುಖಂಡರೂ ಇದನ್ನು ಪ್ರಶಂಸಿಸಿದ್ದಾರೆ. ಅಂಕೋಲೆಯ ನಿರಕ್ಷರಿನಾಡವರು ತೆರಿಗೆಗಳನ್ನು ಕೊಡಲಿಲ್ಲ, ಇಷ್ಟೇ ಅಲ್ಲದೆ, ತಮ್ಮ ಭೂಮಿ ಹಾಗೂ ಮನೆ ಸ್ಥಿರಾಸ್ತಿಗಳನನು, ಪಾತ್ರೆ ಜಾನುವಾರು ಮೊದಲಾದ ಚರಾಸ್ತಿಯನ್ನು ಜಪ್ತುಮಾಡಲು ಬಿಟ್ಟರು.

ಜಪ್ತು ಮಾಡಿದ ಆಸ್ತಿಯನ್ನು ಹರಾಜಿಗೆ ಹಾಕಿದಾಗ ಅವುಗಳನ್ನು ಬೇಡಲೂ ಸಹ ಯಾರೂ ಇರುತ್ತಿರಲಿಲ್ಲ. ಹಲವು ಸರಕಾರಿ ನೌಕರರು ಹಾಗೂ 'ರಾಜನಿಷ್ಠ'ರು ಇಂಥ ಆಸ್ತಿಗಳನ್ನು ಕೊಂಡಾಗ ಸ್ವಯಂ ಸೇವಕಿಯರು ಅಂಥ ನಿಷ್ಠಾವಂತ ಮನೆಯ ಎದುರಿಗೆ ಅನ್ನ ಸತ್ಯಾಗ್ರಹ ಹೂಡಿದರು. ಈ ಸ್ವಯಂ ಸೇವಕಿಯರು ಅನ್ನ ಸತ್ಯಾಗ್ರಹ ಮಾಡುವಾಗ ಎಲ್ಲ ರೀತಿಯ ಅವಮಾನಗಳಿಗೆ ಹಾಗೂ ಕೀಟಲೆಗಳಿಗೆ ಗುರಿಯಾಗುತ್ತಿದ್ದರು. ಹರಾಜು ಮಾಡಿದ ಆಸ್ತಿಗಳನ್ನು ಮೊದಲಿನ ಒಡೆಯರಿಗೆ ತಿರುಗಿ ಕೊಟ್ಟ ನಂತರವೇ ಅವರು ತಮ್ಮ ಅನ್ನ ಸತ್ಯಾಗ್ರಹವನನು ನಿಲ್ಲಿಸುತ್ತಿದ್ದರು.

ಬಹಳ ಮನೆಗಳಲ್ಲಿ ಪ್ರೌಢರೆಲ್ಲ ಸೆರೆಮನೆಗೆ ಹೋಗಿದ್ದರಿಂದ ಉತ್ತರಕನ್ನಡ ಜಿಲ್ಲೆಯಲಲಿ ಇಂಥ ಮನೆತನದಲ್ಲಿಯ ಮಕ್ಕಳಿಗೆ ವಾಸಿಸಲು ಕಾರವಾರ ಹಾಗೂ ಶಿವಮೊ ಗ್ಗಗಳಲ್ಲಿ ಎರಡು ಬಾಲಾಶ್ರಮಗಳನ್ನು ತೆರೆಯಲಾಯಿತು. ಕ್ರಾಂತಿಕಾರಿ ಭಗತ್‌ಸಿಂಗ್ ಹಾಗು ಅವನಜೊತೆಗಾರರು ಮತ್ತು ಸೊಲ್ಲಾಪುರದ ಮಲ್ಲಪ್ಪಾಧನಶೆಟ್ಟಿ ಹಾಗೂ ಅವನ ಮೂರು ಸ್ನೇಹಿತರ ವೀರ ಮರಣದಿಂದ ಈ ರಾಷ್ಟ್ರೀಯ ಯಜ್ಞದಲ್ಲಿ ಹೆಚ್ಚು ಯುವಕರಿಗೆ ಭಾಗವಹಿಸುವಂತೆ ಸ್ಫೂರ್ತಿ ಮಾಡಿತು.

'ಸತ್ಯಾಗ್ರಹಿ' ಹಾಗೂ 'ನವಯುಗ (ಉಡುಪಿ)', 'ಕರ್ಮವೀರ (ಧಾರವಾಡ, ಅನಂತರ ಹುಬ್ಬಳ್ಳಿ)', 'ಕೊಡಗು' (ಮಡಿಕೇರಿ), 'ಕಾನಡಾ ವೃತ್ತ' ಹಾಗೂ 'ಕಾನಾಡ ಧುರೀಣ ' (ಕುಮಟಾ), 'ಕರ್ನಾಟಕ ಕಚಿಜಚಿಟಿ' (ಬಳ್ಳಾರಿ), 'ಚಿತ್ರಗುಪ್ತ', 'ಪ್ರಜಾಮತ' ತಾಯಿನಾಡು, ವೀರಕೇಸರಿ', 'ವಿಶ್ವ ಕರ್ನಾಟಕ' (ಎಲ್ಲಾ ಬೆಂಗಳೂರಿನವು ), 'ಸಾಧ್ವಿ' (ಮೈಸೂರು), 'ತರುಣ ಕರ್ನಾಟಕ (ಹುಬ್ಬಳ್ಳಿ), 'ಕನ್ನಡಿಗ' (ಬಾಗಲಕೋಟೆ), 'ಕರ್ನಾಟಕ ವೈಭವ' (ವಿಜಾಪುರ)–ಮುಂತಾದ ಪತ್ರಿಕೆಗಳು ಈ ಅವಧಿಯಲ್ಲಿ ರಾಷ್ಟ್ರೀಯ ಸ್ಫೂರ್ತಿಯನ್ನು ಹೆಚ್ಚಿಸುವಲ್ಲಿ ಮಹತ್ವಪೂರ್ಣ ಸೇವೆಯನ್ನು ಸಲ್ಲಿಸಿವೆ.

ಸರಕಾರದ ಕ್ರಮದಿಂದ 'ಕಾನಾಡಾವೃತ್ತ'ದಂಥ ಹಲವುಪತ್ರಿಕೆಗಳ ಪ್ರಕಟಣೆಯನ್ನು ಸ್ಥಗಿತಗೊಳೀಸಬೇಕಾಯಿತು ಹಾಗೂ ಕರ್ನಾಟಕ ಕೇಸರಿಯಂಥ ಕೆಲವು ಪತ್ರಿಕೆಗಳ ಪ್ರಕಟಣೆಯನ್ನು ಪೂರ್ತಿ ನಿಲ್ಲಸಬೇಕಾಯಿತು. ಆದರೆ ವಯಸ್ಸಾದವರು, ಯುವಕರು, ಹದಿಹರೆಯದವರು, ಬಾಲಕರೂ ಹಾಗು ಹೆಣ್ಣು ಮಕ್ಕಳಿಂದಲೂ ಸಹ (ರಹಸ್ಯವಾಗಿ ಮುದ್ರಣಗೊಂಡ) ಗುಟ್ಟಾಗಿ ವಿತರಣೆಗೊಂಡ ಸಾಯಕ್ಲೊಸ್ಟಾಯಿಲ್ ಆದ ಕರಪತ್ರ (ಬುಲೆಟಿನ್)ಗಳೂ ವರ್ತಮಾನ ಪತ್ರಿಕೆಗಳ ಕಾರ್ಯವನ್ನು ಪೂರೈಸಿದವು. 1930–31ಕ್ಕಿಂತಲೂ 1932–33ರಲ್ಲಿ ಈ ಚಳವಳಿ ಹೆಚ್ಚು ತೀವ್ರತರವಾಗಿದ್ದಿತು. ಹ.ರಾ. ಪುರೋಹಿತರು ಕರ್ನಾಟಕದ ರಾಜ್ಯದ ರಾಜಕೀಯ ಸಮ್ಮೇಳನ ಬಾಗಲಕೋಟೆಯಲಲಿ 1932ರಲ್ಲಿ ಸೇರಿದಾಗ, ಅದರ ಅಧ್ಯಕ್ಷರಾಗಿ ತಮ್ಮ ನೂರಾರು ಕಾರ್ಯಕರ್ತರೊಡನೆ ಬಂಧಿತರಾದರು.

1932 ಜೂನ್‌ದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ರಾಜಕೀಯ ಸಮ್ಮೇಳನ ಮಂಗಳೂರಿನಗಲಲಿ ವ್ಯವಸ್ಥೆಗೊಂಡಾಗ, ಖಂಡಿಗೆ ಕೃಷ್ಣಭಟ್ ಹಾಗೂ ಸಹಸ್ರಾರು ಜನರು ಬಂಧಿತರಾದರು. ಹೂಲಿಯ (ಬೆಳಗಾವಿ ಜಿಲ್ಲೆ) ವೆಂಕಟರಡ್ಡಿ ಸತ್ಯಾಗ್ರಹದಲ್ಲಿ ಭಾಗವಹಿಸಿದ್ದರಿಂದ ಅವರಿಗೆ ಒಂಭತ್ತು ವರುಷ ಮೇಲ್ಪಟ್ಟು ಸೆರೆಮನೆಯ ಶಿಕ್ಷೆಯಾಯಿತು.

1932–33ರ ಚಳವಳಿಯಲಲಿ ಕರ್ನಾಟಕದಲ್ಲಿ ಸುಮಾರು 4,000ರಷ್ಟು ಜನರಿಗೆ ಜೈಲು ವಾಸದ ಶಿಕ್ಷೆಯಾಯಿತು. ಭಾರತವು ಎರಡನೆಯ ಜಾಗತಿಕ ಯುದ್ಧದಲ್ಲಿ ಭಾಗವಹಿಸುವಂತೆ ಬ್ರಿಟಿಷ್ ಸರಕಾರದ ನಿರ್ಣಯವನ್ನು ವಿರೋಧಿಸಿ ಮಂತ್ರಿಗಳು 1939ರಲ್ಲಿ ರಾಜೀನಾಮೆ ಕೊಟ್ಟರು. ಯುದ್ಧ ವಿರೋಧಿ ಘೋಷಣೆಗಳನ್ನು ಕೂಗುತ್ತ 1940–41ರಲ್ಲಿ ಕರ್ನಾಟಕದಲ್ಲಿ ಸುಮಾರು 1,200 ಕಾಂಗ್ರೆಸ್ಸಿಗರು ವೈಯಕ್ತಿಕ ಸತ್ಯಾಗ್ರಹವನ್ನು ಮಾಡಿದರು. ಅವರಿಗೆ ಮೂರು ತಿಂಗಳಿಂದ ಒಂದು ವರುಷದವರಿಗೆ ಶಿಕ್ಷೆಯಾಯಿತು. ಪ್ರಜಾ ಸಂಯುಕ್ತ ಪಕ್ಷವು 1937ರಲ್ಲಿ ಕಾಂಗ್ರೆಸ್‌ನಲ್ಲಿ ವಿಲೀನಗೂಂಡಿತು.

**ಏಪ್ರಿಲ್ 1938ರಲ್ಲಿ ಶಿವಪುರದಲ್ಲಿ ಇದರ ಮೊದಲನೆಯ** ಅಧಿವೇಶನವು ಸೇರಿತು. ಶಿವಪುರದಲ್ಲಿ ಧ್ವಜ ಏರಿಸುವುದರ ಮೇಲಿನ ನಿರ್ಬಂಧವನ್ನು ಮುರಿಯಲಾಯಿತು. ಅದರಿಂದ ಬಹಳ ಮುಖಂಡರು ಬಂಧಿತರಾದರು. ಧ್ವಜ ಸತ್ಯಾಗ್ರಹವನ್ನು ಸಂಸ್ಥಾನದ ತುಂಬ ಕೈಗೊಳ್ಳಲಾಯಿತು. ನೂರಾರು ಜನರು ಜೈಲಿಗೆ ಹೋದರು. ಏಪ್ರಿಲ್ 1938ರಲ್ಲಿ ವಿದುರಾಶ್ವತ್ಥದಲ್ಲಿ ಗುಂಡು ಹಾರಿಸಿದಾಗ, ಕೆಲವು ಜನರು ಸತ್ತುದ್ದರಿಂದ ಅಪೂರ್ವ ಜಾಗೃತಿಯುಂಟಾಯಿತು. ಟಿ.ಸಿದ್ಧಲಿಂಗಯ್ಯ, ಕೆ.ಟಿ.ಭಾಷ್ಯಂ, ತಾಳಕೆರೆ ಸುಬ್ರಮಣ್ಯ, ಎಚ್, ಸಿ, ದಾಸಪ್ಪ, ಬಿ.ಎನ್. ಗುಪ್ತಾ., ಎಚ್.ಕೆ. ವೀರಣ್ಣಗೌಡ, ಕೆ.ಹನುಮಂತಯ್ಯ, ಎಂ.ಎನ್.ಜೋಯಿಸ್ ಕೆ.ಸಿ.ರೆಡ್ಡಿ, ಎಸ್. ನಿಜಲಿಂಗಪ್ಪ, ಸಾಹುಕಾರ ಚೆನ್ನಯ್ಯ ಮತ್ತು ತಹಡೂರು ರಾಮಚಂದ್ರರಾವ್ ಈ ಹಲವಾರು ಮೈಸೂರು ಸಂಸ್ಥಾನದ ಪ್ರಮುಖ ಕಾಂಗ್ರೆಸ್ ಮುಖಂಡರು, ತಾಲೂಕು ಮಟ್ಟದ ಸಮ್ಮೇಳನಗಳನ್ನು ವ್ಯವಸ್ಥೆಗೊಳಿಸುವಲಲಿ ಗ್ರಾಮೀಣ ಹಾಗೂ ಬೇಸಾಯದ ಸಮಸ್ಯೆಗಳನ್ನು ಚರ್ಚೆ ಮಾಡುವಲ್ಲಿ ಮೈಸೂರು ಕಾಂಗ್ರೆಸ್ ಬಹಳಷ್ಟು ಗಮನ ಕೊಟ್ಟಿತು.

ಜವಾಬ್ದಾರಿ ಸರಕಾರದ ಬೇಡಿಕೆಗೆ ಒತ್ತಾಯಿಸಲು, ಮೈಸೂರಿನಲ್ಲಿಸತ್ಯಾಗ್ರಹ ಹೂಡಲಾಯಿತು. ಸೆಪ್ಟೆಂಬರ್ 1939ರಲ್ಲಿ ತುರುವನೂರಿನಲ್ಲಿ ನಡೆದ ಸತ್ಯಾಗ್ರಹದಲ್ಲಿ ಈಚಲು ಮರಗಳನ್ನು ಕಡಿದಿದ್ದಕ್ಕಾಗಿ ನಿಜಲಿಂಗಪ್ಪ ಹಾಗೂ ಇತರರನ್ನು ಬಂಧಿಸಲಾಯಿತು. ಮೈಸೂರು ಸಂಸ್ಥಾನದಲ್ಲಿ ಈ ಸತ್ಯಾಗ್ರಹ ನಡೆದು 1200ಕ್ಕಿಂತ ಹೆಚ್ಚು ಜನರನ್ನು ಸರೆಹಿಡಿಯಲಾಯಿತು. ಕೋಲಾರ ಗಣಿ ಕ್ಷೇತ್ರದಲಲಿ ಸತ್ಯಾಗ್ರಹ ಕೈಗೊಳ್ಳಲಾಯಿತು. ಗಣಿ ಕ್ಷೇತ್ರಕ್ಕೆ ಪ್ರವೇಶಕ್ಕೆ ನಿರ್ಬಂಧಕ್ಕೆ ಇದ್ದ ಅಜ್ಞೆಯನನು ಮುರಿದು ಸಾವಿರಾರು ಜನರು ಬಂಧಿತರಾದರು.

ಜಿಲ್ಲಾ ಬೋರ್ಡ್ ಚುನಾವಣೆಯಲಲಿ ಕಾಂಗ್ರೆಸ್ ಭಾಗವಹಿಸಿತ್ತು. ಒಟ್ಟು 173 ಸ್ಥಳಗಳಲ್ಲಿ. ಕಾಂಗ್ರೆಸ್ 133 ಸ್ಥಳಗಳಿಗೆ ಸ್ಪರ್ಧಿಸಿ ಅದರಲ್ಲಿ 119 ಸ್ಥಳಗಳನನು ಗೆದ್ದಿತು. ಆಮೇಲೆ ನೆರವೇರಿದ ನಗರ ಸಭೆ ಚುನಾವಣೆಗಳಲ್ಲಿ ಸಾಧಾರನ ಎಲ್ಲ ಸ್ಥಳಗಳಲ್ಲಿಯೂ ಕಾಂಗ್ರೆಸ್ ಬಹುಮತವನ್ನು ಪಡೆಯಿತು. ಬೆಂಗಳೂರು, ಭದ್ರಾವತಿ, ಕೋಲಾರದ ಬಂಗಾರದ ಗಣೀ ಹಾಗೂ ಇನ್ನಿತರ ಔದ್ಯೋಗಿಕ ಕ್ಷೇತ್ರದಲ್ಲಿಯ ಕೂಲಿಕಾರರು ಕಾಂಗ್ರೆಸ್ ಧ್ವಜದಡಿಯಲ್ಲಿಯೇ ಸಂಘಟತರಾದರು. 1940–41ರಲ್ಲಿ ಯಶಸ್ವಿಯಾಗಿ 28

ದಿನಗಳವರೆಗೆ ನಡೆದ ಬಿನ್ನಿ ಗಿರಿಣಿಯ ಬಹಿಷ್ಕಾರ ಚಳುವಳಿಯಲ್ಲಿ ಪ್ರಥಮವಾಗಿ ಅವರ ಬಲದ ಪರೀಕ್ಷೆಯಾಯಿತು. 1941ರಲ್ಲಿ ಪ್ರಜಾಪ್ರತಿನಿಧಿ ಸಭೆಗೆ 152 ಸ್ಥಳಗಳಿಗಾಗಿ ಸ್ಪರ್ಧಿಸಿ ಕಾಂಗ್ರೆಸ್ 106 ಸ್ಥಳಗಳಲ್ಲಿ ವಿಜಯ ಪಡೆಯಿತು.

ರಾಷ್ಟ್ರೀಯ ಚಟುವಟಿಕೆಗಳು ಸಾಗಿಸಲು 1934ರಲ್ಲಿ ಹೈದರಾಬಾದ್ ಕರ್ನಾಟಕ ಪರಿಷತ್‌ನನ್ನು ವ್ಯವಸ್ಥೆಗೊಳಿಸಲಾಯಿತು. ಜಮಖಂಡಿ ಮುಧೋಳ ಹಾಗೂ ಇನ್ನಿತರ ಸಂಸ್ಥಾನಗಳಲ್ಲಿಯೂ ರಾಷ್ಟ್ರೀಯ ವಾದಿಗಳು ಜವಾಬ್ದಾರಿ ಸರಕಾರಕ್ಕಾಗಿ ಚಳುವಳಿ ಮಾಡಿದ್ದರು. ರಾಮದುರ್ಗದಲ್ಲಿ 1939ರಲ್ಲಿ ಈ ಚಳುವಳಿಯ ಹಿಂಸಾತ್ಮಕ ರೂಪ ತಳೆದು ಹಲವು ಪೊಲೀಸರು ಸತ್ತರು. ಈ ಅಪಾದನೆಯ ಮೇರೆಗೆ 9 ಜನರನ್ನು ಗಲ್ಲಿಗೇರಿಸಲಾಯಿತು. ಅನಂತರ ಚಳುವಳಿ ತಣ್ಣಗಾಯಿತು.

**8. ಕ್ವಿಟ್ ಇಂಡಿಯಾ ಚಳವಳಿ**

1942ರ ಕ್ವಿಟ್ ಇಂಡಿಯ ಚಳವಳಿಯಲ್ಲಿ ಹಿಂದೆಂದೂ ಕಾಣಲಾರದಷ್ಟು ಜನಜಾಗೃತಿಯು ಕರ್ನಾಟಕದಲ್ಲಿ ಕಂಡು ಬಂದಿತು. ಬೆಳಗಾವಿ ಹಾಗೂ ಧಾರವಾಡ ಜಿಲ್ಲೆಯಲಿ, ಬೆಂಗಳೂರು ಹಾಗೂ ಮೈಸೂರು ನಗರಗಳಲ್ಲಿ ಈ ಚಳುವಳಿಯು ತೀವ್ರತರವಾಗಿತ್ತು. 8 ಆಗಸ್ಟ್ 1942ರಂದು ಮುಂಬೈ ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಸಭೆಯಲ್ಲಿ ಗಾಂಧಿಜಿ ಚಲೇಜಾವ್ ಚಳುವಳಿಯನ್ನು ಪ್ರಕಟಿಸಿದ ಕೂಡಲೇ ಕಾಂಗ್ರೆಸ್ ಮುಖಂಡರು ಬಂಧಿತರಾದರು. ಚಳುವಳಿಗೆ ಮುಂದಾಳುಗಳೇ ಉಳಿಯಲಿಲ್ಲ.

ಗಾಂಧೀಜಿಯವರ ಇಬ್ಬರು ವಿಶ್ವಾಸಿ ಸಹಾಯಕರಾದ ಕಾಲೇಲಕರ ಮತ್ತು ಮುಷ್ರುವಾಲ್ ಸರಕಾರದ ಯಂತ್ರವು ಕುಸಿದು ಬೀಳುವ ರೀತಿಯಲ್ಲಿ ಚಳುವಳಿಯನ್ನು ಸಂಘಟಿಸಬೇಕೆಂದು **'ಹರಿಜನ'** ಪತ್ರಿಕೆಯಲ್ಲಿ ಕರೆಕೊಟ್ಟು ಬರೆದರು.
ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಗೂ ಚಳುವಳಿಯಲ್ಲಿ ಕ್ರಿಯಾಶೀಲವಾಗಿ ಭಾಗವಹಿಸಲು ವಿಜಾಪುರದ ಸಿ.ಜೆ. ಅಂಬಲಿ ಅಧ್ಯಕ್ಷರು, ಆರ್.ಆರ್. ದಿವಾಕರ ಕಾರ್ಯದರ್ಶಿಗಳು, ಯು.ಶ್ರೀನಿವಾಸ ಮಲ್ಯ, ದ.ಪ., ಕರಮಲ್‌ಕರ್ ಹಾಗೂ ಆರ್.ಎಸ್. ಹುಕ್ಕೇರಿಕರ್ ಇವರುಗಳು ಸದಸ್ಯರಾಗಿರುವ ಒಂದು ಕ್ರಿಯಾ ಸಮಿತಿಯನ್ನು ನಿಯಮಿಸಿತು.

ಬೆಳಗಾವಿ ಹಾಗೂ ಧಾರವಾಡ ಜಿಲ್ಲೆಗಳಲಲಿ ಹತ್ತಾರು ಗ್ರಾಮಚಾವಡಿಗಳು ಸುಡಲ್ಪಟ್ಟವು. ಗ್ರಾಮ ಲೆಕ್ಕಗರ ಕಡತಗಳನನು ಸೆಳೆದೊಯ್ದು ಸುಡಲಾಯಿತು. ತಂತಿ ಕಚೇರಿಯ ತಂತಿಗಳನ್ನು ಕತ್ತರಿಸಲಾಯಿತು. ರೈಲು ಮಾರ್ಗಗಳನ್ನು ಕೀಳಲಾಯಿತು. ಮತ್ತು ರೈಲು ನಿಲ್ದಾಣಗಳನ್ನು ಸರಕಾರಿ ಕಛೇರಿಗಳನ್ನು ಹಾಳು ಮಾಡಲಾಯಿತು. ಕರ್ನಾಟಕದಲ್ಲಿ 25ಕ್ಕಿಂತ ಹೆಚ್ಚು ರೈಲು ನಿಲ್ದಾಣಗಳು ಹಾನಿಗೊಳಗಾದವು. ಅಂಚೆ ಕಛೇರಿಗಳು ನಷ್ಟ ಅನುಭವಿಸಿಸವರು. ನಿಪ್ಪಾಣಿಯಲ್ಲಿ ಉಪ ವಿಲೇಖನಾಧಿಕಾರಿ ಕಛೇರಿಗಳನ್ನೊಳಗೊಂಡು ಹಲವಾರು ಸರಕಾರಿ ಕಛೇರಿಗಳು ಧ್ವಂಸಗೊಂಡವು . ಉತ್ತರ ಕನ್ನಡ ಜಿಲ್ಲೆಯಲಲಿ ಹಾಗೂ ಮೈಸೂರು ಸಂಸ್ಥಾನದಲ್ಲಿ ಭೂಗತ ಚಟುವಟಿಕೆಗಳು ಹೆಚ್ಚದವು. ಗಾಂಧಿವಾದಿ **ಮೈಲಾರ್ ಮಹದೇವಪ್ಪ** ಭೂಗತ ಚಟುವಟಿಕೆ ಆರಂಭಿಸಿದ. ಆತ ಇನ್ನಿಬ್ಬರೊಡನೆ ಸೇರಿ ಧಾರವಾಡ ಜಿಲ್ಲೆಯ ಹೊಸರಿತ್ತಿಯಲಲಿ ಸರಕಾರಿ ಖಜಾನೆಯೊಂದನ್ನು ಪ್ರತಿಭಟನೆಯಾರ್ಥವಾಗಿ ಲೂಟಿ ಮಾಡಲು ಪ್ರಯತ್ನಿಸಿದಾಗ 1941ರ ಏಪ್ರಿಲ್ 1ರಂದು ಪೊಲೀಸರ ಗುಂಡಿಗೆ ಬಲಿಯಾದ.

ಶಿವಮೊಗ್ಗ ಜಿಲ್ಲೆಯ **ಈಸೂರಿನಲ್ಲಿ** ಇಬ್ಬರು ಅಧಿಕಾರಿಗಳು ಚಳುವಳಿಕಾರರ ಘರ್ಷಣೆಯಿಂದ ಸಾವಿಗೀಡಾದಪರಿಣಾಮವಾಗಿ ಐವರು ಸ್ವಾತಂತ್ರ್ಯ ಹೋರಾಟಗಾರರನ್ನು ಗಲ್ಲಿಗೇರಿಸಲಾಯಿತು. ಪೊಲೀಸರ ಗೋಲಿಬಾರ್‌ನಿಮದ ದಾವಣಗೆರೆಯಲ್ಲಿ 5 ಜನ, ಬೈಲಹೊಂಗಲದಲ್ಲಿ 7 ಜನ ಹುತಾತ್ಮರಾದರು. ಕೊಲ್ಲಾಪುರ ಸಂಸ್ಥಾನದ ಗಾರ್ಗೋಟಿಯಲ್ಲಿ ಏಳು ಕ್ರಾಂತಿಕರರು ಪೊಲೀಸರ ಗುಂಡಿಗೆ ಬಲಿಯಾದರು. ಹುಬ್ಬಳ್ಳಿಯಲ್ಲಿ ಶಾಲಾ ವಿದ್ಯಾರ್ಥಿಯೊಬ್ಬ ಸಾವಿಗೀಡಾದನು. ತೆಲಗಿಯಲ್ಲಿ ರಾಜ್ಯ ಖಜಾನೆಯನ್ನು ಕ್ರಾಂತಿಕಾರರು ಲೂಟಿ ಮಾಡಿದರು. ಕಿಣಿ ಗ್ರಾಮದಲ್ಲಿ ಪೊಲೀಸ್ ಸಬ್ ಇನ್ಸ್‌ಪೆಕ್ಟರ್‌ರೊಬ್ಬರ ಪಿಸ್ತೂಲನ್ನು ಅಪಹರಿಸಲಾಯಿತು.
ಧಾರವಾಡ ಹಾಗೂ ಬೆಳಗಾವಿ ಜಿಲ್ಲೆಗಳು ವ್ಯವಸ್ಥಿತ ಭೂಗತ ಚಟುವಟಿಕೆಗಳು ನಡೆದವು. ಈ ಚಟುವಟಿಕೆಗಳು **'ಕರ್ನಾಟಕ ಪದ್ಧತಿ'** ಎಂದೇ ಇಡೀ ದೇಶದ ತುಂಬಾ ಪ್ರಚಾರ ಪಡೆದವು.

1942-43ರ ಅವಧಿಯಲ್ಲಿ ಸುಮಾರು 10 ಸಾವಿರದಷ್ಟು ಜನರು ಕರ್ನಾಟಕದಲ್ಲಿ ಸೆರೆಮನೆ ಕಂಡರು. 1944ರಲ್ಲಿ ಡಾ. ರಂಗನಾಥ ದಿವಾಕರ್ ಹಾಗೂ ಇತರ ಭೂಗತ ಕಾರ್ಯಕರ್ತರು ಪೊಲೀಸರಿಗೆ ಶರಣಾದ ನಂತರ ಕರ್ನಾಟಕದಲ್ಲಿ ಕ್ವಿಟ್ ಇಂಡಿಯಾ ಚಳುವಳಿಯ ಕಾವು ಕ್ರಮೇಣವಾಗಿ ಆರಿತು. ಆದರೂ ಕ್ವಿಟ್ ಇಂಡಿಯಾ ಚಳವಳಿ ಕರ್ನಾಟಕದಲ್ಲಿ ಕಂಟಷ್ಟು ಯಶಸ್ಸು ದೇಶದ ಇತರ ಯಾವ ಪ್ರಾಂತದಲೂ ಕಾಣಲಿಲ್ಲ.

**9. ಮೈಸೂರು ಚಲೋ ಚಳವಳಿ**

ದೇಶಕ್ಕೆ ಸ್ವಾತಂತ್ರ್ಯ ಬಂದ ಮೇಲೂ ಮೈಸೂರು ಸಂಸ್ಥಾನದಲ್ಲಿ ಪ್ರಜಾತಾಂತ್ರಿಕವಾದ ಜವಾಬ್ದಾರಿ ಸರಕಾರ ಸ್ಥಾಪಕವಾಗಲಿಲ್ಲ. ಮಹಾರಾಜ 1947ರ ಆಗಸ್ಟ್ 9ರಂದು ಭಾರತ ಒಕ್ಕೂಟಕ್ಕೆ ಸೇರುವ ಇನ್ಸ್ಟ್ರೂಮೆಂಟ್ ಆಫ್ ಎಕ್ಸೆಶನ್‌ಗೆ ಸಹಿ ಮಡಿದ್ದರು, ಆದರೂ ಆಗಸ್ಟ್ 15 ರಂದು ಮಹಾರಾಜ ಮೈಸೂರು ಸಂಸ್ಥಾನದಲ್ಲಿಭಾರತದ ರಾಷ್ಟ್ರ ಧ್ವಜವನ್ನು ಹಾರಿಸಲಿಲ್ಲ. ಮೈಸೂರು ಸಂಸ್ಥಾನ ಭಾರತ ಒಕ್ಕೂಟಕ್ಕೆ ಸೇರುವ ಯಾವುದೇ ಲಕ್ಷಣವನ್ನು ತೋರಿಸಲಿಲ್ಲ.
ಜವಾಬ್ದಾರಿ ಸರಕಾರದ ರಚನೆ ಕಾಂಗ್ರೆಸ್‌ನ ಬಹುದಿನಗಳ ಬೇಡಿಕೆಯಾಗಿತ್ತು. ಹೀಗಾಗಿ ಕೆ.ಸಿ. ರೆಡ್ಡಿ ನೇತೃತ್ವದಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಬೆಂಗಳೂರಿನಲ್ಲಿ ಸಭೆ ಸೇರಿ 'ಮೈಸೂರುಚಲೋ'ಚಳುವಳಿ ಸಂಘಟಿಸಿ ಮೈಸೂರು ಅರಮನೆ ಮುಂದೆ ಹೋಗಿ ಸತ್ಯಾಗ್ರಹ ಹೂಡಲು ನಿರ್ಧರಿಸಿದರು. ಸರಕಾರ ಪ್ರತಿಬಂಧಕ ಅಜ್ಞೆಗಳನ್ನು ಹೊರಡಿಸಿತು. ಕೆ.ಟಿ. ಭಾಷ್ಯಂ, ಕೆ.ಸಿ.ರೆಡ್ಡಿ, ಟಿ. ಸಿದ್ಧಲಿಂಗಯ್ಯ ಮುಂತಾದ ನಾಯಕರನ್ನು ಬಂಧಿಸಲಾಯಿತು. ಆದರೆ ಸಂಸ್ಥಾನದ ವಿವಿಧ ಊರುಗಳಿಂದ ತಂಡ ತಂಡಗಳಲ್ಲಿ ಸಾವಿರಾರು ಜನ ಮೈಸೂರಿನತ್ತ ಸಾಗಿದರು. ಶಾಲೆ ಕಾಲೇಜು ಕಾರ್ಖಾನೆಗಳಲ್ಲಿ ಮುಷ್ಕರ ನಡೆಯಿತು. ಜೈಲುಗಳೆಲ್ಲ ಭರ್ತಿಯಾದವು. ದಿವಾನ ಆರ್ಕಾಟ್ ರಾಮಸ್ವಾಮಿ ವಿರುದ್ಧ 'ಆರ್ಕಾಟ್ ಬಾಯ್‌ಕಾಟ್' ಎಂದೂ, ದಿವಾನರ ಸಲಹಾ ಸಮಿತಿ ಸದಸ್ಯರಾದ ತಂಬೂಚಟ್ಟಿ ವಿರುದ್ಧ 'ಚಟ್ಟಕಟ್ಟ' ಎಂದೂ ಘೋಷಣೆಗಳನ್ನು ಕೂಗಲಾಯಿತು. ಚಳವಳಿ ತೀವ್ರವಾಯಿತು. ಬೆಂಗಳೂರಿನ ರಾಷ್ಟ್ರೀಯ ಪತ್ರಿಕೆ 'ಪೌರವಾಣಿ'ಯನ್ನು ಹಿಂದೂಪುರದಿಂದ ರಹಸ್ಯವಾಗಿ ಪ್ರಕಟಿಸಿ ವಿತರಿಸಲಾಯಿತು. ಭೂಗತ ಚಟುವಟಿಕೆಗಳು ಹೆಚ್ಚದವು.

ತಾಲ್ಲೂಕು ಕಛೇರಿಗಳಿಗೆ ಮುತ್ತಿಗೆ ಹಾಕಿ ಧ್ವಜ ಹಾರಿಸುವ ಪ್ರಯತ್ನಗಳು ನಡೆದವು. ಈ ಪ್ರಯತ್ನಗಳಲ್ಲಿ ವಿವಿಧೆಡೆ 20ಕ್ಕಿಂತ ಜನರು ಪೊಲೀಸರ ಗುಂಡಿಗೆ ಬಲಿಯಾದರು. ಚಳುವಳಿಯನ್ನು ನಿಯಂತ್ರಿಸಲಾಗಿದೆ ಮೈಸೂರು ಸಂಸ್ಥಾನ 42 ದಿನಗಳ ನಂತರ ಘೋಷಣೆ ಹೊರಡಿಸಿ ಜವಾಬ್ದಾರಿ ಸರಕಾರ ರಚನೆಗೆ ಒಪ್ಪಕೊಂಡಿತು. ಅಕ್ಟೋಬರ್ 27ರಂದು ಕೆ.ಸಿ. ರೆಡ್ಡಿ ನೇತೃತ್ವದ ಜವಾಬ್ದಾರಿ ಸರಕಾರ ಅಧಿಕಾರ ವಹಿಸಿಕೊಂಡಿತು. 1950ರ ಜನವರಿ 26ರಂದು ಭಾರತ ಸಂವಿಧಾನ ಜಾರಿಗೆ ಬಂದಿತು. ಮೈಸೂರು ರಾಜ್ಯವಾಗಿ ಮಹಾರಾಜರು ರಾಜ ಪ್ರಮುಖರಾದರು. ಕೆ.ಸಿ.ರೆಡ್ಡಿ ನೇತೃತ್ವದ ಹೊಸ ಕಾಂಗ್ರೆಸ್ ಮಂತ್ರಿಮಂಡಲ ನೇತೃತ್ವಕ್ಕೆ ಬಂದಿತು.

**10. ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕದ ಮಹಿಳೆಯರ ಪಾತ್ರ**

ಭಾರತ ರಾಷ್ಟ್ರೀಯ ಕಾಂಗ್ರೆಸ್ ಸ್ಥಾಪನೆಯಾದ ಆರಂಭದಲ್ಲಿ ಮಹಿಳೆಯರ ಭಾಗವಹಿಸುವಿಕೆ ಕೇವಲ ಅಲಂಕಾರಿಕವಾಗಿತ್ತು. ರಾಷ್ಟ್ರೀಯ ಮಟ್ಟದಲ್ಲಿ ಆ್ಯನಿಬೆಸೆಂಟ್, ಮಾರ್ಗರೇಟ್ ಕಸಿನ್ಸ್ ಹಾಗೂ ಸರೋಜಿನಿ ನಾಯ್ಡು ಮಹಿಳೆಯರಲ್ಲಿ ರಾಷ್ಟ್ರೀಯ ಪ್ರಜ್ಞೆ ಮೂಡಿಸುವಲ್ಲಿ ಪ್ರಮುಖ ಪಾತ್ರ ವಹಿಸಿದರು. ಬೊಂಬಾಯಿ– ಕರ್ನಾಟಕ ಪ್ರೆಸಿಡೆನ್ಸ ಪ್ರಾಂತ್ಯದ ಮಹಿಳೆಯರ ಮೇಲೆ ಗೋಖಲೆ ಹಾಗೂ ತಿಲಕ್ ಪರಿಣಾಮಕಾರಿ ಪ್ರಭಾವ ಬೀರಿ ಗಾಂಧೀಜಿ ಪ್ರವೇಶದ ವಹಿಸುವಂತಾಗಲು ವೇದಿಕೆಯನ್ನು ನಿರ್ಮಿಸಿದರು.

ಮಹಿಳೆಯರು ಸ್ವಾತಂತ್ರ್ಯ ಹೋರಾಟದಲ್ಲಿ ನೇರವಾಗಿ ಭಾಗವಹಿಸುವಂಥ ಮೊದಲ ಪ್ರಸಂಗವೆಂದರೆ ಉಪ್ಪಿನ ಸತ್ಯಾಗ್ರಹ.
ರಚನಾತ್ಮಕಕಾರ್ಯಕ್ರಮಗಳಲ್ಲಿ ಮಾತ್ರ ಮಹಿಳೆಯರು ಭಾಗವಹಿಸಬೇಕೆಂಬ ಗಾಂಧೀಜಿಯವರ ನಿಲುವನ್ನು ಧಿಕ್ಕರಿಸಿ ಪುರುಷರಿಗೆ ಸಮಾನವಾಗಿ ಮಹಿಳೆಯರೂ ಉಪ್ಪಿನ ಸತ್ಯಾಗ್ರಹದಲ್ಲಿ ಪಾಲ್ಗೊಳ್ಳುವಂತಾಗಲು **ಕಮಲಾಬಾಯಿ ಚಟ್ಟೋಪಾಧ್ಯಾಯ**ಕಾರಣರಾದರು. ಉಪ್ಪಿನ ಸತ್ಯಾಗ್ರಹದ ಈ ಅನುಭವ ಮುಂದೆ ಮಹಿಳೆಯರು ಸಂಘಟಿತರಾಗಿ ಹೋರಾಡಲು ದಾರಿ ಮಾಡಿಕೊಟ್ಟಿತು. ದೇಶ ಸೇವಕಿಯರುವಾನರ ಸೈನ್ಯ ರಚಿಸಿದರು. ಪ್ರಭಾತ್ ಫೇರಿ, ಪಿಕೆಟಿಂಗ್, ಅರಣ್ಯ ಕಾನೂನು ಭಂಗ, ನಿಷೇಧಾಜ್ಞೆಗಳನ್ನು ಉಲ್ಲಂಘಿಸಿ ಧ್ವಜ ಹಾರಿಸುವುದು ಇತ್ಯಾದಿ ಚಟುವಟಿಕೆಗಳಿಗೆ ಅವರು ಮುಂದಾದರು.

ಕಮಲಾದೇವಿ ಚಟ್ಟೋಪಾಧ್ಯಾಯರ ಜೊತೆಗೆ ಉಮಾಬಾಯಿ ಕುಂದಾಪುರ, ಕೃಷ್ಣಾಬಾಯಿ ಪಂಜೀಕರ ಮಹಿಳೆಯರ ಹೋರಾಟವನ್ನು ಪ್ರೆಸಿಡೆನ್ಸಿಗಳನ್ನು ದಾಟಿ ವಿಸ್ತಾರಗೊಳಿಸಿದರು. ಈ ಮೂಲಕ ಕರ್ನಾಟಕ ಪ್ರತಿಯೊಂದು ಭಾಗದಿಂದ ಮಹಿಳಾ ನಾಯಕಿಯರು ಮೇಲೆದ್ದು ಬಂದರು. ಬಳ್ಳಾರಿ ಸಿದ್ದಮ್ಮ, ನಾಗಮ್ಮ ಪಾಟೀಲ, ಸುಬ್ಬಮ್ಮ ಜೋಯಿಸ, ಸುನಂದಮ್ಮ, ಯಶೋಧರಮ್ಮ, ನಾಗರತ್ನಮ್ಮ ಪದ್ಮಾವತಿ, ಜಯದೇವಿ ತಾಯಿ, ಶಕುಂತಲಾ ಕುರ್ತಕೋಟಿ, ಸಿದ್ದಮೇಲೆ ಮೈಲಾರ ಇತ್ಯಾದಿ ಮಹಿಳೆಯರು ಸ್ವಾತಂತ್ರ್ಯ ಹೋರಾಟಕ್ಕೆ ರಾಜಕೀಯಾವಾಗಿ ಹಾಗೂ ಸಾಮಾಜಿಕವಾಗಿ ಮೆರಗು ನೀಡಿದರು. ಹೀಗೆ ಯಾವ ಪೂರ್ವ ಸೂಚನೆಯಿಲ್ಲದೆ ಮಹಿಳೆಯರು ಹೋರಾಟಕ್ಕೆ ಧುಮುಕಿದ್ದು ಬ್ರಿಟಿಷರನ್ನು ಕಂಗೆಡಿಸಿತು. ಮಹಿಳೆಯರ ಮೇಲೂ ಅವರು ದಮನಕಾರಿ ನೀತಿಯನ್ನು ಅಳವಡಿಸಿದರು.

**11. ಕರನಿರಾಕರಣೆ ಆಂದೋಲನ :**

1930ರ ದಶಕದ ಕಾನೂನು ಭಂಗ ಚಳುವಳಿಯುದ್ದಕ್ಕೂ ಮಹಿಳೆಯರು ಹೆಚ್ಚು ಕ್ರಿಯಾಶೀಲರಾದರು, ಹಿರೇಕೆರೂರು, ಅಂಕೋಲಾ, ಸಿರಸಿ ಹಾಗೂ ಸಿದ್ಧಾಪುರ ತಾಲ್ಲೂಕುಗಳಲ್ಲಿ ಕಂದಾಯ ಪದ್ಧತಿ ವಿರುದ್ಧದ ಕರನಿರಾಕರಣ ಆಂದೋಲನದಲ್ಲಿ ರೈತರೊಂದಿಗೆ ಮಹಿಳೆಯರೂ ಪ್ರಮುಖ ಪಾತ್ರ ವಹಿಸಿದರು. ಆಸ್ತಿ-ಪಾಸ್ತಿ ಹರಾಜು ಹಾಕಿದಾಗ ಅವುಗಳನ್ನು ವಾಪಸ್ಸು ಪಡೆಯಲು ನಡೆದ ಉಪವಾಸ ಸತ್ಯಾಗ್ರಹದಲ್ಲಿ ಶಿವಮೊಗ್ಗ ಜಿಲ್ಲೆಯ 'ಹೆಜ್ಜೆ' ಸತ್ಯಾಗ್ರಹ ಪ್ರಮುಖವಾದದ್ದು. ಗೌರಮ್ಮ, ಕಾವೇರಮ್ಮ ಲಕ್ಷ್ಮಮ್ಮ, ಮುಂತಾದ ಮಹಿಳಾ ನಾಯಕಿಯರುದುಗ್ಗಮ್ಮ ಮತ್ತು ಭಾಗೀರಥಮ್ಮನವರ ಜೊತೆ ಸೇರಿ ಅಕ್ಕುಂಜಿಯಲ್ಲಿ ಸತ್ಯಾಗ್ರಹ ನಡೆಸಿದರು. 'ತಿಗಣೆ'ಸತ್ಯಾಗ್ರಹದಲ್ಲಿ ಸುಬ್ಬಮ್ಮ ಜೋಯಿಸ್ ಮಹಿಳಾ ಸತ್ಯಾಗ್ರಹಿಗಳ ಮನೋಬಲವನ್ನು ಹೆಚ್ಚಿಸಿದರು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಂಗಳೂರು,ಉಡುಪಿ,ಕುಂದಾಪುರ, ಕಾಸರಗೋಡು, ಪುತ್ತೂರು, ಬೆಳ್ತಂಗಡಿ, ಕಾರ್ಕಳ ಕೇಂದ್ರಗಳಲ್ಲಿ ಕಾನೂನು ಭಂಗ ಚಳುವಳಿಯಕಾವು ಕ್ರಮೇಣ ಏರಿತು. ಪೊಲೀಸರು ದಮನಕಾರಿ ಪ್ರವೃತಿಯನ್ನು ಮುಂದುವರೆಸಿದರು.
ಕಾನೂನು ಬಾಹಿರ ಉಪ್ಪಿನ ತಯಾರಿಕೆಯನ್ನು ಮದ್ಯದ ಅಂಗಡಿಗಳ ಮುಂದೆ ಪಿಕೆಟಿಂಗ್ ಮಾಡುವುದನ್ನು ನಿಷೇಧಿಸಲಾಯಿತು. ಚಳವಳಿಯಲ್ಲಿ ನಿಷ್ಕ್ರಿಯರಾದ ಕೆಲವು ಪುರುಷರಿಗೆ ಮಹಿಳೆಯರು ಬಳೆ ನೀಡಿದರು. ಕಮಲಾದೇವಿಚಟ್ಟೋಪಾಧ್ಯಾಯಕೃಷ್ಣಾಬಾಯಿ ಪಂಜೀಕರ ಹಾಗೂ ಉಮಾಬಾಯಿ ಕುಂದಾಪುರ ರಾಜ್ಯಾದ್ಯಂತ ಪ್ರವಾಸ ಮಾಡಿದರು. ಕಮಲಾದೇವಿಯವರ ಸಮಾಜವಾದಿ ಚಿಂತನೆಗಳು ಮಹಿಳೆಯರಲ್ಲಿ ಪ್ರಚಾರ ಪಡೆದವು.

**12. ಶಿವಪುರ ಧ್ವಜ ಸತ್ಯಾಗ್ರಹ :**

1938 ಏಪ್ರಿಲ್ 11ರಂದು ಮದ್ದೂರಿನ ಶಿವಪುರ ಗ್ರಾಮದಲ್ಲಿ ಮೈಸೂರು ಕಾಂಗ್ರೆಸ್‌ನ ಮೊದಲ ಸಮಾವೇಶದ ಪ್ರಯುಕ್ತ ಧ್ವಜಾರೋಹಣ ಕಾರ್ಯಕ್ರಮ ನಿಗದಿಯಾಗಿತ್ತು. ಇದನ್ನು ನಿಷೇಧಿಸಿ ಜಿಲ್ಲಾ ದಂಡಾಧಿಕಾರಿಗಳು ಅಜ್ಞೆ ಹೊರಡಿಸಿದ್ದರು. ಈ ಅಜ್ಞೆಯನ್ನು ಉಲ್ಲಂಘಿಸಿ ಧ್ವಜಾರೋಹಣ ಮಾಡಿದ್ದಕ್ಕಾಗಿ ಪುರುಷ ನಾಯಕರನ್ನು ಬಂಧಿಸಿದಾಗಿ ಯಶೋಧಮ್ಮ ದಾಸಪ್ಪ, ಸುಬ್ಬಮ್ಮ ಜೋಯಿಸ, ಬಳ್ಳಾರಿ ಸಿದ್ಧಮ್ಮ ಮುಂತಾದವರು ಹೋರಾಟದ ಜವಾಬ್ದಾರಿ ವಹಿಸಿಕೊಂಡರು. ಬಂಧನಕ್ಕೊಳಗಾಗುವ ಮುನ್ನ ಬಳ್ಳಾರಿ ಸಿದ್ಧಮ್ಮ ರಾಷ್ಟ್ರ ಧ್ವಜಕ್ಕಾಗಿ ವೀರಸ್ವರ್ಗ ಸೇರಿ ಎಂದು ಕರೆ ನೀಡಿದರು. ಧ್ವಜ ರಕ್ಷಣೆಗಾಗಿ ಬಂದಿದ್ದ ಸ್ವಯಂ ಸೇವಕರ ತಂಡವೊಂದಕ್ಕೆ ಟಿ. ಸುನಂದಮ್ಮ ನಾಯಕಿಯಾಗಿದ್ದರು. ಹೀಗೆ ಶಿವಪುರ ಧ್ವಜ ಸತ್ಯಾಗ್ರಹ ಮಹಿಳೆಯರ ಹೋರಾಟಕ್ಕೊಂದು ಸತ್ವಯುತ ತಿರುವನ್ನು ನೀಡಿತು.

**13. ಹ್ಯಾಮಿಲ್ಟನ್ ಸತ್ಯಾಗ್ರಹ :**

ಮೈಸೂರಿನ ದೊಡ್ಡ ಪೇಟೆ ಪೊಲೀಸ್ ಠಾಣೆಗೆ ಕ್ರೂರ ಐ.ಜಿ.ಪಿ. ಹ್ಯಾಮಿಲ್ಟನ್ ಎಂಬುವರ ಹೆಸರನ್ನು ಇಡಲಾಯಿತು. ಈ ವಿದೇಶಿ ಹೆಸರನ್ನು ಕಿತ್ತೆಸೆಯಬೇಕೆಂದು 1939ರ ಫೆಬ್ರವರಿ 18ರಂದು ಯಶೋಧರಮ್ಮದಾಸಪ್ಪ ಸತ್ಯಾಗ್ರಹವನ್ನು ಉದ್ಘಾಟಿಸಿದರು. ಸತ್ಯಾಗ್ರಹದಲ್ಲಿ ಭಾಗವಹಿಸಿದ ಮಹಿಳೆಯರಲ್ಲಿ ಟಿ. ಸುನಂದಮ್ಮ ಪ್ರಮುಖರು.

**14. ವಿದುರಾಶ್ವಥ ದುರಂತ :**

1939 ಏಪ್ರಿಲ್‌ನಲ್ಲಿ ಮೈಸೂರು ಕಾಂಗ್ರೆಸ್‌ನ ಎರಡನೇ ಸಮಾವೇಶ ಆರಂಭವಾಯಿತು. ಈ ಸಂದರ್ಭದಲ್ಲಿ ಮೈಸೂರು ಸಂಸ್ಥಾನದ ಧ್ವಜವನ್ನು ಧಿಕ್ಕರಿಸಿ ರಾಷ್ಟ್ರೀಯ ಧ್ವಜವನ್ನು ಆರೋಹಣ ಮಾಡುವ ಕಾರ್ಯಕ್ರಮಕ್ಕೆ ನಿಷೇಧ ಹೇರಲಾಯಿತು. ಈ ನಿಷೇಧವನ್ನು ಮೀರಿದಾಗ ಚಳುವಳಿಗಾರರ ಮೇಲೆ ಪೊಲೀಸರು ಗುಂಡಿನ ಮಳೆಗರೆದು 35ಜನರ ಹತ್ಯೆಗೆ ಕಾರಣರಾದರು. ಗೌರಮ್ಮ ಎಂಬ ಗರ್ಭಿಣಿ ಸ್ತ್ರೀಯೂ ಹತಳಾದಳು.

ಇದಕ್ಕೂ ಮೊದಲು ಕಾಂಗ್ರೆಸ್ ಸಮಾವೇಶದ ಜೊತೆ ಜೊತೆಗೆ ನಡೆಯಬೇಕಾಗಿದ್ದ ಅಖಿಲ ಕರ್ನಾಟಕ ಸಮಾಜವಾದಿ ಸಮಾವೇಶದಲ್ಲಿ ಭಾಗವಹಿಸಲು ಬಂದಿದ್ದ ಕಮಲಾದೇವಿ ಚಟ್ಟೋಪಾಧ್ಯಾಯಅವರುಧ್ವಜಾರೋಹಣ ಕುರಿತಂತೆ ಚೇತೋಹಾರಿ ಭಾಷಣ ಮಾಡಿದರು. ಹಾಗೆಯೇ ಯಶೋಧರಮ್ಮ ದಾಸಪ್ಪ, ಅನ್ನಪೂರ್ಣ ತಿಮ್ಮರೆಡ್ಡಿ ಮಹಿಳಾ ಸಮಾವೇಶದಲ್ಲಿ ಭಾಗವಹಿಸಿದರು.

**15. ಪುನರುಜ್ಜೀವನ ಮತ್ತು ಕರ್ನಾಟಕ ಏಕೀಕರಣ**

1905ರಲ್ಲಿ ಬಂಗಾಳದ ವಿಭಜನೆ ಆಯಿತು. ಅಲ್ಲಿಯವರೆಗೂ ಭಾಷೆಯ ಆಧಾರದ ಮೇಲೆ ಜನರನ್ನು ಒಟ್ಟಿಗೆ ತರುವ ವಿಚಾರಕ್ಕೆ ಪ್ರಚಾರ ದೊರೆತಿರಲಿಲ್ಲ. ಬಂಗಾಳ ಮತ್ತೆ ಒಂದಾದ ನಂತರ ಒಂದು ಭಾಷೆಯನ್ನಾಡುವ ಜನರನ್ನು ಒಂದು ಗೂಡಿಸುತ್ತ ಪ್ರಯತ್ನಗಳು ಆರಂಭವಾದವು. ತಿಲಕ್ ಮತ್ತು ಗಾಂಧೀಜಯವರು ರಾಷ್ಟ್ರಪ್ರಜ್ಞೆಯ ಉದಯದಲ್ಲಿ ದೇಶೀಯ ಭಾಷೆಗಳು ಮುಖ್ಯವೆಂದು ಅರಿತರು. ಸ್ವಾತಂತ್ರ್ಯ ಚಳವಳಿಯು ಒಂದು ಜನಾಂದೋಲನವಾಗಿ ಪರಿವರ್ತಿತವಾಗಲು ಭಾಷೆಯ ಅಂಶ

ಮುಖ್ಯವೆಂದು ಅವರು ಮನಗಂಡರು. 1920ರ ನಾಗಪುರ ಅಧಿವೇಶನದಲ್ಲಿ ಭಾರತ ರಾಷ್ಟ್ರೀಯ ಕಾಂಗ್ರೆಸ್ ಭಾಷಾವಾರು ಆಧಾರದ ಮೇಲೆ ಪ್ರಾಂತೀಯ ಸಮಿತಿಗಳನ್ನು ರಚಿಸಲು ನಿರ್ಧರಿಸಿತು. ಕನ್ನಡ ಭಾಷೆಯನ್ನಾಡುವ ಜನರಲ್ಲೂ ಭಾಷೆಯ ಆಧಾರದ ಮೇಲೆ ಪ್ರಾಂತ್ಯ ರಚನೆಯಾಗಬೇಕೆನ್ನುವ ಕೂಗು ಆರಂಭವಾಯಿತು. ಕನ್ನಡ ಭಾಷೆಯ ಪ್ರಂತ್ಯಗಳಿ ಕೆಲವು ದೇಶಿಯ ಸಂಸ್ಥಾನ ಆಳ್ವಿಕೆಗೆ ಇನ್ನೂ ಕೆಲವು ನೇರವಾಗಿ ಬ್ರಿಟಿಷರ ಆಳ್ವಿಕೆಗೆ ಒಳಪಟ್ಟಿದ್ದವು.

ಮೈಸೂರು ಸಂಸ್ಥಾನವು ಹೆಚ್ಚು ಕನ್ನಡ ಪ್ರಾಂತ್ಯಗಳನನು ಒಳಗೊಂಡಿತ್ತು. ಹೈದರಾಬಾದ್ ಸಂಸ್ಥಾನಾಡಳಿತಕ್ಕೆ ಗುಲ್ಬರ್ಗಾ,ಬೀದರ್ ಹಾಗೂ ರಾಯಚೂರು ಸೇರಿದ್ದವು. ಬ್ರಿಟಿಷ್ ಕರ್ನಾಟಕ ಪ್ರದೇಶಗಳು ಬೊಂಬಾಯಿ ಹಾಗೂ ಮದ್ರಾಸ್ ಪ್ರೆಸಿಡೆನ್ಸಿಗೆ ಸೇರಿದ್ದವು. ಉತ್ತರ ಕನ್ನಡ, ಬೆಳಗಾವಿ, ಧಾರವಾಡ, ಬಿಜಾಪುರ ಹಾಗೂ ಸೊಲ್ಲಾಪುರದ ಕೆಲವು ತಾಲ್ಲೂಕುಗಳು ಬೊಂಬಾಯಿ ಪ್ರೆಸಿಡೆನ್ಸಿಗೂ ದಕ್ಷಿಣ–ಕನ್ನಡ, ಬಳ್ಳಾರಿ, ನೀಲಗಿರಿ, ಮಡಕೇರಿ ಕೊಳ್ಳೇಗಾಲ ಹೊಸೂರು ಮತ್ತು ಕೃಷ್ಣಗಿರಿಯ ಕೆಲವು ತಾಲ್ಲೂಕುಗಳು ಮದ್ರಾಸ್ ಪ್ರೆಸಿಡೆನ್ಸಿಗೆ ಸೇರಿದ್ದವು.

ಕೊಡಗಿಗೆ ಒಂದು ಪ್ರತ್ಯೇಕ ಪ್ರಾಂತ್ಯದ ಸ್ಥಾನ ನೀಡಲಾಗಿತ್ತು. ಹೀಗೆ ಸಣ್ಣ ಸಣ್ಣ ಘಟಕಗಳಾಗಿ ಒಡೆದು ಹೋಗಿದ್ದ ಕನ್ನಡ ಭಾಷೆಯ ಜನರ ಸ್ಥಿತಿ ಶೋಚನೀಯಾವಾಗಿತ್ತು.ತಿಲಕ್‌ರಿಂದಾಗಿ ಬೇರೂರಿದ್ದ ರಾಷ್ಟ್ರವಾದಿ ಚಿಂತನೆ ಹಾಗೂ ಕ್ರೈಸ್ತ ಮಿಷನರಿಗಳ ಕಾರ್ಯ ಚಟುವಟಿಕೆಗಳಿಂದ ಕನ್ನಡಿಗರು ತಮ್ಮಗತಕಾಲದ ವೈಭವದ ಬಗ್ಗೆ, ಕನ್ನಡ ಚರಿತ್ರೆ, ಪರಂಪರೆಗಳ ಬಗ್ಗೆ ಅರಿತುಕೊಳ್ಳಲು ಸಾಧ್ಯವಾಯಿತು.

**1890ರಲ್ಲಿ ರಾ.ಹ. ದೇಶಪಾಂಡೆಯವರು ಧಾರವಾಡದಲ್ಲಿಇ 'ಕರ್ನಾಟದ ವಿದ್ಯಾವರ್ಧಕ ಸಂಘ' ಸ್ಥಾಪಿಸಿದ್ದು ಪುನರುಜ್ಜೀವನದ ಒಂದು ಮೈಲಿಗಲ್ಲು.**
ಸಂಘದೊಂದಿಗೆ ಸಕ್ರಿಯವಾಗಿ ಬೆರೆತ ಆಲೂರು ವೆಂಕಟರಾವ್ 1903ರಲ್ಲಿ ಮದರಾಸು ಹಾಗು ಉತ್ತರ ಕರ್ನಾಟಕದ ಕನ್ನಡಿಗರನ್ನು ಒಂದು ಮಾಡುವ ಕನಸಿಗೆ ಚಾಲನೆ ನೀಡಿದರು. ಬಂಗಾಳ ವಿಭಜನೆ ಮತ್ತು ಏಕೀರಣಗಳು ಆಲೂರು ವೆಂಕಟರಾಯರಿಗೆ ಸಮಗ್ರ ಕರ್ನಾಟಕದ ಏಕೀಕರಣಕ್ಕೆ ಹೋರಾಡಲು ಪ್ರೇರಣೆಯಾದವು.
1915ರಲ್ಲಿ ಮೈಸೂರು ಮಹಾರಾಜರ ಆಶ್ರಯದಲ್ಲಿ ಬೆಂಗಳೂರಿನಲ್ಲಿ ಮೊದಲನೇ ಕನ್ನಡ ಸಾಹಿತ್ಯ ಸಮ್ಮೇಳನ ಆರಂಭವಾಯಿತು. ಇದರಲ್ಲಿ ವಿವಿಧ ಪ್ರಾಂತ್ಯದ ಕನ್ನಡಿಗರು ಒಂದೆಡೆ ಸೇರಿ ಏಕೀಕರಣದ ಬಗೆಗೆ ಚರ್ಚಿಸಿದರು. ಕನ್ನಡ ಸಾಹಿತ್ಯ ಪರಿಷತ್ತು ಇದೇ ಸಂದರ್ಭದಲ್ಲಿ ಸ್ಥಾಪಿತವಾಯಿತು.

1920ರಲ್ಲಿ ವಿ.ಪಿ. ಮಾಧವರಾವ್ ಅಧ್ಯಕ್ಷತೆಯಲ್ಲಿ ಅಖೀಲ ಕರ್ನಾಟಕ ಪ್ರಾಂತೀಯ ಸಮ್ಮೇಳನ ಧಾರವಾಡದಲ್ಲಿ ನಡೆಯಿತು. ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ಕೇಂದ್ರ ಕಚೇರಿ ಗದಗಿನಲ್ಲಿ ಸ್ಥಾಪನೆಯಾಯಿತು. 1924ರಲ್ಲಿ ಕಾಂಗ್ರೆಸ್ ಅಧಿವೇಶನ ಬೆಳಗಾವಿಯಲ್ಲಿ ನಡೆದು ಅಖಿಲ ಭಾರತ ಹೋರಾಟದೊಡನೆ ಕನ್ನಡಿಗರು ಏಕೀಕರಣವನ್ನು ಗುರುತಿಸಿಕೊಳ್ಳಲಾಯಿತು. ಅಧಿವೇಶನ ನಡೆದ ಸ್ಥಳಕ್ಕೆ ವಿಜಯನಗರ ಎಂದು ಕರೆಯಲಾಯಿತು. ಹುಯಿಲಗೋಳ ನಾರಾಯಣರಾವರು 'ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು' ಹಾಡಿದರು. ಬೆಳಗಾವಿ ಅಧಿವೇಶನದ ಮುಖ್ಯ ಫಲಿತಾಂಶವೆಂದರೆ ಮೊದಲನೆ ಕರ್ನಾಟಕ ಏಕೀಕರಣ ಸಮಾವೇಶ ನಡೆದು ಕರ್ನಾಟಕ ಏಕೀಕರಣ ಸಭೆ ಸ್ಥಾಪನೆಯಾದದ್ದು. 1928ರಲ್ಲಿ ಸರ್ವಪಕ್ಷಗಳ ಸಮ್ಮೇಳನ ಮೋತಿಲಾಲ್ ನೆಹರೂ ಸಮಿತಿಯನ್ನು ನೇಮಕ ಮಾಡುವ ವೇಳೆಗೆ ಕರ್ನಾಟಕ ಏಕೀಕರಣ ಚಳುವಳಿ ಸುಸಂಘಟಿತವಾಗಿತ್ತು.

ಬ್ರಿಟಿಷ್‌ಪ್ರಾಂತ್ಯಗಳಲ್ಲಿ ಏಕೀಕರಣಕ್ಕಾಗಿ ಚಳವಳಿ ತೀವ್ರವಾಗಿದ್ದರೆ. ದೇಶೀಯ ಸಂಸ್ಥಾನದಲ್ಲಿ ಪ್ರತಿಕ್ರಿಯೆ ಶೂನ್ಯವಾಗಿತ್ತು. ಮೈಸೂರು ಕಾಂಗ್ರೆಸಿಗರಿಗೂ ಬ್ರಿಟಿಷ್ ಕರ್ನಾಟಕದ ಕಾಂಗ್ರೆಸಿಗರಿಗೂ ಏಕೀಕರಣ ಕುರಿತಂತೆ ಸಹಕಾರವಿರಲಿಲ್ಲ. 1946ರಲ್ಲಿ ದಾವಣಗೆರೆಯಲ್ಲಿ ಏಕೀಕರಣ ಸಮಾವೇಶ ನಡೆಯಿತು. ಇದು ಮೈಸೂರು ರಾಜ್ಯದಲ್ಲಿ ನಡೆದ ಮೊದಲ ಸಮಾವೇಶವಾಗಿತ್ತು. ಈ ಸಮಾವೇಶದಲ್ಲಿ ಮೈಸೂರು ಪ್ರಾಂತ್ಯದವರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು. ಜವಾಬ್ದಾರಿ ಸರ್ಕಾರಕ್ಕಾಗಿ ಮೈಸೂರು ಕಾಂಗ್ರೆಸ್ ಸಲ್ಲಿಸದ್ದ ಬೇಡಿಕೆ ಈಡೇರದ ಕಾರಣ ಅದು ದಾವಣಗೆರೆಯ ಈ ಸಮಾವೇಶದಲ್ಲಿ ಪಾಲ್ಗೊಂಡು ಏಕೀಎರಣಕ್ಕಾಗಿ ಬೆಂಬಲ ಸೂಚಿಸಿತು.

ಸ್ವಾತಂತ್ರ್ಯ ದೊರೆತ ನಂತರ ಕರ್ನಾಟಕಏಕೀಕರಣದ ಹೋರಾಟ ಇಮ್ಮಡಿಗೊಂಡಿತು. 1947ರ ಅಕ್ಟೋಬರ್‌ನಲ್ಲಿ ಮೈಸೂರಿನಲ್ಲಿ ಜವಾಬ್ದಾರಿ ಸರ್ಕಾರ ಅಸ್ತಿತ್ವಕ್ಕೆ ಬಂದಿತು. ಇದರಿಂದ ಏಕೀಕರಣಕ್ಕಿದ್ದ ದೊಡ್ಡ ಅತಂಕ ಬಗೆಹರಿದಂತಾಯಿತು. ಆ ವರ್ಷದ ಡಿಸೆಂಬರ್‌ನಲ್ಲಿ ಕಾಸರಗೋಡಿನಲ್ಲಿ ರಂಗನಾಥ ದಿವಾಕರ ಅಧ್ಯಕ್ಷತೆಯಲ್ಲಿ ಕರ್ನಾಟಕ ಏಕೀಕರಣ ಸಮ್ಮೇಳನ ನಡೆದು ದೇಶ ಸ್ವಾತಂತ್ರ್ಯ ಪಡೆದರೂ ಏಕೀಕರಣವನ್ನು ವಿರೋಧಿಸಿದ್ದನ್ನು ಎಲ್ಲೆಡೆ ಪ್ರತಿಭಟನೆ ವ್ಯಕ್ತವಾಯಿತು. 1949ರ ಜೆ.ವಿ.ಪಿ ಸಮಿತ ಭಾಷಾವಾರು ಪ್ರಾಂತ್ಯಗಳು ರಚನೆಯನ್ನು ಶಿಫಾರಸ್ಸು ಮಾಡಿತು. ಕೇಂದ್ರ ಸರ್ಕಾರ ಏಕೀಕರನ ಪ್ರಕ್ರಿಯಿಗೆ ತೋರಿಸಿದ

ಮಂದಗತಿಯನ್ನು ವಿರೋಧಿಸಿ ಧಾರವಾಡ ಜಿಲ್ಲೆಯ ಜಕ್ಕಲಿಯಲಲಿ ದೊಡ್ಡ ಮೇಟಿ ಆಂದಾನಪ್ಪ ಹಾಗು ಶಂಕರಗೌಡ ಪಾಟೀಲ ಉಪವಾಸ ಸತ್ಯಾಗ್ರಹ ಆರಂಭಿಸಿದರು. 1955ರಲ್ಲಿ ಫಜಲ್ ಅಲಿ ಕಮೀಷನ್ ನೀಡಿದ ವರದಿಯಂತೆ ಏಕೀಕರಣ ಗೊಂಡ ವಿಶಾಲ ಮೈಸೂರು ರಾಜ್ಯ 1956ರ ನವೆಂಬರ್ 1ರಂದು ಅಸ್ತಿತ್ವಕ್ಕೆ ಬಂದಿತು.